ಮಂಗಳವಾರ, ಜುಲೈ 13, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 194 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸೆನ್ಸೆಕ್ಸ್	ನಿಫ್ಟಿ	₹/$
52,372 ▼	15,692 ▲	74.58 ▲

ಭಯ ಬಿಟ್ಟು ಬೀದಿಗಿಳಿದ ಜನ ● ಆರೋಗ್ಯ ವ್ಯವಸ್ಥೆ ಸುಧಾರಣೆಗೆ ₹1,500 ಕೋಟಿ ಕ್ರಿಯಾ ಯೋಜನೆ

ಕೋವಿಡ್ 3ನೇ ಅಲೆಯ ತೂಗುಗತ್ತಿ

● ಎಸ್.ರವಿಪ್ರಕಾಶ್

ಬೆಂಗಳೂರು: ಕೋವಿಡ್ ಎರಡನೇ ಅಲೆಯ ಆರ್ಭಟ ಕೊಂಚ ಕಡಿಮೆ ಆಗುತ್ತಿದ್ದಂತೆ ರಾಜ್ಯದಲ್ಲಿ ಸಾರ್ವಜನಿಕರ ಓಡಾಟದ ಭರಾಟೆ ಹೆಚ್ಚಾಗಿದೆ. ಮೂರನೇ ಅಲೆಯೆಂಬ ಕತ್ತಿ ನೆತ್ತಿ ಮೇಲೆ ತೂಗುತ್ತಿದ್ದರೂ ಭಯವೇ ಇಲ್ಲದಂತೆ ಬೀದಿಗಿಳಿದಿದ್ದಾರೆ.


ಇದಕ್ಕೆ ಸಾಕ್ಷ್ಯ ಎಂಬಂತೆ ಶನಿವಾರ ಮತ್ತು ಭಾನುವಾರ ರಾಜ್ಯದ ಬಹುತೇಕ ಪ್ರವಾಸಿ ತಾಣಗಳು, ಧಾರ್ಮಿಕ ಕ್ಷೇತ್ರಗಳು ತುಂಬಿ ತುಳುಕಿದ್ದವು. ಬೆಂಗಳೂರು ಸೇರಿ ಪ್ರಮುಖ ನಗರಗಳ ಮಾರುಕಟ್ಟೆ ಪ್ರದೇಶಗಳು, ರಸ್ತೆಗಳು ಜನರಿಂದ ಗಿಜಿಗುಡುತ್ತಿದ್ದವು. ಕಳೆದ ಮೂರು ತಿಂಗಳ ಭೀಕರ ಪರಿಸ್ಥಿತಿಯನ್ನೂ ಮರೆತ ಜನರು ಕನಿಷ್ಠ ಅಂತರವನ್ನೂ ಕಾಪಾಡಿಕೊಳ್ಳಲಿಲ್ಲ.

‘ಕೋವಿಡ್ ಮೂರನೇ ಅಲೆ ಸೆಪ್ಟೆಂಬರ್ ಅಥವಾ ಅಕ್ಟೋಬರ್ ವೇಳೆ ಅಪ್ಪಳಿಸಬಹುದು. ಸಾರ್ವಜನಿಕರು ಎಲ್ಲೂ ಗುಂಪು ಸೇರದಂತೆ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಬೇಕು’ ಎಂದು ಕೇಂದ್ರ ಸರ್ಕಾರವು ರಾಜ್ಯಗಳಿಗೆ ನಿರ್ದೇಶನ ನೀಡಿ ಪತ್ರ ಬರೆದಿದೆ. ಅನಿವಾರ್ಯ ಇಲ್ಲದಿದ್ದರೆ ಮನೆಯಿಂದ ಹೊರಗೆ ಹೋಗಬೇಡಿ ಎಂದು ನೀಡುತ್ತಿರುವ ಸಲಹೆಗಳನ್ನೂ ಕಿವಿಗೆ ಹಾಕಿಕೊಳ್ಳುವ ಸ್ಥಿತಿಯಲ್ಲಿ ಜನರು ಇಲ್ಲ ಎಂದು ಆರೋಗ್ಯ ಇಲಾಖೆ ಮೂಲಗಳು ತಿಳಿಸಿವೆ.


ಎರಡನೇ ಅಲೆ ನಿರ್ವಹಣೆಯಲ್ಲಿ ಎಡವಿದ್ದ ರಾಜ್ಯ ಸರ್ಕಾರ ಮೂರನೇ ಅಲೆ ಎದುರಿಸಲು ಈಗಲೇ ಸಿದ್ಧತೆಗಳನ್ನು ಆರಂಭಿಸಿದೆ. ಎರಡೂ ಅಲೆಗಳಲ್ಲಿ ಎದುರಾದ ಗಂಭೀರ ಸಮಸ್ಯೆಗಳನ್ನು ಗಮನದಲ್ಲಿಕೊಂಡು ಕಾರ್ಯತಂತ್ರ ರೂಪಿಸುತ್ತಿದೆ. ಮೂರನೇ ಅಲೆ ಮಕ್ಕಳ ಮೇಲೆ ಪರಿಣಾಮ ಬೀರಬಹುದು ಎಂಬ ಕಾರಣಕ್ಕೆ ಮಕ್ಕಳ ಚಿಕಿತ್ಸೆಗಾಗಿ ವಿಶೇಷ ವ್ಯವಸ್ಥೆಯ ಬಗ್ಗೆ ಹೆಚ್ಚಿನ ಗಮನ ಹರಿಸಿದೆ.

ಏನೆಲ್ಲಾ ಸಿದ್ಧತೆ: ‘ಮೂರನೇ ಅಲೆ ಎದುರಿಸಲು ₹1,500 ಕೋಟಿ ವೆಚ್ಚದ ಕ್ರಿಯಾ ಯೋಜನೆಯನ್ನು ರಾಜ್ಯ ಸರ್ಕಾರ ರೂಪಿಸಿದೆ’ ಎಂದು ಕೋವಿಡ್ ಕಾರ್ಯಪಡೆಯ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

6ನೇ ಪುಟ ನೋಡಿ


ಬೆಂಗಳೂರಿನ ಅವೆನ್ಯೂ ರಸ್ತೆಯಲ್ಲಿ ಜನರು ಸೋಮವಾರ ಖರೀದಿಗಾಗಿ ಅಂತರ ಮರೆತು ಸೇರಿದ್ದರು –ಪ್ರಜಾವಾಣಿ ಚಿತ್ರ

ಗುಂಪುಗೂಡುವಿಕೆ ತಡೆಯಲು ಐಎಂಎ ಮನವಿ



ನವದೆಹಲಿ (ಪಿಟಿಐ): ಕೋವಿಡ್ ಮಾರ್ಗಸೂಚಿಗಳನ್ನು ಕಡೆಗಣಿಸಿ ಜನರು ದೊಡ್ಡ ಸಂಖ್ಯೆಯಲ್ಲಿ ಗುಂಪು ಸೇರುವ ಬೆಳವಣಿಗೆಗಳ ಬಗ್ಗೆ ಆತಂಕ ವ್ಯಕ್ತಪಡಿಸಿರುವ ಭಾರತೀಯ ವೈದ್ಯಕೀಯ ಸಂಸ್ಥೆ (ಐಎಂಎ), ಮೂರನೇ ಅಲೆಯಲ್ಲಿ ಸೋಂಕು ತೀವ್ರಗತಿಯಲ್ಲಿ ಹರಡಲು ಇಂಥ ಗುಂಪುಗೂಡುವಿಕೆಯೇ ಕಾರಣವಾಗಬಹುದು ಎಂದು ಎಚ್ಚರಿಸಿದೆ.

ಪ್ರವಾಸ, ಧಾರ್ಮಿಕ ಸ್ಥಳಗಳಿಗೆ ಭೇಟಿ, ಧಾರ್ಮಿಕ ಕಾರ್ಯಕ್ರಮಗಳು ಅಗತ್ಯವಾದರೂ, ಇದಕ್ಕಾಗಿ ಇನ್ನೂ ಕೆಲವು ತಿಂಗಳು ಕಾಯಬಹುದಿತ್ತು ಎಂದು ಐಎಂಎ ಹೇಳಿಕೆಯಲ್ಲಿ ಅಭಿಪ್ರಾಯಪಟ್ಟಿದೆ. ವಿಶ್ವದ ಇತರೆಡೆ ಮೂಡಿರುವ ಸ್ಥಿತಿ, ಇತಿಹಾಸ ಗಮನಿಸಿದರೆ ಮೂರನೇ ಅಲೆ ಅನಿವಾರ್ಯವಾಗಿದ್ದು, ಸನ್ನಿಹಿತವೂ ಆಗಿದೆ ಎಂದು ಅಭಿಪ್ರಾಯಪಟ್ಟಿದೆ.

ನಿರ್ಣಾಯಕವಾದ ಈ ಸಂದರ್ಭದಲ್ಲಿ ಮೂರನೇ ಅಲೆ ಬಾರದಂತೆ ತಡೆಯಲು ಪ್ರತಿಯೊಬ್ಬರೂ ಶ್ರಮಿಸಬೇಕು. ದೇಶದ ವಿವಿಧೆಡೆ ಕೋವಿಡ್ ಮಾರ್ಗಸೂಚಿ ಪಾಲಿಸದೇ ಜನರು ಗುಂಪು ಸೇರುವುದು ಕಂಡುಬರುತ್ತಿದೆ. ಧಾರ್ಮಿಕ ಸ್ಥಳಗಳನ್ನು ಜನರ ಭೇಟಿಗೆ ಮುಕ್ತಗೊಳಿಸುವುದು, ಜನರೂ ಲಸಿಕೆ ಪಡೆಯದೇ ಮುಕ್ತವಾಗಿ ಗುಂಪು ಸೇರುವುದು ಅಪಾಯಕಾರಿ ಎಂದಿದೆ.

ಪುರಿಯಲ್ಲಿ ಭಾನುವಾರ ವಾರ್ಷಿಕ ರಥಯಾತ್ರೆ ಆರಂಭವಾಗಿರುವುದು ಹಾಗೂ ಉತ್ತರ ಪ್ರದೇಶ ಮತ್ತು ಉತ್ತರಾಖಂಡದಲ್ಲಿ ಕನ್ವರ್ ಯಾತ್ರೆಗೆ ಅನುಮತಿ ನೀಡಲು ಚರ್ಚೆ ನಡೆದಿರುವಂತೆ ವೈದ್ಯರ ಸಂಘಟನೆ ಈ ಹೇಳಿಕೆಯನ್ನು ನೀಡಿದೆ. ದೊಡ್ಡ ಪ್ರಮಾಣದಲ್ಲಿ ಗುಂಪು ಸೇರುವುದನ್ನು ತಡೆಯಬೇಕು ಎಂದು ಐಎಂಎ ರಾಜ್ಯ ಸರ್ಕಾರಗಳಿಗೆ ಮನವಿ ಮಾಡಿದೆ.


ಪ್ರವಾಹ ಹಿಮಾಚಲ ಪ್ರದೇಶದ ಧರ್ಮಶಾಲಾದಲ್ಲಿ ವಾಹನಗಳು ಸೋಮವಾರ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋದವು –ಪಿಟಿಐ ಚಿತ್ರ

ಸುದ್ದಿ 11

ಪರೀಕ್ಷೆ ಪ್ರಶ್ನಿಸಿದ್ದ ಅರ್ಜಿ ವಜಾಗೊಳಿಸಿದ ಹೈಕೋರ್ಟ್

ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಸಮ್ಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2020–21ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಸುವ ಸರ್ಕಾರದ ನಿರ್ಧಾರ ಪ್ರಶ್ನಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದ್ದು, ಪರೀಕ್ಷೆಗೆ ಇದ್ದ ಅಡ್ಡಿ ನಿವಾರಣೆಯಾಗಿದೆ.



ಬೆಂಗಳೂರಿನ ಎಸ್.ವಿ. ಸಿಂಗ್ರೇಗೌಡ ಎಂಬುವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಬಿ.ವಿ. ನಾಗರತ್ನಾ ನೇತೃತ್ವದ ವಿಭಾಗೀಯ ಪೀಠ, ಈ ಆದೇಶ ನೀಡಿತು. ‘ಪರೀಕ್ಷೆ ನಡೆಸುವುದರಿಂದ ಕೋವಿಡ್ ಹರಡಲಿದೆ ಎಂಬ ಅರ್ಜಿದಾರರ ವಾದವನ್ನು ಒಪ್ಪಲಾಗದು’ ಎಂದೂ ಹೇಳಿತು.

ಜೂನ್ 21ರಂದು ರಾಜ್ಯ ಸರ್ಕಾರ ಹೊರಡಿಸಿರುವ ಪರಿಷ್ಕೃತ ವೇಳಾಪಟ್ಟಿ ಮತ್ತು ಮಾರ್ಗದರ್ಶಿ ಸೂತ್ರಗಳ (ಎಸ್‌ಒಪಿ) ಪ್ರಕಾರವೇ ಪರೀಕ್ಷೆ ಜುಲೈ 19 ಮತ್ತು 22ರಂದು ನಡೆಯಲಿದೆ.

‘ಎಲ್ಲಾ ವಿದ್ಯಾರ್ಥಿಗಳಿಗೂ ಲಸಿಕೆ ನೀಡದ ಕಾರಣ ಪರೀಕ್ಷೆ ನಡೆಸುವುದು ಸುರಕ್ಷಿತವಲ್ಲ. ಪರೀಕ್ಷೆಗೆ ಹಾಜರಾಗುವ 9 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಸೋಂಕಿಗೆ ಒಳಗಾಗುವ ಸಾಧ್ಯತೆ ಇದೆ. 7ನೇ ತರಗತಿಯಿಂದ ಆರಂಭಿಸಿ ಹಿಂದಿನ ತರಗತಿಗಳಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ವಿದ್ಯಾರ್ಥಿಗಳಿಗೆ ಬಡ್ತಿ ನೀಡಬಹುದು’ ಎಂದು ಅರ್ಜಿದಾರರು ಹೇಳಿದ್ದರು.

10ನೇ ಪುಟ ನೋಡಿ

‘ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಪರೀಕ್ಷೆ’



ಬೆಂಗಳೂರು: ‘ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಸುವುದನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ರಿಟ್ ಅರ್ಜಿಯನ್ನು ತಿರಸ್ಕರಿಸುವ ಮೂಲಕ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಪರೀಕ್ಷೆ ನಡೆಸುವ ರಾಜ್ಯ ಸರ್ಕಾರದ ನಿರ್ಧಾರವನ್ನು ಹೈಕೋರ್ಟ್ ಪುರಸ್ಕರಿಸಿದೆ’ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಪ್ರತಿಕ್ರಿಯಿಸಿದ್ದಾರೆ.

‘ಸುರಕ್ಷಿತ ವಾತಾವರಣದಲ್ಲಿ ಪರೀಕ್ಷೆ ನಡೆಸುವ ಸರ್ಕಾರದ ಕ್ರಮಕ್ಕೆ ಈ ತೀರ್ಪಿನಿಂದ ಬಲ ಬಂದಂತಾಗಿದೆ’ ಎಂದು ಹೇಳಿದ್ದಾರೆ. ‘ಎಸ್ಸೆಸ್ಸೆಲ್ಸಿ ಪರೀಕ್ಷೆ ವಿಷಯದಲ್ಲಿ ಶಿಕ್ಷಣ ಇಲಾಖೆ ಈ ವರ್ಷ ಕೈಗೊಂಡಿರುವ ಸರಳೀಕೃತ ಪರೀಕ್ಷಾ ವ್ಯವಸ್ಥೆ ಮತ್ತು ರಾಜ್ಯ ಆರೋಗ್ಯ ಇಲಾಖೆ ರೂಪಿಸಿದ ಎಸ್‌ಒಪಿ ಪಾಲನೆಗಳಂಥ ಕ್ರಮಗಳ ಕುರಿತಂತೆ ಸರ್ಕಾರದ ವೈಜ್ಞಾನಿಕ ಆಲೋಚನೆಗಳನ್ನು ಹೈಕೋರ್ಟ್ ಒಪ್ಪಿದೆ. ಇದು ಇಡೀ ರಾಷ್ಟ್ರಕ್ಕೆ ಮಾದರಿ ಕ್ರಮ ಎಂದಿರುವ ಕೋರ್ಟ್, ಪರೀಕ್ಷೆ ನಡೆಸುವುದನ್ನು ತುಂಬು ಮನಸ್ಸಿನಿಂದ ಶ್ಲಾಘಿಸಿದೆ’ ಎಂದಿದ್ದಾರೆ.

ಸೆಪ್ಟೆಂಬರ್ 12ಕ್ಕೆ ನೀಟ್ ಮುಂದೂಡಿಕೆ

ನವದೆಹಲಿ(ಪಿಟಿಐ): ವೈದ್ಯಕೀಯ ಪದವಿ ಕೋರ್ಸ್‌ಗಳ ಪ್ರವೇಶಕ್ಕಾಗಿ ನಡೆಸುವ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ(ನೀಟ್) ಅನ್ನು ಸೆಪ್ಟೆಂಬರ್ 12ಕ್ಕೆ ಮುಂದೂಡಲಾಗಿದೆ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಸೋಮವಾರ ತಿಳಿಸಿದ್ದಾರೆ. ಈ ಹಿಂದೆ ಆಗಸ್ಟ್ 1ರಂದು ಈ ಪರೀಕ್ಷೆ ನಿಗದಿಯಾಗಿತ್ತು.

'ಕೋವಿಡ್ ನಿಯಮಗಳ ಪಾಲನೆಯೊಂದಿಗೆ ದೇಶದಾದ್ಯಂತ ನೀಟ್-ಯುಜಿ 2021ರ ಪರೀಕ್ಷೆ ಸೆಪ್ಟೆಂಬರ್ 12ರಂದು ನಡೆಯಲಿದೆ. ಅರ್ಜಿ ಸಲ್ಲಿಸುವ ಪ್ರಕ್ರಿಯೆ ಮಂಗಳವಾರ ಸಂಜೆ 5 ಗಂಟೆಯಿಂದ ಎನ್‌ಟಿಎ ವೆಬ್‌ಸೈಟ್ ಮೂಲಕ ಪ್ರಾರಂಭವಾಗಲಿದೆ' ಎಂದು ಸಚಿವರು ಟ್ವೀಟ್ ಮಾಡಿದ್ದಾರೆ.

ಸುರಕ್ಷಿತ ಅಂತರ ಖಚಿತಪಡಿಸಿಕೊಳ್ಳುವ ನಿಟ್ಟಿನಲ್ಲಿ 155 ನಗರಗಳ ಬದಲು 198 ನಗರಗಳಲ್ಲಿ ಪರೀಕ್ಷೆಗಳನ್ನು ಆಯೋಜಿಸಲು ನಿರ್ಧರಿಸಲಾಗಿದೆ. ಹಾಗೆಯೇ ಈಗಿರುವ 3862 ಪರೀಕ್ಷಾ ಕೇಂದ್ರಗಳನ್ನು ಸಹ ಹೆಚ್ಚಿಸಲಾಗುವುದು ಎಂದು ತಿಳಿಸಿದ್ದಾರೆ.

ರಾಷ್ಟ್ರೀಯ ಬಿಜೆಪಿಯಲ್ಲೀಗ ಮಹತ್ವದ ಸ್ಥಾನ; ನೂತನ ಸಚಿವರಿಗೆ ಅಭಯ


ರಾಜಕಾರಣದ ‘ಸೂತ್ರ’ ಹಿಡಿದ ಸಂತೋಷ್?

● ಸಿದ್ದಯ್ಯ ಹಿರೇಮಠ

ನವದೆಹಲಿ: ಬಿಜೆಪಿಯ ಕರ್ನಾಟಕ ಘಟಕದ ರಾಜಕೀಯ–ನಡಾವಳಿಗಳನ್ನು ನಿಯಂತ್ರಿಸುವಲ್ಲಿ, ಪ್ರಮುಖ ಪಾತ್ರ ವಹಿಸುತ್ತಿದ್ದ ಆ ಪಕ್ಷದ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್, ಪಕ್ಷದ ರಾಷ್ಟ್ರಮಟ್ಟದ ರಾಜಕಾರಣ, ನಿರ್ಧಾರಗಳ ಸೂತ್ರಧಾರಿಯಾಗಿ ‘ಬಡ್ತಿ’ ಪಡೆದಿರುವುದು ಹೊಸ ವಿದ್ಯಮಾನ.

ಆರೇಳು ತಿಂಗಳಿಂದ ಬಿಜೆಪಿಯ ರಾಷ್ಟ್ರೀಯ ಘಟಕದ ಮುಂಚೂಣಿ ನಾಯಕರಾಗಿ, ಪಕ್ಷದ ಉತ್ತರ ಪ್ರದೇಶ, ಉತ್ತರಾಖಂಡ ಮತ್ತು ಅಸ್ಸಾಂ ಘಟಕದಲ್ಲಿನ ದಿಢೀರ್ ಬೆಳವಣಿಗೆಗಳನ್ನು ನಿಯಂತ್ರಿಸುವ ಅವಕಾಶ ಪಡೆದುಕೊಂಡ ಇವರು, ಕೇಂದ್ರದ ಸಚಿವ ಸಂಪುಟ ಪುನರ್ ರಚನೆಯಲ್ಲೂ ಮಹತ್ವದ ಪಾತ್ರ ವಹಿಸಿದ್ದಾರೆ.

ಮಹತ್ವದ ತೀರ್ಮಾನ ಕೈಗೊಳ್ಳುವ ಪಕ್ಷದ ಪ್ರಮುಖರ ಪಟ್ಟಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಅಮಿತ್ ಶಾ ನಂತರದ ಸ್ಥಾನಕ್ಕೆ ಬಡ್ತಿ ಪಡೆದಿರುವ ಸಂತೋಷ್, ಪ್ರಭಾವಿಯಾಗಿ ಹೊರಹೊಮ್ಮಿದ್ದಾರೆ ಎಂಬ ಮಾತುಗಳು ದೆಹಲಿಯ ರಾಜಕೀಯ ಶಕ್ತಿಕೇಂದ್ರದಲ್ಲಿ ಹರಿದಾಡುತ್ತಿವೆ.


ಬಿ.ಎಲ್. ಸಂತೋಷ್

ನಾಲ್ಕು ವರ್ಷಗಳ ಹಿಂದೆ ರಾಷ್ಟ್ರ ರಾಜಧಾನಿಯ ರಾಜಕಾರಣಕ್ಕೆ ಅಪರಿಚಿತರಾಗಿಯೇ ಇದ್ದ ಕರ್ನಾಟಕದ ಉಡುಪಿ ಜಿಲ್ಲೆಯ ಸಂತೋಷ್, ಆರ್‌ಎಸ್‌ಎಸ್‌ನಿಂದ ಪಕ್ಷ ಸಂಘಟನೆ ಕಾರ್ಯಕ್ಕೆ ಬಡ್ತಿ ಪಡೆದು ತ್ವರಿತವಾಗಿ ಮಹತ್ವದ ಸ್ಥಾನಕ್ಕೆ ತಲುಪಿದ ಕೆಲವೇ ಮಂದಿಗಳಲ್ಲಿ ಒಬ್ಬರು. 2019ರ ಲೋಕಸಭೆ ಚುನಾವಣೆ ಸಂದರ್ಭ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಹುದ್ದೆಗೆ ಬಡ್ತಿ ಪಡೆದು, ದೆಹಲಿಗೆ ಕಾಲಿಟ್ಟರು. ‘ಬಂದ ವೇಗದಲ್ಲೇ ಕರ್ನಾಟಕಕ್ಕೆ ಮರಳುತ್ತಾರೆ’ ಎಂದೇ ಉತ್ತರದ ರಾಜಕಾರಣ ಬಲ್ಲವರು ಆಗ ಮಾತನಾಡಿಕೊಂಡಿದ್ದೂ ಉಂಟು.

ಪ್ರಜಾವಾಣಿ ವಿಶೇಷ

ಲೋಕಸಭಾ ಚುನಾವಣೆ ವೇಳೆ ಬೆಂಗಳೂರು ದಕ್ಷಿಣದಿಂದ ದಿವಂಗತ ಎಚ್.ಎನ್.ಅನಂತ ಕುಮಾರ್ ಅವರ ಪತ್ನಿ ತೇಜಸ್ವಿನಿ ಅವರ ಬದಲು ತೇಜಸ್ವಿ ಸೂರ್ಯ, ಕೋಲಾರದಲ್ಲಿ ಎಸ್. ಮುನಿಸ್ವಾಮಿ, ಚಿತ್ರದುರ್ಗದಲ್ಲಿ ನಾರಾಯಣಸ್ವಾಮಿ, ಚಿಕ್ಕೋಡಿಯಲ್ಲಿ ಅಣ್ಣಾ ಸಾಹೇಬ ಜೊಲ್ಲೆ ಅವರಿಗೆ ಟಿಕೆಟ್ ಪ್ರಕಟವಾದಾಗ ಪಕ್ಷದೊಳಗೇ ಬಿ.ಎಲ್. ಸಂತೋಷ್ ಟೀಕೆಗೆ ಗುರಿಯಾಗಿದ್ದರು. ಫಲಿತಾಂಶದ ನಂತರ ಟೀಕಾಕಾರರಿಗೆ ಅಚ್ಚರಿ ಉಂಟುಮಾಡಿದ್ದಲ್ಲದೆ, ಪ್ರಮುಖರಿಗೆ ಅವರು ಹತ್ತಿರವಾಗುತ್ತ ಹೋದರು.

ಇತ್ತೀಚೆಗಷ್ಟೇ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ವಿರುದ್ಧ ಪಕ್ಷದಲ್ಲೇ ವ್ಯಕ್ತವಾದ ಭಿನ್ನಾಭಿಪ್ರಾಯವನ್ನು ಶಮನಗೊಳಿಸುವಲ್ಲಿ ಸಂತೋಷ್ ಪ್ರಯತ್ನ ಪ್ರಮುಖವಾದದ್ದು.

ಪುನರ್ ರಚನೆಯಲ್ಲಿ ಪಾತ್ರ: ಕಳೆದ ವಾರ ನಡೆದ ಕೇಂದ್ರದ ಸಚಿವ ಸಂಪುಟ ಪುನರ್ ರಚನೆಯಲ್ಲಿ ಕಂಡುಬಂದ ಭಾರಿ ಬದಲಾವಣೆಗೆ ಸಂತೋಷ್ ಕೈಚಳಕವೇ ಕಾರಣ ಎಂಬುದು ರಹಸ್ಯವಾಗಿ ಉಳಿದಿಲ್ಲ.

ಪ್ರಕಾಶ್ ಜಾವಡೇಕರ್, ರವಿಶಂಕರ್ ಪ್ರಸಾದ್, ಡಿ.ವಿ. ಸದಾನಂದಗೌಡ ಅವರಂತಹ ಹಿರಿಯರನ್ನು ಸಂಪುಟದಿಂದ ಕೈಬಿಟ್ಟು, ಕಿರಿಯರನ್ನು ಸೇರ್ಪಡೆ ಮಾಡಿಕೊಂಡ ನಿರ್ಧಾರದ ಹಿಂದೆ ಮೋದಿ, ಶಾ ಅವರಷ್ಟೇ ಪ್ರಮುಖ ಪಾತ್ರವಹಿಸಿದ್ದು ಸಂತೋಷ್ ಎಂಬುದು ಬಿಜೆಪಿ ರಾಷ್ಟ್ರೀಯ ವಲಯದಲ್ಲಿ ಕೇಳಿ ಬರುತ್ತಿರುವ ಮಾತು.


6ನೇ ಪುಟ ನೋಡಿ

ಮುಖ್ಯಾಂಶಗಳು

- ಸಂಪುಟ ಪುನರ್ ರಚನೆಯಲ್ಲಿ ಪ್ರಮುಖ ಪಾತ್ರ
- ರಾಜ್ಯಗಳ ಬೆಳವಣಿಗೆಯ ಸಮರ್ಥ ನಿರ್ವಹಣೆ
- ಚುನಾವಣಾ ತಂತ್ರಕ್ಕೂ ಹೆಸರುವಾಸಿ

‘ರಾಜಕೀಯಕ್ಕೆ ಬರುವುದಿಲ್ಲ’

ಚೆನ್ನೈ(ಪಿಟಿಐ): ರಾಜಕೀಯಕ್ಕೆ ಬರುವುದಕ್ಕಾಗಿ ಸ್ಥಾಪಿಸಲಾಗಿದ್ದ ‘ರಜನಿ ಮಕ್ಕಳ್ ಮಂದಿರಂ’ (ಆರ್‌ಎಂಎಂ) ವೇದಿಕೆಯನ್ನು ವಿಸರ್ಜಿಸುತ್ತಿರುವುದಾಗಿ ಸೋಮವಾರ ಘೋಷಿಸಿರುವ ಸೂಪರ್ ಸ್ಟಾರ್ ರಜನಿಕಾಂತ್, ಭವಿಷ್ಯದಲ್ಲಿ ತಾವು ರಾಜಕೀಯಕ್ಕೆ ಬರುವುದಿಲ್ಲ ಎಂದು ಪುನರುಚ್ಚರಿಸಿದ್ದಾರೆ.



ಭವಿಷ್ಯದಲ್ಲಿ ರಜನಿ ರಾಜಕೀಯಕ್ಕೆ ಬರುತ್ತಾರೋ ಅಥವಾ ಇಲ್ಲವೋ ಎಂಬ ಬಗ್ಗೆ ಅಭಿಮಾನಿಗಳು ಮತ್ತು ಆರ್‌ಎಂಎಂ ವೇದಿಕೆಯ ಪದಾಧಿಕಾರಿಗಳು ಸೋಮವಾರ ಪ್ರಶ್ನೆಗಳನ್ನು ಹುಟ್ಟುಹಾಕಿದ ಕೆಲವೇ ಗಂಟೆಗಳಲ್ಲಿ ರಜನಿಕಾಂತ್ ಅವರು, ‘ನಾನು ರಾಜಕೀಯಕ್ಕೆ ಬರುವುದಿಲ್ಲ’ ಎಂದು ಸ್ಪಷ್ಟಪಡಿಸಿದ್ದಾರೆ.

ರಾಜ್ಯ ಕೋವಿಡ್ ಅಂಕಿ–ಅಂಶ

28,72,684 ▲	ಒಟ್ಟು ಸೋಂಕಿತರು (28,71,298 ನಿನ್ನೆಯ ವಿವರ)
34,858 ▼	ಸಕ್ರಿಯ ಪ್ರಕರಣಗಳು
28,01,907 ▲	ಗುಣಮುಖರಾದವರು
35,896 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	1,386	▼
ಗುಣಮುಖ	3,204	▼
ಸಾವು	61	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಉಳ್ಳಾಲ: ಮದುವೆ ಖರ್ಚು ಭರಿಸಿದ ಮುಸ್ಲಿಂ ಕುಟುಂಬ

ಹಿಂದೂ ಯುವತಿ ಮದುವೆಗೆ ನೆರವು

ಪ್ರಜಾವಾಣಿ ವಾರ್ತೆ

ಉಳ್ಳಾಲ (ದಕ್ಷಿಣ ಕನ್ನಡ): ಆರ್ಥಿಕವಾಗಿ ಹಿಂದುಳಿದ ಹಿಂದೂ ಕುಟುಂಬದ ವಧುವಿನ ಮದುವೆ ಖರ್ಚನ್ನು ಭರಿಸುವ ಮೂಲಕ ಉಳ್ಳಾಲ ಅಲೇಕಳದ ಮುಸ್ಲಿಂ ಕುಟುಂಬವೊಂದು ನೆರವಾಗಿದೆ.

ಶನಿವಾರ ಎಂ.ಕೆ. ಕುಟುಂಬದ ಹಂಝ ಅವರ ಮನೆಯಲ್ಲೇ ಮೆಹಂದಿ ಶಾಸ್ತ್ರ, ಭಾನುವಾರ ತಲಪಾಡಿ ದೇವಿಪುರದ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಮದುವೆ ನಡೆಯಿತು.

ಇಲ್ಲಿನ ಶಕ್ತಿನಗರದ ನಿವಾಸಿ ಗೀತಾ ಅವರ ಪತಿ ಕೆಲ ವರ್ಷಗಳ ಹಿಂದೆಯೇ ನಿಧನರಾಗಿದ್ದು, ಈ ದಂಪತಿಗೆ ಇಬ್ಬರು ಹೆಣ್ಣುಮಕ್ಕಳಿದ್ದಾರೆ. ವರ್ಷದ ಹಿಂದೆ ಹಿರಿಯ ಮಗಳಿಗೆ ಮದುವೆ ಮಾಡಿದ್ದು, ಸಾಲದಿಂದ ಹೊರಬರಲು ಮನೆ ಸೇರಿದಂತೆ ಬೆಲೆಬಾಳುವ ವಸ್ತುಗಳನ್ನು ಮಾರಿದ್ದರು. ಲಾಕ್‌ಡೌನ್‌ನಿಂದ ದುಡಿಮೆಯೂ ಇಲ್ಲದಾಗಿತ್ತು. ಅಷ್ಟರಲ್ಲಿಯೇ ಎರಡನೇ ಮಗಳ ಮದುವೆ ನಿಶ್ಚಯವಾಗಿತ್ತು.

ಉಳ್ಳಾಲ ಮಂಚಿಲದ ಎಂ.ಕೆ. ಕುಟುಂಬ ಟ್ರಸ್ಟ್ ಸದಸ್ಯ ರಝಾಕ್ ಅವರಿಗೆ ವಧು ಕವನಾ ಅವರ ಚಿಕ್ಕಪ್ಪ ಸುರೇಶ್ ಪರಿಚಿತರು. ಈ ಕುಟುಂಬವು ಮಗಳ ಮದುವೆ ಮಾಡಲು ಪಡುತ್ತಿರುವ ಕಷ್ಟವನ್ನು ಅವರ ಮೂಲಕ ತಿಳಿದುಕೊಂಡ ಟ್ರಸ್ಟ್ ಸದಸ್ಯರಾಗಿರುವ, ಮ್ಯಾರೇಜ್ ಫಂಡ್ ಅಧ್ಯಕ್ಷ ಅಬ್ದುಲ್ ರೆಹಮಾನ್ ಮತ್ತು ಹಂಝ ಅವರು ಮದುವೆಯ ಖರ್ಚು ಭರಿಸುವ ಭರವಸೆ ನೀಡಿದ್ದರು. ಶಾಸಕ ಯು.ಟಿ. ಖಾದರ್ ಅವರೂ ಧನಸಹಾಯ ನೀಡಿದ್ದಾರೆ.

‘ನಮ್ಮ ಕೈಯಲ್ಲಿ ಹಣ ಇರಲಿಲ್ಲ. ಪ್ರಾಣ ತ್ಯಾಗ ಮಾಡುವುದೊಂದೇ ದಾರಿ ಎನಿಸಿದಾಗ, ಯಾರೂ ಮಾಡಲಾಗದಂತಹ ಸಹಾಯವನ್ನು ಎಂ.ಕೆ. ಕುಟುಂಬಸ್ಥರು ಮಾಡಿದ್ದಾರೆ’ ಎಂದು ಕವನಾ ಅವರ ತಾಯಿ ಗೀತಾ ತಿಳಿಸಿದರು.


ಮೆಹಂದಿ ಶಾಸ್ತ್ರದ ಸಂದರ್ಭದಲ್ಲಿ ಕವನಾಳೊಂದಿಗೆ ಎಂ.ಕೆ.ಕುಟುಂಬದ ಸದಸ್ಯರು

ಚಿನಕುರಳಿ

ಪ್ರಕಾಶ್ ಶೆಟ್ಟಿ



ಜೈಪುರ: ‘ಸೆಲ್ಫಿ’ ತೆಗೆದುಕೊಳ್ಳುವಾಗ ಸಿಡಿಲು ಬಡಿದು ದುರ್ಘಟನೆ

ಉತ್ತರದಲ್ಲಿ ಸಿಡಿಲಾಘಾತ: 50 ಸಾವು

ನವದೆಹಲಿ (ಎಎಫ್‌ಪಿ/ಪಿಟಿಐ): ರಾಜಸ್ಥಾನ, ಮಧ್ಯ ಪ್ರದೇಶ ಮತ್ತು ಉತ್ತರ ಪ್ರದೇಶದಲ್ಲಿ ಸಿಡಿಲು ಬಡಿದು ಸುಮಾರು 50 ಜನರು ಮೃತಪಟ್ಟಿದ್ದಾರೆ. ಈ ರಾಜ್ಯಗಳಲ್ಲಿ ಹತ್ತಾರು ಜನರು ಸಿಡಿಲಿನ ಹೊಡೆತದಿಂದ ಗಂಭೀರವಾಗಿ ಗಾಯಗೊಂಡಿದ್ದಾರೆ.

ಜೈಪುರದಲ್ಲಿ 12 ಮಂದಿ ಸೇರಿದಂತೆ ರಾಜಸ್ಥಾನ ರಾಜ್ಯದಾದ್ಯಂತ 23 ಜನರು ಸಿಡಿಲಿನಿಂದ ಮೃತಪಟ್ಟಿದ್ದಾರೆ. 12ನೇ ಶತಮಾನದ ಆಮೆರ್ ಕೋಟೆಯಲ್ಲಿ ಎರಡು ವೀಕ್ಷಣಾ ಗೋಪುರಗಳಲ್ಲಿ ಪ್ರವಾಸಿಗರು ಸೇರಿದ್ದಾಗ ಸಿಡಿಲು ಅಪ್ಪಳಿಸಿದೆ.

ಪ್ರವಾಸಿಗರು ವೀಕ್ಷಣಾ ಗೋಪುರದ ಮೇಲೆ ‘ಸೆಲ್ಫಿ’ ತೆಗೆದುಕೊಳ್ಳುವಾಗ ಸಿಡಿಲು ಬಡಿದು, ಗೋಪುರದ ಮೇಲಿಂದ ನೆಲಕ್ಕೆ ಅಪ್ಪಳಿಸಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮೂವರ ಸ್ಥಿತಿ ಗಂಭೀರವಾಗಿದೆ.

‘ಗಾಯಗೊಂಡವರಲ್ಲಿ ಕೆಲವರು ಸಿಡಿಲಿನ ಹೊಡೆತ ತಾಳದೆ ಪ್ರಜ್ಞಾಹೀನರಾಗಿದ್ದರು. ಇತರರು ಭಯಭೀತರಾಗಿ ಮತ್ತು ತೀವ್ರ ನೋವಿನಿಂದ ಓಡಿ ಹೋದರು’ ಎಂದು ಪೊಲೀಸ್ ಅಧಿಕಾರಿ ತಿವಾರಿ ಹೇಳಿದ್ದಾರೆ. ವೀಕ್ಷಣಾ ಗೋಪುರದ ಬಳಿಯಿರುವ ಆಳದ ಕಂದಕದಲ್ಲಿ ಯಾರಾದರೂ ಸಿಲುಕಿದ್ದಾರೆಯೇ ಎಂದು ಅಧಿಕಾರಿಗಳು ಸೋಮವಾರ ಪರಿಶೀಲನೆ ನಡೆಸಿದರು.

ಕೋಟ, ಝಾಲ್ವಾರ್, ಬಾರನ್, ಧೋಲ್‌ಪುರ, ಸವಾಯಿ, ಮಧೋಪುರ ಮತ್ತು ಟೋಂಕ್ ಜಿಲ್ಲೆಗಳಲ್ಲಿ ಜನರು ಮೃತಪಟ್ಟಿದ್ದಾರೆ. ರಾಜ್ಯದಾದ್ಯಂತ ಸುಮಾರು 27 ಜನರು ಗಂಭೀರವಾಗಿ ಗಾಯಗೊಂಡಿದ್ದಾರೆ. 16 ಜಾನುವಾರುಗಳೂ ಅಸುನೀಗಿವೆ.

ಮೃತರ ಅವಲಂಬಿತರಿಗೆ ನೆರವು ಮತ್ತು ಗಾಯಾಳುಗಳ ಚಿಕಿತ್ಸೆಗಾಗಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ರಾಜ್ಯ ಸರ್ಕಾರವು ₹1.65 ಕೋಟಿ ಬಿಡುಗಡೆ ಮಾಡಿದೆ ಎಂದು ವಿಪತ್ತು ನಿರ್ವಹಣೆ ಮತ್ತು ಪರಿಹಾರ ವಿಭಾಗದ ಪ್ರಧಾನ ಕಾರ್ಯದರ್ಶಿ ಆನಂದ್ ಕುಮಾರ್ ಹೇಳಿದರು.

ಮಧ್ಯಪ್ರದೇಶದಲ್ಲಿ ಇಬ್ಬರು ಬಾಲಕರು ಸೇರಿದಂತೆ 6 ಮಂದಿ ಬಲಿಯಾಗಿದ್ದಾರೆ. ರಾಜ್ಯದ ವಿವಿಧ ಭಾಗಗಳಲ್ಲಿ 11 ಜನರು ಗಾಯಗೊಂಡಿದ್ದಾರೆ. ಭಾನುವಾರ ಸಂಜೆ ಗ್ವಾಲಿಯರ್ ಜಿಲ್ಲೆಯ ಸುನಾರ್ಪುರದಲ್ಲಿ ಜಾನುವಾರುಗಳನ್ನು ಮೇಯಿಸುತ್ತಿದ್ದ ಇಬ್ಬರು ಸಿಡಿಲಿಗೆ ಬಲಿಯಾಗಿದ್ದಾರೆ. ಶಿವಪುರ ಜಿಲ್ಲೆಯ ತಪ್ರಿಯನ್ ಗ್ರಾಮದಲ್ಲಿ ತಂದೆ ಮತ್ತು ಮಗನಿಗೆ ಗಂಭೀರವಾದ ಸುಟ್ಟಗಾಯಗಳಾಗಿವೆ. ಬರೋಡಿ, ನರಹಿ, ಸಲೈಸ ಗ್ರಾಮಗಳಲ್ಲೂ ಸಿಡಿಲಿನ ಆಘಾತಕ್ಕೆ ಜನರು ಗಾಯಗೊಂಡಿದ್ದಾರೆ. ಕೆಲವು ಕುರಿಗಳೂ ಬಲಿಯಾಗಿವೆ.

ಉತ್ತರ ಪ್ರದೇಶ: ಫತೇಪುರ, ಕೌಸಾಂಬಿ, ಫಿರೋಜಾಬಾದ್ ಜಿಲ್ಲೆಗಳಲ್ಲಿ 12ಕ್ಕೂ ಹೆಚ್ಚು ಜನರು ಸಿಡಿಲಿನ ಆಘಾತಕ್ಕೆ ಬಲಿಯಾಗಿದ್ದಾರೆ. ಕಲ್ಯಾಣಪುರ ಪ್ರದೇಶದ ಗುಮದಾಪುರದಲ್ಲಿ ಇಬ್ಬರು ಸಹೋದರರು ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.


ಜೈಪುರದ ಆಮೆರ್ ಕೋಟೆಯ ವೀಕ್ಷಣಾ ಗೋಪುರದಿಂದ ಸಿಡಿಲಿನ ಹೊಡೆತಕ್ಕೆ ಕೆಳಕ್ಕೆ ಬಿದ್ದ ಪ್ರವಾಸಿಗರಿಗಾಗಿ ಎಸ್‌ಡಿಆರ್‌ಎಫ್ ತಂಡ ಪರಿಶೀಲನೆ ನಡೆಸಿತು –ಪಿಟಿಐ ಚಿತ್ರ

ಬಿಬಿಎಂಪಿ: ನಗರ ಯೋಜನಾ ವಿಭಾಗದ ಜಂಟಿ ನಿರ್ದೇಶಕರ ಅಧಿಕಾರ ಸ್ವೀಕಾರ ಪ್ರಕ್ರಿಯೆ

ಒಂದೇ ಹುದ್ದೆಗೆ ಇಬ್ಬರ ಜಟಾಪಟಿ

ಪ್ರಜಾವಾಣಿ ವಾರ್ತೆ

ಬಿಬಿಎಂಪಿ ಸುದ್ದಿ

ಬೆಂಗಳೂರು: ಬಿಬಿಎಂಪಿಯ ನಗರ ಯೋಜನಾ ವಿಭಾಗದ ಜಂಟಿ ನಿರ್ದೇಶಕರ ಅಧಿಕಾರ ಸ್ವೀಕಾರ ಪ್ರಕ್ರಿಯೆ ಪ್ರಹಸನದ ರೂಪ ತಾಳಿದೆ.

ನಗರ ಯೋಜನಾ ವಿಭಾಗದ ಜಂಟಿ ನಿರ್ದೇಶಕ ವೆಂಕಟದುರ್ಗಾ ಪ್ರಸಾದ್ ಕುಂಚಾಲ ಅವರು ಬೆಂಗಳೂರು ಉತ್ತರ ವಿಭಾಗದ ಜಂಟಿ ನಿರ್ದೇಶಕರಾಗಿ ಶುಕ್ರವಾರ ಮಧ್ಯಾಹ್ನ ಅಧಿಕಾರ ಸ್ವೀಕರಿಸಿದ್ದರು. ಜಂಟಿ ನಿರ್ದೇಶಕರಾಗಿದ್ದ (ಉತ್ತರ) ಬಿ.ಮಂಜೇಶ್, 'ನಾನು ಕಚೇರಿಯಲ್ಲಿ ಇಲ್ಲದ ಸಂದರ್ಭದಲ್ಲಿ ವೆಂಕಟದುರ್ಗಾ ಪ್ರಸಾದ್ ಅವರು ಬಂದು ನನ್ನ ಕುರ್ಚಿಯಲ್ಲಿ ಕುಳಿತಿದ್ದಾರೆ' ಎಂದು ದೂರಿದ್ದಾರೆ. ಇದನ್ನು ಅಲ್ಲಗಳೆದ ವೆಂಕಟದುರ್ಗಾ ಪ್ರಸಾದ್ ತಾವು 'ಕೆಎಟಿ' ಆದೇಶದ ಪ್ರಕಾರ ಅಧಿಕಾರ ಸ್ವೀಕರಿಸಿದ್ದಾಗಿ ತಿಳಿಸಿದ್ದಾರೆ. ಅಲ್ಲದೇ ಸೋಮವಾರವೂ ಇದೇ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸಿದ್ದಾರೆ.

ವಿವಾದ ಏನು?: ವೆಂಕಟದುರ್ಗಾ ಪ್ರಸಾದ್ ಈ ಹಿಂದೆ ಬಿಬಿಎಂಪಿಯಲ್ಲಿಯೇ ಜಂಟಿ ನಿರ್ದೇಶಕರಾಗಿ (ನಗರ ಯೋಜನೆ ಸ್ಕ್ವಾಡ್) ಕಾರ್ಯನಿರ್ವಹಿಸಿದ್ದರು. ಇದು ಮಂಜೂರಾದ ಹುದ್ದೆಯಲ್ಲ. ತಮ್ಮ ಅಹರ್ತೆಗೆ ಹಾಗೂ ಹಿರಿತನಕ್ಕೆ ಅನುಗುಣವಾಗಿ ಬಿಬಿಎಂಪಿಯ ಜಂಟಿ ನಿರ್ದೇಶಕ (ನಗರ ಯೋಜನೆ ಉತ್ತರ) ಹುದ್ದೆಯನ್ನು ನೀಡುವಂತೆ ಕೋರಿದ್ದರು. ಇದಕ್ಕೆ ಬಿಬಿಎಂಪಿ ಒಪ್ಪದಿದ್ದಾಗ ಕೆಎಟಿ ಮೊರೆ ಹೋಗಿದ್ದರು.

2020ರ ಡಿಸೆಂಬರ್ 31ರಂದು ಬೆಂಗಳೂರು ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ (ಬಿಎಂಐಸಿಎಪಿಎ) ನಗರ ಮತ್ತು ಗ್ರಾಮಾಂತರ ಯೋಜನೆ ಜಂಟಿ ನಿರ್ದೇಶಕರಾಗಿದ್ದ ಎಚ್.ಎನ್.ರಘು ಅವರನ್ನು ಸರ್ಕಾರ ಬಿಬಿಎಂಪಿಗೆ ವರ್ಗ ಮಾಡಿತ್ತು (ಅವರು ಹಿಂದೆಯೂ ಬಿಬಿಎಂಪಿಯಲ್ಲಿಯೇ ಇದ್ದರು). ಇದರಿಂದ ತೆರವಾಗಿದ್ದ ಹುದ್ದೆಗೆ ವೆಂಕಟದುರ್ಗಾ ಪ್ರಸಾದ್ ಅವರನ್ನು ವರ್ಗ ಮಾಡಲಾಗಿತ್ತು. ಈ ಅಧಿಸೂಚನೆ ಪ್ರಶ್ನಿಸಿ ವೆಂಕಟದುರ್ಗಾ ಪ್ರಸಾದ್ ಕೆಎಟಿ ಮೊರೆ ಹೋಗಿದ್ದರು. ಈ ವರ್ಗಾವಣೆ ಆದೇಶವನ್ನು ಕೆಎಟಿ 2021ರ ಏ.16ರಂದು ರದ್ದುಪಡಿಸಿತ್ತು. ಹಾಗಾಗಿ ರಘು ಅವರನ್ನು ಮತ್ತೆ ಬಿಎಂಐಸಿಎಪಿಎಗೆ ಹಾಗೂ ವೆಂಕಟದುರ್ಗಾ ಪ್ರಸಾದ್ ಅವರನ್ನು ಮರಳಿ ಬಿಬಿಎಂಪಿಗೆ ಸರ್ಕಾರ 2021ರ ಏ. 30ರಂದು ವರ್ಗ ಮಾಡಿತ್ತು. ಈ ಆದೇಶವನ್ನು ರಘು ಅವರು ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದಾರೆ.

'ನಾನು ಬಿಬಿಎಂಪಿಯ ಜಂಟಿ ನಿರ್ದೇಶಕ (ನಗರ ಯೋಜನೆ-ಉತ್ತರ) ಹುದ್ದೆ ನೀಡುವಂತೆ ಸಲ್ಲಿಸಿದ್ದ ಪ್ರಕರಣ ಸಂಬಂಧಿಸಿಯೂ ಕೆಎಟಿ ನನ್ನ ಪರವಾಗಿ ಆದೇಶ ಮಾಡಿದೆ. ಅದರ ಪ್ರಕಾರ ನಾನು ಜಂಟಿ ನಿರ್ದೇಶಕ (ನಗರ ಯೋಜನೆ ಉತ್ತರ) ಹುದ್ದೆಯ ಅಧಿಕಾರ ಸ್ವೀಕರಿಸಿದ್ದೇನೆ. ಇದಕ್ಕೆ ಮುನ್ನ ಮಂಜೇಶ್ ಅವರಿಗೆ ಕರೆ ಮಾಡಿದ್ದೆ. ಅವರು ಸ್ವೀಕರಿಸಿಲ್ಲ. ಮುಖ್ಯ ಆಯುಕ್ತರ ಕಚೇರಿಯಲ್ಲೂ ಗಂಟೆ ಕಾದು ಬಳಿಕ ಅಧಿಕಾರ ಸ್ವೀಕಾರ ಪ್ರಕ್ರಿಯೆ ಪೂರ್ಣಗೊಳಿಸಿದ್ದೆ' ಎನ್ನುತ್ತಾರೆ ವೆಂಕಟದುರ್ಗಾ ಪ್ರಸಾದ್.

'ಅವರೇನಿದ್ದರೂ ಬಿಬಿಎಂಪಿ ಮುಖ್ಯ ಆಯುಕ್ತರಲ್ಲಿ ವರದಿ ಮಾಡಿಕೊಂಡು ನಂತರ ಅಧಿಕಾರ ಸ್ವೀಕರಿಸಬೇಕಿತ್ತು. ಅವರ ಸೂಚನೆ ಇಲ್ಲದೇ ನನ್ನ ಕುರ್ಚಿಯಲ್ಲಿ ಬಂದು ಕುಳಿತಿದ್ದಾರೆ' ಎಂಬುದು ಮಂಜೇಶ್ ಅವರ ಆಕ್ಷೇಪ.

ಅಧಿಕಾರ ಸ್ವೀಕಾರ ಪ್ರಹಸನ ವಿವಾದದ ಸ್ವರೂಪ ಪಡೆದುಕೊಳ್ಳುತ್ತಿದ್ದಂತೆಯೇ ಮುಖ್ಯ ಆಯುಕ್ತ ಗೌರವ್ ಗುಪ್ತ ಮಧ್ಯಪ್ರವೇಶ ಮಾಡಿದ್ದಾರೆ. ಸದ್ಯಕ್ಕೆ ಮಂಜೇಶ್ ಅವರನ್ನು ಜಂಟಿ ನಿರ್ದೇಶಕ (ಉತ್ತರ) ಹುದ್ದೆಯಲ್ಲಿ ಮುಂದುವರಿಸಿ ಆದೇಶ ಮಾಡಿದ್ದಾರೆ. ವೆಂಕಟದುರ್ಗಾ ಪ್ರಸಾದ್ ಅವರನ್ನು ಜಂಟಿ ನಿರ್ದೇಶಕರಾಗಿ (ನಗರ ಯೋಜನೆ ಸ್ಕ್ವಾಡ್) ಮುಂದುವರಿಯುವಂತೆ ಸೂಚಿಸಿ ಆದೇಶ ಮಾಡಿದ್ದಾರೆ.

ಸುದ್ದಿ 2 ನಿಮಿಷ

'ಕನ್ನಡದಲ್ಲಿ ಬ್ಯಾಂಕಿಂಗ್ ಪರೀಕ್ಷೆ: ಕೇಂದ್ರದ ಮೇಲೆ ಒತ್ತಡ ತನ್ನಿ'

ಬೆಂಗಳೂರು: 'ಗ್ರಾಮೀಣ ಬ್ಯಾಂಕ್‌ಗಳಲ್ಲಿ ನಡೆಯುವ ನೇಮಕಾತಿಗೆ ಪ್ರಾದೇಶಿಕ ಭಾಷೆಗಳಲ್ಲಿ ಪರೀಕ್ಷೆ ನಡೆಸಲಾಗುತ್ತಿದೆ. ಇದೇ ಪದ್ಧತಿಯನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳ ನೇಮಕಾತಿಗೂ ಅನ್ವಯಿಸುವಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕು' ಎಂದು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮನು ಬಳಿಗಾರ್ ಅವರು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಒತ್ತಾಯಿಸಿದ್ದಾರೆ.

ಈ ಕುರಿತು ಪತ್ರ ಬರೆದಿರುವ ಅವರು, 'ಈ ಬಾರಿ ಹಿಂದಿ ಹಾಗೂ ಇಂಗ್ಲಿಷ್‌ನಲ್ಲೇ ಪರೀಕ್ಷೆ ನಡೆಸಲು ಐಬಿಪಿಎಸ್ ನಿರ್ಧರಿಸಿದೆ. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಹೋದ ವರ್ಷ ಸಂಸತ್ತಿನಲ್ಲಿ ನೀಡಿದ್ದ ಭರವಸೆ ತಪ್ಪಿದಂತಾಗಿದೆ. ಇದು, ಇದರಿಂದ ಕನ್ನಡ ಮತ್ತು ಇತರ ಪ್ರಾದೇಶಿಕ ಭಾಷೆ ಮತ್ತು ಭಾಷಿಕರಿಗೆ ಅನ್ಯಾಯವಾಗುತ್ತಿದೆ. ಕೇವಲ ಹಿಂದಿ ಭಾಷಿಕರಿಗೆ ಅನುಕೂಲ ಮಾಡಿಕೊಡುವ ದುರುದ್ದೇಶ ಇದರ ಹಿಂದೆ ಅಡಗಿದೆ. ಕೇಂದ್ರ ಸರ್ಕಾರವು ಹಿಂದಿ ನಿರಂತರವಾಗಿ ಹೇರುತ್ತಿರುವುದು ಖಂಡನಾರ್ಹ' ಎಂದು ದೂರಿದ್ದಾರೆ.

'ನಾಡಿನ ವಿವಿಧ ಬ್ಯಾಂಕ್‌ಗಳಲ್ಲಿ ಹಿಂದಿ ಭಾಷಿಕರ ಪ್ರಾಬಲ್ಯ ಹೆಚ್ಚಿದೆ. ಪ್ರಾದೇಶಿಕ ಭಾಷಿಕರನ್ನೇ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ನೇಮಿಸಿಕೊಳ್ಳಬೇಕು ಎಂಬ ನಿಯಮವನ್ನು ಗಾಳಿಗೆ ತೂರಲಾಗಿದೆ. ನಿರ್ಮಲಾ ಸೀತಾರಾಮನ್ ಅವರು ಕರ್ನಾಟಕದಿಂದ ರಾಜ್ಯಸಭೆಗೆ ಆಯ್ಕೆಯಾಗಿದ್ದಾರೆ. ಒಂದರ್ಥದಲ್ಲಿ ಅವರೂ ಕೂಡ ಕನ್ನಡಿಗರ ಪ್ರತಿನಿಧಿ. ಹೀಗಿರುವಾಗ ಕನ್ನಡ ಭಾಷೆಗೆ ಆಗುತ್ತಿರುವ ಅನ್ಯಾಯವನ್ನು ಇನ್ನಾದರೂ ಸರಿಪಡಿಸಿಕೊಳ್ಳಬೇಕು' ಎಂದು ಪ್ರತಿಕ್ರಿಯಿಸಿದ್ದಾರೆ.

'ನಿರ್ಮಲಾ ಸೀತಾರಾಮನ್ ಅವರಿಗೂ ಈ ಕುರಿತು ಪ್ರತ್ಯೇಕ ಪತ್ರ ಕಳುಹಿಸಲಾಗಿದೆ' ಎಂದು ಮನು ಬಳಿಗಾರ್ ತಿಳಿಸಿದ್ದಾರೆ.

ಕುಷಾಕ್ ಮಾರುಕಟ್ಟೆಗೆ ಬಿಡುಗಡೆ



ಬೆಂಗಳೂರು: ಸ್ಕೋಡಾ ಕಂಪನಿಯ ಹೊಸ ಎಸ್‌ಯುವಿ 'ಕುಷಾಕ್'ಅನ್ನು ನಗರದ ಸೇಂಟ್ ಮಾರ್ಕ್ಸ್ ರಸ್ತೆಯಲ್ಲಿರುವ ಟಾಫೆ ಆ್ಯಕ್ಸೆಸ್ ಷೋರೂಂನಲ್ಲಿ ಸೋಮವಾರ ಮಾರುಕಟ್ಟೆಗೆ ಬಿಡುಗಡೆ ಮಾಡಲಾಯಿತು.

ಟಾಫೆ ಆ್ಯಕ್ಸೆಸ್ ಶಾಖಾ ಮುಖ್ಯಸ್ಥ ದಾಮೋದರ್ ಎಲ್. ಅವರು, 'ನೂತನ ಕುಷಾಕ್ ವಾಹನವನ್ನು ಸ್ಕೋಡಾ ಕಂಪನಿಯು ಆಕರ್ಷಕ ವಿನ್ಯಾಸದಲ್ಲಿ, ಅತ್ಯುನ್ನತ ತಂತ್ರಜ್ಞಾನ ಬಳಸಿ ರೂಪಿಸಿದೆ' ಎಂದರು. ಕುಷಾಕ್‌ನ ಇಂಡಿಕೇಟರ್‌ಗಳ ವಿನ್ಯಾಸ ಅತ್ಯದ್ಭುತ ಮತ್ತು ಆಕರ್ಷಣೀಯ, ಕಾರಿನ ಒಳ ವಿನ್ಯಾಸವು ಗ್ರಾಹಕರ ಅಭಿರುಚಿಗೆ ತಕ್ಕಂತೆ ಇದೆ ಎಂದರು. ಬಿಡುಗಡೆ ಸಮಾರಂಭದಲ್ಲಿ ಹೆಬ್ಬಾಳ ಕ್ಷೇತ್ರದ ಶಾಸಕ ಭೈರತಿ ಸುರೇಶ್ ಮತ್ತಿತರರು ಇದ್ದರು.

ಬೆಂಗಳೂರು ನಗರದ ಕೋವಿಡ್ ಅಂಕಿ–ಅಂಶ

12,19,697 ಒಟ್ಟು ಸೋಂಕಿತರು (12,19,378 ನಿನ್ನೆಯ ವಿವರ)

12,985 ಸಕ್ರಿಯ ಪ್ರಕರಣ	11,90,966 ಗುಣಮುಖ ಆದವರು	15,745 ಒಟ್ಟು ಸಾವು

ಸೋಮವಾರದ ಏರಿಕೆ

ಹೊಸ ಪ್ರಕರಣ	319
ಗುಣಮುಖ	784
ಸಾವು	9


ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಗಡಿಗಳಲ್ಲಿ ಕಟ್ಟುನಿಟ್ಟಿನ ತಪಾಸಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಸೋಂಕು ಹರಡುವುದನ್ನು ತಡೆಯುವುದಕ್ಕಾಗಿ ಅಂತರ ರಾಜ್ಯ ಗಡಿಗಳಲ್ಲಿ ಕಟ್ಟುನಿಟ್ಟಿನ ತಪಾಸಣೆ ನಡೆಸುವಂತೆ ಗೃಹ ಸಚಿವ ಬಸವರಾಜ ಬೊಮ್ಮಾಯಿ ರಾಜ್ಯದ ಗಡಿ ಜಿಲ್ಲೆಗಳ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಸೂಚಿಸಿದರು.



ಕೋವಿಡ್ ನಿಯಂತ್ರಣ ಕುರಿತು ಗಡಿ ಜಿಲ್ಲೆಗಳ ಪೊಲೀಸ್ ವರಿಷ್ಠಾಧಿಕಾರಿಗಳ ಜತೆ ಸೋಮವಾರ ವಿಡಿಯೊ ಕಾನ್ಫರೆನ್ಸ್ ಮೂಲಕ ಸಭೆ ನಡೆಸಿದ ಅವರು, 'ಗಡಿ ಭಾಗದಲ್ಲಿನ ತನಿಖಾ ಠಾಣೆಗಳಲ್ಲಿ ಬಿಗಿಯಾದ ಕ್ರಮಗಳನ್ನು ಅನುಸರಿಸಬೇಕು. ಮಹಾರಾಷ್ಟ್ರ ಮತ್ತು ಕೇರಳದಿಂದ ರಾಜ್ಯಕ್ಕೆ ಬರುವವರು ಆರ್‌ಟಿ–ಪಿಸಿಆರ್ ವಿಧಾನದಲ್ಲಿ ಪಡೆದಿರುವ ಕೋವಿಡ್ ನೆಗೆಟಿವ್ ವರದಿ ಹೊಂದಿರುವುದನ್ನು ಖಾತರಿಪಡಿಸಿಕೊಳ್ಳಬೇಕು' ಎಂದು ನಿರ್ದೇಶನ ನೀಡಿದರು.

ಸೋಂಕು ಇರುವವರು ಕಣ್ತಪ್ಪಿಸಿ ರಾಜ್ಯ ಪ್ರವೇಶಿಸದಂತೆ ಎಚ್ಚರಿಕೆ ವಹಿಸಬೇಕು. ಸೋಂಕು ಲಕ್ಷಣಗಳು ಇರುವವರ ಗಂಟಲು ಮತ್ತು ಮೂಗಿನ ದ್ರವದ ಮಾದರಿ ಪಡೆದು ಪರೀಕ್ಷಿಸಲು ಗಡಿಯಲ್ಲೇ ವ್ಯವಸ್ಥೆ ಮಾಡಿಕೊಳ್ಳಬೇಕು. ಆರೋಗ್ಯ ಇಲಾಖೆ ಸಹಯೋಗದಲ್ಲಿ ಈ ಕೆಲಸ ಮಾಡಬೇಕು ಎಂದು ತಿಳಿಸಿದರು.

ಕಳೆದ ಬಾರಿ ಮಹಾರಾಷ್ಟ್ರ ಮತ್ತು ಕೇರಳದಿಂದ ಜನರು ಯಾವುದೇ ತಪಾಸಣೆ ಇಲ್ಲದೆ ಬರಲು ಅವಕಾಶ ನೀಡಿದ್ದರಿಂದ ರಾಜ್ಯದಲ್ಲಿ ಕೋವಿಡ್ ಸೋಂಕು ಹೆಚ್ಚಾಗಿತ್ತು. ಈ ಬಾರಿ ಅಂತಹ ಸಂದರ್ಭ ಮರುಕಳಿಸಲು ಅವಕಾಶ ನೀಡಬಾರದು ಎಂದು ಗೃಹ ಸಚಿವರು ತಾಕೀತು ಮಾಡಿದರು.

ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಹಾಗೂ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಪ್ರತಾಪ್ ರೆಡ್ಡಿ ವಿಡಿಯೊ ಕಾನ್ಫರೆನ್ಸ್‌ನಲ್ಲಿದ್ದರು. ಬೆಳಗಾವಿ, ಬೀದರ್, ವಿಜಯಪುರ, ಕೊಡಗು, ಮೈಸೂರು, ಚಾಮರಾಜನಗರ, ಉತ್ತರ ಕನ್ನಡ, ದಕ್ಷಿಣ ಕನ್ನಡ ಜಿಲ್ಲೆಗಳ ಪೊಲೀಸ್ ವರಿಷ್ಠಾಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ನೆರೆ ರಾಜ್ಯಗಳಲ್ಲಿ ಕೋವಿಡ್ ಹೆಚ್ಚಳ: ಕಳವಳ

ಬೆಂಗಳೂರು: ನಗರದಲ್ಲಿ ಕೋವಿಡ್ ಹರಡುವಿಕೆ ಹತೋಟಿಗೆ ಬಂದಿದೆ. ಆದರೆ, ನೆರೆ ರಾಜ್ಯಗಳಾದ ಮಹಾರಾಷ್ಟ್ರ ಹಾಗೂ ಕೇರಳಗಳಲ್ಲಿ ಸೋಂಕು ಹೆಚ್ಚಳವಾಗುತ್ತಿರುವುದು ಬಿಬಿಎಂಪಿ ಅಧಿಕಾರಿಗಳ ಕಳವಳಕ್ಕೆ ಕಾರಣವಾಗಿದೆ.

ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, 'ಸಾರ್ವಜನಿಕ ಆರೋಗ್ಯ ರಕ್ಷಣೆಯ ಉದ್ದೇಶದಿಂದಲೇ ಪ್ರತಿಬಂಧಗಳನ್ನು ಜಾರಿಗೊಳಿಸಲಾಗುತ್ತದೆ. ಅವುಗಳನ್ನು ಸಂಪೂರ್ಣ ತೆರವುಗೊಳಿಸುವ ಮುನ್ನ ಕೋವಿಡ್ ಎಷ್ಟರ ಮಟ್ಟಿಗೆ ಹತೋಟಿಗೆ ಬಂದಿವೆ ಎಂಬುದನ್ನು ಪರಿಗಣಿಸಬೇಕಾಗುತ್ತದೆ. ನಗರದಲ್ಲಿ ಕೋವಿಡ್ ಸೊಂಕು ಹರಡುವಿಕೆ ಸದ್ಯ ನಿಯಂತ್ರಣಕ್ಕೆ ಬಂದಿದೆ. ಆದರೂ ಈಗಲೂ ರಾತ್ರಿ ಕರ್ಫ್ಯೂ ಮುಂದುವರಿದಿದೆ. ಅದನ್ನೂ ಕೈಬಿಡುವ ಮುನ್ನ ಕೇರಳ ಹಾಗೂ ಮಹಾರಾಷ್ಟ್ರಗಳಲ್ಲಿ ಕೋವಿಡ್ ಪ್ರಕರಣಗಳು ಮತ್ತೆ ಹೆಚ್ಚುತ್ತಿರುವ ಬಗ್ಗೆಯೂ ಗಮನ ಹರಿಸಬೇಕಾಗುತ್ತದೆ' ಎಂದರು.

ಕೋವಿಡ್ ಸಂಕಷ್ಟದ ಕಾಲದಲ್ಲೂ ಬಿಬಿಎಂಪಿ ಅನಗತ್ಯವಾಗಿ ಹೊಸ ವಾಹನ ಖರೀದಿಸುತ್ತಿದೆ ಎಂಬ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, 'ಅವಶ್ಯಕತೆಗಿಂತ ಹೆಚ್ಚು ವಾಹನ ಖರೀದಿ ಸಲ್ಲದು. ಈ ವಿಚಾರದಲ್ಲಿ ಲೋಪಗಳಾಗಿದ್ದರೆ ಸರಿಪಡಿಸಲಿದ್ದೇವೆ' ಎಂದರು.

ವಿದ್ಯುತ್ ವ್ಯತ್ಯಯ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತುರ್ತು ನಿರ್ವಹಣಾ ಕಾರ್ಯ ಕೈಗೆತ್ತಿಕೊಳ್ಳುತ್ತಿರುವುದರಿಂದ ನಗರದ ವಿವಿಧ ಪ್ರದೇಶಗಳಲ್ಲಿ ಇದೇ 13ರಿಂದ 15ರವರೆಗೆ ಬೆಳಿಗ್ಗೆ 10ರಿಂದ ಸಂಜೆ 6ರ ತನಕ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಹೇಳಿದೆ.


ಪುಟ್ಟೇನಹಳ್ಳಿ, ನಮ್ಮ ಮನೆ ಹೋಟೆಲ್ ರಸ್ತೆ, ರಾಜೀವ್ ಗಾಂಧಿ ರಸ್ತೆ, ಅಬ್ಬಿಗೆರೆ, ಸಾಯಿನಗರ, ಸಂಭ್ರಮ ಕಾಲೇಜು, ಬಿಎಚ್‌ಇಎಲ್, ಸಹಕಾರ ನಗರ, ಹೆಗಡೆ ನಗರ, ಬ್ಯಾಟರಾಯನಪುರ, ಜಕ್ಕೂರು ವಾಯುನೆಲೆ, ಎಂಎಲ್‌ಎ ಬಡಾವಣೆ, ನಿಸರ್ಗ ಬಡಾವಣೆ, ಪೈಪ್‌ಲೈನ್ ರಸ್ತೆ, ಕೆಂಪೇಗೌಡ ಬಡಾವಣೆ, ಜಾಲಹಳ್ಳಿ, ಬಾಹುಬಲಿ ನಗರ, ಡಾ. ರಾಜಕುಮಾರ್ ರಸ್ತೆ, ಪ್ರಕಾಶ್ ನಗರ, ಸಾಯಿಬಾಬಾ ನಗರ, ನಂದಿನಿ ಬಡಾವಣೆ, ಸುಬ್ರಹ್ಮಣ್ಯ ನಗರ, ಎಲ್. ಎನ್. ಪುರ, ಐಐಎಸ್‌ಸಿ, ವಯ್ಯಾಲಿಕಾವಲ್, ಶಶಿಕಿರಣ್ ಅಪಾರ್ಟ್‌ಮೆಂಟ್, ಮಲ್ಲೇಶ್ವರ, ಯಶವಂತಪುರ ಮೊದಲನೇ ಮುಖ್ಯರಸ್ತೆ, ಗಣೇಶ ಸಾಮಿಲ್ ರಸ್ತೆ, ಪೀಣ್ಯ, ಮಹಾಲಕ್ಷ್ಮಿ ಬಡಾವಣೆ, ಪಶ್ಚಿಮ ಕಾರ್ಡ್ ರಸ್ತೆ ಸುತ್ತ–ಮುತ್ತಲಿನ ಪ್ರದೇಶ.

ಕವಿಕಾ ಬಡಾವಣೆ, ವೆಂಕಟೇಶ್ವರ ಕೊಳೆಗೇರಿ, ನಾಯಂಡಹಳ್ಳಿ ಕೊಳೆಗೇರಿ, ಐಟಿಐ ಬಡಾವಣೆ, ಜನಪ್ರಿಯ ಬಡಾವಣೆ, ಮೈಸೂರು ರಸ್ತೆ, ಬಸವೇಶ್ವರ ಎಲೆಕ್ಟ್ರಾನಿಕ್ಸ್, ಮುನೇಶ್ವರ ಬ್ಲಾಕ್.

ಇದೇ 14 ಮತ್ತು 15 ರಂದು ವ್ಯತ್ಯಯ: ಕಸ್ತೂರಬಾ ನಗರ, ಟಿಂಬರ್ ಯಾರ್ಡ್ ಬಡಾವಣೆ, ಜನಪ್ರಿಯ ಬಡಾವಣೆ, ಶಾಸ್ತ್ರಿ ನಗರ, ಐಟಿಐ ಬಡಾವಣೆ, ಬಿಡಿಎ ಬಡಾವಣೆ, ಮೈಸೂರು ರಸ್ತೆ ಸುತ್ತ–ಮುತ್ತಲಿನ ಪ್ರದೇಶ.

'ರಾಜಕೀಯದ ಸುವರ್ಣಾವಕಾಶ ಕೈಚೆಲ್ಲಿದ ಪ್ರಕಾಶ್'

ಪ್ರಜಾವಾಣಿ ವಾರ್ತೆ



ಎಂ.ಪಿ. ಪ್ರಕಾಶ್

ಬೆಂಗಳೂರು: 'ಪ್ರಾದೇಶಿಕ ಪಕ್ಷವೊಂದನ್ನು ಪ್ರಬಲವಾಗಿಸುವ, ರಾಜಕೀಯವಾಗಿ ತಾವೂ ಪ್ರಬಲವಾಗುವ ಅವಕಾಶ ಎಂ.ಪಿ. ಪ್ರಕಾಶ್ ಮುಂದಿತ್ತು. ಆದರೆ, ಅವರು ಆ ಸಂದರ್ಭದಲ್ಲಿ ಹಿಂಜರಿದ ಕಾರಣ ರಾಜ್ಯದಲ್ಲಿ ರಾಜಕೀಯದ ಹೊಸ ಯುಗಾರಂಭ ಆಗುವುದು ಕೈತಪ್ಪಿತು' ಎಂದು ಸಾಹಿತಿ ಪ್ರೊ.ಎಸ್.ಜಿ. ಸಿದ್ದರಾಮಯ್ಯ ಬೇಸರ ವ್ಯಕ್ತಪಡಿಸಿದರು.

ಚಿಂತಕ ಎಂ.ಪಿ.ಪ್ರಕಾಶ್ ಅವರ ಜನ್ಮದಿನದ ಅಂಗವಾಗಿ ರಂಗ ವಿಜಯಾ ಮತ್ತು ರಂಗಚಂದಿರ ತಂಡಗಳು ಸೋಮವಾರ ಆನ್‌ಲೈನ್‌ನಲ್ಲಿ ಹಮ್ಮಿಕೊಂಡಿದ್ದ 'ಈಗ ನಮ್ಮ ಜೊತೆ ಎಂ.ಪಿ.ಪ್ರಕಾಶ್ ಇರಬೇಕಿತ್ತು' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಜನತಾದಳದಿಂದ ಸಿದ್ದರಾಮಯ್ಯ ಅವರನ್ನು ಹೊರಹಾಕಿದಾಗ, ಅವರು ಅಖಿಲ ಭಾರತ ಪ್ರಗತಿಪರ ಜನತಾದಳ (ಎಬಿಪಿಜೆಡಿ) ಪಕ್ಷ ರಚಿಸಿದ್ದರು. ಜನತಾದಳದಲ್ಲಿನ ಕುಟುಂಬ ರಾಜಕಾರಣದ ಮುಜುಗರವನ್ನು ಅನುಭವಿಸುವುದಕ್ಕೆ ಬದಲಾಗಿ, ಎಂ.ಪಿ. ಪ್ರಕಾಶ್ ಮತ್ತು ಪಿ.ಜಿ. ಆರ್. ಸಿಂಧ್ಯ ಅವರೂ ಸಿದ್ದರಾಮಯ್ಯ ಅವರ ಜೊತೆ ಕೈಜೋಡಿಸಿದ್ದರೆ ಎಬಿಪಿಜೆಡಿ ಪ್ರಬಲ ಪ್ರಾದೇಶಿಕ ಪಕ್ಷವಾಗಿ ಬೆಳೆಯುತ್ತಿತ್ತು' ಎಂದು ಅವರು ಅಭಿಪ್ರಾಯಪಟ್ಟರು.

'ಆಗ ಪಕ್ಷ ತೊರೆಯದ್ದಕ್ಕೆ ಪ್ರಕಾಶ್ ಮತ್ತು ಸಿಂಧ್ಯ ಅವರು ಬಳಿಕ ಪರಿತಪಿಸಿದ್ದನ್ನು ಕಂಡಿದ್ದೇನೆ. ಕೊನೆಗೂ ಪ್ರಕಾಶ್ ಜಾತ್ಯತೀತ ಜನತಾದಳದಲ್ಲೂ ಇರದೆ ಕಾಂಗ್ರೆಸ್ ಸೇರಿದರು. ಆದರೆ, ಅಷ್ಟರಲ್ಲಾಗಲೇ ಕಾಲ ಮಿಂಚಿತ್ತು. ಅವರು ಪರಾಭವಗೊಳ್ಳಬೇಕಾಯಿತು' ಎಂದು ನೆನಪಿಸಿಕೊಂಡರು.

ಸಾಣೇಹಳ್ಳಿ ಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, 'ಪ್ರಕಾಶ್ ಅವರು, ರಾಜಕೀಯ ಮತ್ತು ಸಾಮಾಜಿಕ ಗಟ್ಟಿತನವನ್ನು ಮೈಗೂಡಿಸಿಕೊಂಡು ಸಂಸ್ಕೃತಿಯ ನಿಜ ಚಿಂತಕರಾಗಿ ಬೆಳೆದ ವ್ಯಕ್ತಿಯಾಗಿದ್ದರು. ರಂಗಭೂಮಿಯ ಸಮಸ್ಯೆಗಳಿಗೆ ಬಹುಬೇಗ ಸ್ಪಂದಿಸಿ ಕಲಾವಿದರ ಕಷ್ಟ ನಿವಾರಿಸಲು ನೆರವಾಗುತ್ತಿದ್ದರು' ಎಂದು ಸ್ಮರಿಸಿದರು.

ಕಲಾವಿದ ಎಂ.ಎಸ್. ಮೂರ್ತಿ, 'ರಾಜಕಾರಣಿಗಳು ರಾಜಕೀಯದಲ್ಲಿ ಗೆಲ್ಲುತ್ತಾರೆ, ಸೋಲುತ್ತಾರೆ. ಅತ್ಯುತ್ತಮ ಕೆಲಸ ಮಾಡಿದ ಎಂ.ಪಿ. ಪ್ರಕಾಶ್ ರಾಜಕಾರಣದಲ್ಲಿ ಸೋತರೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ಸೋಲಿಲ್ಲದ ಸರದಾರ' ಎಂದರು.

ಕಾಂಗ್ರೆಸ್ ಮುಖಂಡ ವಿ.ಆರ್. ಸುದರ್ಶನ್, 'ಮಂತ್ರಿಯಾಗಿ, ಉಪಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸಿದ ಪ್ರಕಾಶ್ ಅವರು ಬರಹಗಾರರಾಗಿ, ಕಲಾವಿದರಾಗಿ ಅನೇಕ ಸಾಧನೆಗಳನ್ನು ಮಾಡಿದವರು. ಸದನದಲ್ಲಿ ಅವರಾಡುತ್ತಿದ್ದ ಮಾತುಗಳಲ್ಲೂ ತಾರ್ಕಿಕ ನೆಲೆಗಟ್ಟು ಇರುತ್ತಿತ್ತು' ಎಂದರು.

ಗಾಯಕ ಟಿ. ಲಕ್ಷ್ಮೀನಾರಾಯಣ ರಂಗಗೀತೆ ಹಾಡಿದರು. ಪ್ರಕಾಶ್ ಅವರ ಪುತ್ರಿ ಎಂ.ಪಿ. ಸುಮಾ, ಜಿಪಿಒ ಚಂದ್ರು, ಹಿರಿಯ ಕಲಾವಿದ ಶ್ರೀನಿವಾಸ್ ಜಿ. ಕಪ್ಪಣ್ಣ ಭಾಗವಹಿಸಿದರು.

ಕೆನರಾ ಬ್ಯಾಂಕ್‌ನಿಂದ ಕೌಶಲ ಅಭಿವೃದ್ಧಿ ತರಬೇತಿ

ಬೆಂಗಳೂರು: ಕೆನರಾ ಬ್ಯಾಂಕ್, ಆರ್ಥಿಕವಾಗಿ ಹಿಂದುಳಿದ ಹಾಗೂ ಕೋವಿಡ್‌ನಿಂದ ಮೃತಪಟ್ಟವರ ಕುಟುಂಬದ ಮಹಿಳೆಯರಿಗಾಗಿ ಕೌಶಲ ಅಭಿವೃದ್ಧಿ ತರಬೇತಿ ಕಾರ್ಯಕ್ರಮ ಹಮ್ಮಿಕೊಂಡಿದೆ.

ಐದು ದಿನಗಳ ಈ ಕಾರ್ಯಕ್ರಮವು ಸಂಪೂರ್ಣ ಉಚಿತ. ಮಲ್ಲೇಶ್ವರದ ಕೆನರಾ ಬ್ಯಾಂಕ್ ಮಾಹಿತಿ ತಂತ್ರಜ್ಞಾನ ತರಬೇತಿ ಸಂಸ್ಥೆಯಲ್ಲಿ ಈ ತಿಂಗಳ ಮೂರನೇ ವಾರದಲ್ಲಿ ತರಬೇತಿ ನಡೆಯಲಿದೆ. ತರಬೇತಿ ಅವಧಿಯಲ್ಲಿ ಮೆಹಂದಿ ವಿನ್ಯಾಸ, ಸೀರೆಯ ಕುಚ್ಚು ಹಾಕುವುದು ಹಾಗೂ ಬಾಗಿಲು ಚಾಪೆ ತಯಾರಿ ಕುರಿತು ನುರಿತ ಶಿಕ್ಷಕರು ಮಾರ್ಗದರ್ಶನ ನೀಡಲಿದ್ದಾರೆ. ಸಂಪರ್ಕ: 9900158885/ 9448538107

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	18.78 ಕೋಟಿ ▲	3.09 ಕೋಟಿ ▲
ಸಕ್ರಿಯ ಪ್ರಕರಣ	1.20 ಕೋಟಿ	4.25 ಲಕ್ಷ ▼
ಗುಣಮುಖ	17.17 ಕೋಟಿ ▲	3.00 ಕೋಟಿ
ಸಾವು	40.52 ಲಕ್ಷ ▲	4.10 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	3.73 ಲಕ್ಷ ▼	30,554 ▼
ಗುಣಮುಖ	3.54 ಲಕ್ಷ ▲	48,527 ▲
ಸಾವು	6,502 ▼	2,015 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): ಸ್ಪೇನ್ 21,879; ಬ್ರಿಟನ್ 31,614 ▼; ರಷ್ಯಾ 25,033 ▼

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ): ಅಮೆರಿಕ 48.65 ▼; ಬ್ರೆಜಿಲ್ 9.68 ▼; ಬ್ರಿಟನ್ 6.33 ▲

(ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು): ಮಹಾರಾಷ್ಟ್ರ 1.26 ಲಕ್ಷ ▲; ದೆಹಲಿ 25,018 ▲; ತಮಿಳುನಾಡು 33,454 ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): ಮಹಾರಾಷ್ಟ್ರ 61.65 ▲; ಕೇರಳ 30.73 ▲; ತಮಿಳುನಾಡು 25.21 ▲

ಪ್ರಜಾವಾಣಿ ಗ್ರಾಫಿಕ್ಸ್

'ಭಾವನಾತ್ಮಕ ವಿಷಯಗಳಿಂದ ವಂಚಿಸುತ್ತಿರುವ ಬಿಜೆಪಿ'

ಬೆಂಗಳೂರು: 'ಕೋವಿಡ್‌ನಿಂದ ಮೃತಪಟ್ಟ ಕುಟುಂಬದವರ ನೆರವಿಗೆ ಕೇಂದ್ರ ಮತ್ತು ರಾಜ್ಯಸರ್ಕಾರ ಧಾವಿಸುತ್ತಿಲ್ಲ. ಬದಲಾಗಿ ಬಿಜೆಪಿಯು ಭಾವನಾತ್ಮಕ ವಿಷಯಗಳನ್ನು ಮುಂದಿಟ್ಟುಕೊಂಡು ಜನರನ್ನು ವಂಚಿಸುತ್ತಿದೆ' ಎಂದು ಸಂಸದ ಡಿ.ಕೆ. ಸುರೇಶ್ ದೂರಿದರು.

ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕೆಂಪೇಗೌಡ ನಗರದಲ್ಲಿ ಕಾಂಗ್ರೆಸ್ ಪಕ್ಷದ ವತಿಯಿಂದ 3ಸಾವಿರ ಕುಟುಂಬಗಳಿಗೆ ನೀಡಿದ ದಿನಸಿ ಕಿಟ್‌ಗಳನ್ನು ವಿತರಿಸಿ ಮಾತನಾಡಿದರು.

'ಯುಪಿಎ ಸರ್ಕಾರವಿದ್ದಾಗ ಡಾ.ಮನಮೋಹನ್ ಸಿಂಗ್ ಅವರು ರಾಷ್ಟ್ರೀಯ ವಿಪತ್ತು ಯೋಜನೆಯಲ್ಲಿ ತಲಾ ₹4ಲಕ್ಷ ನೀಡಲು ಹಣವಿಟ್ಟಿದ್ದರು. ನರೇಂದ್ರಮೋದಿ ಅವರು ಆ ಹಣವನ್ನು ಕೊಡದೆ ಸತಾಯಿಸುತ್ತಿದ್ದರು. ನ್ಯಾಯಾಲಯ ಮಧ್ಯ ಪ್ರವೇಶಿಸಿ, ಮೃತರ ಕುಟುಂಬಕ್ಕೆ ತಲಾ ₹1ಲಕ್ಷ ಕೊಡುವಂತೆ ಆದೇಶ ನೀಡಿದೆ. ಆದರೆ, ಈವರೆಗೂ ಆ ಹಣವೂ ಸಂದಾಯವಾಗಿಲ್ಲ' ಎಂದರು.

ಕಾಂಗ್ರೆಸ್ ನಾಯಕಿ ಕುಸುಮಾ ಮಾತನಾಡಿದರು.

ಕರ್ನಾಟಕ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಿದ ಸುಪ್ರೀಂ ಕೋರ್ಟ್

ಸಮಿತಿ ನೇಮಕ: ಪರಿಶೀಲಿಸಲು ಒಪ್ಪಿಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನ ಮೂರು ಪುರಾತನ ದೇವಾಲಯಗಳಿಗೆ ವ್ಯವಸ್ಥಾಪಕ ಸಮಿತಿಗಳನ್ನು ನೇಮಿಸುವ ಮೂಲಕ ಕರ್ನಾಟಕ ಸರ್ಕಾರ ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳುವ ನಿರ್ಧಾರವನ್ನು ಪರಿಶೀಲಿಸುವುದಾಗಿ ಸುಪ್ರೀಂ ಕೋರ್ಟ್ ಸೋಮವಾರ ತಿಳಿಸಿದೆ.

ನ್ಯಾಯಮೂರ್ತಿಗಳಾದ ಯು.ಯು. ಲಲಿತ್ ಮತ್ತು ಅಜಯ್ ರಸ್ತೋಗಿ ಅವರನ್ನೊಳಗೊಂಡ ಪೀಠವು ಈ ಬಗ್ಗೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಿದೆ.



ಎಂ. ಪ್ರಶಾಂತ್ ಮತ್ತು ಇತರರ ಪರವಾಗಿ ವಕೀಲ ಬಾಲಾಜಿ ಶ್ರೀನಿವಾಸನ್ ಅವರು ಸರ್ಕಾರದ ನಿರ್ಧಾರವನ್ನು ಪ್ರಶ್ನಿಸಿ ಅರ್ಜಿ ಸಲ್ಲಿಸಿದ್ದರು. ಈ ಪ್ರಕರಣದ ವಿಚಾರಣೆಯನ್ನು ಜುಲೈ 27ಕ್ಕೆ ಮುಂದೂಡಲಾಗಿದೆ.

ಬೆಂಗಳೂರಿನ ಆಂಜನೇಯ ಸ್ವಾಮಿ ದೇವಾಲಯ, ಚನ್ನರಾಯಸ್ವಾಮಿ ದೇವಾಲಯ ಮತ್ತು ವೆಂಕಟರಾಮಣಸ್ವಾಮಿ ದೇವಾಲಯದ ಪ್ರಧಾನ ಅರ್ಚಕರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ ಇತರರು.

ಕರ್ನಾಟಕ ಹಿಂದೂ ಧಾರ್ಮಿಕ ಮತ್ತು ಚಾರಿಟಬಲ್ ಸಂಸ್ಥೆ ತಿದ್ದುಪಡಿ ಕಾಯ್ದೆ–2021ರ ಸೆಕ್ಷನ್ 25ರ ಅನ್ವಯ ವ್ಯವಸ್ಥಾಪಕ ಸಮಿತಿಗಳನ್ನು ರಚಿಸಿ ಕರ್ನಾಟಕ ಸರ್ಕಾರ 2021ರ ಮಾರ್ಚ್ 21ರಂದು ಹೊರಡಿಸಿರುವ ಅಧಿಸೂಚನೆಯನ್ನು ರದ್ದುಪಡಿಸಬೇಕು ಎಂದು ಅರ್ಜಿದಾರರು ಕೋರಿದ್ದರು.

ಬೆಂಗಳೂರು ನಗರ ಜಿಲ್ಲೆಯ ಬೆಂಗಳೂರು ಪೂರ್ವ ತಾಲ್ಲೂಕಿನಲ್ಲಿ 'ಸಿ' ವಿಭಾಗದಲ್ಲಿ 137 ದೇವಾಲಯಗಳಿವೆ. ಆದರೆ, ಬೆಂಗಳೂರು ಪೂರ್ವ ತಾಲ್ಲೂಕಿನ ಮೂರು ದೇವಾಲಯಗಳಿಗೆ ಮಾತ್ರ ಸರ್ಕಾರ ಆದೇಶ ಹೊರಡಿಸಿದೆ ಎಂದು ಅರ್ಜಿದಾರರು ದೂರಿದ್ದಾರೆ.

ಕತ್ತು ಕೊಯ್ದು ಮಹಿಳೆ ಕೊಲೆ • ಪ್ರಕರಣ ಭೇದಿಸಿದ ಪಶ್ಚಿಮ ವಿಭಾಗದ ಪೊಲೀಸರು

6 ಗ್ರಾಂ ಚಿನ್ನಕ್ಕಾಗಿ ಗೃಹಿಣಿ ಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜ್ಞಾನಭಾರತಿ ಠಾಣೆ ವ್ಯಾಪ್ತಿಯಲ್ಲಿ ರಂಜಿತಾ (26) ಎಂಬುವರನ್ನು ಕತ್ತು ಕೊಯ್ದು ಕೊಲೆ ಮಾಡಿದ್ದ ಆರೋಪದಡಿ ಮಹಿಳೆ ಸೇರಿ ಇಬ್ಬರನ್ನು ಪಶ್ಚಿಮ ವಿಭಾಗದ ಪೊಲೀಸರು ಬಂಧಿಸಿದ್ದಾರೆ.

'ಜ್ಞಾನಜ್ಯೋತಿನಗರದ ಮಾಯಣ್ಣ ಕಾಂಪೌಂಡ್ ನಿವಾಸಿ ಇಂದಿರಮ್ಮ (37) ಹಾಗೂ ಆಕೆಯ ಸ್ನೇಹಿತ ರಾಜಶೇಖರ್ (40) ಬಂಧಿತರು. ಕೇವಲ 6 ಗ್ರಾಂ ಚಿನ್ನಕ್ಕಾಗಿ ಅವರಿಬ್ಬರು ರಂಜಿತಾ ಕೊಲೆ ಮಾಡಿದ್ದರು. ಬಂಧಿತರಿಂದ ಇದೀಗ 6 ಗ್ರಾಂ ಚಿನ್ನ ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬೀದರ್‌ನ ರಂಜಿತಾ, ಪತಿ ಹಾಗೂ ಮೈದುನ ಜೊತೆ ಮಾಯಣ್ಣ ಕಾಂಪೌಂಡ್‌ನ ಬಹುಮಹಡಿ ಕಟ್ಟಡದ ಮನೆಯಲ್ಲಿ ವಾಸವಿದ್ದರು. ಪತಿ ಹಾಗೂ ಮೈದುನ ಜುಲೈ 10ರಂದು ಕೆಲಸಕ್ಕೆ ಹೋಗಿದ್ದರು. ಅದೇ ಸಂದರ್ಭದಲ್ಲೇ ಮನೆಗೆ ಹೋಗಿದ್ದ ಆರೋಪಿಗಳು, ರಂಜಿತಾ ಅವರನ್ನು ಕೊಲೆ ಮಾಡಿ ಪರಾರಿಯಾಗಿದ್ದರು' ಎಂದೂ ಮೂಲಗಳು ತಿಳಿಸಿವೆ.


ರಾಜಶೇಖರ್


ಇಂದಿರಮ್ಮ

> **ಆರೋಪಿಗಳ ಕೃತ್ಯದ ವಿಧಾನ ನೋಡಿದರೆ ಮತ್ತಷ್ಟು ಪ್ರಕರಣಗಳಲ್ಲಿ ಭಾಗಿಯಾಗಿರುವ ಅನುಮಾನವಿದೆ. ತನಿಖೆ ಮುಂದುವರಿದಿದೆ.**
> **ಸಂಜೀವ್ ಪಾಟೀಲ,**
> ಪಶ್ಚಿಮ ವಿಭಾಗದ ಡಿಸಿಪಿ

ಎರಡನೇ ಮಹಡಿಯಲ್ಲಿ ವಾಸ: 'ಸಿನಿಮಾ ಚಿತ್ರೀಕರಣದಲ್ಲಿ ಊಟ ಸರಬರಾಜು ಸಹಾಯಕರಾಗಿ ಇಂದಿರಮ್ಮ ಹಾಗೂ ರಾಜಶೇಖರ್ ಕೆಲಸ ಮಾಡುತ್ತಿದ್ದರು. ರಂಜಿತಾ ವಾಸವಿದ್ದ ಮನೆಯ ಎರಡನೇ ಮಹಡಿಯಲ್ಲೇ ಆರೋಪಿಗಳು ನೆಲೆಸಿದ್ದರು. ಆರೋಪಿ ಇಂದಿರಮ್ಮ ಆಗಾಗ ರಂಜಿತಾ ಮನೆಗೂ ಹೋಗಿ ಬರುತ್ತಿದ್ದಳು' ಎಂದೂ ಮೂಲಗಳು ಹೇಳಿವೆ.

'ಕೆಲ ದಿನಗಳ ಹಿಂದಷ್ಟೇ ಪರಿಚಯಸ್ಥರೊಬ್ಬರಿಂದ ಚಿನ್ನದ ಸರ ಪಡೆದು ರಂಜಿತಾ ಧರಿಸಿದ್ದರು. ಅವರದ್ದೇ ಸ್ವಂತ ಸರವೆಂದು ತಿಳಿದಿದ್ದ ಇಂದಿರಮ್ಮ, 'ಚಿನ್ನದ ಸರ ಕೊಡು. ಅದೇ ರೀತಿಯಲ್ಲೇ ನಾನೂ ಮಾಡಿಸುತ್ತೇನೆ' ಎಂದಿದ್ದಳು. ಆದರೆ, ರಂಜಿತಾ ಕೊಟ್ಟಿರಲಿಲ್ಲ.'

'ಸಿನಿಮಾ ಚಿತ್ರೀಕರಣವಿಲ್ಲದಿದ್ದರಿಂದ ಆರೋಪಿಗಳಿಗೆ ಕೆಲಸವಿರಲಿಲ್ಲ. ಮನೆ ಬಾಡಿಗೆ ನೀಡಲು ಸಹ ಹಣವಿರಲಿಲ್ಲ. ರಾಜಶೇಖರ್, ಲಕ್ಷಾಂತರ ರೂಪಾಯಿ ಸಾಲ ಮಾಡಿಕೊಂಡಿದ್ದ. ರಂಜಿತಾ ಬಳಿ ಸರವಿರುವ ವಿಷಯ ತಿಳಿದಿದ್ದ ಇಂದಿರಮ್ಮ, ರಾಜಶೇಖರ್ ಜೊತೆ ಸೇರಿ ಸುಲಿಗೆಗೆ ಸಂಚು ರೂಪಿಸಿದ್ದಳು' ಎಂದೂ ಮೂಲಗಳು ತಿಳಿಸಿವೆ.

ಟಿ.ವಿ ನೋಡಲು ಹೋಗಿ ಹತ್ಯೆ: 'ರಂಜಿತಾ ಪತಿ ಹಾಗೂ ಮೈದುನ ಕೆಲಸಕ್ಕೆ ಹೋಗುತ್ತಿದ್ದಂತೆ ಟಿ.ವಿ ನೋಡುವ ಸೋಗಿನಲ್ಲಿ ಆರೋಪಿ ಇಂದಿರಮ್ಮ ಮನೆಗೆ ಹೋಗಿದ್ದಳು. ಆಕೆಯನ್ನು ಬರಮಾಡಿಕೊಂಡಿದ್ದ ರಂಜಿತಾ, ಟಿ.ವಿ ನೋಡುವಂತೆ ಹೇಳಿ ಸ್ನಾನಕ್ಕೆ ಹೋಗಿದ್ದರು. ಅದೇ ಸಂದರ್ಭದಲ್ಲೇ ಇಂದಿರಮ್ಮ, ರಾಜಶೇಖರ್‌ಗೆ ಕರೆ ಮಾಡಿ ಮನೆಗೆ ಕರೆಸಿಕೊಂಡಿದ್ದಳು' ಎಂದೂ ಮೂಲಗಳು ಹೇಳಿವೆ.

'ಸ್ನಾನ ಮುಗಿಸಿ ರಂಜಿತಾ ಹೊರಗೆ ಬರುತ್ತಿದ್ದಂತೆ ಆರೋಪಿಗಳು, ಟಿ.ವಿ ಶಬ್ದ ಹೆಚ್ಚು ಮಾಡಿದ್ದರು. ರಂಜಿತಾ ಮೇಲೆ ದಾಳಿ ಮಾಡಿ ಕುತ್ತಿಗೆಗೆ ಟಿ.ವಿ ಕೇಬಲ್ ಸುತ್ತಿ ಎಳೆದಾಡಿದ್ದರು. ಚಿನ್ನದ ಸರ ನೀಡುವಂತೆ ಬೆದರಿಸಿದ್ದರು. ಸರ ನನ್ನದಲ್ಲವೆಂದು ರಂಜಿತಾ ಹೇಳಿದ್ದರು. ಅಷ್ಟಕ್ಕೆ ಸುಮ್ಮನಾಗದ ಆರೋಪಿಗಳು, ಚಾಕುವಿನಿಂದ ಕತ್ತು ಕೊಯ್ದು ರಂಜಿತಾ ಅವರನ್ನು ಹತ್ಯೆ ಮಾಡಿದ್ದರು. ನಂತರ, ಮನೆಯಲ್ಲಿ ಹುಡುಕಾಡಿದರೂ ಚಿನ್ನದ ಸರ ಸಿಕ್ಕಿರಲಿಲ್ಲ. ಬಳಿಕ, ಕೊರಳಲ್ಲಿದ್ದ 6 ಗ್ರಾಂ ಮಾಂಗಲ್ಯ ಚಿನ್ನವನ್ನಷ್ಟೇ ಬಿಚ್ಚಿಕೊಂಡಿದ್ದರು. ಓಲೆ ಬಿಚ್ಚಿಕೊಳ್ಳಲು ಕಿವಿಯನ್ನೇ ಕೊಯ್ದಿದ್ದರು. ಆದರೆ, ಓಲೆಗಳು ನಕಲಿ ಎಂಬುದು ಗೊತ್ತಾಗುತ್ತಿದ್ದಂತೆ ಅಲ್ಲಿಯೇ ಬಿಟ್ಟು ಪರಾರಿಯಾಗಿದ್ದರು' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

ಆತ್ಮಹತ್ಯೆಯೆಂದು ಬಿಂಬಿಸಲು ಯತ್ನ: 'ರಂಜಿತಾ ಬಲ ಅಂಗೈಯಲ್ಲೇ ಚಾಕು ಇಟ್ಟು ಆತ್ಮಹತ್ಯೆಯೆಂದು ಬಿಂಬಿಸಲು ಆರೋಪಿಗಳು ಯತ್ನಿಸಿದ್ದರು. ಕೊಲೆ ವಿಷಯ ತಿಳಿಯುತ್ತಿದ್ದಂತೆ ಪೊಲೀಸರ ತಂಡ ಮನೆಗೆ ಹೋದಾಗ, ಇಂದಿರಮ್ಮ ಸಹ ಸ್ಥಳದಲ್ಲಿದ್ದಳು. 'ಮಕ್ಕಳಾಗದಿದ್ದಕ್ಕೆ ರಂಜಿತಾ ಆತ್ಮಹತ್ಯೆ ಮಾಡಿಕೊಂಡಿರಬಹುದು' ಎಂದು ಕಥೆ ಕಟ್ಟಿದ್ದಳು. ಆದರೆ, ಕೆಲ ಸ್ಥಳೀಯರು ನೀಡಿದ್ದ ಸುಳಿವು ಮೇರೆಗೆ ಆಕೆಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ತಪ್ಪೊಪ್ಪಿಕೊಂಡಳು' ಎಂದೂ ಪೊಲೀಸ್ ಮೂಲಗಳು ಹೇಳಿವೆ.

'ಪತಿ– ಪತ್ನಿ ಬಿಟ್ಟಿದ್ದ ಆರೋಪಿಗಳು'

'ಆರೋಪಿ ಇಂದಿರಮ್ಮ, ಮದುವೆಯಾಗಿ ಪತಿಯನ್ನು ತೊರೆದಿದ್ದಳು. ರಾಜಶೇಖರ್ ಸಹ ಮದುವೆಯಾಗಿ ಪತ್ನಿ ಬಿಟ್ಟಿದ್ದ. ಕೆಲಸದ ಸ್ಥಳದಲ್ಲಿ ಪರಿಚಯವಾಗಿದ್ದ ಇಬ್ಬರೂ ಜ್ಞಾನಜ್ಯೋತಿನಗರದಲ್ಲಿ ಒಟ್ಟಿಗೆ ನೆಲೆಸಿದ್ದರು. ಅವರಿಬ್ಬರು ಗಂಡ–ಹೆಂಡತಿ ಎಂದೇ ಸ್ಥಳೀಯರು ತಿಳಿದಿದ್ದರು. ಬಂಧನವಾದ ನಂತರವೇ ಅವರಿಬ್ಬರು ದಂಪತಿ ಅಲ್ಲವೆಂಬುದು ಸ್ಥಳೀಯರಿಗೆ ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು.

ಎಎಸ್‌ಐ ದಯಾನಂದ ಸ್ವಾಮಿಗೆ ಜಾಮೀನು ತಿರಸ್ಕರಿಸಿದ ಕೋರ್ಟ್

ಬೆಂಗಳೂರು: ರಿಯಲ್ ಎಸ್ಟೇಟ್ ಉದ್ಯಮಿಯಿಂದ ₹ 5 ಲಕ್ಷ ಲಂಚ ಪಡೆದಿದ್ದು, ಇನ್ನೂ ₹ 55 ಲಕ್ಷಕ್ಕೆ ಬೇಡಿಕೆ ಇಟ್ಟಿರುವ ಆರೋಪಿ ಈಶಾನ್ಯ ವಲಯದ ಡಿಸಿಪಿ ಕಚೇರಿಯ ಸಹಾಯಕ ಸಬ್ ಇನ್‌ಸ್ಪೆಕ್ಟರ್ ದಯಾನಂದ ಸ್ವಾಮಿ ನಿರೀಕ್ಷಣಾ ಜಾಮೀನು ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಪ್ರಕರಣಗಳ ವಿಶೇಷ ನ್ಯಾಯಾಲಯ ತಿರಸ್ಕರಿಸಿದೆ.

ಉದ್ಯಮಿ ಭರತ್ ಶೆಟ್ಟಿ ವಿರುದ್ಧ ಕೊಡಿಗೆಹಳ್ಳಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ 'ಬಿ' ವರದಿ ಸಲ್ಲಿಸಲು ₹ 10 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟು, ₹ 5 ಲಕ್ಷ ಪಡೆದಿರುವ ಆರೋಪ ಎಎಸ್‌ಐ ಮೇಲಿದೆ. ದೂರಿನಲ್ಲಿ ಉಲ್ಲೇಖಿಸಿದ್ದ ನಿವೇಶನಗಳ ಖರೀದಿಗೆ ಸಂಬಂಧಿಸಿದ ವ್ಯಾಜ್ಯ ಇತ್ಯರ್ಥಪಡಿಸಲು ಇನ್ನೂ ₹ 50 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿರುವ ಆರೋಪವೂ ಇದೆ.

ಭರತ್ ಶೆಟ್ಟಿ ಸಲ್ಲಿಸಿದ್ದ ದೂರು ಆಧರಿಸಿ ದಯಾನಂದ ಸ್ವಾಮಿ ವಿರುದ್ಧ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಜೂನ್ 14ರಂದು ಎಫ್‌ಐಆರ್ ದಾಖಲಿಸಿತ್ತು. ತಲೆಮರೆಸಿಕೊಂಡಿರುವ ಆರೋಪಿ, ನಿರೀಕ್ಷಣಾ ಜಾಮೀನು ಕೋರಿ ವಿಶೇಷ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಲಕ್ಷ್ಮೀನಾರಾಯಣ ಭಟ್, ಜಾಮೀನು ಅರ್ಜಿ ತಿರಸ್ಕರಿಸಿ ಜುಲೈ 7ರಂದು ಆದೇಶ ಹೊರಡಿಸಿದ್ದಾರೆ.



ಇಟಲಿ ಯುಇಎಫ್‌ಎ ಯೂರೋ 2020 ರ ಚಾಂಪಿಯನ್ ಶಿಪ್ ವಿಜೇತವಾಗಿದೆ!

ಆಲೂರು: ಅಧ್ಯಕ್ಷರ ಆಯ್ಕೆ 15ರಂದು

ಹೆಸರಘಟ್ಟ: ಆಲೂರು ಗ್ರಾಮ ಪಂಚಾಯಿತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಆಯ್ಕೆ ಪ್ರಕ್ರಿಯೆಯು ಇದೇ 15 ರಂದು ನಡೆಯಲಿದೆ ಎಂದು ಚುನಾವಣಾ ಆಯೋಗ ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

ಲಾಕ್‌ಡೌನ್ ಇದ್ದ ಕಾರಣ ಈ ಪ್ರಕ್ರಿಯೆ ನಡೆದಿರಲಿಲ್ಲ.


ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಕಾರ್ಮಿಕರು ನಗರದಲ್ಲಿ ಸೋಮವಾರ ಪ್ರತಿಭಟನೆ ಮಾಡಿದರು ಪ್ರಜಾವಾಣಿ ಚಿತ್ರ

ಆಹಾರ ಕಿಟ್ ಅವ್ಯವಹಾರ: ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ಕಾರ್ಮಿಕರಿಗೆ ಆಹಾರ ಕಿಟ್ ಹಂಚಿಕೆಯಲ್ಲಿ ಅವ್ಯವಹಾರವಾಗಿದ್ದು, ಇದರ ತನಿಖೆ ನಡೆಯಬೇಕು ಎಂದು ಒತ್ತಾಯಿಸಿ ಕಾರ್ಮಿಕರು ಸೋಮವಾರ ಪ್ರತಿಭಟನೆ ಮಾಡಿದರು.

ನಗರ ಮಾತ್ರವಲ್ಲದೆ, ತುಮಕೂರು, ಕೋಲಾರ, ಕಲಬುರ್ಗಿ, ಬಳ್ಳಾರಿ, ದಾವಣಗೆರೆ, ಚಿತ್ರದುರ್ಗ ಮಂಡ್ಯ, ಧಾರವಾಡ ಸೇರಿ ಬಹುತೇಕ ಎಲ್ಲ ಜಿಲ್ಲೆಗಳಲ್ಲಿಯೂ ಕಾರ್ಮಿಕರು ಪ್ರತಿಭಟಿಸಿದರು.

ಕಾರ್ಮಿಕರಿಂದ ಮನವಿ ಸ್ವೀಕರಿಸಿದ ಮಂಡಳಿಯ ಮುಖ್ಯಕಾರ್ಯನಿರ್ವಹಣಾಧಿಕಾರಿ, ಕಾರ್ಮಿಕರ ಸಮನ್ವಯ ಸಮಿತಿ ಮುಖಂಡರ ಜೊತೆ ಮಾತುಕತೆ ನಡೆಸಿದರು.

ಬಾಕಿ ಇರುವ ಕೋವಿಡ್ ಪರಿಹಾರ, ಆಹಾರ ಕಿಟ್ ಹಂಚಿಕೆಯನ್ನು ಶಾಸಕರಿಗೆ ವಹಿಸಿರುವುದು, ವೈದ್ಯಕೀಯ ಪರಿಹಾರ, ಮನೆಗೆ ಧನಸಹಾಯ ಪಿಂಚಣಿ ಸೇರಿ ಇತ್ಯಾದಿ ಅಂಶಗಳ ಕುರಿತು ತ್ವರಿತಗತಿಯಲ್ಲಿ ಕ್ರಮ ಕೈಗೊಳ್ಳಲು ಸಮನ್ವಯ ಸಮಿತಿ ಮುಖಂಡರು ಆಗ್ರಹಿಸಿದರು.

ಸಮನ್ವಯ ಸಮಿತಿಯ ಮುಖಂಡರಾದ ಕೆ.ಮಹಾಂತೇಶ, ಶಾಮಣ್ಣ ರೆಡ್ಡಿ ಎನ್.ಪಿ ಸ್ವಾಮಿ, ನಾಗನಾಥ್, ಅಪ್ಪಣ್ಣ, ಲಿಂಗರಾಜ್, ಲಕ್ಷ್ಮೀ, ಲಕ್ಷ್ಮಣ್ ಕುಮಾರ್, ವಿನಯ್ ಶ್ರೀನಿವಾಸ್, ಲೀಲಾವತಿ ಧನಶೇಖರ್, ಹನುಮೇಶ್, ಶ್ರೀಕಾಂತ, ಹರೀಶಕುಮಾರ್, ಹನುಮಂತರಾವ್ ಹವಾಲ್ದಾರ್ ಸೇರಿ ಹಲವರು ಪಾಲ್ಗೊಂಡಿದ್ದರು.

ಗುರುರಾಘವೇಂದ್ರ ಬ್ಯಾಂಕ್ ವಂಚನೆ: ಸಿಬಿಐಗೆ ವಹಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಸವನಗುಡಿಯಲ್ಲಿರುವ ಶ್ರೀ ಗುರುರಾಘವೇಂದ್ರ ಸಹಕಾರ ಬ್ಯಾಂಕ್‌ನ ವಂಚನೆ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕು' ಎಂದು ಕೆಪಿಸಿಸಿ ವೈದ್ಯಕೀಯ ಘಟಕದ ಪ್ರಧಾನ ಕಾರ್ಯದರ್ಶಿ ಡಾ.ಶಂಕರ್ ಗುಹಾ ದ್ವಾರಕನಾಥ್ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, 'ಈ ಹಗರಣದ ಬಗ್ಗೆ ಪ್ರಕರಣ ದಾಖಲಾಗಿ ಎರಡು ವರ್ಷಗಳು ಕಳೆದಿವೆ. ಹೀಗಿದ್ದರೂ ಠೇವಣಿದಾರರಿಗೆ ನ್ಯಾಯ ಸಿಕ್ಕಿಲ್ಲ. ಹಣ ಕಳೆದುಕೊಂಡ ಕೊರಗಿನಲ್ಲೇ 70 ಜನ ವಿವಿಧ ಕಾಯಿಲೆಗಳಿಗೆ ತುತ್ತಾಗಿ ಅಸುನೀಗಿದ್ದಾರೆ. ಈ ಪ್ರಕರಣದ ತನಿಖೆಯ ಹೊಣೆಯನ್ನು ಸಿಐಡಿಗೆ ವಹಿಸಲಾಗಿದೆ. ಅದರಿಂದಲೂ ಪ್ರಯೋಜನ ಆಗಿಲ್ಲ' ಎಂದು ದೂರಿದರು.

'ಗುರುರಾಘವೇಂದ್ರ ಬ್ಯಾಂಕ್‌ಗೆ ಸತತವಾಗಿ 'ಎ' ದರ್ಜೆಯ ಪ್ರಮಾಣ ಪತ್ರ ನೀಡಲಾಗಿದೆ. ಇಂತಹ ವಂಚಕ ಬ್ಯಾಂಕ್‌ಗೆ ಭಾರತೀಯ ರಿಸರ್ವ್ ಬ್ಯಾಂಕ್ ಈ ಪ್ರಮಾಣಪತ್ರ ನೀಡಿದ್ದಾದರೂ ಹೇಗೆ? ವಿವಿಧ ಕಡೆ ಶಾಖಾ ಕಚೇರಿಗಳನ್ನು ತೆರೆಯಲು ಅನುಮತಿ ನೀಡಿರುವುದರ ಹಿಂದಿನ ಉದ್ದೇಶವೇನು? ಈ ಬಗ್ಗೆ ಸಂಸದರನ್ನು ಪ್ರಶ್ನಿಸಿದರೆ ಹಾರಿಕೆಯ ಉತ್ತರ ನೀಡುತ್ತಾರೆ. ಸಂಸದರು ಹಾಗೂ ಶಾಸಕರಿಂದ ಸಮಸ್ಯೆಗೆ ಪರಿಹಾರ ಸಿಗುವುದು ಕಷ್ಟ. ಹೀಗಾಗಿ ಮುಖ್ಯಮಂತ್ರಿಯವರೇ ಮಧ್ಯ ಪ್ರವೇಶಿಸಬೇಕು. ಇದೇ 14ರಂದು ಆಡಿಟ್ ವರದಿ ನೀಡುವುದಾಗಿ ಹೇಳಿದ್ದಾರೆ. ಕೊಡದಿದ್ದರೆ 'ಆರ್‌ಬಿಐ ಚಲೋ' ಅಭಿಯಾನ ಹಮ್ಮಿಕೊಳ್ಳುತ್ತೇವೆ' ಎಂದು ಅವರು ಎಚ್ಚರಿಕೆ ನೀಡಿದರು.

'ಈ ಹಗರಣದಲ್ಲಿ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಅಶ್ವತ್ಥ ನಾರಾಯಣಗೌಡ ಅವರ ಪಾತ್ರವೂ ಇದೆ. ಅವರು ₹12 ಕೋಟಿ ಹಣ ಬಾಕಿ ಉಳಿಸಿಕೊಂಡಿದ್ದಾರೆ. ಒಟ್ಟು 25 ಸಾವಿರ ಜನ ಹಣ ಕಳೆದುಕೊಂಡಿದ್ದು, ₹2,120 ಕೋಟಿ ಮೊತ್ತ ಗ್ರಾಹಕರಿಗೆ ಮರಳಿಸಬೇಕಿದೆ. ಇದೆಲ್ಲಾ ಗೊತ್ತಿದ್ದರೂ ಆರ್‌ಬಿಐ ಕಣ್ಣುಮುಚ್ಚಿ ಕುಳಿತುಕೊಂಡಿದೆ. ಆಡಿಟ್ ವರದಿ ನೆಪ ಮುಂದಿಟ್ಟು ತನಿಖೆಯನ್ನು ವಿಳಂಬ ಮಾಡಲಾಗುತ್ತಿದೆ. ಇದರ ಹಿಂದೆ ರಾಜಕೀಯ ಹಿತಾಸಕ್ತಿ ಅಡಗಿದೆ' ಎಂದು ದೂರಿದರು.

ಪಾಲಿಕೆಯ ಮಾಜಿ ಸದಸ್ಯ ಶ್ರೀನಿವಾಸ್ ಇದ್ದರು.

'ನನ್ನ ಕೇಳಿ ಠೇವಣಿ ಇಟ್ಟಿದ್ದೀರಾ ಎಂದ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್'

'ಬ್ಯಾಂಕ್‌ನಲ್ಲಿ ಹಣ ಠೇವಣಿ ಇಟ್ಟವರ ಪೈಕಿ ಹಿರಿಯನಾಗರಿಕರೇ ಅಧಿಕ ಮಂದಿ ಇದ್ದಾರೆ. ಹೋದ ವಾರ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ನಗರಕ್ಕೆ ಭೇಟಿ ನೀಡಿದ್ದರು. ಆ ವೇಳೆ ಅವರನ್ನು ಸಂಪರ್ಕಿಸಿ ನ್ಯಾಯ ಕೊಡಿಸುವಂತೆ ಮನವಿ ಮಾಡಿದ್ದೆವು. ನನ್ನನ್ನು ಕೇಳಿ ಬ್ಯಾಂಕ್‌ನಲ್ಲಿ ಹಣ ಠೇವಣಿ ಇಟ್ಟಿದ್ದೀರಾ ಎಂದು ಪ್ರಶ್ನಿಸಿದರು. ಅವರ ಬೇಜವಾಬ್ದಾರಿಯುತ ಹೇಳಿಕೆಯಿಂದ ತುಂಬಾ ನೋವಾಯಿತು' ಎಂದು ಠೇವಣಿದಾರ ಹರೀಶ್ ಹೇಳಿದರು.


ಕರವೇ ಕಾರ್ಯಕರ್ತರು ಶಾಲಾ ಆಡಳಿತ ಮಂಡಳಿ ಸದಸ್ಯರಿಗೆ ಮನವಿ ನೀಡಿದರು.

ಕನ್ನಡ ಭಾಷೆ ಕಡ್ಡಾಯ ವಿರೋಧಿಸಿ ಸಹಿ ಸಂಗ್ರಹ !

ಯಲಹಂಕ: ಪ್ರಾಥಮಿಕ ಶಿಕ್ಷಣದಲ್ಲಿ ಕನ್ನಡ ಭಾಷೆಯನ್ನು ಕಡ್ಡಾಯ ಮಾಡಬಾರದು ಎಂದು ಒತ್ತಾಯಿಸಿ, ಆವಲಹಳ್ಳಿ ಸಮೀಪದ ಪ್ರೆಸಿಡೆನ್ಸಿ ಶಾಲೆಯ ಮಕ್ಕಳ ಪೋಷಕರ ವಾಟ್ಸ್‌ಆ್ಯಪ್ ಗ್ರೂಪ್‌ನಲ್ಲಿ ಸಹಿ ಸಂಗ್ರಹಿಸಲಾಗುತ್ತಿದೆ ಎಂದು ಕರ್ನಾಟಕ ರಕ್ಷಣಾ ವೇದಿಕೆಯ (ಎಚ್.ಶಿವರಾಮೇಗೌಡರ ಬಣ) ಕಾರ್ಯಕರ್ತರು ಆರೋಪಿಸಿದ್ದಾರೆ.

ಕನ್ನಡ ಬೇಡ ಎಂದ ಮಕ್ಕಳನ್ನು ಶಾಲೆಗೆ ದಾಖಲಿಸಿಕೊಳ್ಳಬಾರದು ಎಂದು ಆಗ್ರಹಿಸಿ, ಶಾಲಾ ಆಡಳಿತ ಮಂಡಳಿಗೆ ಪತ್ರ ಬರೆದಿದ್ದಾರೆ.

ವೇದಿಕೆಯ ಬೆಂಗಳೂರು ನಗರ ಜಿಲ್ಲಾ ಘಟಕದ ಅಧ್ಯಕ್ಷ ಗುರು ಮಾತನಾಡಿ, 'ಕನ್ನಡೇತರ ವಲಸಿಗ ಪೋಷಕರು ವಾಟ್ಸ್‌ಆ್ಯಪ್‌ನಲ್ಲಿ ಕನ್ನಡ ವಿರೋಧಿ ಅಭಿಯಾನ ಆರಂಭಿಸಿದ್ದಾರೆ. ನಾವು ಕನ್ನಡ ಕಲಿಯುವುದಿಲ್ಲ. ಕನ್ನಡ ಭಾಷೆ ವಿಷಯ ತೆಗೆದುಕೊಳ್ಳುವುದರಿಂದ ವಿನಾಯಿತಿ ನೀಡಬೇಕು ಎಂದು ಈವರೆಗೆ 2,500 ಸಹಿ ಸಂಗ್ರಹಿಸಿದ್ದಾರೆ' ಎಂದು ದೂರಿದರು.

'ಇಲ್ಲಿನ ನೆಲ-ಜಲ ಸೇರಿ ಸಕಲ ಸೌಲಭ್ಯ ಅನುಭವಿಸಿ, ಕನ್ನಡ ಕಲಿಯಲು, ಮಾತನಾಡಲು ಇಚ್ಛಿಸದ ವಲಸಿಗರು ರಾಜ್ಯದಲ್ಲಿ ಏಕೆ ಇರಬೇಕು' ಎಂದು ಅವರು ಪ್ರಶ್ನಿಸಿದರು.

'ಪೋಷಕರ ಇಂತಹ ನಡೆ ನಾಡಿನ ಜನರ ಭಾವನೆಗೆ ಧಕ್ಕೆ ತರುತ್ತದೆ. ಕನ್ನಡ ಬೇಡ ಎನ್ನುವವರು ನಮ್ಮ ಶಾಲೆಗೂ ಬೇಡ ಎಂಬ ನಿರ್ಧಾರವನ್ನು ಶಾಲಾ ಆಡಳಿತ ಮಂಡಳಿ ತೆಗೆದುಕೊಳ್ಳಲಿ. ಅಂತಹ ಪೋಷಕರ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಿ' ಎಂದು ಒತ್ತಾಯಿಸಿದರು.




ಸೈಕಲ್ ಜಾಥಾ ನಡೆಸಲು ಮುಂದಾದ ಯುವ ಕಾಂಗ್ರೆಸ್ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು

ಸೈಕಲ್ ಜಾಥಾ: ಯುವ ಕಾಂಗ್ರೆಸ್ ನಾಯಕರ ವಶ

ಬೆಂಗಳೂರು: ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಪೆಟ್ರೋಲ್, ಡೀಸೆಲ್, ದಿನ ಬಳಕೆ ವಸ್ತುಗಳ ಬೆಲೆ ನಿರಂತರ ಏರಿಕೆ ಮಾಡುತ್ತಿರುವುದನ್ನು ವಿರೋಧಿಸಿ ರಾಷ್ಟ್ರೀಯ ಯುವ ಕಾಂಗ್ರೆಸ್ ಅಧ್ಯಕ್ಷ ಬಿ.ವಿ. ಶ್ರೀನಿವಾಸ್, ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ ರಕ್ಷಾ ರಾಮಯ್ಯ ನೇತೃತ್ವದಲ್ಲಿ ಸೈಕಲ್ ಜಾಥಾ ನಡೆಸಲು ಮುಂದಾದ ಯುವ ಕಾಂಗ್ರೆಸ್ ಮುಖಂಡರನ್ನು ವಶಕ್ಕೆ ಪಡೆದ ಪೊಲೀಸರು, ಬಳಿಕ ಬಿಡುಗಡೆ ಮಾಡಿದರು.

ಸೈಕಲ್ ಜಾಥಾಕ್ಕೆ ಪೊಲೀಸರು ಅನುಮತಿ ನೀಡಿದ್ದರೂ, ಸಾಂಕೇತಿಕವಾಗಿ ನಡೆಸಲು ಕೂಡಾ ಅವಕಾಶ ನೀಡಲಿಲ್ಲ. ಯುವ ಕಾಂಗ್ರೆಸ್ ರಾಜ್ಯ ಉಸ್ತುವಾರಿ ಅನಿಲ್ ಕುಮಾರ್ ಯಾದವ್, ಸುರಭಿ ದ್ವಿವೇದಿ ಮತ್ತಿತರರನ್ನೂ ವಶಕ್ಕೆ ಪಡೆದರು. 'ಬಾಪ್ಟಿಸ್ ಆಸ್ಪತ್ರೆಯಿಂದ ರೇಸ್ ಕೋರ್ಸ್ ರಸ್ತೆಯಲ್ಲಿರುವ ಕಾಂಗ್ರೆಸ್ ಭವನದವರೆಗೆ ಸೈಕಲ್ ಜಾಥಾ ನಡೆಸಲು ಅನುಮತಿ ಪಡೆಯಲಾಗಿತ್ತು. ಆದರೂ ಅವಕಾಶ ಕೊಡುವುದಿಲ್ಲವೆಂದರೆ ಹೇಗೆ? ಸಾಂಕೇತಿಕವಾಗಿ ನಡೆಸಲು ಅವಕಾಶ ಕೊಡಿ' ಎಂದು ಶ್ರೀನಿವಾಸ್ ಮನವಿ ಮಾಡಿದರು. ಪೊಲೀಸರು ನೀಡಿದ್ದ ಅನುಮತಿ ಪತ್ರ ಪ್ರದರ್ಶಿಸಿದ ರಕ್ಷಾ ರಾಮಯ್ಯ, 'ಪ್ರಜಾಪ್ರಭುತ್ವ ವಿರೋಧಿ ಧೋರಣೆ ತೋರುವುದು ಸರಿಯಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಜಾಥದಲ್ಲಿ ಭಾಗವಹಿಸಲು ಬಂದಿದ್ದ ಸೈಕಲ್ ಸವಾರರನ್ನು ಪೊಲೀಸರು ದಾರಿ ಮಧ್ಯದಲ್ಲೇ ತಡೆದರು. ಜಾಥಾ ನಡೆಸಲು ಮುಂದಾದವರ ಸೈಕಲ್ ಕಸಿದುಕೊಂಡರು. ಆಗ ಪೊಲೀಸರು ಮತ್ತು ಯುವ ಕಾಂಗ್ರೆಸ್ ಕಾರ್ಯಕರ್ತರ ಮಧ್ಯೆ ವಾಗ್ವಾದ ನಡೆಯಿತು. ವಶಕ್ಕೆ ಪಡೆದ ಮುಖಂಡರನ್ನು ಆಡುಗೋಡಿ ಸಿ.ಆರ್. ಪೊಲೀಸ್ ಠಾಣೆಗೆ ಕರೆದೊಯ್ದು ಪೊಲಿಸರು ಪ್ರಕರಣ ದಾಖಲಿಸಿ ಬಿಡುಗಡೆ ಮಾಡಿದರು.

ಸುದ್ದಿಗಾರರ ಜತೆ ಮಾತನಾಡಿದ ಶ್ರೀನಿವಾಸ್, 'ಕೇಂದ್ರ ಸರ್ಕಾರದ ನೀತಿಗಳಿಂದಾಗಿ ಸಣ್ಣ ಸೂಜಿಯಿಂದ ಹಿಡಿದು ಪ್ರತಿಯೊಂದು ವಸ್ತುವಿನ ಬೆಲೆ ಹೆಚ್ಚಳವಾಗಿದೆ. ಜನ ಬದುಕಲು ಸಾಧ್ಯವಾದಂಥ ವಾತಾವರಣ ನಿರ್ಮಾಣವಾಗಿದೆ. ಜನ ವಿರೋಧಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೂಡಲೇ ರಾಜೀನಾಮೆ ನೀಡಿ ನಿರ್ಗಮಿಸಬೇಕು' ಎಂದು ಆಗ್ರಹಿಸಿದರು.



110 ಹಳ್ಳಿ ಯೋಜನೆ ಕಾಮಗಾರಿ ವಿಳಂಬ: ಸಾರ್ವಜನಿಕರಿಗೆ ದುಸ್ತರವಾದ ಸಂಚಾರ ವ್ಯವಸ್ಥೆ

ಬಿಸಿಲಾದರೆ ದೂಳು, ಮಳೆಯಾದರೆ ಕೆಸರು

• ವಿಜಯಕುಮಾರ್ ಎಸ್.ಕೆ.



ವರ್ತೂರಿನ ಗಾಂಧಿ ವೃತ್ತದಲ್ಲಿ ಕಾಮಗಾರಿ ನಡೆಯುತ್ತಿರುವುದು –ಪ್ರಜಾವಾಣಿ ಚಿತ್ರಗಳು/ ಎಂ.ಎಸ್. ಮಂಜುನಾಥ್

ಬೆಂಗಳೂರು: ಒಳಚರಂಡಿ ಕಾಮಗಾರಿಗಾಗಿ ಬಗೆದು ಬಿಟ್ಟ ರಸ್ತೆಗಳು, ಅಲ್ಲಲ್ಲಿ ಮುಖ್ಯ ರಸ್ತೆಗಳು ಡಾಂಬರು ಕಂಡಿದ್ದರೆ, ಅಡ್ಡರಸ್ತೆಗಳೆಲ್ಲ ಗುಂಡಿಮಯ....

ಇದು ಮಹದೇವಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ 31 ಹಳ್ಳಿಗಳ ಸ್ಥಿತಿ. 2007ರಲ್ಲಿ ಬಿಬಿಎಂಪಿ ಸೇರಿದ 110 ಹಳ್ಳಿಗಳಲ್ಲಿ ಅತೀ ಹೆಚ್ಚು 31 ಹಳ್ಳಿಗಳನ್ನು ಹೊಂದಿರುವ ದೊಡ್ಡ ಕ್ಷೇತ್ರ ಇದಾಗಿದೆ.

ಈ ಹಳ್ಳಿಗಳ ತುಂಬೆಲ್ಲಾ ಐ.ಟಿ ಕಂಪನಿಗಳೇ ತುಂಬಿಕೊಂಡಿವೆ. ದೊಡ್ಡ ದೊಡ್ಡ ಅಪಾರ್ಟ್‌ಮೆಂಟ್ ಸಮುಚ್ಚಯಗಳು, ಕಟ್ಟಡಗಳು ಇವೆ. 110 ಹಳ್ಳಿ ಯೋಜನೆಯಡಿ ಒಳಚರಂಡಿ ಮತ್ತು ಕುಡಿಯುವ ನೀರಿನ ಪೈಪ್‌ಲೈನ್ ಅಳವಡಿಕೆ ಕಾಮಗಾರಿ ನಡೆಯುತ್ತಿರುವ ಕಾರಣ ಹಳ್ಳಿಗಳು, ಬಡಾವಣೆಗಳನ್ನೆಲ್ಲಾ ಅಗೆದು ಪೈಪ್‌ಲೈನ್ ಮತ್ತು ಮ್ಯಾನ್‌ಹೋಲ್ ಅಳವಡಿಸಲಾಗುತ್ತಿದೆ.

ಹಗದೂರು, ಕಾಡುಗೋಡಿ, ಹೂಡಿ ಸೇರಿ ಕೆಲ ವಾರ್ಡ್‌ಗಳಲ್ಲಿ ಕಾವೇರಿ ನೀರಿನ ಪೈಪ್‌ಲೈನ್ ಅಳವಡಿಕೆ ಕಾಮಗಾರಿ ಬಹುತೇಕ ಪೂರ್ಣಗೊಂಡಿದೆ. ಒಳಚರಂಡಿ ಕಾಮಗಾರಿ ಕೆಲವೆಡೆ ಅಂತಿಮ ಹಂತದಲ್ಲಿದ್ದು, ಇನ್ನೂ ಹಲವೆಡೆ ಈಗ ಆರಂಭವಾಗಿದೆ. ವರ್ತೂರು ಸುತ್ತಮುತ್ತಲ ಬಡಾವಣೆಗಳು ಮತ್ತು ಹಳ್ಳಿಗಳಲ್ಲಿ ಕಾಮಗಾರಿ ನಡೆಯುತ್ತಿದೆ.

ಜಲ ಮಂಡಳಿ ತನ್ನ ಕೆಲಸ ಮುಗಿಸಿ ಅರೆಬರೆಯಾಗಿ ಮುಚ್ಚಿ ಹೋದ ಗುಂಡಿಗಳ ನಡುವೆ ವಾಹನ ಸಂಚಾರಕ್ಕೆ ಜನ ಪರದಾಡುತ್ತಿದ್ದಾರೆ. ಮಳೆ ಬಂದರೆ ಕೆಸರಿನ ಹೊಂಡಗಳಾಗಿ ಬಡಾವಣೆಗಳು ಮಾರ್ಪಡುತ್ತವೆ. ವರ್ತೂರಿನ ಬಾಳಗೆರೆ ರಸ್ತೆ ಬದಿಯ ಬಡಾವಣೆಯಲ್ಲಿ ಸಂಚಾರವೇ ಸಾಧ್ಯವಿಲ್ಲವಾಗಿದ್ದ ರಸ್ತೆಗೆ ಅಪಾರ್ಟ್‌ಮೆಂಟ್ ನಿವಾಸಿಗಳೇ ಸೇರಿ ಹಣ ಕೂಡಿಸಿಕೊಂಡು ರಸ್ತೆಗೆ ಕಾಂಕ್ರೀಟ್ ಮಿಶ್ರಣ ಸುರಿಸಿಕೊಂಡು ತಾತ್ಕಾಲಿಕವಾಗಿ ಸರಿಪಡಿಸಿಕೊಂಡಿದ್ದಾರೆ.

‘ಕಾವೇರಿ ನೀರು ಮತ್ತು ಒಳಚರಂಡಿ ಕಾಮಗಾರಿ ಹೆಸರಿನಲ್ಲಿ ವರ್ಷಗಟ್ಟಲೆಯಿಂದ ತೊಂದರೆ ಅನುಭವಿಸುತ್ತಿದ್ದೇವೆ. ಯಾರಿಗೆ ಹೇಳಿದರೂ ಸಮಸ್ಯೆ ಸರಿಯಾಗಲಿಲ್ಲ. ಹೀಗಾಗಿ, ನಾವೇ ಹಣ ಸಂಗ್ರಹಿಸಿ ಕಾಂಕ್ರಿಟ್ ಮಿಶ್ರಣ ಸುರಿಸಿಕೊಂಡಿದ್ದೇವೆ’ ಎಂದು ನಿವಾಸಿಗಳು ಹೇಳಿದರು.

ಹಗದೂರು ಮುಖ್ಯ ರಸ್ತೆ, ಇಮ್ಮಡಿಹಳ್ಳಿ ಮುಖ್ಯರಸ್ತೆ, ಚನ್ನಸಂದ್ರ ಮುಖ್ಯ ರಸ್ತೆಗಳು ಅಭಿವೃದ್ಧಿ ಕಂಡಿವೆ. ಈ ಮುಖ್ಯ ರಸ್ತೆಗಳಿಂದ ಯಾವುದೇ ಅಡ್ಡ ರಸ್ತೆಗಳಿಗೆ ವಾಹನಗಳನ್ನು ಉಳಿಸಲು ಸಾಧ್ಯವಿಲ್ಲದ ಸ್ಥಿತಿ ಇದೆ.

ವೈಟ್‌ಫೀಲ್ಡ್ ಅಂಬೇಡ್ಕರ್ ನಗರದಲ್ಲಿ ಒಳಚರಡಿ ಕಾಮಗಾರಿ ನಡೆಯುತ್ತಿದೆ. ಕಾಡುಗೋಡಿ ಸಾಯಿಬಾಬಾ ಆಶ್ರಮ ಎದುರಿನ ಮೇಲ್ಸೇತುವೆ ಕೆಳಗೆ ಕಾವೇರಿ ನೀರಿನ ಪೈಪ್‌ಲೈನ್ ಅಳವಡಿಕೆ ಕಾಮಗಾರಿ ಈಗ ಆರಂಭಿಸಲಾಗಿದೆ. ಒಂದು ಬದಿಯಲ್ಲಿ ಸಂಪೂರ್ಣವಾಗಿ ಅಗೆಯಲಾಗಿದ್ದು, ಆ ಭಾಗದಲ್ಲಿನ ಅಂಗಡಿಗಳಿಗೆ ಹೋಗಿ ಬರಲು ದಾರಿಯೇ ಇಲ್ಲವಾಗಿದೆ. ಆದಷ್ಟು ಬೇಗ ಕಾಮಗಾರಿ ಪೂರ್ಣಗೊಳಿಸಿ ರಸ್ತೆ ಮರು ನಿರ್ಮಾಣ ಮಾಡಬೇಕು ಎಂಬುದು ಸ್ಥಳೀಯರ ಒತ್ತಾಯ.

110 ಹಳ್ಳಿ

ಸಿಗದ ಅನುದಾನ ಬಿಬಿಎಂಪಿಗೆ ಅವಮಾನ

31 ಹಳ್ಳಿಗಳು

ತೂಬರಹಳ್ಳಿ, ಬೆಳತ್ತೂರು, ವಾರಣಾಸಿ, ಬೈರತಿ, ಬಿಳೇಶಿವಾಲೆ, ಕಾಡುಬೀಸನಹಳ್ಳಿ, ಜುನ್ನಸಂದ್ರ, ಕಸವನಹಳ್ಳಿ, ಬೆಳ್ಳಂದೂರು, ದೇವರಬಿಸನಹಳ್ಳಿ, ಕರಿಯಮ್ಮನ ಅಗ್ರಹಾರ, ಕೈಕೊಂಡ್ರಹಳ್ಳಿ, ಬೋಗನಹಳ್ಳಿ, ದೊಡ್ಡಕನ್ನಲ್ಲಿ, ಹರಳೂರು, ಅಂಬಲೀಪುರ, ಬಳಗೆರೆ, ಗುಂಜೂರು (ಗುಂಜೂರು ಪಾಳ್ಯ, ಗುಂಜೂರು ಹೊಸಹಳ್ಳಿ), ವರ್ತೂರು, ಸೋರಹುಣಸೆ, ಚಿಕ್ಕ ಬೆಳ್ಳಂದೂರು, ಪಣತ್ತೂರು (ಪಣತ್ತೂರು ದಿಣ್ಣೆ), ಮಧುರಾನಗರ, ನಾಗೊಂಡನಹಳ್ಳಿ, ರಾಮಗೊಂಡನಹಳ್ಳಿ, ಇಮ್ಮಡಿಹಳ್ಳಿ, ಹಗದೂರು, ಸಿದ್ಧಾಪುರ, ಚನ್ನಸಂದ್ರ, ಎ.ಕೆ.ಜಿ. ಕಾಲೊನಿ, ಕಾಡುಗೋಡಿ ಪ್ಲಾಂಟೇಷನ್.

ಕುಡಿಯುವ ನೀರಿನ ಪೈಪ್‌ಲೈನ್ ಅಳವಡಿಕೆ ಕಾಮಗಾರಿ ಪೂರ್ಣ

‘ಕಾವೇರಿ ನೀರಿನ ಪೈಪ್‌ಲೈನ್ ಅಳವಡಿಕೆ ಕಾಮಗಾರಿ ಶೇ 98ರಷ್ಟು ಪೂರ್ಣಗೊಂಡಿದ್ದರೆ, ಒಳಚರಂಡಿ ಕಾಮಗಾರಿ ಶೇ 70ರಷ್ಟು ಮುಗಿದಿದೆ’ ಎಂದು ಕಾಮಗಾರಿಯ ಉಸ್ತುವಾರಿ ನೋಡಿಕೊಳ್ಳುವ ಅಧಿಕಾರಿಯೊಬ್ಬರು ತಿಳಿಸಿದರು.

ಅತ್ಯಂತ ದೊಡ್ಡ ಕ್ಷೇತ್ರ ಮತ್ತು 110 ಹಳ್ಳಿ ಯೋಜನೆಯಡಿಯೂ ಅತೀ ಹೆಚ್ಚು ಹಳ್ಳಿಗಳನ್ನು ಹೊಂದಿರುವ ಕ್ಷೇತ್ರ ಇದಾಗಿದೆ. ಕಸವನಹಳ್ಳಿ, ಹರಳೂರು, ಹಗದೂರು ಸೇರಿ ಹಲವು ಮುಖ್ಯ ರಸ್ತೆಗಳಿಗೆ ಡಾಂಬರು ಹಾಕಲಾಗಿದೆ ಎಂದು ಅವರು ತಿಳಿಸಿದರು. ರಸ್ತೆ ಮರು ನಿರ್ಮಾಣಕ್ಕೆ ಕನಿಷ್ಠ ₹350 ಕೋಟಿಯಾದರೂ ಅನುದಾನ ಬೇಕಿತ್ತು. ₹210 ಕೋಟಿ ಅನುದಾನ ದೊರೆತಿದೆ. ಒಳಚರಂಡಿ ಮತ್ತು ಕುಡಿಯುವ ನೀರಿನ ಪೈಪ್‌ಲೈನ್ ಕಾಮಗಾರಿ ಮುಗಿದಿರುವ ಕಡೆ ಕೂಡಲೇ ರಸ್ತೆ ಮರು ನಿರ್ಮಾಣ ಕಾಮಗಾರಿ ಆರಂಭಿಸಲು ಬಿಬಿಎಂಪಿ ಅಧಿಕಾರಿಗಳಿಗೆ ಕನ್ನಡ ಮತ್ತು ಸಂಸ್ಕೃತಿ ಸಚಿವರೂ ಆಗಿರುವ ಕ್ಷೇತ್ರದ ಶಾಸಕ ಅರವಿಂದ ಲಿಂಬಾವಳಿ ಅವರು ಸೂಚನೆ ನೀಡಿದ್ದಾರೆ ಎಂದು ಅಧಿಕಾರಿ ವಿವರಿಸಿದರು.

110 ಹಳ್ಳಿ ಯೋಜನೆ ಕಾಮಗಾರಿ ಕುರಿತು ಸಚಿವ ಅರವಿಂದ ಲಿಂಬಾವಳಿ ಅವರ ಪ್ರತಿಕ್ರಿಯೆ ಪಡೆಯಲು ಸತತ ಪ್ರಯತ್ನಿಸಲಾಯಿತು. ಆದರೆ, ಅವರು ಸಂಪರ್ಕಕ್ಕೆ ಬರಲಿಲ್ಲ.



ಮುಖ್ಯ ರಸ್ತೆ ಡಾಂಬರು ಕಂಡಿದೆ. ಬಡಾವಣೆಗಳ ಯಾವ ರಸ್ತೆಗಳಿಗೂ ವಾಹನ ಇಳಿಸಲು ಆಗಷ್ಟು ಹಾಳಾಗಿವೆ. ಕೂಡಲೇ ಕಾಮಗಾರಿ ಮುಗಿಸಿ ಸಂಚಾರಕ್ಕೆ ಯೋಗ್ಯವನ್ನಾಗಿ ಮಾಡಬೇಕು

ಜಯಚಂದ್ರ, ಚನ್ನಸಂದ್ರ ನಿವಾಸಿ

ಮದ್ಯದ ಬಾಟಲಿ ಎಸೆದ ಕಿಡಿಗೇಡಿಗಳು

ಬೆಂಗಳೂರು: ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಮನೆ ಅಂಗಣಕ್ಕೆ ಕಿಡಿಗೇಡಿಗಳು ಮದ್ಯದ ಬಾಟಲಿಎಸೆದು ಪರಾರಿಯಾಗಿದ್ದಾರೆ.

ಮಹಾಲಕ್ಷ್ಮಿ ಬಡಾವಣೆಯಲ್ಲಿರುವ ಮನೆ ಬಳಿ ಭಾನುವಾರ ರಾತ್ರಿ ಬಂದಿದ್ದ ಕಿಡಿಗೇಡಿಗಳು, ಬಾಟಲಿ ಎಸೆದು ಹೋಗಿದ್ದಾರೆ. ಮನೆಯ ಕಾವಲು ಸಿಬ್ಬಂದಿ ಸೋಮವಾರ ಬೆಳಿಗ್ಗೆ ನೋಡಿದಾಗ ಅಂಗಳದಲ್ಲಿ ಬಾಟಲಿ ಚೂರುಗಳು ಕಂಡಿದ್ದವು. ಸಿಸಿಟಿವಿ ಕ್ಯಾಮೆರಾ ಪರಿಶೀಲಿಸಿದಾಗ ಕಿಡಿಗೇಡಿಗಳ ಕೃತ್ಯ ಸೆರೆಯಾಗಿರುವುದು ಗೊತ್ತಾಗಿದೆ.

‘ಬಾಟಲಿ ಎಸೆದ ಬಗ್ಗೆ ಮಾಹಿತಿ ಬಂದಿದೆ. ಯಾವುದೇ ಹಾನಿಯಾಗಿಲ್ಲ. ಯಾರೊಬ್ಬರೂ ದೂರು ನೀಡಿಲ್ಲ. ಮುಂಜಾಗ್ರತಾ ಕ್ರಮವಾಗಿ ಮನೆ ಬಳಿ ಇಬ್ಬರು ಕಾನ್‌ಸ್ಟೆಬಲ್‌ಗಳನ್ನು ಭದ್ರತೆಗೆ ನಿಯೋಜಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಮೊಬೈಲ್, ಬ್ಯಾಟರಿ ಕಳ್ಳರ ಬಂಧನ

ಬೆಂಗಳೂರು: ನಗರದ ವಿವಿಧ ಠಾಣೆಗಳ ವ್ಯಾಪ್ತಿಯಲ್ಲಿ ಕಳ್ಳತನ ಮಾಡಿದ್ದ ಆರೋಪದಡಿ ಇಬ್ಬರನ್ನು ಆಡುಗೋಡಿ ಪೊಲೀಸರು ಬಂಧಿಸಿದ್ದಾರೆ.

‘ಸೈಯದ್ ಇಸ್ಮಾಯಿಲ್ (33) ಹಾಗೂ ನೂರ್ ಅಹ್ಮದ್ (24) ಬಂಧಿತರು. ಅವರಿಂದ ₹ 3 ಲಕ್ಷ ಮೌಲ್ಯದ ನಾಲ್ಕು ದ್ವಿಚಕ್ರ ವಾಹನ, ₹ 1 ಲಕ್ಷ ಮೌಲ್ಯದ 10 ಮೊಬೈಲ್‌ಗಳು ಹಾಗೂ ₹ 75 ಸಾವಿರ ಮೌಲ್ಯದ 15 ಬ್ಯಾಟರಿಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಮದುವೆಯಾಗುವುದಾಗಿ ಹಣ ಪಡೆದು ನಾಪತ್ತೆ: ಆರೋಪಿ ಬಂಧಿಸಿದ ಪೊಲೀಸರು

ರಾಜವಂಶಸ್ಥರ ಸಂಬಂಧಿಯೆಂದು ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈವಾಹಿಕ ಜಾಲತಾಣಗಳ ಮೂಲಕ ಯುವತಿಯರನ್ನು ಪರಿಚಯಿಸಿಕೊಂಡು ಹಣ ಪಡೆದು ವಂಚಿಸುತ್ತಿದ್ದ ಆರೋಪದಡಿ ಕೆ. ಸಿದ್ದಾರ್ಥ್ (33) ಎಂಬಾತನನ್ನು ವೈಟ್‌ಫೀಲ್ಡ್ ವಿಭಾಗದ ಸೈಬರ್ ಕ್ರೈಂ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನ ಲಕ್ಷ್ಮಿಪುರದ ಸಿದ್ಧಾರ್ಥ್ ವಿರುದ್ಧ ಮೂರು ಪ್ರಕರಣಗಳು ದಾಖಲಾಗಿದ್ದವು. ಅದರನ್ವಯ ಆರೋಪಿಯನ್ನು ಬಂಧಿಸಿ 1ನೇ ಎಸಿಎಂಎಂ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು. ಸದ್ಯ ಆತನನ್ನು ವಿಚಾರಣೆಗಾಗಿ ಕಸ್ಟಡಿಗೆ ಪಡೆಯಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.



ಸಿದ್ಧಾರ್ಥ್

‘ಮೈಸೂರು ರಾಜವಂಶಸ್ಥರ ಸಂಬಂಧಿಕರಾದ ಅರಸು ಕುಟುಂಬದ ಸದಸ್ಯನೆಂದು ಹೇಳಿ ಆರೋಪಿ ಯುವತಿಯರನ್ನು ವಂಚಿಸುತ್ತಿದ್ದ. ಪೊಲೀಸರ ವಿಶೇಷ ತಂಡ, ತಾಂತ್ರಿಕ ಪುರಾವೆಗಳನ್ನು ಕಲೆಹಾಕಿ ಆರೋಪಿಯನ್ನು ಸ್ವಂತ ಊರಲ್ಲೇ ಬಂಧಿಸಿದೆ. ಆತನಿಂದ ಮೂರು ಮೊಬೈಲ್ ಹಾಗೂ ಆರು ಡೆಬಿಟ್ ಕಾರ್ಡ್‌ಗಳನ್ನು ಜಪ್ತಿ ಮಾಡಲಾಗಿದೆ’ ಎಂದೂ ತಿಳಿಸಿದರು.

‘7ನೇ ತರಗತಿ ಅನುತ್ತೀರ್ಣನಾಗಿದ್ದ ಆರೋಪಿ, ಆಗಾಗ ಬೆಂಗಳೂರಿಗೆ ಬಂದು ಹೋಗುತ್ತಿದ್ದ. ಇಂಗ್ಲಿಷ್ ಹಾಗೂ ಸ್ಪ್ಯಾನಿಷ್ ಭಾಷೆ ಸಹ ಕಲಿತಿದ್ದ. ಅದೇ ಭಾಷೆಯಲ್ಲೇ ಯುವತಿಯರ ಜೊತೆ ಮಾತನಾಡುತ್ತಿದ್ದ’ ಎಂದೂ ಅಧಿಕಾರಿ ಹೇಳಿದರು.

‘ಸಂಗಮ್ ಮ್ಯಾಟ್ರಿಮೋನಿ’ ಹಾಗೂ ‘ಕನ್ನಡ ಮ್ಯಾಟ್ರಿಮೋನಿ’ ಜಾಲತಾಣಗಳಲ್ಲಿ ‘ಸಿದ್ಧಾರ್ಥ್ ಅರಸು’ ಹೆಸರಿನಲ್ಲಿ ಆರೋಪಿ ಖಾತೆ ತೆರೆದಿದ್ದ. ಯುವತಿಯರಿಗೆ ರಿಕ್ವೆಸ್ಟ್ ಕಳುಹಿಸಿ, ಮದುವೆಯಾಗುವುದಾಗಿ ಹೇಳುತ್ತಿದ್ದ. ಮೈಕ್ರೊಸಾಫ್ಟ್ ಕಂಪನಿಯ ಅಮೆರಿಕ ಕಚೇರಿಯಲ್ಲಿ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿರುವುದಾಗಿ ಆರೋಪಿ ಹೇಳಿಕೊಳ್ಳುತ್ತಿದ್ದ.’

‘ರಾಜವಂಶಸ್ಥರ ಕುಟುಂಬದವರ ಜೊತೆ ಆಟವಾಡುತ್ತಿದ್ದ ಫೋಟೊಗಳನ್ನು ಫೋಟೊಶಾಪ್‌ನಲ್ಲಿ ಸಿದ್ಧಪಡಿಸಿ ಯುವತಿಯರಿಗೆ ಕಳುಹಿಸುತ್ತಿದ್ದ. ಆತನ ಮಾತು ನಂಬಿದ್ದ ಯುವತಿಯರು, ಸಲುಗೆಯಿಂದ ಮಾತನಾಡಲಾರಂಭಿಸುತ್ತಿದ್ದರು. ಅದನ್ನೇ ಬಂಡವಾಳ ಮಾಡಿಕೊಂಡ ಆರೋಪಿ, ವೈದ್ಯಕೀಯ ಹಾಗೂ ವೈಯಕ್ತಿಕ ಕಾರಣ ನೀಡಿ ಯುವತಿಯರಿಂದ ಲಕ್ಷಾಂತರ ರೂಪಾಯಿ ಪಡೆಯುತ್ತಿದ್ದ. ಅದಾದ ನಂತರ ನಾಪತ್ತೆಯಾಗುತ್ತಿದ್ದ’ ಎಂದೂ ಅಧಿಕಾರಿ ವಿವರಿಸಿದರು.

‘ಯುವತಿಯರನ್ನು ವಂಚಿಸುವುದನ್ನೇ ವೃತ್ತಿ ಮಾಡಿಕೊಂಡಿದ್ದ ಆರೋಪಿ, ಬಂದ ಹಣದಲ್ಲಿ ಐಷಾರಾಮಿ ಜೀವನ ನಡೆಸುತ್ತಿದ್ದ. ಇದುವರೆಗೂ ಆತ ಹಲವು ಯುವತಿಯರನ್ನು ವಂಚಿಸಿರುವ ಮಾಹಿತಿ ಇದೆ. ಯಾರಾದರೂ ವಂಚನೆಗೀಡಾಗಿದ್ದರೆ ಪೊಲೀಸರಿಗೆ ದೂರು ನೀಡಬಹುದು’ ಎಂದೂ ಅಧಿಕಾರಿ ಕೋರಿದರು.

ಸುದ್ದಿ 2 ನಿಮಿಷ

ಜನಸಂಖ್ಯೆ ನಿಯಂತ್ರಣಕ್ಕೆ ಕಾನೂನು ಪರಿಹಾರವಲ್ಲ: ನಿತೀಶ್

ಪಟ್ನಾ(ಪಿಟಿಐ): ಮಹಿಳೆಯರಿಗೆ ಶಿಕ್ಷಣ ನೀಡುವ ಮೂಲಕ ಹೆಚ್ಚುತ್ತಿರುವ ಜನಸಂಖ್ಯೆಯನ್ನು ನಿಯಂತ್ರಿಸಬಹುದು. ಇದಕ್ಕಾಗಿ ಕಾನೂನು ರೂಪಿಸುವ ಉದ್ದೇಶ ಇಲ್ಲ’ ಎಂದು ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ತಿಳಿಸಿದ್ದಾರೆ.

‘ಬೇರೆ ರಾಜ್ಯಗಳು ಕೈಗೊಳ್ಳುತ್ತಿರುವ ಕ್ರಮಗಳ ಬಗ್ಗೆ ಪ್ರತಿಕ್ರಿಯಿಸುವುದಿಲ್ಲ. ಆದರೆ, ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವುದು ಅತ್ಯಂತ ಮಹತ್ವದ್ದಾಗಿದೆ’ ಎಂದು ತಿಳಿಸಿದ್ದಾರೆ.

‘ಕಾನೂನು ಜಾರಿಗೊಳಿಸುವುದಕ್ಕೂ ಹಲವಾರು ತೊಡಕುಗಳಿವೆ. ಚೀನಾದಲ್ಲಿ ಒಂದು ಮಗು ನೀತಿಯನ್ನು ರೂಪಿಸಿದರು. ನಂತರ, ಎರಡು ಮಕ್ಕಳನ್ನು ಹೊಂದಲು ಅವಕಾಶ ಕಲ್ಪಿಸಲಾಯಿತು. ಈಗ ಹೊಸ ಜನಸಂಖ್ಯೆ ನೀತಿಯ ಬಗ್ಗೆಯೂ ಮರುಚಿಂತನೆ ನಡೆದಿದೆ’ ಎಂದು ಉದಾಹರಣೆ ನೀಡಿದ್ದಾರೆ.

‘ಅವೈಜ್ಞಾನಿಕ ಬಸ್ ಪಥ ತೆರವುಗೊಳಿಸಲು ಆಗ್ರಹ



ಬೆಂಗಳೂರು: ‘ನಗರದ ಕೇಂದ್ರ ರೇಷ್ಮೆ ಮಂಡಳಿಯಿಂದ ಹೆಬ್ಬಾಳದವರೆಗಿನ ಹೊರ ವರ್ತುಲ ರಸ್ತೆಯಲ್ಲಿ ಬಿಎಂಟಿಸಿ ಹಾಗೂ ವೋಲ್ವೊ ಬಸ್‌ಗಳಿಗಾಗಿಯೇ ಪ್ರತ್ಯೇಕ ಪಥದ ವ್ಯವಸ್ಥೆ ಮಾಡಲಾಗಿದೆ. ಇದು ಅವೈಜ್ಞಾನಿಕ ಕ್ರಮ. ಇದರಿಂದ ವಾಹನ ಸವಾರರಿಗೆ ಕಿರಿಕಿರಿ ಉಂಟಾಗುತ್ತಿದ್ದು, ಅಪಘಾತಗಳೂ ಸಂಭವಿಸುತ್ತಿವೆ’ ಎಂದು ಕೆಲ ಸಾರ್ವಜನಿಕರು ದೂರಿದ್ದಾರೆ.

‘ಅರ್ಧಗಂಟೆ ಅಥವಾ ಗಂಟೆಗೊಮ್ಮೆ ಸಂಚರಿಸುವ ಬಸ್‌ಗಳಿಗಾಗಿ ಪ್ರತ್ಯೇಕ ಪಥದ ಅವಶ್ಯಕತೆ ಇಲ್ಲ. ಈ ಪಥವನ್ನು ದಾಟುವಾಗ ಅಥವಾ ತಿರುವು ಪಡೆಯುವಾಗ ಹಲವು ಅಪಘಾತಗಳು ಸಂಭವಿಸಿ ಜನ ಜೀವ ಕಳೆದುಕೊಳ್ಳುತ್ತಿದ್ದಾರೆ. ಇರುವ 50 ಅಡಿ ರಸ್ತೆಯಲ್ಲಿ 15 ಅಡಿಯ ಪಥವನ್ನು ಬಸ್‌ಗಳ ಸಂಚಾರಕ್ಕೆ ಹಾಗೂ 10 ಅಡಿ ಜಾಗವನ್ನು ಮೆಟ್ರೊ ಕಾಮಗಾರಿಯ ವಾಹನಗಳಿಗಾಗಿ ಬಳಸಿಕೊಳ್ಳಲಾಗುತ್ತಿದೆ. ಉಳಿದ 25 ಅಡಿ ವಿಸ್ತೀರ್ಣದ ರಸ್ತೆಯಲ್ಲೇ ಇತರ ವಾಹನಗಳು ಸಂಚರಿಸಬೇಕಾಗಿದೆ. ಇದರಿಂದ ವಾಹನ ದಟ್ಟಣೆ ಉಂಟಾಗುತ್ತಿದೆ. ವಾಹನ ಸವಾರರು ಗಂಟೆಗಟ್ಟಲೇ ರಸ್ತೆಯಲ್ಲೇ ನಿಂತುಕೊಳ್ಳಬೇಕಾಗಿದೆ’ ಎಂದು ಮಂಜುನಾಥ ಗುಂಜೂರು ಆರೋಪಿಸಿದರು.

‘ಸಾರ್ವಜನಿಕರಿಗೆ ಆಗುತ್ತಿರುವ ಈ ತೊಂದರೆಯನ್ನು ತಪ್ಪಿಸಲು ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮ ಕೈಗೊಳ್ಳಬೇಕು. ಬಸ್ ಪಥವನ್ನು ತೆರವುಗೊಳಿಸಿ ಎಲ್ಲಾ ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಡಬೇಕು’ ಎಂದೂ ಅವರು ಮನವಿ ಮಾಡಿದ್ದಾರೆ.

ಆಟೊ– ಬೈಕ್ ಡಿಕ್ಕಿ: ಮಹಿಳೆಗೆ ಗಾಯ

ಬೆಂಗಳೂರು: ವಿಲ್ಸನ್ ಗಾರ್ಡನ್ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಬೈಕ್ ಹಾಗೂ ಆಟೊ ನಡುವೆ ಅಪಘಾತವಾಗಿದ್ದು, ಪಾದಚಾರಿ ಶಶಿಕಲಾ ಎಂಬುವರು ಗಾಯಗೊಂಡಿದ್ದಾರೆ.

‘ಸಂಪಂಗಿರಾಮನಗರ ಬಳಿ ಶಶಿಕಲಾ ಅವರು ಭಾನುವಾರ ನಡೆದುಕೊಂಡು ಹೊರಟಿದ್ದರು. ರಸ್ತೆ ತಿರುವಿನಲ್ಲಿ ಬೈಕ್ ಹಾಗೂ ಆಟೊ ನಡುವೆ ಡಿಕ್ಕಿಯಾಗಿತ್ತು. ರಸ್ತೆಯಲ್ಲಿ ಉರುಳಿ ಬಿದ್ದಿದ್ದ ಆಟೊ, ಶಶಿಕಲಾ ಅವರಿಗೆ ತಾಗಿತ್ತು. ಪರಿಣಾಮ ತೀವ್ರ ಪೆಟ್ಟು ಬಿದ್ದು ಶಶಿಕಲಾ ಗಾಯಗೊಂಡಿದ್ದರು. ಅವರನ್ನು ಸ್ಥಳೀಯರೇ ನಿಮ್ಹಾನ್ಸ್ ಆಸ್ಪತ್ರೆಗೆ ದಾಖಲಿಸಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಅಪಘಾತದ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ’ ಎಂದೂ ಮೂಲಗಳು ತಿಳಿಸಿವೆ.

ಜೈಲಿನಲ್ಲಿದ್ದ ರೌಡಿ ಕೊಠಡಿಯಲ್ಲಿ ಗಾಂಜಾ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಜೈಲು ವಾಸದಲ್ಲೂ ಗಾಂಜಾ ತರಿಸಿಕೊಂಡು ಕೊಠಡಿಯಲ್ಲಿ ಇರಿಸಿಕೊಂಡಿದ್ದ ರೌಡಿ ಬಾಂಬೆ ಸಲೀಂ ಹಾಗೂ ಇತರರ ವಿರುದ್ಧ ಪರಪ್ಪನ ಅಗ್ರಹಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಕೇಂದ್ರ ಕಾರಾಗೃಹದ ಮೇಲೆ ಇತ್ತೀಚೆಗೆ ದಾಳಿ ನಡೆಸಿದ್ದ ಸಿಸಿಬಿ ತಂಡದ ಇನ್‌ಸ್ಪೆಕ್ಟರ್ ಒಬ್ಬರು ದೂರು ನೀಡಿದ್ದಾರೆ. ಅದರನ್ವಯ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಠಾಣೆಯ ಪೊಲೀಸ್ ಮೂಲಗಳು ಹೇಳಿವೆ.

‘ಜೈಲಿನ ಪ್ರತಿಯೊಬ್ಬರ ಕೊಠಡಿ ಪರಿಶೀಲನೆ ನಡೆಸಲಾಗಿದೆ. ರೌಡಿ ಬಾಂಬೆ ಸಲೀಂ ಬಳಿ 200 ಗ್ರಾಂ ಗಾಂಜಾ, 7 ಹುಕ್ಕಾ, 1 ಕಬ್ಬಿಣದ ಸಲಾಖೆಗಳು, 15 ಚಾಕುಗಳು, ಮೊಬೈಲ್ ಹಾಗೂ ಸಿಮ್ ಕಾರ್ಡ್ ಸಿಕ್ಕಿವೆ. 40 ಪ್ರಕರಣಗಳಲ್ಲಿ ಆರೋಪಿಯಾಗಿದ್ದ ಬಾಂಬೆ ಸಲೀಂ, ಜೈಲಿನಲ್ಲಿ ಕುಳಿತೇ ಅಪರಾಧ ಕೃತ್ಯಕ್ಕೆ ಸಂಚು ರೂಪಿಸುತ್ತಿದ್ದಾನೆ ಎಂಬುದಾಗಿಯೂ ದೂರಿನಲ್ಲಿ ಹೇಳಲಾಗಿದೆ’ ಎಂದೂ ಮೂಲಗಳು ತಿಳಿಸಿವೆ.

ಒಳಾಂಗಣ ವಿನ್ಯಾಸ: ₹ 23.56 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಗಳ ಒಳಾಂಗಣ ವಿನ್ಯಾಸದ ಸಾಮಗ್ರಿ ಖರೀದಿಸಲು ಕಂಪನಿಯೊಂದರ ಪ್ರತಿನಿಧಿಯನ್ನು ಸಂಪರ್ಕಿಸಿದ್ದ ನಗರದ ಮಹಿಳೆಯೊಬ್ಬರು ₹ 23.56 ಲಕ್ಷ ಕಳೆದುಕೊಂಡಿದ್ದಾರೆ.

ಎಂಜಿನಿಯರ್ ಆಗಿರುವ 34 ವರ್ಷದ ಮಹಿಳೆ ವಂಚನೆ ಬಗ್ಗೆ ವೈಟ್‌ಫೀಲ್ಡ್ ವಿಭಾಗದ ಸೈಬರ್ ಕ್ರೈಂ ಠಾಣೆಗೆ ದೂರು ನೀಡಿದ್ದಾರೆ. ಆರೋಪಿಗಳಾದ ಸುದೀಪ್ ಹಾಗೂ ಗಣೇಶ್ ಎಂಬುವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

‘ಮನೆಗಳ ಒಳಾಂಗಣ ವಿನ್ಯಾಸ ಸಾಮಗ್ರಿಗಳಿಗಾಗಿ ಮಹಿಳೆ ಹುಡುಕಾಡುತ್ತಿದ್ದರು. ‘ಡಿಸೈನ್ ಪ್ಯಾಕ್ ಡಾಟ್ ಇನ್’ ಜಾಲತಾಣದ ಮೂಲಕ ಕಂಪನಿ ಬಗ್ಗೆ ತಿಳಿದುಕೊಂಡಿದ್ದರು. ಕಂಪನಿಯ ಪ್ರತಿನಿಧಿಗಳ ಸೋಗಿನಲ್ಲಿ ಮಾತನಾಡಿದ್ದ ಆರೋಪಿಗಳು, ಮುಂಗಡವಾಗಿ ಹಣ ನೀಡಿದರೆ ಸಾಮಗ್ರಿ ಕಳುಹಿಸುವುದಾಗಿ ಹೇಳಿದ್ದರು. ಅದನ್ನು ನಂಬಿದ್ದ ಮಹಿಳೆ, ಆರೋಪಿಗಳು ಹೇಳಿದ್ದ ಬ್ಯಾಂಕ್ ಖಾತೆಗೆ ₹ 23.56 ಲಕ್ಷ ಹಾಕಿದ್ದರು. ಅದಾದ ನಂತರ ಆರೋಪಿಗಳು ಸಾಮಗ್ರಿ ಕಳುಹಿಸಿಲ್ಲ. ಸಂಪರ್ಕಕ್ಕೂ ಸಿಗದೇ ನಾಪತ್ತೆಯಾಗಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಹತ್ಯೆ ಭೇದಿಸಿದ ಪೊಲೀಸರಿಗೆ ₹ 1.25 ಲಕ್ಷ ಬಹುಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಟನ್‌ಪೇಟೆ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಪಾಲಿಕೆ ಮಾಜಿ ಸದಸ್ಯೆ ರೇಖಾ ಕದಿರೇಶ್ ಹತ್ಯೆ ಪ್ರಕರಣವನ್ನು 24 ಗಂಟೆಯೊಳಗೆ ಭೇದಿಸಿದ್ದ ಪಶ್ಚಿಮ ವಿಭಾಗದ ಪೊಲೀಸರಿಗೆ ₹ 1.25 ಲಕ್ಷ ಬಹುಮಾನ ನೀಡಲಾಗಿದೆ.

ಡಿಸಿಪಿ ಸಂಜೀವ್ ಪಾಟೀಲ ನೇತೃತ್ವದ ಪೊಲೀಸರ ತಂಡಕ್ಕೆ ಕಮಿಷನರ್ ಕಮಲ್ ಪಂತ್ ಅವರು ಸೋಮವಾರ ಬಹುಮಾನದ ಚೆಕ್ ವಿತರಿಸಿದರು.

‘ಕ್ಷಿಪ್ರ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಿರುವ ಪೊಲೀಸರ ತಂಡಕ್ಕೆ ₹ 1.25 ಲಕ್ಷ ಬಹುಮಾನ ಮಂಜೂರು ಮಾಡಲಾಗಿದೆ’ ಎಂದು ಕಮಲ್ ಪಂತ್ ಹೇಳಿದರು.

ನಗರದಲ್ಲಿ ಇಂದು

ಫಾದರ್ ಚಸರಾ ಹಾಗೂ ಕಂಡ್ಲೂರು ಗಿರಿಜಮ್ಮ ಮತ್ತು ನರಸಿಂಹಯ್ಯ ಜೋಗಿ ದತ್ತಿ ಪ್ರಶಸ್ತಿಗಳ ಪ್ರದಾನ: ಪ್ರಶಸ್ತಿ ಪ್ರದಾನ ಮಾಡುವವರು– ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಎಸ್. ರಂಗಪ್ಪ, ಪುರಸ್ಕೃತರು–ಜಾಣಗೆರೆ ವೆಂಕಟರಾಮಯ್ಯ, ಎ.ಆರೋಗ್ಯಪ್ಪ ಮತ್ತು ಮಲ್ಲಿಕಾರ್ಜುನಪ್ಪ ನಿಜಗುಣಪ್ಪ ಚಿಕ್ಕಮಠ, ಅಧ್ಯಕ್ಷತೆ–ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮನು ಬಳಿಗಾರ್, ಸ್ಥಳ–ಶ್ರೀಕೃಷ್ಣರಾಜ ಪರಿಷನ್ಮಂದಿರ, ಚಾಮರಾಜಪೇಟೆ– ಸಂಜೆ 4.



ಮನು ಬಳಿಗಾರ್

ತಲಘಟ್ಟಪುರ ಗ್ರಂಥಾಲಯ ಕಟ್ಟಡದ ಶಂಕುಸ್ಥಾಪನೆ: ಉಪಸ್ಥಿತಿ– ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಶಂಕುಸ್ಥಾಪನೆ–ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್.ಸುರೇಶ್ ಕುಮಾರ್, ಅಧ್ಯಕ್ಷತೆ–ಸಹಕಾರ ಸಚಿವ ಎಸ್.ಟಿ.ಸೋಮಶೇಖರ್, ಸ್ಥಳ–1ನೇ ಅಡ್ಡರಸ್ತೆ, ಮೆಟ್ರೊಪಿಲ್ಲರ್ ಸಂಖ್ಯೆ 261, ತಲಘಟ್ಟಪುರ–ಬೆಳಿಗ್ಗೆ 9.30.

*ಅಗ್ನಿಶಾಮಕ ಮತ್ತು ತುರ್ತು ಸೇವೆಗಳು, ಗೃಹ ರಕ್ಷಕ ದಳ, ಪೌರ ರಕ್ಷಣೆ ಹಾಗೂ ರಾಜ್ಯ ವಿಪತ್ತು ಸ್ಪಂದನಾ ಪಡೆ ಅಧಿಕಾರಿ, ಸಿಬ್ಬಂದಿಗೆ ಮುಖ್ಯಮಂತ್ರಿಗಳ ಪದಕ ಪ್ರದಾನ: ಉಪಸ್ಥಿತಿ– ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ಗೃಹ ಸಚಿವ ಬಸವರಾಜ ಬೊಮ್ಮಾಯಿ, ಸ್ಥಳ– ವಿಧಾನಸೌಧದ ಬ್ಯಾಂಕ್ವೆಟ್ ಹಾಲ್–ಬೆಳಿಗ್ಗೆ 11.30.

ನಿಧನ ವಾರ್ತೆ

ಸುನಿಲ್ ಹೆಗ್ಗರವಳ್ಳಿ

ಚಿಕ್ಕಮಗಳೂರು: ಪತ್ರಕರ್ತ ಸುನಿಲ್ ಹೆಗ್ಗರವಳ್ಳಿ (43) ಹೃದಯಾಘಾತದಿಂದ ಸೋಮವಾರ ನಿಧನರಾದರು.

ಸುನಿಲ್ ಅವರಿಗೆ ಮಧ್ಯಾಹ್ನ ಎದೆನೋವು ಕಾಣಿಸಿಕೊಂಡಿತು. ಮೂಡಿಗೆರೆಯ ಆಸ್ಪತ್ರೆಗೆ ಒಯ್ಯಲಾಯಿತು. ಆಸ್ಪತ್ರೆ ತಲುಪುವಷ್ಟರಲ್ಲಿ ಅವರು ಮೃತಪಟ್ಟಿದ್ದಾರೆ ಎಂದು ವೈದ್ಯರು ತಿಳಿಸಿದ್ದಾಗಿ ಕುಟುಂಬದವರು ತಿಳಿಸಿದರು.

ಅವರಿಗೆ ಅಪ್ಪ, ಅಮ್ಮ, ಪತ್ನಿ, ಪುತ್ರ ಇದ್ದಾರೆ. ಮೂಡಿಗೆರೆ ತಾಲ್ಲೂಕಿನ ಸ್ವಗ್ರಾಮ ಹೆಗ್ಗರವಳ್ಳಿಯ ತೋಟದಲ್ಲಿ ಮಂಗಳವಾರ ಅಂತ್ಯಕ್ರಿಯೆ ನೆರವೇರಲಿದೆ.



ಸುನಿಲ್ ಮೂಡಿಗೆರೆಯ ಡಿಎಸ್‌ಬಿಜಿ ಕಾಲೇಜಿನಲ್ಲಿ ಪದವಿ ವಿದ್ಯಾಭ್ಯಾಸ ಮಾಡಿದ್ದರು. ಬೆಂಗಳೂರಿಗೆ ತೆರಳಿ ವಿವಿಧ ಪತ್ರಿಕೆಗಳಲ್ಲಿ ಕೆಲಸ ಮಾಡಿ ‘ಹಾಯ್ ಬೆಂಗಳೂರ್’ ಪತ್ರಿಕೆ ಸೇರಿದ್ದರು. ನಂತರ ಆ ಪತ್ರಿಕೆ ತೊರೆದು ‘ಚಾರ್ಲಿ ಟೈಮ್ಸ್’ ಪತ್ರಿಕೆ ಆರಂಭಿಸಿದ್ದರು. ಕೆಲ ದಿನಗಳಿಂದ ಊರಿನಲ್ಲಿ ನೆಲೆಸಿದ್ದರು.

ಚಿತ್ರಾವಳಿ



ಸಿ.ವಿ.ರಾಮನ್ ನಗರ ವಿಧಾನಸಭಾ ಕ್ಷೇತ್ರದ ಶಾಸಕ ಎಸ್.ರಘು ಅವರು ಸೋಮವಾರ ಹೊಸ ತಿಪ್ಪಸಂದ್ರದಲ್ಲಿ ಬಡವರಿಗೆ ದಿನಸಿ ಕಿಟ್‌ಗಳನ್ನು ವಿತರಿಸಿದರು



ಬ್ಯಾಟರಾಯನಪುರ ಕ್ಷೇತ್ರವ್ಯಾಪ್ತಿಯ ಅಮೃತಹಳ್ಳಿಯಲ್ಲಿ ಕಾಂಗ್ರೆಸ್ ಮುಖಂಡರ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶಾಸಕರಾದ ಕೃಷ್ಣಬೈರೇಗೌಡ ಮತ್ತು ಬೈರತಿ ಸುರೇಶ್, ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಪೌರಕಾರ್ಮಿಕರಿಗೆ ದಿನಸಿ ಕಿಟ್ ವಿತರಿಸಿದರು. ಮುಖಂಡರಾದ ಎಂ.ಜಯಗೋಪಾಲಗೌಡ, ಎನ್.ಎನ್. ಶ್ರೀನಿವಾಸಯ್ಯ, ಕೆ.ಗೌರೀಶ್, ಎಂ.ಹನುಮಂತೇಗೌಡ ಇತರರು ಇದ್ದರು.

ಉತ್ತರ ಕನ್ನಡ ಜಿಲ್ಲೆ ಭಟ್ಕಳ ತಾಲ್ಲೂಕಿನ ಮುಂಡಳ್ಳಿಯಲ್ಲಿ ನದಿ ಪಾಲಾದ ವ್ಯಕ್ತಿ

ರಾಜ್ಯದಲ್ಲಿ ಮುಂದುವರಿದ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕರಾವಳಿ ಹಾಗೂ ಮಲೆನಾಡು ಭಾಗದಲ್ಲಿ ಸೋಮವಾರ ಉತ್ತಮ ಮಳೆ ಆಗಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ವ್ಯಕ್ತಿಯೊಬ್ಬರು ನದಿಗೆ ಬಿದ್ದಿದ್ದಾರೆ.

ಭಟ್ಕಳ ತಾಲ್ಲೂಕಿನ ಮುಂಡಳ್ಳಿಯಲ್ಲಿ ಶ್ರೀಧರ ದೇವಾಡಿಗ (40) ಎಂಬುವವರು ಕಾಲು ಜಾರಿ ನದಿಗೆ ಬಿದ್ದಿದ್ದಾರೆ. ಅವರ ರಕ್ಷಣೆಗೆ ಮೀನುಗಾರರು ಪ್ರಯತ್ನಿಸಿದರೂ ನದಿ ಉಕ್ಕಿ ಹರಿಯುತ್ತಿರುವ ಕಾರಣ ಸಾಧ್ಯವಾಗಲಿಲ್ಲ.

ಅಗ್ನಿ ಶಾಮಕದಳದ ಸಿಬ್ಬಂದಿ ಹುಡುಕಾಟ ನಡೆಸಿದ್ದಾರೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಜೋರು ಮಳೆಯಾಗಿದೆ. ಹುಬ್ಬಳ್ಳಿ- ಧಾರವಾಡ, ಬೆಳಗಾವಿ, ವಿಜಯಪುರದಲ್ಲಿ ಸಾಧಾರಣ ಮಳೆಯಾಗಿದೆ.

ಮಳೆ ಪ್ರಮಾಣ (ಸೆಂ.ಮೀ)	
ಉತ್ತರ ಕನ್ನಡ ಜಿಲ್ಲೆ	
ಅಂಕೋಲಾ	13.1
ಭಟ್ಕಳ	12.1
ಕಾರವಾರ	10.6
ಉಡುಪಿ ಜಿಲ್ಲೆ	
ಹರದಳ್ಳಿ	17
ದಕ್ಷಿಣ ಕನ್ನಡ ಜಿಲ್ಲೆ	
ಕಿಲ್ಪಾಡಿ	7

ಉತ್ತಮ ಮಳೆ: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರಾಸರಿ 2.4 ಸೆಂ.ಮೀ. ಮಳೆ ದಾಖಲಾಗಿದೆ. ಮಳೆಯಿಂದ ಜಿಲ್ಲೆಯಲ್ಲಿ ಒಟ್ಟು 9 ಮನೆಗಳಿಗೆ ಭಾಗಶಃ ಹಾನಿಯಾಗಿದೆ. ಉಡುಪಿ ಜಿಲ್ಲೆಯಲ್ಲೂ ಉತ್ತಮ ಮಳೆಯಾಗಿದೆ.

ಚಿಕ್ಕಮಗಳೂರು, ಗಿರಿ ಶ್ರೇಣಿ, ಮೂಡಿಗೆರೆ, ಕೊಟ್ಟಿಗೆಹಾರ, ಕೊಪ್ಪ, ಎನ್.ಆರ್.ಪುರ, ಶೃಂಗೇರಿ ಭಾಗದಲ್ಲಿ ಉತ್ತಮ ಮಳೆ ಸುರಿದಿದೆ.

ಜಲಾಶಯಗಳ ಒಳಹರಿವು ಹೆಚ್ಚಳ: ಶಿವಮೊಗ್ಗ ಜಿಲ್ಲೆಯಲ್ಲಿ ಕಳೆದೆರಡು ದಿನಗಳಿಂದ ಹಲವೆಡೆ ಉತ್ತಮ ಮಳೆಯಾಗುತ್ತಿದ್ದು, ಜಲಾಶಯಗಳ ಒಳಹರಿವು ಹೆಚ್ಚಾಗಿದೆ. ಹೊಸನಗರ, ತೀರ್ಥಹಳ್ಳಿ, ಸಾಗರ, ಭದ್ರಾವತಿ, ಶಿಕಾರಿಪುರ, ಸೊರಬದಲ್ಲಿ ಸೋಮವಾರ ಆಗಾಗ್ಗೆ ಜೋರಾಗಿ ಮಳೆ ಸುರಿಯಿತು. ಲಿಂಗನಮಕ್ಕಿ ಜಲಾಶಯಕ್ಕೆ 7,083 ಕ್ಯುಸೆಕ್, ಭದ್ರಾ ಜಲಾಶಯಕ್ಕೆ 3,339 ಕ್ಯುಸೆಕ್, ತುಂಗಾ ಜಲಾಶಯಕ್ಕೆ 4,842 ಕ್ಯುಸೆಕ್ ನೀರು ಹರಿದುಬರುತ್ತಿದೆ.

ಕಲಬುರ್ಗಿ ನಗರ ಸೇರಿದಂತೆ ಜಿಲ್ಲೆಯಾದ್ಯಂತ ಉತ್ತಮ ಮಳೆ ಆಗಿದೆ. ಜಿಲ್ಲೆಯ ಕಾಗಿಣಾ ಮತ್ತು ಕಮಲಾವತಿ ನದಿಗಳಲ್ಲಿ ನೀರಿನ ಹರಿವು ಹೆಚ್ಚಾಗಿದೆ. ಕಮಲಾಪುರ ತಾಲ್ಲೂಕಿನ ಬೆಣ್ಣೆತೊರಾ, ಗಂಡೋರಿ ನಾಲಾ ಜಲಾಶಯಗಳಲ್ಲಿ ನೀರಿನ ಮಟ್ಟ ಏರಿಕೆಯಾಗಿದೆ. ರಾಯಚೂರು, ಯಾದಗಿರಿ ಜಿಲ್ಲೆಯ ವಿವಿಧೆಡೆ ತುಂತುರು ಮಳೆ ಸುರಿದಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	88.42	2,017	1,408
ಹಾರಂಗಿ	2,859	2,845.36	3,564	80
ಕಬಿನಿ	2284.00	2,276.05	4,192	700
ಹೇಮಾವತಿ	2,922	2,896.90	2,395	200
ಲಿಂಗನಮಕ್ಕಿ	1,819	1784.30	7,083	2,300.57
ಸೂಪಾ (ಮೀ)	564	537.86	6,583	565
ವಾಣಿ	594.36	573.90	1,627	397
ತುಂಗಭದ್ರಾ	1,633	1,610.48	3,265	294
ಮಲಪ್ರಭಾ	2079.50	2,063.50	2,254	194
ಘಟಪ್ರಭಾ	2175	2,137.11	1,451	128
ಭದ್ರಾ	186	156.3	3,339	781
ಆಲಮಟ್ಟಿ (ಮೀ)	519.60	517.50	9,469	11,008
ನಾರಾಯಣಪುರ (ಮೀ)	492.25	491.37	15,000	00

* ನೆಲಮಟ್ಟದಿಂದ

ಜನಸಂಖ್ಯೆ ನಿಯಂತ್ರಣ ಕಾನೂನು: ಈಶ್ವರಪ್ಪ ಒಲವು

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಜನಸಂಖ್ಯೆ ನಿಯಂತ್ರಿಸಲು ಉತ್ತರ ಪ್ರದೇಶ ಸರ್ಕಾರ ಕೈಗೊಂಡ ನಿರ್ಣಯ ಸಕಾಲಿಕ. ಕರ್ನಾಟಕ ಸೇರಿ ದೇಶದಲ್ಲಿ ಇಂತಹ ಕಾನೂನು ಜಾರಿಯ ಅಗತ್ಯವಿದೆ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ಹೇಳಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರ ಜತೆ ಅವರು ಮಾತನಾಡಿದರು.

ದೇಶದ ಜನಸಂಖ್ಯೆ ಪ್ರತಿದಿನವೂ ಹೆಚ್ಚಳವಾಗುತ್ತಿದೆ. ನಿಯಂತ್ರಣಕ್ಕೆ ಕೇಂದ್ರ ಸರ್ಕಾರ ಸಾಕಷ್ಟು ಕ್ರಮ ಕೈಗೊಂಡಿದೆ. ರಾಜ್ಯಗಳು ಇಂತಹ ವಿಷಯದಲ್ಲಿ ಕೈಜೋಡಿಸಬೇಕಿದೆ. ಕರ್ನಾಟಕದಲ್ಲೂ ಇಂತಹ ಕಾಯ್ದೆ ಜಾರಿಗೊಳಿಸುವ ಕುರಿತು ಮುಖ್ಯಮಂತ್ರಿ ನೇತೃತ್ವದಲ್ಲಿ ಸಮಾಲೋಚನೆ ನಡೆಸಿ, ನಿರ್ಧಾರ ತೆಗೆದುಕೊಳ್ಳಲಾಗುವುದು. ಉತ್ತರ ಪ್ರದೇಶ ಸರ್ಕಾರ ಜಾರಿಗೆ ತಂದಿರುವ ಕರಡು ಮಸೂದೆಯ ಸಾಧಕ-ಬಾಧಕ ನೋಡಿಕೊಂಡು ಮುಂದಿನ ಹೆಜ್ಜೆ ಇಡಲಾಗುವುದು ಎಂದು ಪ್ರತಿಕ್ರಿಯಿಸಿದರು.

‘ಪ್ರತ್ಯೇಕ ರಾಜ್ಯದ ಕೂಗು ಅನಿವಾರ್ಯ’


ಉಮೇಶ ಕತ್ತಿ

ಧಾರವಾಡ: ‘ಉತ್ತರ ಕರ್ನಾಟಕದ ವಿಷಯದಲ್ಲಿ ತಾರತಮ್ಯ ನೀತಿ ಅನುಸರಿಸಿದರೆ ಪ್ರತ್ಯೇಕ ರಾಜ್ಯದ ಕೂಗು ಎಬ್ಬಿಸುವುದು ಅನಿವಾರ್ಯ’ ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ ಸಚಿವ ಉಮೇಶ ಕತ್ತಿ ಹೇಳಿದರು.

ಇಲ್ಲಿನ ನ್ಯಾಯಾಲಯದ ಆವರಣದಲ್ಲಿ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಆಯೋಗದ ನೂತನ ಕಟ್ಟಡದ ಶಂಕುಸ್ಥಾಪನಾ ಸಮಾರಂಭಕ್ಕೂ ಮುಂಚೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಉತ್ತರ ಕರ್ನಾಟಕವನ್ನು ಪ್ರತ್ಯೇಕಗೊಳಿಸುವುದು ಒಂದು ದಿನದ ಕೆಲಸವೇನೂ ಅಲ್ಲ. ಆದರೆ ತೊಂದರೆ ಆದಾಗ ಕೂಗು ಎಬ್ಬಿಸಬೇಕಾಗುತ್ತದೆ’ ಎಂದರು.

‘ನಾನು ಎಂಟು ಸಲ ಶಾಸಕನಾದವನು. ಮುಖ್ಯಮಂತ್ರಿ ಆಗುವ ಯೋಗ್ಯತೆ ನನಗೂ ಇದೆ. ಈ ಬಾರಿ ಉತ್ತರ ಕರ್ನಾಟಕದವರಿಗೆ ಮುಖ್ಯಮಂತ್ರಿ ಸ್ಥಾನ ಸಿಗಬೇಕು’ ಎಂದು ಹೇಳಿದರು.

ಸುಬ್ರಾಯ ಚೊಕ್ಕಾಡಿಗೆ ‘ಕೊ.ಅ.ಉಡುಪ’ ಪ್ರಶಸ್ತಿ



ಮೂಲ್ಕಿ: ಕಿನ್ನಿಗೋಳಿಯ ಯುಗಪುರುಷ ಸಂಸ್ಥಾಪಕ ದಿವಂಗತ ಕೊ.ಅ.ಉಡುಪ ಅವರ ಸ್ಮರಣಾರ್ಥ ಪ್ರತಿ ವರ್ಷ ನೀಡಲಾಗುವ ‘ಕೊ.ಅ. ಉಡುಪ’ ಪ್ರಶಸ್ತಿಗೆ ಸಾಹಿತಿ, ನಿವೃತ್ತ ಅಧ್ಯಾಪಕ ಸುಬ್ರಾಯ ಚೊಕ್ಕಾಡಿ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹ 10,000 ನಗದು, ಗೌರವ ಫಲಕಗಳನ್ನು ಒಳಗೊಂಡಿದೆ. ಇದೇ 24ರಂದು ಕಿನ್ನಿಗೋಳಿಯ ಯುಗಪುರುಷ ಸಭಾಭವನದಲ್ಲಿ ನಡೆಯುವ ಸರಳ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಯುಗಪುರುಷದ ಪ್ರಧಾನ ಸಂಪಾದಕ ಕೊಡೆತ್ತೂರು ಭುವನಾಭಿರಾಮ ಉಡುಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ ವಾರ್ತೆ

ಶಿವಬಸವ ಶಿವಾಚಾರ್ಯರು



ಕಾಳಗಿ (ಕಲಬುರ್ಗಿ ಜಿಲ್ಲೆ): ಇಲ್ಲಿಯ ಸಂಸ್ಥಾನ ಹಿರೇಮಠದ ಪೀಠಾಧಿಪತಿ ಶಿವಬಸವ ಶಿವಾಚಾರ್ಯರು (45) ಸೋಮವಾರ ಮಠದಲ್ಲಿ ಹೃದಯಾಘಾತದಿಂದ ನಿಧನರಾದರು.

ಶ್ರೀಗಳು 25ವರ್ಷಗಳ ಹಿಂದೆ ಪೀಠ ಅಲಂಕರಿಸಿದ್ದರು. 2001ರಲ್ಲಿ ಶಿವಬಸವೇಶ್ವರ ದಕ್ಷಿಣಕಾಶಿ ವಿದ್ಯಾಭಿವೃದ್ಧಿ ಟ್ರಸ್ಟ್ ಎಂಬ ಶಿಕ್ಷಣ ಸಂಸ್ಥೆ ಸ್ಥಾಪಿಸಿ ಶಿಶುಮಂದಿರ, ಪ್ರಾಥಮಿಕ ಹಾಗೂ ಪ್ರೌಢ ಶಾಲೆ ಆರಂಭಿಸಿದ್ದರು.

ಶ್ರೀಗಳ ಅಂತ್ಯಕ್ರಿಯೆ ಮಂಗಳವಾರ (ಜು.13) ಬೆಳಿಗ್ಗೆ 11ಕ್ಕೆ ಮಠದ ಆವರಣದಲ್ಲಿ ಧಾರ್ಮಿಕ ವಿಧಿವಿಧಾನಗಳ ಪ್ರಕಾರ ಜರುಗಲಿದೆ.

ಕ್ಲಾರಿಯೋನೆಟ್ ವಾದಕ ವೆಂಕಟೇಶ ವಡವಾಟಿ



ರಾಯಚೂರು: ಕ್ಲಾರಿಯೋನೆಟ್ ವಾದಕ ವೆಂಕಟೇಶ ವಡವಾಟಿ (47) ಅವರು ಅನಾರೋಗ್ಯದಿಂದ ಬೆಂಗಳೂರಿನ ಆಸ್ಪತ್ರೆಯಲ್ಲಿ ಭಾನುವಾರ ನಿಧನರಾದರು.

ಮೃತರಿಗೆ ತಂದೆ ಅಂತರರಾಷ್ಟ್ರೀಯ ಖ್ಯಾತಿಯ ಕ್ಲಾರಿಯೋನೆಟ್ ವಾದಕ ಪಂ.ನರಸಿಂಹಲು ವಡವಾಟಿ, ತಾಯಿ ಹಾಗೂ ಇಬ್ಬರು ಸಹೋದರಿಯರು ಇದ್ದಾರೆ. ಸೋಮವಾರ ಇಲ್ಲಿ ಅಂತ್ಯಸಂಸ್ಕಾರ ನೆರವೇರಿಸಲಾಯಿತು.

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಟೀಕೆ

ರಾಜ್ಯ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ. ಸರ್ಕಾರಕ್ಕೆ ಮಾನ, ಮರ್ಯಾದೆ, ನಾಚಿಕೆ ಏನೂ ಇಲ್ಲ ಎಂದರು.

'ಅಕ್ರಮ ಗಣಿಗಾರಿಕೆ ನಡೆಯುತ್ತಿದೆ'

ಹುಬ್ಬಳ್ಳಿ: 'ಕೆಆರ್‌ಎಸ್ 20 ಕಿ.ಮೀ. ಸುತ್ತಮುತ್ತ ಅಕ್ರಮ ಗಣಿಗಾರಿಕೆ ನಡೆಯುತ್ತಿದೆ. ಅಲ್ಲಿ ಗಣಿ ಕಂಪನಿಗಳು ಇವೆ ಎಂದು ಜೆಡಿಎಸ್ ನಾಯಕರು ಸಹ ಆರೋಪ ಮಾಡಿದ್ದಾರೆ. ಆಡಳಿತ ಪಕ್ಷದ ಮುಖಂಡರು ಕೂಡ ಇದರಲ್ಲಿ ಭಾಗಿಯಾಗಿರುವುದರಿಂದ ಆ ಕುರಿತು ಸರ್ಕಾರ ಧ್ವನಿ ಎತ್ತುತ್ತಿಲ್ಲ' ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಟೀಕಿಸಿದರು.



ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕೆಆರ್‌ಎಸ್ ಅಣೆಕಟ್ಟು ಬಿರುಕು ಬಿಟ್ಟಿದೆ ಎಂದು ಸುಮಲತಾ ಆರೋಪ ಮಾಡಿದ್ದಾರೆ. ಆ ಕುರಿತು ಗಣಿ ಇಲಾಖೆಯ ಅಧಿಕಾರಿಗಳಾದರೂ ಸ್ಥಳಕ್ಕೆ ಹೋಗಿ ಪರಿಶೀಲನೆ ನಡೆಸಬೇಕಿತ್ತು' ಎಂದರು.

'ರಾಜ್ಯ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ. ಮಾಲಿನ್ಯ ಮಂಡಳಿಯ ಅಧಿಕಾರಿ ವರ್ಗಾವಣೆಗೆ ₹17 ಕೋಟಿ ಡೀಲಿಂಗ್ ಮಾಡಿದ್ದು' ಸುಳ್ಳಾ ಎಂದು ಪ್ರಶ್ನಿಸಿದರು.

ಲೋಕಾಯುಕ್ತ, ಎಸಿಬಿ, ಸಿಐಡಿ ತನಿಖೆ ಅಪೂರ್ಣ, ಗಣಿ ಲಾಬಿಗೆ ಮಣಿಯಿತೇ ಸರ್ಕಾರ?

ಪ್ರಧಾನಿಗೆ ಪತ್ರ ಬರೆದರೂ ನಿಲ್ಲದ ಗಣಿ ಸದ್ದು

• ಎಂ.ಎನ್.ಯೋಗೇಶ್

ಮಂಡ್ಯ: ಕೆಆರ್‌ಎಸ್ ಜಲಾಶಯದ ಆಸುಪಾಸು ನಡೆಯುತ್ತಿರುವ ಕಲ್ಲು ಗಣಿಗಾರಿಕೆ ವಿರುದ್ಧ ಮುಖ್ಯಮಂತ್ರಿ, ಪ್ರಧಾನಮಂತ್ರಿ ಹಾಗೂ ರಾಷ್ಟ್ರಪತಿಗೆ ಪತ್ರ ಬರೆಯಲಾಗಿದೆ. ಲೋಕಾಯುಕ್ತ, ಎಸಿಬಿ, ಸಿಐಡಿಯಿಂದ ತನಿಖೆ ನಡೆದಿದೆ. ಆದರೂ ಗಣಿಯಂತ್ರಗಳ ಸದ್ದು ನಿಂತಿಲ್ಲ.

ಮೇಲುಕೋಟೆ ಕ್ಷೇತ್ರದ ಶಾಸಕರಾಗಿದ್ದ ದಿ.ಕೆ.ಎಸ್.ಪುಟ್ಟಣ್ಣಯ್ಯ ಮೊದಲಿಗೆ ಅಕ್ರಮ ಗಣಿಗಾರಿಕೆ ವಿರುದ್ಧ ಧ್ವನಿ ಎತ್ತಿದ್ದರು. 'ಗಣಿ ಚಟುವಟಿಕೆಯಿಂದ ಕೆಆರ್‌ಎಸ್‌ಗೆ ಧಕ್ಕೆ ಇದೆ. ಕೈಕುಳಿಗಷ್ಟೆ ಅವಕಾಶ ಕಲ್ಪಿಸಿ ಕ್ರಷರ್‌ಗಳನ್ನು ನಿಷೇಧಿಸಬೇಕು' ಎಂದು ಒತ್ತಾಯಿಸಿದ್ದರು. ಅವರ ಧ್ವನಿ ಸದನದ ಚರ್ಚೆಗೆ, ಭಾಷಣಕ್ಕಷ್ಟೇ ಸೀಮಿತವಾಗಿತ್ತು.

2005ರಲ್ಲಿ ಕಾವೇರಿಪುರದ ಕಾರ್ಮಿಕ ಕೃಷ್ಣ ನೇತೃತ್ವದಲ್ಲಿ ಪಾಂಡವಪುರ ತಾಲ್ಲೂಕು ಕಚೇರಿ ಎದುರು ಭೋವಿ ಸಮಾಜದವರು ಪ್ರತಿಭಟಿಸಿದ್ದರು. ಬೆಟ್ಟದ ಅಕ್ಕಪಕ್ಕದ ಗ್ರಾಮಗಳ ಜನ ಪೊಲೀಸ್ ಠಾಣೆಗೆ ದೂರು ನೀಡಿ, ತಹಶೀಲ್ದಾರ್, ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದ್ದರು.

'ಜಲಾಶಯಕ್ಕೆ ಧಕ್ಕೆಯಾಗುತ್ತದೆ' ಎಂಬುದನ್ನೇ ಎಲ್ಲರೂ ಉಲ್ಲೇಖಿಸಿದ್ದರು.

ಮುಖ್ಯಾಂಶಗಳು

- ಜನರ ದೂರುಗಳಿಗೆ ಕೈಚೆಲ್ಲಿದ ಅಧಿಕಾರಿಗಳು
- ಪ್ರತಿಭಟನೆ, ಪಾದಯಾತ್ರೆ ನಡೆಸಿದ ಹಳ್ಳಿಜನ
- ಕೆಆರ್‌ಎಸ್‌ಗೆ ಧಕ್ಕೆ: ಸರ್ಕಾರಕ್ಕೆ ತಿಳಿಯದ ವಾಸ್ತವ

ಕಲ್ಲುಗಣಿ ಸುತ್ತಮುತ್ತ

ಪೊಲೀಸರು, ಅಧಿಕಾರಿಗಳು ಸುಮ್ಮನಾಗಿದ್ದರಿಂದ ಯಂತ್ರಗಳ ಸದ್ದು ನಿಲ್ಲಲಿಲ್ಲ.

ಅನಕ್ಷರಸ್ಥನಿಂದ ದೂರು: ಬೇಬಿಬೆಟ್ಟದ ಕುರಿಗಾಹಿ, ಶಿಂಡಭೋಗನಹಳ್ಳಿ ಕುಮಾರ್ 2012ರಲ್ಲಿ ಲೋಕಾಯುಕ್ತಕ್ಕೆ ದೂರು ಸಲ್ಲಿಸಿದ್ದರು. ಅನಕ್ಷರಸ್ಥರಾಗಿದ್ದ ಅವರು 'ದೂಳಿನಿಂದ ಜನರ ಕಣ್ಣುಗಳಿಗೆ ತೊಂದರೆಯಾಗುತ್ತದೆ, ಕೃಷಿ ಭೂಮಿ ಬಂಜರಾಗುತ್ತಿದೆ, ಕೆಆರ್‌ಎಸ್‌ಗೆ ತೊಂದರೆಯಾಗುತ್ತದೆ' ಎಂದು ದೂರಿದ್ದರು.

'ಗಣಿಗಾರಿಕೆ ಪ್ರದೇಶಕ್ಕೆ ಬರುವ ತನಿಖಾಧಿಕಾರಿಗಳ ಮೇಲೆ ಗಣಿ ಮಾಲೀಕರು ಪ್ರಭಾವ ಬೀರುತ್ತಾರೆ. ನಾನು 2 ವರ್ಷ ಲೋಕಾಯುಕ್ತ ಕೇಂದ್ರ



ಗಣಿಯಂತ್ರಗಳಿಂದ ಕರಗಿದ ಬೇಬಿಬೆಟ್ಟ

ಕಚೇರಿಗೂ ಅಲೆದಾಡಿ ಸುಸ್ತಾದೆ. ಕ್ರಷರ್ ಮಾಲೀಕರು ಬೆದರಿಕೆ ಹಾಕಿದ್ದರು. ಓದಲು, ಬರೆಯಲು ಬಂದಿದ್ದರೆ ಪ್ರಧಾನಿಯನ್ನೇ ಭೇಟಿಯಾಗುತ್ತಿದ್ದೆ. ನನ್ನ ದೂರು ವಜಾಗೊಂಡಿತು' ಎಂದು ಕುಮಾರ್ ಬೇಸರ ವ್ಯಕ್ತಪಡಿಸಿದರು.

ಸಮಿತಿ ರಚನೆ: ಬೇಬಿ ಹಾಗೂ ಅಕ್ಕಪಕ್ಕದ ಗ್ರಾಮಸ್ಥರು ಬೇಬಿಬೆಟ್ಟದಿಂದ ಪಾಂಡವಪುರ ತಾಲ್ಲೂಕು ಕಚೇರಿವರೆಗೆ ಪಾದಯಾತ್ರೆಯನ್ನೂ ನಡೆಸಿದ್ದರು. 2016ರಲ್ಲಿ 'ಬೇಬಿಬೆಟ್ಟ ಉಳಿಸಿ ಹೋರಾಟ ಸಮಿತಿ' ರಚಿಸಿಕೊಂಡು ಮುಖ್ಯಮಂತ್ರಿ, ರಾಜ್ಯಪಾಲರು, ಪ್ರಧಾನಮಂತ್ರಿ, ರಾಷ್ಟ್ರಪತಿ, ರಾಜ್ಯ, ಕೇಂದ್ರ ಗಣಿ ಸಚಿವರು ಸೇರಿ 23 ಮಂದಿಗೆ ಬರೆದ ಪತ್ರಕ್ಕೆ ಉತ್ತರವೇ ಬಂದಿಲ್ಲ.

'ಅಕ್ರಮ ಗಣಿಗಾರಿಕೆ ತಡೆಯುವಲ್ಲಿ ವಿಫಲರಾಗಿದ್ದಾರೆ' ಎಂದು ಆರೋಪಿಸಿ ಆರ್‌ಟಿಐ ಕಾರ್ಯಕರ್ತ ಕೆ.ಆರ್. ರವೀಂದ್ರ 2017 ಜೂನ್‌ನಲ್ಲಿ ಅಂದಿನ ಜಿಲ್ಲಾಧಿಕಾರಿ ಜಿಯಾವುಲ್ಲಾ ಸೇರಿ 11 ಅಧಿಕಾರಿಗಳ ವಿರುದ್ಧ ಎಸಿಬಿಗೆ ದೂರು ದಾಖಲಿಸಿದರು. 'ಅರಣ್ಯ ಇಲಾಖೆಗೆ ಸೇರಿದ ಬೇಬಿಬೆಟ್ಟದಲ್ಲಿ ಗಣಿಗಾರಿಕೆ ಸ್ಥಗಿತಗೊಳಿಸಬೇಕು' ಎಂದು ಒತ್ತಾಯಿಸಿ ಸರ್ಕಾರಕ್ಕೂ ಪತ್ರ ಬರೆದರು.

ಗಣಿ ಪ್ರದೇಶದಲ್ಲಿ ಅನುಮಾನಾಸ್ಪದವಾಗಿ ಸಾಯುತ್ತಿದ್ದ ಕಾರ್ಮಿಕರ ಪರವಾಗಿ ಕೇಂದ್ರ ಮಾನವಹಕ್ಕುಗಳ ಆಯೋಗಕ್ಕೂ ದೂರು ಸಲ್ಲಿಸಿದರು. ಆಗಿನ ಸಿದ್ದರಾಮಯ್ಯ ಸರ್ಕಾರ ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸಿತು.

'ಗಣಿ ಲಾಬಿಯ ಮುಂದೆ ದೂರು, ತನಿಖೆಗಳೆಲ್ಲವೂ ಗೌಣವಾಗಿವೆ. ಗಣಿಗಳಿಂದ ಕೆಆರ್‌ಎಸ್‌ಗೆ ಧಕ್ಕೆ ಇದೆ ಎಂಬುದು ಮೇಲ್ನೋಟಕ್ಕೆ ಸಾಮಾನ್ಯರಿಗೂ ಗೊತ್ತಾಗುತ್ತದೆ. ಸರ್ಕಾರಕ್ಕೆ ಮಾತ್ರ ತಿಳಿಯುತ್ತಿಲ್ಲ' ಎಂದು ರವೀಂದ್ರ ಆರೋಪಿಸಿದರು.

15 ಗಣಿಗಳ ವಿರುದ್ಧ ಎಫ್‌ಐಆರ್

ರಾಜಧನ, ದಂಡ ಪಾವತಿಸದ ದಿಲೀಪ್ ಬಿಲ್ಡ್‌ಕಾನ್ ಕಂಪನಿ ಸೇರಿ 15 ಗಣಿ ಮಾಲೀಕರ ವಿರುದ್ಧ ಎಫ್‌ಐಆರ್ ದಾಖಲು ಮಾಡಲಾಗಿದೆ.

'ದಿಲೀಪ್ ಬಿಲ್ಡ್‌ಕಾನ್ ಕಂಪನಿ ವಿರುದ್ಧ ಗಣಿ ಇಲಾಖೆ ನೀಡಿರುವ ದೂರಿನಲ್ಲಿ ಗೊಂದಲಗಳಿವೆ. ಮೊದಲು ಗಣಿಗಾರಿಕೆ ನಡೆಸಲು ಅನುಮತಿ ನೀಡಿದ್ದಾರೆ. ನಂತರ ಕಂಪನಿಯಿಂದ ಸರ್ಕಾರಕ್ಕೆ ಮೋಸವಾಗಿದೆ ಎಂದು ದೂರು ನೀಡಿದ್ದಾರೆ. ಗೊಂದಲಗಳಿರುವ ಕಾರಣ ಕಾನೂನು ತಜ್ಞರ ಸಲಹೆ ಕೋರಿದ್ದೇವೆ' ಎಂದು ಪೊಲೀಸರು ತಿಳಿಸಿದರು.

ಹೋಟೆಲ್‌ನಲ್ಲಿ ನಡೆಯುವುದೇನು?

'ತನಿಖೆಗೆ ಬರುವ ಅಧಿಕಾರಿಗಳು, ಪರೀಕ್ಷೆಗೆ ಬರುವ ತಂತ್ರಜ್ಞರು ಕೆಆರ್‌ಎಸ್‌ನಲ್ಲಿರುವ ಹೋಟೆಲ್‌ನಲ್ಲಿ ತಂಗುತ್ತಾರೆ. ಹೋಗುವಾಗ ಎಲ್ಲವೂ ಸರಿ ಇರುತ್ತದೆ. ಹೋಟೆಲ್‌ನಿಂದ ಹೊರಬರುತ್ತಿದ್ದಂತೆ ಅವರ ರಾಗ ಬದಲಾಗುತ್ತದೆ' ಎಂದು ಸ್ಥಳೀಯರು ಆರೋಪಿಸುತ್ತಾರೆ.

'ಪರೀಕ್ಷಾರ್ಥ ಸ್ಫೋಟಕ್ಕಾಗಿ ಪುಣೆ, ಜಾರ್ಖಂಡ್‌ನಿಂದ ಬಂದಿದ್ದ ವಿಜ್ಞಾನಿಗಳಿಗೆ ಗಣಿ ಮಾಲೀಕರು ಲಂಚ ಕೊಟ್ಟು ಪ್ರಭಾವ ಬೀರಿದ್ದಾರೆ ಎಂಬ ಮಾಹಿತಿ ಇದೆ. ಅದಕ್ಕಾಗಿಯೇ ಗೋಬ್ಯಾಕ್ ಚಳವಳಿ ನಡೆಸಿ ವಾಪಸ್ ಕಳುಹಿಸಿದೆವು. ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಿದರೆ ಮಾತ್ರ ಸತ್ಯ ಹೊರಬರುತ್ತದೆ' ಎಂದು ರೈತಸಂಘ ಜಿಲ್ಲಾ ಘಟಕದ ಅಧ್ಯಕ್ಷ ಕೆಂಪೂಗೌಡ ಹೇಳಿದರು.

ಸಚಿವ ರಾಜೀವ್ ಚಂದ್ರಶೇಖರ್ ಟ್ವಿಟರ್ ಖಾತೆಯ ನೀಲಿ ಗುರುತು ಕೆಲ ಕಾಲ ಮಾಯ!

ನವದೆಹಲಿ: ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಖಾತೆಯ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಅವರ ಅಧಿಕೃತ ಟ್ವಿಟರ್ ಖಾತೆಯಲ್ಲಿ ನೀಲಿ ಬಣ್ಣದ ಗುರುತು (ಬ್ಲ್ಯೂ ಬ್ಯಾಡ್ಜ್) ಸೋಮವಾರ ದಿಢೀರ್ ಕಣ್ಮರೆಯಾಗಿತ್ತು. ಕೆಲವು ನಿಮಿಷಗಳ ನಂತರ ಮತ್ತೆ ನೀಲಿ ಬಣ್ಣದ ಗುರುತು ಕಾಣಿಸಿಕೊಂಡಿತು.

ಜುಲೈ 7ರಂದು ಕೇಂದ್ರ ಸಚಿವ ಸಂಪುಟಕ್ಕೆ ಸೇರ್ಪಡೆಯಾದ ರಾಜೀವ್ ಚಂದ್ರಶೇಖರ್ ಅವರು, @rajeev_mp ಎಂದಿದ್ದ ಟ್ವಿಟರ್‌ನ ಖಾತೆಯ ಹೆಸರನ್ನು (ಯೂಸರ್‌ನೇಮ್) @Rajeev_GoI ಎಂದು ಬದಲಿಸಿದ್ದರು. ಟ್ವಿಟರ್ ಖಾತೆಯ ಅಧಿಕೃತ ಪರಿಶೀಲನೆ ನೀತಿಯ ಪ್ರಕಾರ, ಟ್ವಿಟರ್ ಬಳಕೆದಾರ ಈಗಾಗಲೇ ನಮೂದಿಸಿರುವ ಹೆಸರು ಬದಲಾಯಿಸಿದರೆ ತಾನಾಗಿಯೇ ನೀಲಿ ಬಣ್ಣದ ಗುರುತು ಇಲ್ಲವಾಗುತ್ತದೆ.

ತಜ್ಞರ ಮಾತೇ ಅಂತಿಮ: ಪುಟ್ಟರಾಜು

ಪಾಂಡವಪುರ (ಮಂಡ್ಯ): 'ಬೇಬಿ ಬೆಟ್ಟದ ಗಣಿಗಾರಿಕೆಯಿಂದ ಕೆಆರ್‌ಎಸ್ ಅಣೆಕಟ್ಟೆಗೆ ಅಪಾಯ ಇದೆ ಎಂದು ತಜ್ಞರು ಘೋಷಿಸಿದರೆ ತಕ್ಷಣ ಸರ್ಕಾರ ಗಣಿಗಾರಿಕೆಯನ್ನು ಶಾಶ್ವತವಾಗಿ ನಿಷೇಧಿಸಬೇಕು. ಕಾರ್ಮಿಕರಿಗೆ ಪರ್ಯಾಯ ವ್ಯವಸ್ಥೆಯನ್ನೂ ಕಲ್ಪಿಸಿಕೊಡಬೇಕು' ಎಂದು ಶಾಸಕ ಸಿ.ಎಸ್.ಪುಟ್ಟರಾಜು ಆಗ್ರಹಿಸಿದರು.

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸಚಿವನಾಗಿದ್ದ ಅವಧಿಯಲ್ಲಿ ಬೇಬಿಬೆಟ್ಟದ ಸುತ್ತಮುತ್ತ 144 ಸೆಕ್ಷನ್ ಜಾರಿಗೊಳಿಸಲಾಗಿತ್ತು. ಪರೀಕ್ಷಾರ್ಥ ಸ್ಫೋಟಕ್ಕಾಗಿ ನೀರಾವರಿ ಇಲಾಖೆಗೆ ₹ 20ಲಕ್ಷ ಮಂಜೂರಾಗಿತ್ತು. ಆದರೆ ಅದನ್ನು ಕೆಲವರು ವಿರೋಧಿಸಿದ್ದರು' ಎಂದು ಬೇಸರ ವ್ಯಕ್ತಪಡಿಸಿದರು.

'ಜು. 14ರಂದು ಕೆಆರ್‌ಎಸ್ ಜಲಾಶಯಕ್ಕೆ ಭೇಟಿ ನೀಡುತ್ತಿರುವ ಸಂಸದೆ ಸುಮಲತಾ ಅವರು ಆಹ್ವಾನಿಸಿದರೆ ಶಾಸಕನಾಗಿ ಬೇಬಿಬೆಟ್ಟದ ವೀಕ್ಷಣೆಗೆ ತೆರಳುವೆ' ಎಂದರು.

ಗಣಿಗಾರಿಕೆ ಶಾಶ್ವತ ನಿಷೇಧಕ್ಕೆ ಚಿಂತನೆ: ನಾರಾಯಣಗೌಡ

ಪ್ರಜಾವಾಣಿ ವಾರ್ತೆ



ಮಂಡ್ಯ: 'ಕೆಆರ್‌ಎಸ್ ಜಲಾಶಯದ ಸುರಕ್ಷತೆಯ ದೃಷ್ಟಿಯಿಂದ ಪಾಂಡವಪುರ ತಾಲ್ಲೂಕು ಬೇಬಿಬೆಟ್ಟದಲ್ಲಿ ಕಲ್ಲು ಗಣಿಗಾರಿಕೆಯನ್ನು ಶಾಶ್ವತವಾಗಿ ನಿಷೇಧಿಸಲು ಚಿಂತಿಸಲಾಗಿದೆ. ಈ ಕುರಿತು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗುವುದು' ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಸಿ.ನಾರಾಯಣ ಗೌಡ ಸೋಮವಾರ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು 'ಜಲಾಶಯದ ಸುತ್ತಮತ್ತ ಗಣಿಗಾರಿಕೆ ನಿಷೇಧಿಸಲು ಅವಕಾಶವಿದೆ, ದೇಶದ ವಿವಿಧೆಡೆ ಅಣೆಕಟ್ಟೆಗಳ ಸುತ್ತ ಗಣಿಗಾರಿಕೆ ನಿಲ್ಲಿಸಿದ ಸಾಕಷ್ಟು ಉದಾಹರಣೆಗಳಿವೆ. ಬೇಬಿಬೆಟ್ಟದಲ್ಲಿ ನಿಯಮಾನುಸಾರ ಅನುಮತಿ ಪಡೆದಿರುವವರಿಗೆ ಬೇರೆ ಜಾಗ ನೀಡಲಾಗುವುದು' ಎಂದರು.

'ಜಲಾಶಯದ ಸುತ್ತಮುತ್ತಲಿನ ಗಣಿಗಾರಿಕೆ ವಿಚಾರ ದೊಡ್ಡಮಟ್ಟದಲ್ಲಿ ಚರ್ಚೆಯಾಗುತ್ತಿದೆ. ಅದರಿಂದ ಜಲಾಶಯಕ್ಕೆ ಧಕ್ಕೆ ಉಂಟಾಗಲಿದೆ ಎಂಬ ಮಾಹಿತಿಯೂ ಇದೆ. ಶಾಶ್ವತವಾಗಿ ಗಣಿ ಚಟುವಟಿಕೆ ಸ್ಥಗಿತಗೊಳಿಸಬೇಕು ಎಂಬ ಕೂಗಿದೆ. ಅದನ್ನು ಪರಿಗಣಿಸಿ ನಿಷೇಧಕ್ಕೆ ಚಿಂತಿಸಲಾಗಿದೆ. ಈ ಕುರಿತು ಮುಖ್ಯಮಂತ್ರಿಗಳ ಜೊತೆ ಸಭೆ ನಡೆಸಲಾಗುವುದು' ಎಂದರು.

'ಜಿಲ್ಲೆಯಲ್ಲಿ ಅಧಿಕಾರಿಗಳ ನಿರ್ಲಕ್ಷ್ಯದಿಂದಲೇ ಅಕ್ರಮ ಗಣಿಗಾರಿಕೆ ನಡೆಯುತ್ತಿದೆ. ಕೆಲವು ಅಧಿಕಾರಿಗಳು ಗಣಿ ಮಾಲೀಕರೊಂದಿಗೆ ಶಾಮೀಲಾಗಿರುವ ದೂರುಗಳು ಬಂದಿವೆ. ಇನ್ನು ಮುಂದೆ ಅದಕ್ಕೆ ಅವಕಾಶ ನೀಡುವುದಿಲ್ಲ. ಅಕ್ರಮ ತಡೆಗೆ ಸಹಾಯವಾಣಿ ಆರಂಭಿಸಲಾಗುವುದು' ಎಂದರು.

ಸಚಿವ ಮುರುಗೇಶ್ ನಿರಾಣಿ ಭೇಟಿಯಾದ ಸಂಸದೆ ಸುಮಲತಾ

ಅಕ್ರಮ ಗಣಿಗಾರಿಕೆ: ಕಠಿಣ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಡ್ಯ ಜಿಲ್ಲೆಯಲ್ಲಿ ಅಕ್ರಮ ಗಣಿಗಾರಿಕೆಯಲ್ಲಿ ಇಲಾಖೆಯ ಅಧಿಕಾರಿಗಳು ಶಾಮೀಲಾಗಿದ್ದರೆ ಅಂತಹವರನ್ನು ಅಮಾನತುಗೊಳಿಸಲಾಗುವುದು. ಗಣಿ ನಡೆಸುವವರು ಎಷ್ಟೇ ಪ್ರಭಾವಿಗಳಾಗಿದ್ದರೂ ನಿರ್ದಾಕ್ಷಿಣ್ಯವಾಗಿ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಗಣಿ ಮತ್ತು ಭೂವಿಜ್ಞಾನ ಸಚಿವ ಮುರುಗೇಶ್ ನಿರಾಣಿ ಹೇಳಿದ್ದಾರೆ.

ಸೋಮವಾರ ತಮ್ಮ ನಿವಾಸದಲ್ಲಿ ಸಂಸದೆ ಸುಮಲತಾ ಅಂಬರೀಷ್ ಅವರ ಭೇಟಿಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

"ಇದೇ ವಾರ ಮಂಡ್ಯ ಜಿಲ್ಲೆಯ ಗಣಿಗಾರಿಕೆ ನಡೆಯುವ ಪ್ರದೇಶಗಳಿಗೆ ಸಂಸದರು, ಶಾಸಕರು, ವಿಧಾನಪರಿಷತ್ ಸದಸ್ಯರು ಮತ್ತು ಮಾಧ್ಯಮದವರ ಜತೆ ಭೇಟಿ ನೀಡಿ ಪರಿಶೀಲನೆ ನಡೆಸುತ್ತೇನೆ. ಈ ಸಂದರ್ಭದಲ್ಲಿ ಅಕ್ರಮ ಗಣಿಗಾರಿಕೆಯಲ್ಲಿ ಅಧಿಕಾರಿಗಳು ಶಾಮೀಲಾಗಿರುವುದು ಕಂಡು ಬಂದರೆ ಸ್ಥಳದಲ್ಲೇ ಅಮಾನತು ಮಾಡುತ್ತೇನೆ' ಎಂದರು.

'ಫೆಬ್ರುವರಿ 22 ರಂದು ಮಂಡ್ಯ ಜಿಲ್ಲೆಯ ಗಣಿಗಾರಿಕೆ ಪ್ರದೇಶಗಳಿಗೆ ಸಂಸದರು ಮತ್ತು ಜನಪ್ರತಿನಿಧಿಗಳ ಜತೆ ಭೇಟಿ ಕೊಟ್ಟು ಪರಿಶೀಲನೆ ನಡೆಸಿದ್ದೇನೆ. ಕಳೆದ ಮೂರು ತಿಂಗಳಿಂದ ಕೆ.ಆರ್.ಎಸ್ ಅಣೆಕಟ್ಟಿನ ಸುತ್ತಮುತ್ತ 15 ಕಿ.ಮೀ ವ್ಯಾಪ್ತಿಯಲ್ಲಿ ಯಾವುದೇ ರೀತಿಯ ಗಣಿಗಾರಿಕೆ ನಡೆಸಲು ಅವಕಾಶ ಕೊಟ್ಟಿಲ್ಲ' ಎಂದು ಸ್ಪಷ್ಟಪಡಿಸಿದರು.

'ಬೇಬಿ ಬೆಟ್ಟದಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತದೆ ಎಂದು ಸಂಸದರು ಗಮನಕ್ಕೆ ತಂದ ಕೂಡಲೇ ಖುದ್ದು ನಾನೇ ವರದಿ ನೀಡುವಂತೆ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೆ. ಈ ಬಗ್ಗೆ ಯಾರಿಗೂ ಯಾವುದೇ ರೀತಿಯ ಆತಂಕ ಬೇಡ' ಎಂದು ನಿರಾಣಿ ಹೇಳಿದರು.

'ಮಂಡ್ಯ ಜಿಲ್ಲೆಯಲ್ಲಿ ಒಟ್ಟು 38 ಗಣಿಗಾರಿಕೆಗಳನ್ನು ನಿಲ್ಲಿಸಿದ್ದೇವೆ. ಜಿಲ್ಲಾಡಳಿತ ಹಾಗೂ ನಮ್ಮ ಇಲಾಖೆಯ ಹಿರಿಯ ಅಧಿಕಾರಿಗಳು ಜಂಟಿ ಸಮೀಕ್ಷೆ ನಡೆಸಿ ನೀಡಿರುವ ವರದಿ ಪ್ರಕಾರ ಜಿಲ್ಲೆಯಲ್ಲಿ ಕಳೆದ ಮೂರು ತಿಂಗಳಿನಿಂದ ಗಣಿಗಾರಿಕೆ ನಡೆಯುತ್ತಿಲ್ಲ' ಎಂದರು.

ಪುಣೆಯಲ್ಲಿ ಕೇಂದ್ರ ಜಲ ಮತ್ತು ಇಂಧನ ಸಂಶೋಧನಾ ಸಂಸ್ಥೆಯ ಮೂಲಕ ಕೆಆರ್‌ಎಸ್ ಅಣೆಕಟ್ಟಿನ ಸುತ್ತಮುತ್ತಲೂ ಪ್ರಾಯೋಗಿಕವಾಗಿ ಸ್ಫೋಟಕ ವಸ್ತುಗಳನ್ನು ಬಳಸುವ ಕುರಿತು ಪರೀಕ್ಷೆ ನಡೆಸಲು ತೀರ್ಮಾನಿಸಲಾಗಿದೆ. ಇದರಿಂದ ಎಷ್ಟು ಪ್ರಮಾಣದಲ್ಲಿ ಸ್ಫೋಟಕಗಳನ್ನು ಬಳಕೆ ಮಾಡಬಹುದು. ಇದರಿಂದ ಉಂಟಾಗಬಹುದಾದ ಪರಿಣಾಮಗಳ ಬಗ್ಗೆ ಮಾಹಿತಿ ಲಭ್ಯವಾಗಲಿದೆ ಎಂದು ಹೇಳಿದರು.

'ನಮ್ಮ ಸರ್ಕಾರ ಯಾವುದೇ ಕಾರಣಕ್ಕೂ ಅಕ್ರಮ ಗಣಿಗಾರಿಕೆಗೆ ಅವಕಾಶ ಕೊಡುವುದಿಲ್ಲ' ಎಂದೂ ತಿಳಿಸಿದರು.

ಬೇಬಿಬೆಟ್ಟ, ಕೆಆರ್‌ಎಸ್‌ಗೆ ಸುಮಲತಾ ಭೇಟಿ

ಮಂಡ್ಯ: ಸಂಸದೆ ಸುಮಲತಾ ಜುಲೈ 13 ಹಾಗೂ ಜುಲೈ 14 ರಂದು ಜಿಲ್ಲಾ ಪ್ರವಾಸ ಕೈಗೊಂಡಿದ್ದು ಕಲ್ಲು ಗಣಿಗಾರಿಕೆ ಪ್ರದೇಶ ಬೇಬಿಬೆಟ್ಟ ಹಾಗೂ ಕೆಆರ್‌ಎಸ್ ಜಲಾಶಯಕ್ಕೆ ಭೇಟಿ ನೀಡಲಿದ್ದಾರೆ. 13ರಂದು ಜಿಲ್ಲಾ ಹಾಲು ಒಕ್ಕೂಟಕ್ಕೆ ಭೇಟಿ ನೀಡಲಿದ್ದು, ಹಾಲಿಗೆ ನೀರು ಬೆರೆಸಿದ ಪ್ರಕರಣದ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿ ರೈತರಿಂದ ಮನವಿ ಸ್ವೀಕರಿಸಲಿದ್ದಾರೆ. ನಂತರ, ಅಕ್ರಮ ಗಣಿಗಾರಿಕೆ ಕುರಿತು ಜಿಲ್ಲಾಧಿಕಾರಿ ಕಚೇರಿಯಲ್ಲಿ ಅಧಿಕಾರಿಗಳ ಸಭೆ ನಡೆಸಲಿದ್ದಾರೆ.

14ರಂದು ಮಧ್ಯಾಹ್ನ 12.30ಕ್ಕೆ ಕೆಆರ್‌ಎಸ್ ಜಲಾಶಯಕ್ಕೆ ಭೇಟಿ ನೀಡಿ ಅಣೆಕಟ್ಟೆಯ ಸುರಕ್ಷತೆ ಬಗ್ಗೆ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳೊಂದಿಗೆ ಚರ್ಚಿಸಲಿದ್ದಾರೆ. ಮಧ್ಯಾಹ್ನ 2.30ಕ್ಕೆ ಪಾಂಡವಪುರ ತಾಲ್ಲೂಕು ಬೇಬಿಬೆಟ್ಟಕ್ಕೆ ಭೇಟಿ ನೀಡಿ ಗಣಿ ಪ್ರದೇಶದ ಪರಿಶೀಲನೆ ನಡೆಸಲಿದ್ದಾರೆ.

ಅಧೀರ್ ರಂಜನ್ ಬದಲಾವಣೆ?

ನವದೆಹಲಿ: ಲೋಕಸಭೆಯಲ್ಲಿ ಕಾಂಗ್ರೆಸ್ ಪಕ್ಷದ ನಾಯಕರಾಗಿರುವ ಅಧೀರ್ ರಂಜನ್ ಚೌಧರಿ ಅವರನ್ನು ಬದಲಾಯಿಸುವ ಸಾಧ್ಯತೆಯಿದೆ ಎಂದು 'ಎನ್‌ಡಿಟಿವಿ' ಸೋಮವಾರ ವರದಿ ಮಾಡಿದೆ. ರಾಹುಲ್ ಗಾಂಧಿ ಅವರು ಲೋಕಸಭೆಯಲ್ಲಿ ಪಕ್ಷದ ನಾಯಕರಾಗುವುದಿಲ್ಲ ಎಂದು ಮೂಲಗಳು ತಿಳಿಸಿವೆ.



ಈ ಹುದ್ದೆಗೆ ಸ್ಪರ್ಧೆಯಲ್ಲಿರುವವರ ಸಾಲಿನಲ್ಲಿ ಶಶಿ ತರೂರ್ ಮತ್ತು ಮನೀಶ್ ತಿವಾರಿ ಸೇರಿದ್ದಾರೆ. ಗೌರವ್ ಗೊಗೊಯ್, ರವನೀತ್ ಸಿಂಗ್ ಬಿಟ್ಟು ಮತ್ತು ಉತ್ತಮ್ ಕುಮಾರ್ ರೆಡ್ಡಿ ಅವರ ಹೆಸರನ್ನು ಸಹ ಪರಿಗಣಿಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ತರೂರ್ ಮತ್ತು ತಿವಾರಿ ಅವರು ಕಾಂಗ್ರೆಸ್ ನಾಯಕತ್ವವನ್ನು ಪ್ರಶ್ನೆ ಮಾಡಿದ್ದ ಗುಂಪಿಗೆ (ಜಿ-23) ಸೇರಿದವರಾಗಿದ್ದು, ಕಳೆದ ಆಗಸ್ಟ್‌ನಲ್ಲಿ ಪಕ್ಷದಲ್ಲಿ ಸಾಂಸ್ಥಿಕ ಬದಲಾವಣೆಗಳಿಗೆ ಒತ್ತಾಯಿಸಿ ಪತ್ರ ಬರೆದಿದ್ದರು.

ಸಾರ್ವಜನಿಕರಿಗೆ ಅಗತ್ಯ ಕನಿಷ್ಠ ಮೂಲ ಸೌಕರ್ಯವೂ ಇಲ್ಲ: ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಣೆ

ಸ್ವಂತ ಕಟ್ಟಡವೇ ಇಲ್ಲದ ಸಬ್‌ರಿಜಿಸ್ಟ್ರಾರ್ ಕಚೇರಿ

• ಗುರು ಪಿ.ಎಸ್.

ಬೆಂಗಳೂರು: ಸಾರ್ವಜನಿಕರ ಆಸ್ತಿ ನೋಂದಣಿ ಮಾಡುವ ನೋಂದಣಾಧಿಕಾರಿಗಳ ಕಚೇರಿಗಳು ಬಹುತೇಕ ಬಾಡಿಗೆ ಕಟ್ಟಡದಲ್ಲಿಯೇ ನಡೆಯುತ್ತಿದ್ದು, ದಿನನಿತ್ಯ ಭೇಟಿ ಕೊಡುವ ನಾಗರಿಕರಿಗೆ ಅಗತ್ಯವಾದ ಕನಿಷ್ಠ ಮೂಲಸೌಕರ್ಯಗಳಿಲ್ಲದೇ ಇರುವುದರಿಂದ ಜನ ಪರದಾಡುವಂತಾಗಿದೆ.

ಬೆಂಗಳೂರು ಜಿಲ್ಲೆಯ ವ್ಯಾಪ್ತಿಯಲ್ಲಿಯೇ ಸುಮಾರು 43 ಉಪನೋಂದಣಾಧಿಕಾರಿಗಳ ಕಚೇರಿಗಳಿವೆ. ಈ ಪೈಕಿ ನೋಂದಣಿ ಮಹಾಪರಿವೀಕ್ಷಕ ಮತ್ತು ಆಯುಕ್ತರ ಕಚೇರಿ, ಬಿಡಿಎ ಕಚೇರಿ, ಆನೇಕಲ್, ಬ್ಯಾಟರಾಯನಪುರ, ಯಲಹಂಕದಲ್ಲಿನ ಕಚೇರಿ ಬಿಟ್ಟು, ಉಳಿದ ಎಲ್ಲವೂ ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ.

'ವಿಜಯನಗರದಲ್ಲಿರುವ ಉಪನೋಂದಣಾಧಿಕಾರಿ ಕಚೇರಿ ತುಂಬಾ ಚಿಕ್ಕದಾಗಿದೆ. ಕೋವಿಡ್ ಕಾಲದಲ್ಲಿ ಅಂತರ ಕಾಯ್ದುಕೊಳ್ಳುವುದು ಸಾಧ್ಯವಾಗುವುದೇ ಇಲ್ಲ. ಹೀಗಾಗಿ ರೋಗ ಹರಡುವ ಸಾಧ್ಯತೆ ಹೆಚ್ಚಿದೆ' ಎಂದು ಆಸ್ತಿ ನೋಂದಣಿಗೆ ಬಂದಿದ್ದ ಹಿರಿಯರೊಬ್ಬರು ಆತಂಕ ವ್ಯಕ್ತಪಡಿಸಿದರು.

ಅಂಕಿ-ಅಂಶಗಳು

- **₹900 ಕೋಟಿ** ಆಸ್ತಿ ನೋಂದಣಿಯಿಂದ 3ಂಗಳಿಗೆ ಬರುವ ಅಂದಾಜು ಆದಾಯ
- **₹2,300 ಕೋಟಿ** ಏಪ್ರಿಲ್‌ನಿಂದ ಈವರೆಗೆ ಬಂದ ಅಂದಾಜು ಆದಾಯ
- **288** ರಾಜ್ಯದಲ್ಲಿನ ಒಟ್ಟು ಆಸ್ತಿ ನೋಂದಣಿ ಕಚೇರಿಗಳು
- **105** ಬಾಡಿಗೆ ಕಟ್ಟಡದಲ್ಲಿರುವ ಕಚೇರಿಗಳು

'ಒಂದು ಆಸ್ತಿ ನೋಂದಣಿಗೆ ದಿನಗಟ್ಟಲೇ ಕಾಯಬೇಕಾಗುತ್ತದೆ. ಆದರೆ, ಈ ಕಚೇರಿಗಳಲ್ಲಿ ಸರಿಯಾಗಿ ಕುಳಿತುಕೊಳ್ಳಲೂ ವ್ಯವಸ್ಥೆ ಇಲ್ಲ' ಎಂದು ತಿಪ್ಪೇಶ್‌ಗೌಡ ಅಸಮಾಧಾನ ವ್ಯಕ್ತಪಡಿಸಿದರು.

'ನಿತ್ಯ ಸುಮಾರು 20ರಿಂದ 25 ಆಸ್ತಿ ನೋಂದಣಿಗಳು ನಡೆಯುತ್ತವೆ. ಒಂದೊಂದು ಆಸ್ತಿ ನೋಂದಣಿಗೆ ಕನಿಷ್ಠ ಐದಾರು ಜನ ಬರುತ್ತಾರೆ. ಕೋವಿಡ್ ಮಾರ್ಗಸೂಚಿ ಪಾಲನೆಗೆ ಎಲ್ಲ ಕ್ರಮಗಳನ್ನೂ ಕೈಗೊಂಡಿದ್ದೇವೆ. ಆದರೆ, ಕಟ್ಟಡವೇ ಚಿಕ್ಕದಾಗಿರುವುದರಿಂದ ಅಂತರ ನಿಯಮ ಪಾಲನೆ ಕಷ್ಟವಾಗಿದೆ' ಎಂದು ವಿಜಯನಗರ ಉಪನೋಂದಣಾಧಿಕಾರಿ ಸಲೀಂ ಹೇಳಿದರು.



ಬೆಂಗಳೂರಿನ ವಿಜಯನಗರದಲ್ಲಿರುವ ಉಪನೋಂದಣಾಧಿಕಾರಿಗಳ ಕಚೇರಿ ನೋಟ

ಖಾಲಿ ಮಾಡಬೇಕು: 'ಸ್ವಂತ ಕಟ್ಟಡ ಎಂದು ಪರಿಗಣಿಸುವ ಪೈಕಿ, ಬಹುತೇಕ ಕಚೇರಿಗಳು ಮಿನಿ ವಿಧಾನಸೌಧ ಅಥವಾ ತಹಶೀಲ್ದಾರ್ ಕಚೇರಿಗಳಲ್ಲಿವೆ. ತಹಶೀಲ್ದಾರ್‌ಗಳು ಇದ್ದಕ್ಕಿದ್ದಂತೆ ಕಚೇರಿ ಖಾಲಿ ಮಾಡಿಕೊಡಿ ಎಂದರೆ ನಾವು ಖಾಲಿ ಮಾಡಬೇಕು' ಎಂದು ಹೆಸರು ಬಹಿರಂಗಪಡಿಸಲು ಬಯಸದ ಅಧಿಕಾರಿಯೊಬ್ಬರು ಹೇಳಿದರು.

'ಈ ಹಿಂದೆ ಕಂದಾಯ ಭವನದ ಎಂಟನೇ ಮಹಡಿಯಲ್ಲಿ ಜಾಗ ನೀಡಿದ್ದರು. ವಾಹನ ನಿಲುಗಡೆ ಸಮಸ್ಯೆ ಸೇರಿದಂತೆ ಹಲವು ತೊಂದರೆಗಳ ಕಾರಣ ಖಾಲಿ ಮಾಡಿಕೊಂಡು ಹೋಗಿ ಎಂದರು. ನೂರಾರು ವರ್ಷಗಳ ಹಿಂದಿನ ದಾಖಲೆಗಳು ಕಚೇರಿಯಲ್ಲಿರುತ್ತವೆ. ಹೀಗೆ, ಪದೇ ಪದೇ ಬಾಡಿಗೆ ಕಟ್ಟಡಕ್ಕೆ ಸ್ಥಳಾಂತರಿಸಬೇಕಾಗುವುದರಿಂದ ದಾಖಲೆಗಳ ಸಂರಕ್ಷಣೆಯೂ ಕಷ್ಟವಾಗುತ್ತಿದೆ' ಎಂದು ಅವರು ಹೇಳಿದರು.

ಬೇಕು ಶಾಶ್ವತ ಪರಿಹಾರ: 'ಹಲವಾರು ಜನ ಆಸ್ತಿ ನೋಂದಣಿಗೆ ಬರುತ್ತಾರೆ. ಅವರಿಗೆ ಕುಳಿತುಕೊಳ್ಳಲು ಕುರ್ಚಿಯ ವ್ಯವಸ್ಥೆ ಕೂಡ ಇಲ್ಲ. ಈ ಕಾರಣಕ್ಕಾಗಿಯೇ ಎಷ್ಟೋ ಜನ ಗಲಾಟೆ ಮಾಡಿ ಹೋಗಿದ್ದಾರೆ' ಎಂದು ಉಪನೋಂದಣಾಧಿಕಾರಿಯೊಬ್ಬರು ಹೇಳಿದರು.

'ಪ್ರತಿ ತಹಶೀಲ್ದಾರ್ ಕಚೇರಿ ವ್ಯಾಪ್ತಿಯಲ್ಲಿ ಕನಿಷ್ಠ 5 ಗುಂಟೆ ಜಾಗ ನೀಡಿದರೂ ಒಳ್ಳೆಯ ಕಟ್ಟಡ ನಿರ್ಮಿಸಬಹುದು. ಸಾರ್ವಜನಿಕರಿಗೂ ಅನುಕೂಲವಾಗುತ್ತದೆಯಲ್ಲದೆ ಶಾಶ್ವತ ಪರಿಹಾರವೂ ಸಿಕ್ಕಂತಾಗುತ್ತದೆ' ಎಂದರು.

ಸುದ್ದಿ 2 ನಿಮಿಷ

'ಕಾಂಗ್ರೆಸ್‌ನಲ್ಲಿ ಹಳಬರು, ಹೊಸಬರೆಂಬ ಪ್ರಶ್ನೆ ಇಲ್ಲ'

ಬೆಂಗಳೂರು: 'ಕಾಂಗ್ರೆಸ್‌ನಲ್ಲಿ ಇನ್ನು ಹಳಬರು, ಹೊಸಬರು ಎಂಬ ಪ್ರಶ್ನೆ ಇಲ್ಲ. ಬೇಷರತ್ ಆಗಿ ದುಡಿಯಲು ಬಯಸುವವರನ್ನು ಪಕ್ಷಕ್ಕೆ ಸೇರಿಸಿಕೊಳ್ಳಲಾಗುವುದು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ದೇವನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಮತ್ತು ಜೆಡಿಎಸ್ ತ್ಯಜಿಸಿ ಬಂದವರನ್ನು ಪಕ್ಷಕ್ಕೆ ಸೋಮವಾರ ಬರಮಾಡಿಕೊಂಡ ಬಳಿಕ ಮಾತನಾಡಿದ ಅವರು, 'ಕಾಂಗ್ರೆಸ್ ದೇವಾಲಯಕ್ಕೆ ಬಂದು ಪಕ್ಷ ಸೇರಿರುವುದು ನಿಮ್ಮ ಭಾಗ್ಯ' ಎಂದರು.

'ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರಗಳಲ್ಲೂ ಪಕ್ಷವನ್ನು ಗೆಲ್ಲಿಸಬೇಕು. ಅದೇ ನಮ್ಮ ಗುರಿ. ಮುಂದಿನ ಚುನಾವಣೆಯಲ್ಲಿ 130 ಕ್ಷೇತ್ರ ಗೆಲ್ಲುವುದು ಮುಖ್ಯಮಂತ್ರಿ ಯಡಿಯೂರಪ್ಪ ಅವರ ಗುರಿ. ಆದರೆ, ನಮ್ಮದು ರಾಜ್ಯದ ಎಲ್ಲ 224 ಕ್ಷೇತ್ರಗಳನ್ನೂ ಗೆಲ್ಲುವುದು ಗುರಿ' ಎಂದರು.

'ನನ್ನ ಕ್ಷೇತ್ರದಲ್ಲಿ ಬಿಜೆಪಿ ನಾಯಕರು ಗೆಲ್ಲಲು ಪ್ರಯತ್ನಿಸಿದರೆ ತಪ್ಪಿಲ್ಲ. ಜೆಡಿಎಸ್‌ನವರು ಪ್ರಯತ್ನಿಸಿದರೂ ತಪ್ಪಿಲ್ಲ. ಹಾಗೆಂದು, ನಾವು ಯಡಿಯೂರಪ್ಪ, ಜಗದೀಶ ಶೆಟ್ಟರ್, ಉಪ ಮುಖ್ಯಮಂತ್ರಿಗಳ ಕ್ಷೇತ್ರಗಳಲ್ಲಿ ನಮ್ಮ ಕಾರ್ಯಕರ್ತರನ್ನು ಬಿಟ್ಟುಕೊಡಲು ಸಾಧ್ಯವೇ? ಅಲ್ಲಿ ನಾವ್ಯಾಕೆ ಗೆಲ್ಲಬಾರದು? ರಾಜಕಾರಣದಲ್ಲಿ ಏನು ಬೇಕಾದರೂ ಆಗಬಹುದು' ಎಂದರು.



ದೇವನಹಳ್ಳಿ ವಿವಿಧ ಪಕ್ಷಗಳ ಮುಖಂಡರಾದ ಚಿದಾನಂದ, ತುಂಗಭದ್ರಾ, ನಾಗರಾಜ್, ಮಂಜುನಾಥ್, ದೇವರಾಜ್, ಚೊಕ್ಕರೆಡ್ಡಿ, ರವಿ, ಬಸವರಾಜ್, ಪಿಳ್ಳಪ್ಪ, ಮುರಳೀಧರ ಮತ್ತಿತರ ಕಾಂಗ್ರೆಸ್ ಸೇರಿದರು.

ಎಂಎಸ್‌ಪಿ ಅಕ್ಕಿ ಸಾಗಣೆ: ತನಿಖೆಗೆ ಕಾಂಗ್ರೆಸ್ ಆಗ್ರಹ

ಬೆಂಗಳೂರು: ಬೆಂಬಲ ಬೆಲೆ ಯೋಜನೆಯಡಿ (ಎಂಎಸ್‌ಪಿ) ಖರೀದಿಸಿದ್ದ ಭತ್ತದಿಂದ ಪಡೆದ 14,344 ಟನ್ ಅಕ್ಕಿಯನ್ನು ನಿಯಮ ಪಾಲಿಸದೇ ಮಂಡ್ಯ ಜಿಲ್ಲೆಯ ಗಿರಣಿಗಳಿಂದ ಸಾಗಿಸಿರುವ ಕುರಿತು ಉನ್ನತ ಮಟ್ಟದ ತನಿಖೆ ನಡೆಸುವಂತೆ ರಾಜ್ಯ ಸರ್ಕಾರವನ್ನು ಕಾಂಗ್ರೆಸ್ ಒತ್ತಾಯಿಸಿದೆ.

'ಪ್ರಜಾವಾಣಿ'ಯ ಸೋಮವಾರದ ಸಂಚಿಕೆಯಲ್ಲಿ ಪ್ರಕಟವಾದ 'ಎಂಎಸ್‌ಪಿ ಅಕ್ಕಿ ಸಾಗಣೆಯಲ್ಲಿ ಅಕ್ರಮ?' ಎಂಬ ವರದಿಯನ್ನು ಉಲ್ಲೇಖಿಸಿ ಟ್ವೀಟ್ ಮಾಡಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, 'ಕಳೆದ ಬಾರಿಯೂ ಕೇಂದ್ರದಿಂದ ಬಂದ ಅಕ್ಕಿಯನ್ನು ಕಾಳಸಂತೆಯಲ್ಲಿ ಮಾರಲು ಪ್ರಯತ್ನಿಸಲಾಗಿತ್ತು. ಕಳ್ಳ ಲೆಕ್ಕದಿಂದ ಬಡವರ ಅಕ್ಕಿ ಕೊಳ್ಳೆ ಹೊಡೆಯುವವರ ವಿರುದ್ಧ ಸರ್ಕಾರ ಇನ್ನಾದರೂ ಕ್ರಮ ಕೈಗೊಳ್ಳುವುದೆ' ಎಂದು ಪ್ರಶ್ನಿಸಿದ್ದಾರೆ.

ಕೆಪಿಸಿಸಿ ಟ್ವಿಟರ್ ಖಾತೆಯಿಂದಲೂ ಪ್ರತ್ಯೇಕ ಟ್ವೀಟ್ ಮಾಡಿದ್ದು, 'ಕಾಂಗ್ರೆಸ್‌ನದ್ದು ಅನ್ನಭಾಗ್ಯ, ಬಿಜೆಪಿಯದ್ದು ಕನ್ನಭಾಗ್ಯ. ಬಿಜೆಪಿ ಆಡಳಿತದಲ್ಲಿ ಬಡವರ ಪಡಿತರ ಅಕ್ಕಿಯ ಕಳ್ಳಸಾಗಣೆ ಎಗ್ಗಿಲ್ಲದೇ ಸಾಗಿದ್ದರೂ ತಡೆಗಟ್ಟುವ ಯಾವ ಕ್ರಮವನ್ನೂ ಸರ್ಕಾರ ಕೈಗೊಂಡಿಲ್ಲ. ಸರ್ಕಾರದ ನಿರ್ಲಕ್ಷ್ಯ ನೋಡಿದರೆ ಇದರಲ್ಲಿ ಬಿಜೆಪಿಯವರ ಪಾಲುದಾರಿಕೆಯೂ ಇರುವಂತಿದೆ. ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರೇ ಕೂಡಲೇ ಈ ಕಳ್ಳದಂಧೆ ತಡೆಗಟ್ಟಿ' ಎಂದು ಒತ್ತಾಯಿಸಲಾಗಿದೆ.

ರಾಜಕಾರಣದ 'ಸೂತ್ರ' ಹಿಡಿದ ಸಂತೋಷ್?

ಒಂದನೇ ಪುಟದಿಂದ

ಪ್ರತಿಯೊಬ್ಬರಿಗೂ ಕರೆ ಮಾಡಿ ಸಂಪುಟ ಸೇರ್ಪಡೆಯ ಮಾಹಿತಿ ನೀಡುವ ಜವಾಬ್ದಾರಿ ಪಡೆದಿದ್ದ ಸಂತೋಷ್, ಪ್ರಮಾಣ ವಚನ ಸ್ವೀಕರಿಸುವವರೆಗೂ ವಿಷಯವನ್ನು ಗೋಪ್ಯವಾಗಿ ಇರಿಸುವಂತೆ ಬಹುತೇಕರಿಗೆ ಹೇಳುವ ಮೂಲಕ ನಿಗಾ ವಹಿಸಿದ್ದರು. ಪ್ರಮಾಣ ವಚನ ಸ್ವೀಕರಿಸಿದ ಮಾರನೇ ದಿನ ನೂತನ ಹಿರಿ- ಕಿರಿಯ ಸಚಿವರೆಲ್ಲರೂ ಮೊದಲು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರ ಬಳಿಗೆ ತೆರಳದೆ, ಅಶೋಕ ರಸ್ತೆಯಲ್ಲಿರುವ ಸಂತೋಷ್ ನಿವಾಸಕ್ಕೆ ಹೋಗಿ ಧನ್ಯವಾದ ಅರ್ಪಿಸಿ ಬಂದರು. ಇದು, ಬಿಜೆಪಿಯಲ್ಲಾಗುತ್ತಿರುವ ಹೊಸ ಬೆಳವಣಿಗೆಯ ಸೂಚನೆಯಂತಿದೆ ಎನ್ನುತ್ತವೆ ಆ ಪಕ್ಷದ ಮೂಲಗಳು.

ರಾಜ್ಯದವರಿಗೂ ಅಭಯ: ಕರ್ನಾಟಕವನ್ನು ಪ್ರತಿನಿಧಿಸುವ ಶೋಭಾ ಕರಂದ್ಲಾಜೆ, ರಾಜೀವ್ ಚಂದ್ರಶೇಖರ್, ಎ.ನಾರಾಯಣಸ್ವಾಮಿ ಮತ್ತು ಭಗವಂತ ಖೂಬಾ ಅವರಿಗೆ ಮೋದಿ ಸಂಪುಟದಲ್ಲಿ ರಾಜ್ಯ ಖಾತೆ ಸಚಿವ ಸ್ಥಾನ ದೊರೆಯುವಲ್ಲಿಯೂ ಇವರ ಪಾತ್ರವೇ ಪ್ರಧಾನವಾಗಿದೆ ಎನ್ನುತ್ತವೆ ಆ ಪಕ್ಷದ ಮೂಲಗಳು.

ಕೆಲವು ವರ್ಷಗಳಿಂದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರೊಂದಿಗಿನ ಭಿನ್ನಾಭಿಪ್ರಾಯದಿಂದಾಗಿ ಆಗಾಗ ಸುದ್ದಿಯಲ್ಲಿ ಇರುತ್ತಿದ್ದ ಇವರು, ಮಾಧ್ಯಮಗಳ ಎದುರೂ ಪ್ರತ್ಯಕ್ಷವಾಗದೇ, 'ತೆರೆಮರೆ'ಯಲ್ಲೇ ಕಾರ್ಯತಂತ್ರ ರೂಪಿಸುವುದಕ್ಕೆ ಹೆಸರಾದವರು. ಈಗ ಮತ್ತೂ ಒಂದು ಹೆಜ್ಜೆ ಮುಂದೆ ಹೋಗಿರುವ ಸಂತೋಷ್, ಕರ್ನಾಟಕ ರಾಜಕಾರಣದ ವಿಷಯದಲ್ಲಿ ಇಡಲಿರುವ ಮುಂದಿನ ಹೆಜ್ಜೆ ಯಾವುದು ಎಂಬುದು ಅನೇಕರ ಕುತೂಹಲಕ್ಕೆ ಕಾರಣವಾಗಿರುವುದಂತೂ ಸತ್ಯ.

ಆರೋಪಿ ಹೇಳಿಕೆಯ ಬೆನ್ನು ಬಿದ್ದಿರುವ ನಟ ದರ್ಶನ್

ವಂಚನೆ ಪ್ರಕರಣ; ನಿರ್ಮಾಪಕ ಉಮಾಪತಿ ಕೈವಾಡ?

ಪ್ರಜಾವಾಣಿ ವಾರ್ತೆ

ಮೈಸೂರು: 'ನನ್ನ ಹೆಸರು ಹೇಳಿಕೊಂಡೇ ನನ್ನ ಮಿತ್ರ ಹರ್ಷ ಮೆಲಂತಾ ಅವರನ್ನು ₹ 25 ಲಕ್ಷಕ್ಕಾಗಿ ಬ್ಲಾಕ್‌ಮೇಲ್ ಮಾಡಲು ನಿರ್ಮಾಪಕ ಉಮಾಪತಿ ಕುಮ್ಮಕ್ಕು ನೀಡಿದ್ದರು ಎಂದು ಆರೋಪಿ ಅರುಣಕುಮಾರಿ ನೀಡಿರುವ ಹೇಳಿಕೆಯನ್ನು ಪೊಲೀಸರು ಗಂಭೀರವಾಗಿ ಪರಿಗಣಿಸಬೇಕು. ಉಮಾಪತಿಯವರೂ ಅದಕ್ಕೆ ಸ್ಪಷ್ಟನೆ ನೀಡಬೇಕು' ಎಂದು ನಟ ದರ್ಶನ್ ಆಗ್ರಹಿಸಿದರು.

ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿ ನಡೆಸಿದ ಅವರು, 'ಆರೋಪಿ ಮತ್ತು ಉಮಾಪತಿ ನಡುವೆ ವಿನಿಯಮವಾಗಿರುವ ವಾಟ್ಸ್‌ಆ್ಯಪ್ ಸಂದೇಶಗಳು ದೊರಕಿವೆ. ಆದರೆ ಅವುಗಳನ್ನು ಬಹಿರಂಗಪಡಿಸುವುದಿಲ್ಲ, ಪೊಲೀಸರಿಗಷ್ಟೇ ನೀಡಲಾಗುವುದು' ಎಂದರು.

'ಉಮಾಪತಿಯವರ ಮೂಲಕವೇ ಪರಿಚಯವಾಗಿದ್ದ ಅರುಣಕುಮಾರಿ ತಮ್ಮನ್ನು ಬ್ಯಾಂಕ್ ಅಧಿಕಾರಿ ಎಂದು ಹೇಳಿಕೊಂಡಿದ್ದರು. ಜೂನ್ 13 ರಂದು ಬೆಂಗಳೂರಿನ ನನ್ನ ಮನೆಗೆ ಬಂದಿದ್ದರು. ನಿಮ್ಮ ಸ್ನೇಹಿತರಾದ ರಾಕೇಶ್ ಹಾಗೂ ಹರ್ಷ ಮೆಲಂತಾ ಅವರು ಸಲ್ಲಿಸಿರುವ ₹ 25 ಕೋಟಿ ಸಾಲದ ಅರ್ಜಿಗೆ ನೀವು ಜಾಮೀನು ಹಾಕಿದ್ದೀರಿ ಎಂದು ಹೇಳಿದ್ದರು. ಸಾಲ ನೀಡುವ ಮುನ್ನ ನಿಮ್ಮ ಮೈಸೂರಿನ ತೋಟವನ್ನು ನೋಡಬೇಕೆಂದಿದ್ದರು. ಆದರೆ ನಾನು ಯಾವ ಸಾಲದ ಅರ್ಜಿಗೂ ಜಾಮೀನು ಹಾಕಿರಲಿಲ್ಲ' ಎಂದು ದರ್ಶನ್ ಸ್ಪಷ್ಟಪಡಿಸಿದರು.

'16ರಂದು ಆರೋಪಿ ತೋಟಕ್ಕೆ ಬಂದು ಪರಿಶೀಲನೆಯನ್ನು ನಡೆಸಿದ ಬಳಿಕ, ಅನುಮಾನಗೊಂಡ ನಾನು ಬೆಂಗಳೂರಿನ ರಾಜರಾಜೇಶ್ವರಿ ನಗರ ಠಾಣೆಗೆ ದೂರು ನೀಡಿದ್ದೆ. ನಂತರ ಪೊಲೀಸರಿಗೆ ಹೇಳಿಕೆ ನೀಡಿದ ಆರೋಪಿಯು, ರಾಕೇಶ್ ಹಾಗೂ ಹರ್ಷ ಅವರ ಕುಮ್ಮಕ್ಕಿನಿಂದಲೇ ಬ್ಲಾಕ್‌ಮೇಲ್ ಪ್ರಯತ್ನ ಮಾಡಿದ್ದಾಗಿ ಹೇಳಿಕೆ ನೀಡಿದ್ದರು. ಆದರೆ, ಹರ್ಷ ಅವರು ದಾಖಲಿಸಿದ್ದ ದೂರಿನ ಮೇರೆಗೆ ಮೈಸೂರು ಪೊಲೀಸರ ಮುಂದೆ ಹಾಜರಾಗಿ, ಉಮಾಪತಿಯವರು ಕುಮ್ಮಕ್ಕು ನೀಡಿದ್ದರು ಎಂದು ಹೇಳಿದ್ದಾರೆ. ಇಡೀ ಪ್ರಕರಣ ಗೊಂದಲಮಯವಾಗಿದೆ. ಇದು ಸ್ನೇಹ ಕದಡುವ ಪ್ರಯತ್ನವೂ ಆಗಿರಬಹುದು' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ರಾಬರ್ಟ್ ಸಿನಿಮಾದ ಆಡಿಯೊ ಬಿಡುಗಡೆ ವೇಳೆ ಉಮಾಪತಿಯೊಂದಿಗೆ ವೈಮನಸ್ಯ ಉಂಟಾಗಿತ್ತು. ಆದರೆ ಅಲ್ಲಿಗೇ ಮುಗಿದಿತ್ತು' ಎಂದರು.

ಯಾರು ಅರುಣಕುಮಾರಿ?: 'ದ್ವಿತೀಯ ಪಿಯುಸಿ ಓದಿರುವ ಅರುಣಕುಮಾರಿಯು ಹರ್ಷ ಮೆಲಂತಾ ಅವರ ಕ್ಲಬ್‌ನ ಭದ್ರತಾ ಸಿಬ್ಬಂದಿ ಕುಮಾರ್ ಎಂಬುವವರ ಪತ್ನಿ. 8 ವರ್ಷಗಳಿಂದ ಪತಿ, ಪತ್ನಿ ಬೇರೆ ಬೇರೆಯಾಗಿದ್ದಾರೆ' ಎಂದು ದರ್ಶನ್ ಹೇಳಿದರು.

ಎಸಿಪಿಯಿಂದ ತನಿಖೆ: ಎನ್.ಆರ್.ವಿಭಾಗದ ಎಸಿಪಿ ಶಿವಶಂಕರ್ ಅವರು ಹರ್ಷ ಅವರ ದೂರಿನ ತನಿಖೆ ನಡೆಸಿದ್ದಾರೆ.



ಮೈಸೂರಿನಲ್ಲಿ ನಟ ದರ್ಶನ್ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು

ಮುಖ್ಯಾಂಶಗಳು

- ಸುದ್ದಿಗೋಷ್ಠಿಯಲ್ಲಿ ಅಸಮಾಧಾನ ಹೊರಹಾಕಿದ ದರ್ಶನ್
- ಗೊಂದಲಮಯ ಹೇಳಿಕೆ ನೀಡಿರುವ ಆರೋಪಿ

ಪ್ರಕರಣದಲ್ಲಿ ಯಾರನ್ನೂ ವಶಕ್ಕೆ ತೆಗೆದುಕೊಂಡಿಲ್ಲ, ಬಂಧಿಸಿಲ್ಲ. ತನಿಖೆ ಮುಂದುವರಿದಿದೆ'

ಪ್ರದೀಪ್ ಗುಂಟಿ, ಡಿಸಿಪಿ ಮೈಸೂರು

ನನ್ನನ್ನು ಸಿಕ್ಕಿಸಲಾಗುತ್ತಿದೆ: ಉಮಾಪತಿ

ಬೆಂಗಳೂರು: 'ನಾನು ತಪ್ಪು ಮಾಡಿಲ್ಲ ಎಂದರೆ ನನಗೆ ಯಾರೂ ಸಮಯ ಕೊಡುವ ಅವಶ್ಯಕತೆ ಇಲ್ಲ. ನನ್ನ ಹಾಗೂ ದರ್ಶನ್ ಅವರ ನಡುವಿನ ಒಡನಾಟ ಚೆನ್ನಾಗಿಯೇ ಇದೆ. ದರ್ಶನ್ ಅವರು ಒಳಗೊಂದು ಹೊರಗೊಂದು ಇಲ್ಲ. ಅವರು ಏನಿದ್ದರೂ ನೇರವಾಗಿಯೇ ಹೇಳುತ್ತಾರೆ. ನನ್ನ ಸ್ವಭಾವವೂ ಇದೆ. ನಮ್ಮಿಬ್ಬರು ನಡುವಿನ ಸಂಬಂಧ ಅಣ್ಣ-ತಮ್ಮಂದಿರಿಗಿಂತ ಹೆಚ್ಚಾಗಿದೆ' ಎಂದು ನಿರ್ಮಾಪಕ ಉಮಾಪತಿ ಶ್ರೀನಿವಾಸಗೌಡ ಹೇಳಿದ್ದಾರೆ.


ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಇನ್ನೊಬ್ಬರ ಆಸ್ತಿ ಹೊಡೆಯುವ ದರ್ದು ನನಗಿಲ್ಲ. ದರ್ಶನ್ ಅವರು ಕ್ಲೀನ್‌ಚಿಟ್ ಕೊಟ್ಟರೂ, ಪೊಲೀಸರು ಅವರನ್ನೇನೂ ಬಿಟ್ಟು ವಿಚಾರಣೆ ನಡೆಸುವುದಿಲ್ಲ. ಎಲ್ಲರಿಗೂ ಕಾನೂನು ಒಂದೇ. ಪೊಲೀಸ್ ತನಿಖೆಯಿಂದ ಎಲ್ಲವೂ ಬಹಿರಂಗವಾಗಲಿ. ಈ ಪ್ರಕರಣದಲ್ಲಿ ನನ್ನನ್ನು ಸಿಕ್ಕಿಸಲಾಗುತ್ತಿದೆ. ನಾನು ಇಷ್ಟೊಂದು ಸಮಾಧಾನವಾಗಿ ಎಲ್ಲವನ್ನೂ ಏಕೆ ಹೇಳುತ್ತಿದ್ದೇನೆ ಎಂದರೆ, ಅದು ದರ್ಶನ್ ಅವರ ಮೇಲಿನ ಪ್ರೀತಿಯಿಂದಷ್ಟೇ. ಈ ವಿಚಾರದಲ್ಲಿ ಹೆಚ್ಚು ಮಾತನಾಡಿದರೆ ಪೊಲೀಸ್ ತನಿಖೆ ದಿಕ್ಕುತಪ್ಪಿಸಿದಂತಾಗುತ್ತದೆ. ನಾವು ಕಾನೂನಿಗಿಂತ ದೊಡ್ಡವರಲ್ಲ. ಆರೋಪ ಸಾಬೀತಾದ ಮೇಲಷ್ಟೇ ಅಪರಾಧಿ ಆಗುವುದು. ದರ್ಶನ್ ಅವರನ್ನು ದೂರ ಮಾಡಿ ನನಗೇನೂ ಲಾಭವಿಲ್ಲ. ಇಂತಹ ಕೀಳುಮಟ್ಟದವನು ನಾನಲ್ಲ. ದರ್ಶನ್ ಅವರಿಗೆ ಬೆಲೆ ಕೊಟ್ಟು ನಾನು ಮಾತನಾಡುತ್ತಿದ್ದೇನೆ' ಎಂದಿದ್ದಾರೆ.

ಅಪರಾಧ ಸ್ಥಳ ಪರಿಶೀಲನಾಧಿಕಾರಿ ಹುದ್ದೆ ಸೃಷ್ಟಿ: ಬೊಮ್ಮಾಯಿ

ಬೆಂಗಳೂರು: ವಿದೇಶಗಳಲ್ಲಿ ಇರುವಂತೆ 'ಅಪರಾಧ ಸ್ಥಳ ಪರಿಶೀಲನಾಧಿಕಾರಿ' ಎಂಬ ಹೊಸ ಹುದ್ದೆಗಳನ್ನು ರಾಜ್ಯ ಪೊಲೀಸ್ ಇಲಾಖೆಯಲ್ಲಿ ಸೃಷ್ಟಿಸಲಾಗಿದೆ ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಅಪರಾಧ ಪ್ರಕರಣಗಳ ತ್ವರಿತ ಪತ್ತೆ ಹಾಗೂ ಅಪರಾಧಿಗಳ ಪತ್ತೆಗಾಗಿಯೇ ಈ ರೀತಿಯ ಹುದ್ದೆಯನ್ನು ಸೃಷ್ಟಿಸಿರುವುದು ದೇಶದಲ್ಲೇ ಮೊದಲು. ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಮಂಗಳವಾರ ರಾಜ್ಯ ಪೊಲೀಸ್ ಮಹಾ ನಿರ್ದೇಶಕರಿಗೆ 'ಅಪರಾಧ ಸ್ಥಳ ಪರಿಶೀಲನಾಧಿಕಾರಿ' ಹುದ್ದೆಗಳ ಆದೇಶ ಪ್ರತಿಯನ್ನು ನೀಡಲಿದ್ದಾರೆ ಎಂದು ಅವರು ತಿಳಿಸಿದರು.

ಅಪರಾಧ ನಡೆದ ಸ್ಥಳವನ್ನು ವೈಜ್ಞಾನಿಕವಾಗಿ ಪರಿಶೀಲಿಸಿ, ಅಲ್ಲಿ ಎಲ್ಲ ರೀತಿಯ ಸಾಕ್ಷ್ಯವನ್ನು ಸಂಗ್ರಹಿಸಿ ಅಪರಾಧಿಯನ್ನು ಪತ್ತೆ ಮಾಡುವಲ್ಲಿ 'ಅಪರಾಧ ಸ್ಥಳ ಪರಿಶೀಲನಾಧಿಕಾರಿ' (scene of crime officer) ಪರಿಣಿತಿ ಹೊಂದಿರುತ್ತಾರೆ. ಮೊದಲ ಹಂತದಲ್ಲಿ 206 ಹುದ್ದೆಗಳಿಗೆ ಅನುಮೋದನೆ ನೀಡಲಾಗಿದೆ ಎಂದರು.



'ಈವರೆಗೆ ಸಾಕ್ಷ್ಯ ಸಂಗ್ರಹಿಸುವ ಕೆಲಸವನ್ನು ಸ್ಥಳೀಯಅಧಿಕಾರಿಗಳೇಮಾಡುತ್ತಿದ್ದರು. ಗಂಭೀರ ಸ್ವರೂಪದ ಅಪರಾಧಗಳಲ್ಲಿ ಇನ್ನು ಮುಂದೆ ಈ ತಂಡವೇ ಅಪರಾಧ ಕೃತ್ಯ ನಡೆದ ಸ್ಥಳಗಳಿಗೆ ಮೊದಲು ಭೇಟಿ ನೀಡಲಿದೆ. ಅಲ್ಲಿನ ಎಲ್ಲ ಸಾಕ್ಷಾಧಾರಗಳ ಸಂರಕ್ಷಣೆ, ಅವುಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಸುರಕ್ಷಿತವಾಗಿ ಕಳುಹಿಸಿಕೊಡುವುದು, ತನಿಖಾಧಿಕಾರಿಗೆ ಆ ಸಾಕ್ಷಾಧಾರಗಳನ್ನು ಒದಗಿಸುವುದು ಸೇರಿದಂತೆ ಇತರ ಅವಶ್ಯ ಕರ್ತವ್ಯಗಳನ್ನು ಮಾಡುತ್ತಾ ಅಪರಾಧಿಗಳನ್ನು ಅತ್ಯಂತ ಶೀಘ್ರದಲ್ಲಿ ಪತ್ತೆ ಮಾಡಲು ಮೂಲಭೂತವಾಗಿ ಬೇಕಾಗುವ ಎಲ್ಲ ಕೆಲಸ ಕಾರ್ಯಗಳನ್ನು ಈ ಅಧಿಕಾರಿಗಳು ಮಾಡುತ್ತಾರೆ' ಎಂದು ವಿವರಿಸಿದರು.

ಪಕ್ಷದಲ್ಲಿ 'ಸ್ತ್ರೀ ಶಕ್ತಿ'ಗೆ ಬಲ: ಕಾಂಗ್ರೆಸ್ ಕಾರ್ಯತಂತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳಾ ಸಮುದಾಯವನ್ನು ಹೆಚ್ಚಿನ ಸಂಖ್ಯೆಯಲ್ಲಿ ಪಕ್ಷದತ್ತ ಸೆಳೆಯಲು ಮುಂದಾಗಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಈ ಉದ್ದೇಶದಿಂದ ರಚಿಸಿರುವ ಸ್ತ್ರೀ ಶಕ್ತಿ ಸಂಘಟನಾ ಸಮಿತಿಯ ಜತೆ ಸೋಮವಾರ ಸುದೀರ್ಘ ಸಭೆ ನಡೆಸಿದರು.

ಮಾಜಿ ಸಚಿವೆ ಉಮಾಶ್ರೀ ಅಧ್ಯಕ್ಷತೆಯಲ್ಲಿ ರಚನೆಯಾಗಿರುವ 28 ಮಹಿಳಾ ಸದಸ್ಯರ ಈ ಸಮಿತಿ, ಮುಂದಿನ ದಿನಗಳಲ್ಲಿ ರಾಜ್ಯದಾದ್ಯಂತ ಪ್ರವಾಸ ಕೈಗೊಂಡು, ಪಕ್ಷದ ಮಹಿಳಾ ಕಾರ್ಯಕರ್ತರ ಒಗ್ಗೂಡಿಸುವಿಕೆ, ವಿಶೇಷ ಸ್ತ್ರೀ ಶಕ್ತಿ ಸಂಘಟನೆಗಳ ರಚನೆ ಮತ್ತು ಇರುವ ಸಂಘಟನೆಗಳ ಬಲವರ್ಧನೆಗೆ ಶ್ರಮಿಸಲು ಉದ್ದೇಶಿಸಿದೆ.



ಪಕ್ಷದ ಸ್ತ್ರೀ ಶಕ್ತಿ ಸಂಘಟನಾ ಸಮಿತಿ ಸದಸ್ಯರ ಜೊತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸೋಮವಾರ ಸಭೆ ನಡೆಸಿದರು. ಕಾರ್ಯಾಧ್ಯಕ್ಷರಾಗಿರುವ ರಾಮಲಿಂಗಾರೆಡ್ಡಿ, ಸಲೀಂ ಅಹ್ಮದ್ ಇದ್ದರು

ಅಲ್ಲದೆ, ಕಾಂಗ್ರೆಸ್ ಅಧಿಕಾರದಲ್ಲಿದ್ದ ಸಂದರ್ಭ ರಚನೆಯಾಗಿದ್ದ ಸ್ತ್ರೀಶಕ್ತಿ ಸಂಘಟನೆಗಳಿಗೆ ಇನ್ನಷ್ಟು ಬಲ ತುಂಬಲು ಮತ್ತು ಮುಂದಿನ ಚುನಾವಣೆಗೆ ಮಹಿಳಾ ಮತದಾರರ ಸಂಖ್ಯೆ ಹೆಚ್ಚಿಸಿಕೊಳ್ಳಲು ಕಾರ್ಯಪ್ರವೃತ್ತವಾಗಲಿದೆ.

ಸಭೆಯಲ್ಲಿ ಮಾತನಾಡಿದ ಡಿ.ಕೆ. ಶಿವಕುಮಾರ್, 'ವಿವಿಧ ಕ್ಷೇತ್ರಗಳಲ್ಲಿರುವ ಯುವ ಸಾಧಕಿಯರನ್ನು ಗುರುತಿಸಿ, ಸೆಳೆಯುವ ಜೊತೆಗೆ ಪಕ್ಷಕ್ಕೆ ತಾರಾ ಮೆರುಗು ನೀಡಬೇಕು. ವಿಧಾನಸಭೆ ಚುನಾವಣೆಯ ವೇಳೆಗೆ ಪಕ್ಷದಲ್ಲಿ ಮಹಿಳಾ ಪ್ರಾಬಲ್ಯ ವೃದ್ಧಿಯಾಗಬೇಕು. ಇರುವ ಪಕ್ಷದ ಕಾರ್ಯಕರ್ತೆಯರನ್ನು ಹುರಿದುಂಬಿಸುವ ಜತೆಗೆ ಹೊಸಬರನ್ನು ಸೆಳೆಯುವ ಕಾರ್ಯ ಮಾಡಬೇಕು. ಇದೊಂದು ಸವಾಲು ಎಂಬಂತೆ ಸ್ವೀಕರಿಸಿ ಕಾರ್ಯನಿರ್ವಹಿಸಬೇಕು. ಸಮಿತಿಯಲ್ಲಿ ಯಾರು ಯಾವ ರೀತಿ ಕಾರ್ಯನಿರ್ವಹಿಸುತ್ತಾರೆ ಎಂಬುದನ್ನು ಗಮನಿಸಿ ಮುಂದಿನ ದಿನಗಳಲ್ಲಿ ಪಕ್ಷದಲ್ಲಿ ಹೆಚ್ಚಿನ ಅಧಿಕಾರ ನೀಡಲಾಗುವುದು' ಎಂದರು.

ಕೆಪಿಸಿಸಿ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಕಾರ್ಯಾಧ್ಯಕ್ಷರಾದ ರಾಮಲಿಂಗಾ ರೆಡ್ಡಿ, ಸಲೀಂ ಅಹಮದ್, ಧ್ರುವನಾರಾಯಣ್, ಮಹಿಳಾ ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷೆ ಪುಷ್ಪಾ ಅಮರನಾಥ್, ಮಾಜಿ ಸಚಿವರಾದ ಮೋಟಮ್ಮ, ರಾಣಿ ಸತೀಶ್, ಸುಮಾ ವಸಂತ್, ಉಮಾಶ್ರೀ, ಜಯಮಾಲಾ, ಶಾಸಕರಾದ ಲಕ್ಷ್ಮಿ ಹೆಬ್ಬಾಳ್ಕರ್, ರೂಪ ಶಶಿಧರ್, ಕುಸುಮಾ ಶಿವಳ್ಳಿ, ಮುಖಂಡರಾದ ಮಲ್ಲಾಜಮ್ಮ, ವಾಸಂತಿ ಶಿವಣ್ಣ, ಕುಸುಮಾ ಎಚ್, ಅಕ್ಕೈ ಪದ್ಮಶಾಲಿ ಇದ್ದರು.

ಆರೋಗ್ಯ ಇಲಾಖೆ ನೌಕರರ ಸಂಘದ ಅಧ್ಯಕ್ಷರಾಗಿ ಆರ್. ಶ್ರೀನಿವಾಸ್

ಬೆಂಗಳೂರು: ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ ನೌಕರರ ಕೇಂದ್ರ ಸಂಘದ ಅಧ್ಯಕ್ಷರಾಗಿ ಆರ್. ಶ್ರೀನಿವಾಸ್ ಆಯ್ಕೆಯಾಗಿದ್ದಾರೆ.

ಜೂನ್ 28ರಂದು ನಡೆದ ಸಂಘದ ಕಾರ್ಯಕಾರಿ ಸಮಿತಿ ಸಭೆಯಲ್ಲಿ 2021ರಿಂದ 2026ರವರೆಗಿನ ಅವಧಿಗೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ ಎಂದು ಸಂಘದ ಪ್ರಕಟಣೆ ತಿಳಿಸಿದೆ.

ಪದವಿ ಕೋರ್ಸ್‌ಗಳ ಶುಲ್ಕ ಕಡಿತಕ್ಕೆ ಎಸ್‌ಐಓ ಆಗ್ರಹ

ಬೆಂಗಳೂರು: ಎಂಜಿನಿಯರಿಂಗ್ ಕೋರ್ಸ್‌ಗಳೂ ಸೇರಿದಂತೆ ಎಲ್ಲ ಪದವಿ, ಸ್ನಾತಕೋತ್ತರ ಪದವಿ ಕೋರ್ಸ್‌ಗಳ ವಾರ್ಷಿಕ ಶುಲ್ಕ, ಪರೀಕ್ಷಾ ಶುಲ್ಕಗಳಲ್ಲಿ ಶೇಕಡ 50ರಷ್ಟು ಕಡಿತಗೊಳಿಸುವಂತೆ ಸ್ಟೂಡೆಂಟ್ ಇಸ್ಲಾಮಿಕ್ ಆರ್ಗನೈಜೇಷನ್ (ಎಸ್‌ಐಓ) ರಾಜ್ಯ ಘಟಕ ಸರ್ಕಾರವನ್ನು ಒತ್ತಾಯಿಸಿದೆ.

'ಆರ್ಥಿಕ ಮತ್ತು ಸಾಮಾಜಿಕವಾಗಿ ಹಿಂದುಳಿದಿರುವ ಎಲ್ಲ ವಿದ್ಯಾರ್ಥಿಗಳ ಶುಲ್ಕ ಕಡಿತ ಮಾಡಬೇಕು. ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ವಿಶೇಷ ವಿದ್ಯಾರ್ಥಿವೇತನ ನೀಡಬೇಕು. ವಿದ್ಯಾರ್ಥಿಗಳ ಬಸ್ ಪಾಸ್ ದರವನ್ನು ಅರ್ಧದಷ್ಟು ಕಡಿಮೆ ಮಾಡಬೇಕು. ಕೋವಿಡ್‌ನಿಂದ ಅನಾಥರಾದ ವಿದ್ಯಾರ್ಥಿಗಳಿಗೆ ವಿಶೇಷ ನೆರವು ನೀಡಬೇಕು' ಎಂದು ಎಸ್‌ಐಓ ರಾಜ್ಯ ಘಟಕದ ಕಾರ್ಯದರ್ಶಿ ಮಹಮ್ಮದ್ ಪೀರ್ ಲಟಗೇರಿ ಪತ್ರಿಕಾ ಹೇಳಿಕೆಯಲ್ಲಿ ಆಗ್ರಹಿಸಿದ್ದಾರೆ. ದ್ವಿತೀಯ ಪಿಯುಸಿ ಪರೀಕ್ಷೆ ನಡೆಯದೇ ಇರುವುದರಿಂದ ಸಿಇಟಿ ಪರೀಕ್ಷೆ ಆಧಾರದಲ್ಲಿ ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶ ನೀಡುವ ವಿಚಾರದಲ್ಲಿ ಇರುವ ಗೊಂದಲಗಳನ್ನು ನಿವಾರಿಸಬೇಕು.

ಈ ಕುರಿತು ವಿದ್ಯಾರ್ಥಿಗಳಿಗೆ ಸ್ಪಷ್ಟ ಚಿತ್ರಣ ನೀಡಬೇಕು. ಸಿಇಟಿ ಪರೀಕ್ಷೆಗೆ ಹೆಚ್ಚಿನ ಕೇಂದ್ರಗಳನ್ನು ತೆರೆಯಬೇಕು. ಪದವಿ ವಿದ್ಯಾರ್ಥಿಗಳಿಗೆ ಪೂರ್ಣ ಪ್ರಮಾಣದಲ್ಲಿ ಆನ್‌ಲೈನ್ ತರಗತಿಗಳು ನಡೆದಿಲ್ಲ. ಈ ಕಾರಣದಿಂದ ಸೇತುಬಂಧ ಕಾರ್ಯಕ್ರಮ ರೂಪಿಸಬೇಕು ಎಂದು ಒತ್ತಾಯಿಸಿದ್ದಾರೆ.

'ದ್ವೇಷಪೂರಿತ ಸಂದೇಶಗಳ ಮೇಲೆ ಹೊಸ ಐಟಿ ಕಾಯ್ದೆ ನಿಗಾ'


ಪ್ರಜಾವಾಣಿ ವಾರ್ತೆ

ನವದೆಹಲಿ: ಸಾಮಾಜಿಕ ಮಾಧ್ಯಮಗಳ ಮೂಲಕ ಹಬ್ಬಿಸುವ ದ್ವೇಷಪೂರಿತ ಹೇಳಿಕೆ/ಪ್ರಚೋದನಕಾರಿ ಸಂದೇಶಗಳ ಬಗ್ಗೆ, ಮಾಹಿತಿ ತಂತ್ರಜ್ಞಾನದ ಕಾಯ್ದೆಯ ಹೊಸ ನಿಯಮಗಳು ನಿಗಾ ವಹಿಸುತ್ತವೆ ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

ಧಾರ್ಮಿಕ ಭಾವನೆಗಳಿಗೆ ಧಕ್ಕೆಯಾಗುವಂಥ ಸಂದೇಶಗಳನ್ನು ಹಾಕುವ ಟ್ವಿಟರ್ ಬಳಕೆದಾರರು ಮತ್ತು ಟ್ವಿಟರ್ ವಿರುದ್ಧ ಸಿಬಿಐ ಅಥವಾ ಎನ್‌ಐಎ ತನಿಖೆಗೆ ಸೂಚಿಸುವಂತೆ ಆಗ್ರಹಿಸಿ ಖಾಜಾ ಐಜುದ್ದೀನ್ ಎಂಬ ವಕೀಲರು ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಪೀಠ, 'ಮಾಹಿತಿ ತಂತ್ರಜ್ಞಾನದ ಇತ್ತೀಚಿನ ನಿಯಮಗಳನ್ನು ನೀವು ಗಮನಿಸಿಲ್ಲವೇ' ಎಂದು ಅರ್ಜಿದಾರರನ್ನು ಪ್ರಶ್ನಿಸಿತು.

ಕೊರೊನಾ ವೈರಸ್ ಸೋಂಕು ಹೆಚ್ಚಲು ಕಾರಣವಾಯಿತು ಎಂದು ಆರೋಪಿಸಿ ಮಾಧ್ಯಮಗಳಲ್ಲಿ ವರದಿಯಾದ ನವದೆಹಲಿಯ ನಿಜಾಮುದ್ದೀನ್‌ನಲ್ಲಿ ತಬ್ಲೀಗಿ ಜಮಾತ್‌ನಲ್ಲಿನ ಘಟನೆಯನ್ನು ಉಲ್ಲೇಖಿಸಿ ಅರ್ಜಿ ಸಲ್ಲಿಸಲಾಗಿತ್ತು.

'ಇದು ಈಗಾಗಲೇ ಮುಗಿದು ಹೋದ ಅಧ್ಯಾಯ. ಅದನ್ನೇಕೆ ನೀವು ಮತ್ತೆ ಕೆದಕುತ್ತೀರಿ? ನ್ಯಾಯಾಲಯದ ಮುಂದೆ ಇನ್ನೂ ಸಾಕಷ್ಟು ಅರ್ಜಿಗಳಿವೆ' ಎಂದು ಮುಖ್ಯ ನ್ಯಾಯಮೂರ್ತಿ ಎನ್. ವಿ.ರಮಣ ನೇತೃತ್ವದ ನ್ಯಾಯಪೀಠ ಹೇಳಿತು.



ಇದಕ್ಕೆ ಪ್ರತಿಕ್ರಿಯಿಸಿದ ಅರ್ಜಿದಾರರು, ತಮ್ಮ ಅರ್ಜಿ ಕೂಡ ನಿರ್ದಿಷ್ಟ ಧರ್ಮವನ್ನು ಗುರಿಯಾಗಿಸಿ, ಸಾಮಾಜಿಕ ಮಾಧ್ಯಮಗಳಲ್ಲಿ ಧಾರ್ಮಿಕ ವೈಷಮ್ಯ ಹೆಚ್ಚಿಸುವಂಥ ಸಂದೇಶಗಳಂಥ ಪ್ರಮುಖ ಅಂಶಗಳನ್ನು ಒಳಗೊಂಡಿದ್ದಾಗಿ ವಾದಿಸಿದರು.

ಹೊಸ ಐಟಿ ಕಾಯ್ದೆಯು ಇಂಥ ವಿಷಯಗಳ ಬಗ್ಗೆ ನಿಗಾ ವಹಿಸಲಿದೆ ಎಂದು ಹೇಳಿದ ನ್ಯಾಯಪೀಠ, ಹೊಸ ನಿಯಮಗಳನ್ನು ಅಧ್ಯಯನ ಮಾಡುವಂತೆ ಅರ್ಜಿದಾರರಿಗೆ ಸೂಚಿಸಿ, ವಾರದ ಬಳಿಕ ವಿಚಾರಣೆಯನ್ನು ಮುಂದುವರಿಸುವುದಾಗಿ ಹೇಳಿತು.

ಕೋವಿಡ್ 3ನೇ ಅಲೆಯ ತೂಗುಗತ್ತಿ

ಒಂದನೇ ಪುಟದಿಂದ...

'ಇದರಡಿ ಆರೋಗ್ಯ ಮೂಲಸೌಕರ್ಯ, ಗ್ರಾಮೀಣ ಆರೋಗ್ಯ ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸುವ ಕಾರ್ಯಕ್ಕೆ ಚಾಲನೆ ನೀಡಲಾಗಿದೆ' ಎಂದೂ ತಿಳಿಸಿದರು.

'ಪ್ರತಿಯೊಂದು ತಾಲ್ಲೂಕು ಆಸ್ಪತ್ರೆಗಳಲ್ಲೂ 50 ಹಾಸಿಗೆಗಳ ಐಸಿಯುಗಳ (ತೀವ್ರ ನಿಗಾ ಘಟಕ) ಸ್ಥಾಪನೆ, ಜಿಲ್ಲಾ ಕೇಂದ್ರಗಳಲ್ಲಿ ತಲಾ 100 ಹಾಸಿಗೆಗಳ ಐಸಿಯುಗಳ ಸ್ಥಾಪಿಸಲಾಗುವುದು. ಜತೆಗೆ ವೈದ್ಯಕೀಯ ಆಮ್ಲಜನಕ ತಯಾರಿಕಾ ಘಟಕಗಳು, ಎಲ್‌ಎಂಒ ಸ್ಟೋರೇಜ್ ಟ್ಯಾಂಕ್‌ಗಳು, ಯುಪಿಎಸ್‌ಗಳ ವ್ಯವಸ್ಥೆ ಮಾಡಲಾಗುವುದು' ಎಂದು ಹೇಳಿದರು.

'ಕೋವಿಡ್ ಕಾರ್ಯಪಡೆ ಅಧೀನದಲ್ಲಿ ಜಿನೋಮ್ ಸಿಕ್ವೆನ್ಸಿಂಗ್ ಸ್ಥಾಯಿ ಸಮಿತಿಯೊಂದನ್ನು ರಚಿಸಲಾಗಿದೆ. ಮೂರನೇ ಅಲೆ ನಿರ್ವಹಣೆಯ ಬಗ್ಗೆ ವೈದ್ಯರಿಗೂ ತರಬೇತಿ ನೀಡಲಾಗುತ್ತಿದೆ. ಅಲ್ಲದೆ, ಕೋವಿಡ್ ನಿರ್ವಹಣೆಯ ಕೌಶಲವನ್ನು ಯುವ ಜನರಿಗೆ ನೀಡಲಾಗುತ್ತಿದೆ. ಇವರ ಸೇವೆಯನ್ನು ಮೂರನೇ ಅಲೆ ಬಂದಾಗ ಬಳಸಿಕೊಳ್ಳಲಾಗುವುದು' ಎಂದು ಅವರು ಹೇಳಿದರು.

ಮತ್ತೊಂದು ದುರಂತದತ್ತ: ಡಾ.ಬಲ್ಲಾಳ್ ಎಚ್ಚರಿಕೆ

'ಎರಡನೇ ಅಲೆಯ ಸೋಂಕಿತರ ಸಂಖ್ಯೆ ಕಡಿಮೆ ಆಗಿರಬಹುದು, ಆದರೆ ಅಲೆ ಮುಗಿದಿಲ್ಲ. ಕಳೆದ ಎರಡು ದಿನಗಳ ಜನರ ವರ್ತನೆ ನೋಡಿದಾಗ, ಬೇಜವಾಬ್ದಾರಿಯಿಂದಲೇ ವರ್ತಿಸುತ್ತಿದ್ದಾರೆ ಎಂದು ನೋವಿನಿಂದಲೇ ಹೇಳಬೇಕಾಗುತ್ತದೆ' ಎನ್ನುತ್ತಾರೆ ರಾಜ್ಯ ಸರ್ಕಾರ ರಚಿಸಿರುವ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸದಸ್ಯರೂ ಆಗಿರುವ ವೈದ್ಯ ಡಾ. ಸುದರ್ಶನ ಬಲ್ಲಾಳ್.

'ಮೂರನೇ ಅಲೆ ಎಂಬುದು 'ಟೈಂಬಾಂಬ್'ನಂತೆ ಸ್ಫೋಟಗೊಳ್ಳಲು ಕ್ಷಣ ಗಣನೆಯಾಗುತ್ತಿದೆ. ಸಾರ್ವಜನಿಕರ ವರ್ತನೆ ಅದಕ್ಕೆ ಆಸ್ಪದ ನೀಡುತ್ತಿದ್ದು, ಮುಂದಿನ ಮಹಾ ದುರಂತಕ್ಕೆ ಕಾರಣವಾಗಬಹುದು. ಲಾಕ್‌ಡೌನ್‌ನಿಂದ ಕೋವಿಡ್ ನಿಯಂತ್ರಣಕ್ಕೆ ಬಂದಿದೆ. ಸರ್ಕಾರ ಪ್ರತಿ ಬಾರಿಯೂ ಲಾಕ್‌ಡೌನ್ ಮಾಡಲು ಆಗಲ್ಲ. ಲಾಕ್‌ಡೌನ್‌ನಿಂದ ದಿನ ₹35,000 ಕೋಟಿಯಷ್ಟು ನಷ್ಟ ಆಗುತ್ತದೆ. ಜನ ಜೀವನ ಮತ್ತೆ ಪ್ರಪಾತಕ್ಕೆ ಹೋಗುತ್ತದೆ ಎಂಬ ಪ್ರಜ್ಞೆ ಜನರಲ್ಲಿ ಬರಬೇಕು. ವಿವೇಕದಿಂದ ಕೋವಿಡ್ ಸಮರದಲ್ಲಿ ಕೈಜೋಡಿಸಬೇಕು' ಎಂದು ಅವರು ಮನವಿ ಮಾಡಿದ್ದಾರೆ.

'ಅತಿ ಕಡಿಮೆ ಸಮಯದಲ್ಲಿ ಎಲ್ಲರಿಗೂ ಕೋವಿಡ್ ಲಸಿಕೆ ನೀಡುವುದೂ ಅಸಂಭವ. ಲಸಿಕೆ ಇಲ್ಲದೆ ಎಲ್ಲರೂ ಸುರಕ್ಷಿತರಲ್ಲ. ಇದನ್ನು ಎಲ್ಲರೂ ಗಮನಿಸಬೇಕು. ಹೆಚ್ಚು ಸೂಕ್ಷ್ಮತೆಯಿಂದ ವರ್ತಿಸಬೇಕು' ಎಂದೂ ಹೇಳಿದರು.

ರೂಪಾಂತರ, ಹಬ್ಬುವಿಕೆಯ ಮೇಲೆ ಕಣ್ಗಾವಲು

ರಾಜ್ಯದ ಎಲ್ಲ ಜಿಲ್ಲೆಗಳಿಂದಲೂ ವೈರಾಣುವಿನ ಜಿನೋಮ್ ಸೀಕ್ವೆನ್ಸಿಂಗ್‌ಗಾಗಿ (ವಂಶವಾಹಿ ಅನುಕ್ರಮಣಿಕೆ) ಗಂಟಲು ದ್ರವ ಸ್ಯಾಂಪಲ್ ಹೆಚ್ಚಿನ ಸಂಖ್ಯೆ ಜನರಿಂದ ಸಂಗ್ರಹಿಸಿ ಕಳುಹಿಸಲು ಸೂಚನೆ ನೀಡಲಾಗಿದೆ.

ರೋಗ ಲಕ್ಷಣ ಕಾಣಿಸಿಕೊಂಡ ಸ್ಥಳದಿಂದ ಕನಿಷ್ಠ 150 ಸ್ಯಾಂಪಲ್‌ಗಳನ್ನು 15 ದಿನಗಳಿಗೊಮ್ಮೆ ಕಳಿಸಿಕೊಡಬೇಕು. ವಿದೇಶಗಳಿಂದ ಬರುವ ಪ್ರಯಾಣಿಕರಲ್ಲಿ ಸೋಂಕು ಇದ್ದರೆ ಅವರ ಸ್ಯಾಂಪಲ್ ಕೂಡ ಪಡೆದು ಕಡ್ಡಾಯವಾಗಿ ಕಳಿಸಬೇಕು. ಸೋಂಕಿಗೆ ಒಳಗಾದ ಮಕ್ಕಳು ಮತ್ತು ಇತರರ ಸ್ಯಾಂಪಲ್‌ಗಳನ್ನು ಜಿನೋಮ್ ಸೀಕ್ವೆನ್ಸಿಂಗ್ ಪರೀಕ್ಷೆಗೆ ಕಳಿಸಬೇಕು. ಜಿನೋಮ್ ಸೀಕ್ವೆನ್ಸಿಂಗ್ ನಿಮ್ಹಾನ್ಸ್‌ನಲ್ಲಿ ನಡೆಸಲಾಗುತ್ತದೆ.

ಪ್ರತಿ ವಿಧಾನಸಭಾ ಕ್ಷೇತ್ರದಲ್ಲೂ ತಲಾ 100 ಹಾಸಿಗೆಗಳ ಸೆಕೆಂಡರಿ ಆಸ್ಪತ್ರೆಗಳು, ಪ್ರತಿ ನಾಲ್ಕು ಕ್ಷೇತ್ರಗಳಿಗೆ ಒಂದರಂತೆ ಅತ್ಯುತ್ತಮ ಸೌಲಭ್ಯ ಇರುವ ಆಸ್ಪತ್ರೆಗಳನ್ನು ಸ್ಥಾಪಿಸಲಾಗುವುದು

ಡಾ.ಸಿ.ಎನ್. ಅಶ್ವತ್ಥನಾರಾಯಣ
ಉಪಮುಖ್ಯಮಂತ್ರಿ, ಕೋವಿಡ್ ಕಾರ್ಯಪಡೆ ಅಧ್ಯಕ್ಷ

ಮೂರನೇ ಅಲೆ ಎದುರಿಸುವ ಜವಾಬ್ದಾರಿ ಕೇವಲ ಸರ್ಕಾರದ್ದು ಮಾತ್ರ ಅಲ್ಲ. ಪ್ರತಿಯೊಬ್ಬ ಪ್ರಜೆಯ ಕರ್ತವ್ಯವೂ ಆಗಿದೆ

ಡಾ.ಎಂ.ವಿ.ಪದ್ಮಾ
ನರರೋಗ ತಜ್ಞೆ, ಏಮ್ಸ್, ದೆಹಲಿ

ಸೋಂಕಿತರ ಸಂಖ್ಯೆ ಮತ್ತಷ್ಟು ಇಳಿಕೆ

ಬೆಂಗಳೂರು: ರಾಜ್ಯದಲ್ಲಿ ಕೊರೊನಾ ಸೋಂಕಿತರ ಸಂಖ್ಯೆ ಮತ್ತಷ್ಟು ಇಳಿಕೆ ಕಂಡಿದೆ. ಸೋಮವಾರ ಹೊಸದಾಗಿ 1,386 ಮಂದಿಯಲ್ಲಿ ಸೋಂಕು ಕಾಣಿಸಿಕೊಂಡಿದ್ದು, ಈವರೆಗೆ 28.72 ಲಕ್ಷ ಮಂದಿ ಈ ರೋಗದಿಂದ ಬಾಧಿತರಾದಂತಾಗಿದೆ. ಸೋಂಕು ದೃಢ ಪ್ರಮಾಣ ಶೇ 1.26ರಷ್ಟಿದೆ.

ಮೃತರ ಸಂಖ್ಯೆ ತುಸು ಹೆಚ್ಚಿದೆ. ಹಿಂದಿನ 24 ಗಂಟೆಗಳಲ್ಲಿ 61 ಮಂದಿ ಸಾವಿಗೀಡಾಗಿದ್ದು, ಮರಣ ಪ್ರಮಾಣ ದರವು ಶೇ 4.40ಕ್ಕೆ ಏರಿದೆ.

ಒಂದು ದಿನದಲ್ಲಿ 3,204 ಜನರಿಗೆ ಕಾಯಿಲೆ ವಾಸಿಯಾಗಿದೆ. ಹೀಗಾಗಿ ಗುಣಮುಖರ ಒಟ್ಟು ಸಂಖ್ಯೆ 28 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳೂ ಗಣನೀಯ ಪ್ರಮಾಣದಲ್ಲಿ ತಗ್ಗಿವೆ. ಸದ್ಯ 34,858 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಕೋವಿಡ್ ಪರೀಕ್ಷೆಗಳ ಸಂಖ್ಯೆ ಗಣನೀಯವಾಗಿ ಇಳಿದಿದೆ. ಸೋಮವಾರ 1.09 ಲಕ್ಷ ಮಂದಿಯ ಮಾದರಿಗಳನ್ನಷ್ಟೇ ಪರೀಕ್ಷಿಸಲಾಗಿದೆ.

ಬೆಂಗಳೂರು (319) ಸೇರಿ ರಾಜ್ಯದ ಇತರ ಜಿಲ್ಲೆಗಳಲ್ಲೂ ಸೋಂಕಿತರ ಸಂಖ್ಯೆ ತಗ್ಗಿದೆ. ದಕ್ಷಿಣ ಕನ್ನಡ (126), ಹಾಸನ (108) ಹಾಗೂ ಮೈಸೂರಿನಲ್ಲಿ (177) ಅಧಿಕ ಪ್ರಕರಣಗಳು ವರದಿಯಾಗಿವೆ. 17 ಜಿಲ್ಲೆಗಳಲ್ಲಿ ಈ ಸಂಖ್ಯೆ 100ಕ್ಕಿಂತ ಕಡಿಮೆ ಇದೆ. ಉಳಿದ ಜಿಲ್ಲೆಗಳಲ್ಲಿ ಒಂದಂಕಿಯಷ್ಟಿದೆ.

ಬೆಂಗಳೂರಿನಲ್ಲಿ 9, ದಕ್ಷಿಣ ಕನ್ನಡ ಮತ್ತು ಮೈಸೂರಿನಲ್ಲಿ ತಲಾ 10 ಮರಣ ಪ್ರಕರಣಗಳು ದಾಖಲಾಗಿವೆ. ರಾಜ್ಯದಲ್ಲಿ ಈವರೆಗೆ ಒಟ್ಟು 35,896 ಜನ ಮೃತರಾಗಿದ್ದಾರೆ.



ಚರ್ಮೋ ರಕ್ಷತಿ ರಕ್ಷಿತಃ



ನಮ್ಮ ದೇಹ ಮತ್ತು ಮನಸ್ಸಿನ ಆರೋಗ್ಯದ ಕನ್ನಡಿಯೇ ನಮ್ಮ ಚರ್ಮ. ಇದು ರೋಗಮಾರ್ಗವೂ ಹೌದು, ನಮ್ಮ ಆರೋಗ್ಯ ರಕ್ಷಣೆಯ ಮೊದಲ ತಡೆಗೋಡೆಯೂ ಹೌದು.

ಡಾ. ಅನಿತಾ ರವಿ

ಸೌಂದರ್ಯ ನೋಡುವ ಕಣ್ಣಿನಲ್ಲಿರುತ್ತದೆ. ಹಾಗೆಯೇ ಆ ಸೌಂದರ್ಯದ ಗುಟ್ಟು ಚರ್ಮದ ಆರೋಗ್ಯದಲ್ಲಿದೆ.

ಪಂಚ ಜ್ಞಾನೇಂದ್ರಿಯಗಳಲ್ಲಿ ಚರ್ಮವೂ ಒಂದು. ವಾತಾವರಣಕ್ಕೆ ಮೈಯೊಡ್ಡಿ ನಿಲ್ಲುವ ಇದು ನಮಗೆ ಸ್ಪರ್ಶ, ಬಿಸಿ, ತಂಪು, ನೋವು – ಇವುಗಳ ಅರಿವನ್ನು ಮೂಡಿಸುತ್ತದೆ. ಹಾಗೆಯೇ ದೇಹದ ತಾಪಮಾನವನ್ನು, ಕಲ್ಮಶಗಳನ್ನು ಬೆವರಿನ ಮೂಲಕ ಹೊರ ಹಾಕಿ ದೇಹವನ್ನು ಸುಸ್ಥಿತಿಯಲ್ಲಿರಿಸುತ್ತದೆ. ಗರ್ಭದಿಂದಾರಭ್ಯ ನಮ್ಮ ಇಳಿವಯಸ್ಸಿನ ತನಕವೂ ವಯೋಮಾನದಂತೆ ಬದಲಾಗುತ್ತಾ, ವಾತಾವರಣದಲ್ಲಾಗುವ ಬದಲಾವಣೆಗೆ ಹೊಂದಿಕೊಳ್ಳುತ್ತಾ, ನಮ್ಮ ದೇಹ ಮತ್ತು ಮನಸ್ಸಿನ ಆರೋಗ್ಯದ ಕನ್ನಡಿಯಾಗಿರುತ್ತದೆ ಈ ಚರ್ಮ. ಇದು ರೋಗಮಾರ್ಗವೂ ಹೌದು, ನಮ್ಮ ಆರೋಗ್ಯ ರಕ್ಷಣೆಯ ಮೊದಲ ತಡೆಗೋಡೆಯೂ ಹೌದು. ಚರ್ಮವನ್ನು ಸರಿಯಾದ ಆಹಾರ-ವಿಹಾರದಿಂದ ಆರೈಕೆ ಮಾಡಿದ್ದಲ್ಲಿ, ಚರ್ಮವು ನಮ್ಮ ದೇಹವನ್ನು ಆರೋಗ್ಯದಲ್ಲಿರಿಸುತ್ತದೆ.

ಚರ್ಮದ ಅಲರ್ಜಿ ನಿವಾರಣೆಗೆ ಕೆಲವು ಸುಲಭ ಉಪಾಯಗಳು

- ಒಂದು ಚಿಟಿಕೆ ಅರಿಸಿನವನ್ನು ಅರ್ಧ ಲೋಟ ಬಿಸಿನೀರು/ ಹಾಲಿಗೆ ಹಾಕಿ, ಬೆಳಿಗ್ಗೆ/ ರಾತ್ರಿ ಮಲಗುವ ಮೊದಲು ಕುಡಿಯುವುದು.
- ಆದಷ್ಟು ಬಿಸಿ ನೀರಿನ ಸೇವನೆ ಹಿತಕರ.
- ಆಹಾರದಲ್ಲಿ ತುಪ್ಪ, ಬೆಣ್ಣೆ, ಮೆಂತ್ಯೆ, ಅರಿಸಿನ, ಶುಂಠಿ, ಏಲಕ್ಕಿ, ಲವಂಗ, ದಾಳಿಂಬೆ, ಜೀರಿಗೆ, ಪಾಲಕ್ ಸೊಪ್ಪು, ಪಡವಲಕಾಯಿ, ಕರಿಬೇವು, ಪಪ್ಪಾಯಿ, ಒಣದ್ರಾಕ್ಷಿ, ನಿಂಬೆ ಹಣ್ಣು, ಬಾದಾಮಿಯನ್ನು ಸೇರಿಸಿ.
- ರಾತ್ರಿ ಆಹಾರದಲ್ಲಿ ಸಿಹಿ, ಜಿಡ್ಡಿನ ತಿನಿಸುಗಳು, ಮೈದಾಹಿಟ್ಟು ಬಳಸಿ ತಯಾರಿಸಿದ ತಿನಿಸುಗಳು, ಮೊಸರು ಬೇಡ.
- ಮೂಲಂಗಿ, ಬೆಂಡೆಕಾಯಿ, ಮೀನು, ಬದನೆಕಾಯಿ ಬೇಡ.



ಚರ್ಮದ ಅನಾರೋಗ್ಯಕ್ಕೆ ಕಾರಣಗಳು

- ಅತಿಯಾದ ಜಿಡ್ಡು, ಸಿಹಿ ಅಂಶ ಇರುವ ಆಹಾರ ಪದಾರ್ಥಗಳ ಸೇವನೆ, ಕಾರ್ಬೋನೇಟೆಡ್ ಪಾನೀಯಗಳು.
- ರಾತ್ರಿ ತಡವಾಗಿ ಮಲಗುವುದು, ನಿದ್ರಾಹೀನತೆ.
- ಮಾನಸಿಕ ಒತ್ತಡ ಅತಿ ಮುಖ್ಯ ಕಾರಣ. ಒತ್ತಡದಿಂದಾಗಿ ಬಿಡುಗಡೆಯಾಗುವ ಹಾರ್ಮೋನ್ ಮನಸ್ಸಿನ ನೆಮ್ಮದಿಯೊಂದಿಗೆ ಚರ್ಮದ ಆರೋಗ್ಯವನ್ನೂ ಹಾಳು ಮಾಡುತ್ತದೆ.
- ಚರ್ಮದಲ್ಲಿ ಸಾಕಷ್ಟು ತೇವಾಂಶ ಇಲ್ಲದಿರುವುದು, ನವೆ/ ತುರಿಕೆಗೆ ಕಾರಣವಾಗುತ್ತದೆ.
- ರಾಸಾಯನಿಕ ಸೌಂದರ್ಯವರ್ಧಕಗಳು, ಪರ್ಫ್ಯೂಮ್‌ಗಳ ಅತಿ ಬಳಕೆ.
- ಕೆಲವೊಮ್ಮೆ ಆಹಾರದಿಂದ, ದೂಳಿನಿಂದ ಅಲರ್ಜಿ ಉಂಟಾಗಿ, ಚರ್ಮದಲ್ಲಿ ಉರಿ, ನವೆ, ಊತ ಉಂಟಾಗುತ್ತದೆ.

ಚರ್ಮದ ಆರೋಗ್ಯ ಕಾಪಾಡಲು ಸರಳ ಸೂತ್ರಗಳು

- ಸತ್ವಯುತ ಆಹಾರಸೇವನೆ.
- ಬೆಳಗ್ಗೆ ಬೇಗ ಏಳುವುದು, ರಾತ್ರಿ ಬೇಗ ಮಲಗುವುದು. ತಡ ರಾತ್ರಿ ಮಲಗುವುದು/ ನಿದ್ರಾಹೀನತೆ ಚರ್ಮದ ಅನಾರೋಗ್ಯಕ್ಕೆ ಬಹು ಮುಖ್ಯ ಕಾರಣ.
- ಚರ್ಮದ ತೇವಾಂಶ, ಕಾಪಿಡಲು ದೇಹಕ್ಕೆ ಅಗತ್ಯವಿರುವಷ್ಟು ನೀರನ್ನು ಕುಡಿಯುವುದು.
- ಪ್ರತಿದಿನ ವ್ಯಾಯಾಮದಿಂದ ರಕ್ತಪರಿಚಲನೆ ಸರಿಯಾಗಿ ಉಂಟಾಗಿ ಚರ್ಮವು ವಯಸ್ಸಾದ ನಂತರವೂ ಸುಕ್ಕುಗಟ್ಟದೆ ಆರೋಗ್ಯದಿಂದಿರುವುದು.
- ಅಭ್ಯಂಗ/ ಆಯಿಲ್ ಮಸಾಜ್ ಚರ್ಮದ ಆರೋಗ್ಯ, ಕಾಂತಿಯನ್ನು ಹೆಚ್ಚಿಸುತ್ತದೆ. ಚರ್ಮದ ಕಾಯಿಲೆಗಳು ಬರದಂತೆ ತಡೆಯುತ್ತದೆ. ಎಳ್ಳೆಣ್ಣೆ, ಕೊಬ್ಬರಿ ಎಣ್ಣೆ, ಬಾದಾಮಿ ಎಣ್ಣೆ, ಹರಳೆಣ್ಣೆ – ಇವುಗಳಲ್ಲಿ ಯಾವುದಾದನ್ನಾದರೂ ಬಳಸಿ ಪ್ರತಿದಿನ ಮಾಡುವ ಅಭ್ಯಂಗ ಅತ್ಯಂತ ಉಪಯುಕ್ತ.
- ಗಿಡಮೂಲಿಕೆಗಳಿಂದ ತಯಾರಿಸಿದ ಮಿಶ್ರಣದಿಂದ ಮೇಲ್ಮೈ ಮುಖವಾಗಿ ಮಸಾಜ್ ಮಾಡುವುದರಿಂದ ಚರ್ಮದ ಕೆಳಗಿನ ಅತ್ಯಧಿಕ ಜಿಡ್ಡಿನ ಅಂಶವನ್ನು ಕರಗಿಸಿ, ಕಾಂತಿಯನ್ನು ಹೆಚ್ಚಿಸುತ್ತದೆ. ಚರ್ಮವನ್ನು ಮೃದುವಾಗಿಸಿ, ಚರ್ಮದ ಡೆಡ್ ಸೆಲ್ಸ್ ಮತ್ತು ಕಲ್ಮಶಗಳನ್ನು ತೆಗೆಯುತ್ತದೆ.
- ಸ್ನಾನಕ್ಕೆ ಉಗುರು ಬೆಚ್ಚಗಿನ ನೀರು, ಹೆಸರುಕಾಳಿನ ಹಿಟ್ಟು, ಕಡಲೆಹಿಟ್ಟು ಬಳಕೆ.
- ಮಾನಸಿಕ ಒತ್ತಡದಿಂದಾಗಿ ಚರ್ಮದ ಆರೋಗ್ಯ ತೀರಾ ಹದಗೆಡುತ್ತದೆ. ಮೊಡವೆ ಮತ್ತಿತರ ಚರ್ಮದ ಕಾಯಿಲೆಗಳು ಉಲ್ಬಣವಾಗುತ್ತದೆ. ಮನಸ್ಸನ್ನು ಸಮಾಧಾನದಲ್ಲಿಟ್ಟುಕೊಳ್ಳುವುದು ಇಡೀ ದೇಹದ ಆರೋಗ್ಯಕ್ಕೆ ಒಳ್ಳೆಯದು.
- ಆಯುರ್ವೇದದಲ್ಲಿ ಚರ್ಮದ ಆರೋಗ್ಯ ಮತ್ತು ಕಾಂತಿ ಹೆಚ್ಚಿಸಲು ವಿಶೇಷವಾಗಿ ರಕ್ತಚಂದನ, ಶ್ರೀಗಂಧ, ಲೋಧ್ರ, ಪ್ರಿಯಂಗು, ಅರಿಸಿನ ಮುಂತಾದ 'ವರ್ಣ್ಯದ್ರವ್ಯ'ಗಳ ಉಪಯೋಗವನ್ನು ಹೇಳಲಾಗಿದೆ. ಮೊಡವೆ, ಗಾಯ, ಚರ್ಮದ ವಿವಿಧ ತೊಂದರೆಗಳಿಗೆ ಲೇಪನದಂಥ ಚಿಕಿತ್ಸೆಯನ್ನು ವಿವರಿಸಲಾಗಿದೆ.
- ವೈರಾಣುವಿನಿಂದ ಉಂಟಾಗುವ ವಾರ್ಟ್ಸ್ ಅನ್ನು ಅಲೋವೆರಾ (ಲೋಳೆಸರ) ಬಳಕೆಯಿಂದ ಕಡಿಮೆ ಮಾಡಬಹುದು.
- ಬೇಸಿಗೆಯಲ್ಲಿ ಉಂಟಾಗುವ ಬೆವರುಸಾಲೆಗೆ, ಅಕ್ಕಿ ತೊಳೆದ ನೀರು ಅತ್ಯಂತ ಉಪಯುಕ್ತ.
- ಆಗಷ್ಟೇ ತೆಗೆದ ಬೆಣ್ಣೆಯನ್ನು ಶ್ರೀಗಂಧದ ಪುಡಿಯೊಂದಿಗೆ ಬೆರೆಸಿ, ಬಿರಿದ/ಒಡೆದ ಹಿಮ್ಮಡಿಗೆ ರಾತ್ರಿ ಮಲಗುವ ಮುನ್ನ ಹಚ್ಚಿದರೆ, ಉರಿ ನೋವು ಶಮನವಾಗಿ ನಿದ್ರೆ ಚೆನ್ನಾಗಿ ಬರುತ್ತದೆ ಮತ್ತು ಪಾದವೂ ಕೋಮಲವಾಗುತ್ತದೆ.
- ಹಾರ್ಮೋನ್‌ಗಳ ತೊಂದರೆಯಿಂದ ಉಂಟಾಗುವ ಕಪ್ಪುಕಲೆಗಳು ಸೌತೆಕಾಯಿಯ ರಸವನ್ನು ನಿಂಬೆರಸದೊಂದಿಗೆ ಬೆರೆಸಿ ಹಚ್ಚಿಕೊಂಡರೆ ಮಾಯವಾಗುತ್ತವೆ.
- ಸ್ನಾನದ ನೀರಿಗೆ ಬೇವು, ತುಳಸಿ, ಗುಲಾಬಿ ದಳಗಳು ನಿಂಬೆ ರಸ ಹಾಕಿ ಸ್ನಾನ ಮಾಡುವುದರಿಂದ ತುರಿಕೆ ಗುಣವಾಗುತ್ತದೆ.
- ಮುಖದಲ್ಲಿನ ನಗು, ಚರ್ಮದ ಸೌಂದರ್ಯವನ್ನು ವರ್ಧಿಸುವ ವ್ಯಾಯಾಮ. ಹೀಗಾಗಿ ಸದಾ ನಗುತ್ತಿರಿ.

(ಲೇಖಕಿ ಆಯುರ್ವೇದ ವೈದ್ಯೆ)

ಅತಿಯಾದರೆ ಅಮೃತವೂ ವಿಷ!

ಡಿ. ಎಂ. ಹೆಗಡೆ

'ಕೊರೊನಾದ ಪ್ರತಾಪ ಇನ್ನೂ ಮುಗಿದಿಲ್ಲ; ಇನ್ನೂ ಮೂರ್ನಾಲ್ಕು ವರ್ಷ ಇದರ ಅಲೆಗಳು ಆಗಾಗ ಬಂದು ಅಪ್ಪಳಿಸುತ್ತಲೇ ಇರುತ್ತವೆ. ಜನರಲ್ಲಿ ಸಹಜವಾಗಿ ರೋಗನಿರೋಧಕ ಶಕ್ತಿ ಹೆಚ್ಚಾಗುವ ತನಕ ಇದು ಹೀಗೇ ಮುಂದುವರೆಯುತ್ತದೆ. ನಾವು ನಿಸರ್ಗದ ನಿಯಮವನ್ನು ಅರ್ಥ ಮಾಡಿಕೊಳ್ಳಬೇಕು. ಆಹಾರ, ಆಚಾರಗಳನ್ನು ಬದಲಾಯಿಸಿಕೊಳ್ಳಬೇಕು. ಸಹಜವಾಗಿ ಬದುಕುವುದನ್ನು ರೂಢಿಸಿಕೊಳ್ಳಬೇಕು' – ಎನ್ನುವುದು ನನ್ನ ಮಿತ್ರರೊಬ್ಬರ ಸ್ಪಷ್ಟ ಅಭಿಪ್ರಾಯ.

ಇಷ್ಟಾಗಿಯೂ ನನ್ನ ಗೆಳತಿ ಅನಿತಾ ರೆಡ್ಡಿ ಹೇಳಿದ್ದನ್ನು ನಿಮಗೆ ಹೇಳಬೇಕು. ಆಕೆಯ ಚಿಕ್ಕಮ್ಮ ಒಬ್ಬರು ವಹಿಸಿದ ಅತಿಯಾದ ಕಾಳಜಿಯ ದುಷ್ಪರಿಣಾಮದ ಬಗ್ಗೆ ನಾವು ತಿಳಿದುಕೊಳ್ಳಬೇಕು. ಐವತ್ತೈದರ ಆಕೆಗೆ ಕೊರೊನಾದ ಬಗ್ಗೆ ಅತಿಯಾದ ಆತಂಕವಿತ್ತು. ಅತಿರಂಜಿತ ವರದಿಗಳಿಂದ ಆಕೆ ಗಾಬರಿಗೊಂಡಿದ್ದರು. ಅವರನ್ನು ಅತಿಯಾದ ಭಯ ಆವರಿಸಿಕೊಂಡಿತ್ತು. ಯೂಟ್ಯೂಬ್, ವಾಟ್ಸ್‌ಆ್ಯಪ್‌ಗಳಲ್ಲಿ ಬಂದ ವಿಡಿಯೊಗಳನ್ನು ನೋಡಿದರು. ಅವರಿವರ ಪುಕ್ಕಟೆ ಸಲಹೆಗಳನ್ನು ಕೇಳಿದರು. ದಿನಕ್ಕೆ ಮೂರ್ನಾಲ್ಕು ಸಲ ಸ್ನಾನ ಮಾಡಿದರು. ಹತ್ತಾರು ಸಲ ಕೈ ತೊಳೆದುಕೊಂಡರು. ಮನೆಯನ್ನು ಸ್ವಚ್ಛಗೊಳಿಸುವುದು ನಿತ್ಯದ ಕಾಯಕವಾಯಿತು. ಇಷ್ಟರ ಜೊತೆಗೆ ಬೆಳಗಿನಿಂದ ರಾತ್ರಿಯ ತನಕ ಬೇರೆ ಬೇರೆ ರೀತಿಯ ಕಷಾಯಗಳನ್ನು ಕುಡಿದರು. ಹಸಿದ ಹೊಟ್ಟೆಗೊಂದು ಕಷಾಯ. ಉಂಡಮೇಲೊಂದು ಕಷಾಯ. ಸಾಯಂಕಾಲಕ್ಕೊಂದು ಕಷಾಯ. ರಾತ್ರಿ ಮಲಗುವ ಮೊದಲೊಂದು ಕಷಾಯ. ಅಂತೇನೇನೋ ಮಾಡಿದರು. ಮನೆಯವರಿಗೂ ಕಷಾಯವನ್ನು ಕುಡಿಸಿದರು. ಪಥ್ಯ ಮಾಡಿದರು. ತನಗೆ ಮತ್ತು ತನ್ನ ಮನೆಯವರಿಗೆ ಕೊರೊನಾ ಬಂದು ಕಾಡಬಾರದೆಂದು ಹರಕೆ ಹೊತ್ತರು. ಇಷ್ಟರಲ್ಲಾಗಲೇ ಆಕೆಯ ಸಾಮಾನ್ಯಜ್ಞಾನ ಕೈಕೊಟ್ಟಿತ್ತು. ಲಾಕ್‌ಡೌನ್ ಇತ್ತಾದ್ದರಿಂದ ಜನಸಂಪರ್ಕವೂ ಇರಲಿಲ್ಲ. ತೀರ ಅನಿರೀಕ್ಷಿತವಾದ ಈ ಸಮಸ್ಯೆಯನ್ನು ಎಲ್ಲರೂ ಅವರದ್ದೇ ಆದ ತಿಳಿವಳಿಕೆಯಂತೆ ನಿರ್ವಹಿಸುತ್ತಿದ್ದರು.



ಅವರವರ ಥಿಯರಿಯನ್ನು ಕೇಳಿದವರಿಗೂ ಹೇರುತ್ತಿದ್ದರು. ಹೀಗೆಯೇ ಕೆಲವು ತಿಂಗಳು ಕಳೆದವು.

ಕೊರೊನಾದ ಮೊದಲನೆಯ ಅಲೆ ಮುಗಿದು ಜನಜೀವನ ನಿಟ್ಟುಸಿರು ಬಿಡುವ ಸಮಯಕ್ಕೆ ಈಕೆಯ ಮೈತೂಕ ಗಮನಾರ್ಹವಾಗಿ ಇಳಿದಿತ್ತು. ಅಶಕ್ತತೆ ಕಾಡತೊಡಗಿತ್ತು. ಆಸ್ಪತ್ರೆಗೆ ಹೋಗಲೇಬೇಕಾದ ಪರಿಸ್ಥಿತಿಯೂ ಬಂತು. ಆಕೆಯನ್ನು ಪರೀಕ್ಷಿಸಿದ ವೈದ್ಯರು ಆಕೆಯ ಸ್ವಯಂವೈದ್ಯಕೀಯವನ್ನು ಬಿಡುವಂತೆ ಗದರಿಸಿದರು. ಹೀಗೇ ನಿತ್ಯ ಪಥ್ಯ, ಕಷಾಯ ಮುಂದುವರೆಸಿದರೆ ಆರೋಗ್ಯ ಹದಗೆಡಲಿಕ್ಕೆ ಕೊರೊನಾ ಪಾಸಿಟಿವ್ ಬರಬೇಕಾಗಿಲ್ಲ. ಪರಿಸ್ಥಿತಿ ಕೈಮೀರುವ ಮೊದಲು ಸಮತೋಲನವಾದ ಆಹಾರವನ್ನು ಶುರು ಮಾಡಿ ಎಂದು ಬುದ್ಧಿ ಹೇಳಿದರು. ವೈದ್ಯರ ಮಾತನ್ನು ಅರೆ ಮನಸ್ಸಿನಿಂದಾದರೂ ಕೇಳಿದ ಆಕೆ ಕೆಲವು ದಿನಗಳಲ್ಲಿ ನಿಧಾನವಾಗಿ ಸಹಜ ಸ್ಥಿತಿಗೆ ಬಂದರಂತೆ.

ಅತಿಯಾದ ಕಾಳಜಿ, ಅತಿಯಾದ ಪಥ್ಯ, ಅತಿಯಾದ ಕಷಾಯ ಸೇವನೆ, ಅತಿಯಾದ ಉಪವಾಸಗಳಿಂದ ಅನಾಹುತವಾಗುವ ಸಂಭವಗಳೇ ಜಾಸ್ತಿ. ಮನೆ, ಮೈ, ಮನಸ್ಸು ಸ್ವಚ್ಛವಾಗಿರಬೇಕು. ಕಾಯಿಸಿದ ನೀರನ್ನು ಕುಡಿಯಬೇಕು. ತೊಳೆದು ಒಣಗಿಸಿದ ಬಟ್ಟೆಯನ್ನು ಧರಿಸಬೇಕು. ಎರಡು ತಿಂಗಳಿಗೊಮ್ಮೆಯಾದರೂ ಹಾಸಿಗೆ ಬಟ್ಟೆಯನ್ನು ತೊಳೆದು ಒಣಗಿಸಬೇಕು. ವರ್ಷಕ್ಕೆ ನಾಲ್ಕು ಸಲ ಕಿಟಕಿಯ ಕರ್ಟನ್‌ಗಳನ್ನು ತೊಳೆದು ಸ್ವಚ್ಛಗೊಳಿಸಬೇಕು. ಮನೆ ಮತ್ತು ಮನೆಯ ಸುತ್ತಲಿನ ಪರಿಸರ ಸ್ವಚ್ಛವಾಗಿರುವಂತೆ ಗಮನಹರಿಸಬೇಕು. ಎಲ್ಲವೂ ನಿಜ. ಆದರೆ ಯಾವುದೇ ಆದರೂ ಅತಿಯಾದರೆ ಅದರಿಂದ ಅನಾಹುತವೇ ಆಗುತ್ತದೆ ಎನ್ನುವುದನ್ನೂ ಅರಿತಿರಬೇಕು.

ಯಾವುದನ್ನೂ ಅತಿರೇಕಕ್ಕೆ ಕೊಂಡೊಯ್ಯಬಾರದು. ಮಾತಾದರೂ ಅಷ್ಟೇ. ಮೌನವಾದರೂ ಅಷ್ಟೇ. ಊಟವಾದರೂ ಅಷ್ಟೇ. ಆಟವಾದರೂ ಅಷ್ಟೇ. ಎಲ್ಲಕ್ಕೂ ಒಂದು ಇತಿಮಿತಿ ಇರಬೇಕು. ಒಳ್ಳೆಯ ಆಹಾರ ಎಂದು ಜಾಸ್ತಿ ತಿಂದರೆ ಅಜೀರ್ಣವಾಗುತ್ತದೆ. ಲಿಂಬು ತಿಂದರೆ ಅಸಿಡಿಟಿ; ಹಾಲು ಕುಡಿದರೆ ಗ್ಯಾಸು. ಮೊಸರು ತಿಂದರೆ ಶೀತ. ಮಾಂಸ ತಿಂದರೆ ಪಾಪ. ಬರೀ ತರಕಾರಿ ತಿಂದರೆ ಸಾಲದು. ಬೇರೇನೇನನ್ನೋ ತಿನ್ನಲು ಆಗದು. ಹೀಗೇ ಪ್ರತಿಯೊಬ್ಬರದ್ದೂ ಒಂದೊಂದು ವಾರಾತ.

ನಮ್ಮ ಆರೋಗ್ಯವನ್ನು ನಾವು ಹೇಗೆ ಸರಿಯಾಗಿಟ್ಟುಕೊಳ್ಳಬಹುದು ಎನ್ನುವುದನ್ನು ನಾವೇ ಗಮನಿಸಿಕೊಂಡು ಅದರಂತೆ ಅನುಸರಿಸಿಕೊಂಡು ಹೋಗಬೇಕು. ಅವರಿಗಾಗಿದ್ದು ನಿಮಗೆ ಆಗದಿರಬಹುದು. ತೀರ್ಥ ಕುಡಿದರೆ ಶೀತ. ಆರತಿ ತಗೊಂಡರೆ ಉಷ್ಣ ಎನ್ನುವ ನಾಜೂಕಿನವರು ವೈದ್ಯರ ಸಲಹೆಯನ್ನು ಪಡೆದುಕೊಳ್ಳುವುದು ಒಳ್ಳೆಯದು.

ಎಸ್ಸೆಸ್ಸೆಲ್ಸಿ ದಿಕ್ಸೂಚಿ

ವಿಷಯ: ಗಣಿತ

11) $a_1x + b_1y + c_1 = 0$; $a_2x + b_2y + c_2 = 0$ ರೇಖಾತ್ಮಕ ಸಮೀಕರಣಗಳ ಜೋಡಿಯು ಅಪರಿಮಿತ ಪರಿಹಾರವನ್ನು ಹೊಂದಿರಬೇಕಾದರೆ ಅವುಗಳ ಸಹಗುಣಕಗಳ ಅನುಪಾತವು

a) $\frac{a_1}{a_2} \neq \frac{b_1}{b_2} = \frac{c_1}{c_2}$ b) $\frac{a_1}{a_2} = \frac{b_1}{b_2} = \frac{c_1}{c_2}$

c) $\frac{a_1}{a_2} \neq \frac{b_1}{b_2}$ d) $\frac{a_1}{a_2} = \frac{b_1}{b_2} \neq \frac{c_1}{c_2}$

12) k ನ ಯಾವ ಬೆಲೆಗೆ ಕೆಳಗೆ ನೀಡಲಾದ ರೇಖಾತ್ಮಕ ಸಮೀಕರಣಗಳ ಜೋಡಿಯು ಸಮಾನಾಂತರವಾಗಿವೆ $kx + 3y = 5$; $4x + 6y = 13$

a) 4 b) 8 c) 3 d) 2

13) $x + y = 5$ ಮತ್ತು $2x - y = 4$ ಈ ರೇಖಾತ್ಮಕ ಸಮೀಕರಣಗಳ ಜೋಡಿಗೆ ಕ್ರಮವಾಗಿ x ಮತ್ತು y ಗಳ ಬೆಲೆಗಳು

a) (2 , 3) b) (3 , 2) c) (1 , 4) d) (4 , 1)

14) ಪರಸ್ಪರ ಛೇದಿಸುವ ರೇಖೆಗಳನ್ನು ಉಂಟು ಮಾಡುವ ಎರಡು ಸಮೀಕರಣಗಳಲ್ಲಿ ಒಂದು ಸಮೀಕರಣವು $2x + 3y = 9$. ಆದರೆ ಮತ್ತೊಂದು ಸಮೀಕರಣ

a) $2x - 3y = 9$ b) $4x + 6y = 3$.

c) $6x + 9y = 10$ d) $2x + 3y = 9$.


15) ವೃತ್ತವನ್ನು ಎರಡು ಬಿಂದುಗಳಲ್ಲಿ ಕತ್ತರಿಸುವ ರೇಖೆ

a) ಕಂಸ b) ಛೇದಕ c) ಸ್ಪರ್ಶಕ d) ತ್ರಿಜ್ಯ

16) ಒಂದು ವೃತ್ತದಲ್ಲಿ ಎರಡು ತ್ರಿಜ್ಯಗಳ ನಡುವಿನ ಕೋನ 90^0. ಆದರೆ ಆ ತ್ರಿಜ್ಯಗಳ ಅಂತ್ಯ ಬಿಂದುಗಳಲ್ಲಿ ಎಳೆದ ಸ್ಪರ್ಶಕಗಳ ನಡುವಿನ ಕೋನ

a) 0^0 b) 180^0 c) 60^0 d) 90^0

17) ಕೊಟ್ಟಿರುವ ಚಿತ್ರದಲ್ಲಿ BC, CE ಮತ್ತು EF ಗಳು ವೃತ್ತಕ್ಕೆ ಎಳೆದ ಸ್ಪರ್ಶಕಗಳಾಗಿವೆ. BC = 5 cm, EF = 3cm, ಆದರೆ CE ಯ ಉದ್ದ



a) 3cm b) 5cm

c) 8cm d) 2cm

18) 6cm, 9cm, 7.5cm ಅಳತೆಗಳಿರುವ ಒಂದು ತ್ರಿಭುಜವನ್ನು ರಚಿಸಿ. ಈ ತ್ರಿಭುಜಕ್ಕೆ ಸಮರೂಪಿಯಾಗಿ $\frac{2}{3}$ ರಷ್ಟು ಅನುರೂಪ ಬಾಹುಗಳಾಗಿರುವ ಮತ್ತೊಂದು ತ್ರಿಭುಜವನ್ನು ರಚಿಸಿದಾಗ ದೊರೆಯುವ ಹೊಸ ತ್ರಿಭುಜದ ಬಾಹುಗಳ ಅಳತೆಗಳು ಕ್ರಮವಾಗಿ

a) 4cm , 6cm , 8cm b) 4cm , 6cm , 10cm

c) 4cm , 7cm , 6cm d) 4cm, 6cm , 5cm

19) (8,3) ಮತ್ತು (5,7) ಬಿಂದುಗಳ ನಡುವಿನ ದೂರ

a) 5 ಮಾನಗಳು b) 11 ಮಾನಗಳು

c) $2\sqrt{2}$ ಮಾನಗಳು d) 4 ಮಾನಗಳು

20) ಒಂದು ವೃತ್ತದ ವ್ಯಾಸದ ಅಂತ್ಯಬಿಂದುಗಳು (6,2) & (6,4) ಆದರೆ ಆ ವೃತ್ತ ಕೇಂದ್ರದ ನಿರ್ದೇಶಾಂಕಗಳು

a) (4,5) b) (6,3)

c) (5,4) d) (10, 8)

ವಿಷಯ: ವಿಜ್ಞಾನ

11. ಕಾರ್ಬೋನೇಟ್ ಅದಿರನ್ನು ಆಕ್ಸೈಡ್ ಆಗಿ ಪರಿವರ್ತಿಸುವ ವಿಧಾನ

ಎ) ಹುರಿಯುವಿಕೆ ಬಿ) ಕಾಸುವಿಕೆ

ಸಿ) ವಿದ್ಯುತ್ ವಿಭಜನೆ ಡಿ) ಶುದ್ಧೀಕರಣ

12. ಪ್ರೊಪನೋನ್ ಅಣುಸೂತ್ರ

ಎ) CH_3CH_2CHO ಬಿ) CH_3COCH_3

ಸಿ) $CH_3CH_2CH_2OH$ ಡಿ) $CH_3CH_2COCH_3$

13. ಆಧುನಿಕ ಆವರ್ತಕ ಕೋಷ್ಟಕದಲ್ಲಿ ಧಾತುಗಳ ಜೋಡಣೆಯು

ಎ) ಆವರ್ತದಲ್ಲಿ ಪರಮಾಣು ಸಂಖ್ಯೆಯ ಏರಿಕೆ ಕ್ರಮದಲ್ಲಿ

ಬಿ) ಆವರ್ತದಲ್ಲಿ ಪರಮಾಣು ರಾಶಿಯ ಏರಿಕೆ ಕ್ರಮದಲ್ಲಿ

ಸಿ) ಗುಂಪಿನಲ್ಲಿ ಪರಮಾಣು ಸಂಖ್ಯೆಯ ಏರಿಕೆ ಕ್ರಮದಲ್ಲಿ

ಡಿ) ಗುಂಪಿನಲ್ಲಿ ಪರಮಾಣು ರಾಶಿಯ ಏರಿಕೆ ಕ್ರಮದಲ್ಲಿ

14. ಕ್ಸೈಲಂನೊಳಗಿನ ನೀರನ್ನು ಸಸ್ಯ ದೇಹದ ಅತ್ಯಂತ ಎತ್ತರದ ಭಾಗಗಳಿಗೆ ಮೇಲಕ್ಕೆ ಹರಿಸಲು, ಸಸ್ಯಗಳು ಬಳಸುವ ತಂತ್ರ

ಎ) ಸಕ್ರಿಯ ಹೀರುವಿಕೆ ಬಿ) ಚೋಷಣ

ಸಿ) ವಸ್ತುಸ್ಥಾನಾಂತರಣ ಡಿ) ಅಭಿಸರಣ ಒತ್ತಡ

15. ಸಸ್ಯಗಳಲ್ಲಿ ವಿಸರ್ಜನೆಗಾಗಿ ಬಳಸುವ ತಂತ್ರಗಳು

ಎ) ಬಾಷ್ಪವಿಸರ್ಜನೆಯ ಮೂಲಕ ನೀರು ಹೊರಕ್ಕೆ

ಬಿ) ಎಲೆಗಳಲ್ಲಿ ತ್ಯಾಜ್ಯ ಪದಾರ್ಥದ ಸಂಗ್ರಹ

ಸಿ) ಕ್ಸೈಲಂನಲ್ಲಿ ರಾಳ ಮತ್ತು ಅಂಟು ಸಂಗ್ರಹ

ಡಿ) ಮೇಲಿನ ಎಲ್ಲವೂ

16. ಆಕ್ಸಿಜನ್ ಸಮೃದ್ಧ ರಕ್ತವನ್ನು ಶ್ವಾಸಕೋಶದಿಂದ ಹೃದಯಕ್ಕೆ ಪಂಪ್ ಮಾಡುವ ರಕ್ತನಾಳ



ಎ) ಪುಪ್ಪುಸಕ ಅಪಧಮನಿ ಬಿ) ಪುಪ್ಪುಸಕ ಅಭಿಧಮನಿ

ಸಿ) ಮಹಾಪಧಮನಿ ಡಿ) ಉಚ್ಚ ಅಭಿಧಮನಿ

17. ಮಾನವನ ದೇಹದಲ್ಲಿ ಅನೈಚ್ಛಿಕ ಕ್ರಿಯೆಗಳಾದ ರಕ್ತದ ಒತ್ತಡ, ಬಾಯಲ್ಲಿ ನೀರೂರುವಿಕೆ ಮತ್ತು ವಾಂತಿ ಮುಂತಾದವುಗಳನ್ನು ನಿಯಂತ್ರಿಸುವ ಮಿದುಳಿನ ಭಾಗ

ಎ) ಮಹಾಮಸ್ತಿಷ್ಕ ಬಿ) ಅನುಮಸ್ತಿಷ್ಕ

ಸಿ) ಮೆಡುಲ್ಲಾ ಡಿ) ಪಾನ್ಸ್

18. ಕೋಶವಿಭಜನೆಯನ್ನು ಉತ್ತೇಜಿಸುವ ಸಸ್ಯ ಹಾರ್ಮೋನ್

ಎ) ಆಕ್ಸಿನ್ ಬಿ) ಜಿಬ್ಬರ್ ಲಿನ್

ಸಿ) ಸೈಟೋಕೈನಿನ್ ಡಿ) ಅಬ್ಸಿಸಿಕ್ ಆಮ್ಲ

19. ಪ್ರೌಢಾವಸ್ಥೆಯೊಂದಿಗೆ ಸಂಬಂಧಿಸಿದ ಬದಲಾವಣೆಗಳು ಯಾವ ಹಾರ್ಮೋನ್ ಸ್ರವಿಕೆಯಿಂದ ಉಂಟಾಗುತ್ತದೆ?

ಎ) ಟೆಸ್ಟೋಸ್ಟಿರಾನ್ ಬಿ) ಈಸ್ಟ್ರೋಜನ್

ಸಿ) ಅಡ್ರಿನಲಿನ್ ಡಿ) ಬೆಳವಣಿಗೆ ಹಾರ್ಮೋನ್

20. ಅಂಡಾಣುಗಳ ಕಡೆಗೆ ಪರಾಗರೇಣು ನಳಿಕೆಗಳ ಬೆಳವಣಿಗೆಯನ್ನು ಏನೆನ್ನುತ್ತಾರೆ?

ಎ) ಸ್ವಾಭಾವಿಕ ಬೆಳವಣಿಗೆ ಬಿ) ಜಲಾನುವರ್ತನೆ

ಸಿ) ಗುರುತ್ವಾನುವರ್ತನೆ ಡಿ) ರಾಸಾಯನಿಕಾನುವರ್ತನೆ

Subject : Second Language English

11. Lohith is writing the test.
The question tag to be used here is

A. Is he? B. Was he?

C. Isn't he? D. Wasn't he?

12. I saw ______ one legged soldier . ______ soldier lost his leg while fighting for the nation.
The articles to be used here are

A. a, an B. a, the

C. an, the D. the, a

13. He is not interested ___ singing.
The preposition to be used here is

A. in B. at C. on D. for

14. Right ____ wrong, the decision had been made.
The conjunction to be used here is

A. so B. and

C. because D. or

15. _________ is more important than winning the prize.
The correct form of the word to be used here is

A. participate B. participates

C. participated D. participation

16. A word, phrase or gesture used as a greeting in a letter is called as

A. subscription B. salutation

C. body of the letter D. conclusion

17. Aiyo, something has bitten me." this was said by

A. Swami B. Swami's friend

C. the burglar D. Swami's father

18. Swami knew his father's tenacity. The meaning of the word 'tenacity' as used in the lesson A Hero is

A. anger B. dedication

C. determination D. will

19. Swami decided this place as the safest place to sleep

A. near the door B. under the bench

C. on the bench D. on the table

20. The person who suggested Baleshwar to take Roma to Airoli was

A. Cop B. Dinesh Talreja

C. tempo truck driver

D. a railway employee

(ಪ್ರಶ್ನೆಪತ್ರಿಕೆ ಸಂಯೋಜನೆ: ಸ್ವಾಮಿ ಎಚ್‌.ಆರ್‌./ ಎ. ಶ್ರೀನಿವಾಸ್/ ಎಚ್‌.ಟಿ. ಪದ್ಮಾವತಿ)

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ -22

291. ನಿರ್ವಾತದಲ್ಲಿ ಬೆಳಕಿನ ವೇಗ ಸೆಕೆಂಡಿಗೆ ________ ರಷ್ಟು ಇರುತ್ತದೆ.

ಎ) 3 ಲಕ್ಷ ಕಿ.ಮೀ.

ಬಿ) 1.86 ಲಕ್ಷ ಕಿ.ಮೀ

ಸಿ) 3 ಸಾವಿರ ಕಿ.ಮೀ.

ಡಿ) 1.86 ಸಾವಿರ ಕಿ.ಮೀ

292. ಸಮುದ್ರದ ಆಳವನ್ನು ಈ ಸಾಧನದಿಂದ ಅಳೆಯುವರು

ಎ) ಆಲ್ಟಿಮೀಟರ್

ಬಿ) ಬಾರೋಮೀಟರ್

ಸಿ) ಬಾಥೋಮೀಟರ್

ಡಿ) ಕಲರಿಮೀಟರ್

293. ಕದಂಬರ ಎರಡನೇ ರಾಜಧಾನಿ ಯಾವುದಾಗಿತ್ತು?

ಎ) ಬನವಾಸಿ ಬಿ) ಹಲಸಿ

ಸಿ) ಹಾನಗಲ್ ಡಿ) ಶಿರಸಿ

294. ಸಾರ್ವತ್ರಿಕ ಮಾನವ ಹಕ್ಕುಗಳನ್ನು ಯಾವ ಸಂಸ್ಥೆಯು ಘೋಷಿಸಿತು?

ಎ) ವಿಶ್ವ ವ್ಯಾಪಾರ ಸಂಸ್ಥೆ

ಬಿ) ವಿಶ್ವ ಸಂಸ್ಥೆ ಸಿ) ಸಾರ್ಕ್

ಡಿ) ವಿಶ್ವ ಆರೋಗ್ಯ ಸಂಸ್ಥೆ

295. ಈ ಕೆಳಗಿನವುಗಳಲ್ಲಿ ಯಾವುದು ಅಪರಾಧವಾಗಿದೆ?

ಎ) ಸರ್ಕಾರದ ಆದೇಶವನ್ನು ನ್ಯಾಯಾಂಗದಲ್ಲಿ ಪ್ರಶ್ನಿಸುವುದು

ಬಿ) ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಮೂಲಭೂತ ಹಕ್ಕುಗಳನ್ನು ರದ್ದುಪಡಿಸುವುದು

ಸಿ) ಅಸ್ಪೃಶ್ಯತೆಯನ್ನು ಆಚರಿಸುವುದು

ಡಿ) ಮೂಲಭೂತ ಕರ್ತವ್ಯಗಳನ್ನು ಪಾಲಿಸದೇ ಇರುವುದು

296. ಇತ್ತೀಚೆಗೆ 'ಹಾಲ್ ಆಫ್ ಫೇಮ್ ಲೆಜೆಂಡ್' ಕ್ಲಬ್‌ಗೆ ಸೇರ್ಪಡೆಯಾದ ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ ಯಾರು?

ಎ) ಸುನೀಲ್ ಗವಾಸ್ಕರ್

ಬಿ) ಕಪಿಲ್ ದೇವ್

ಸಿ) ಸಚಿನ್ ತೆಂಡೂಲ್ಕರ್

ಡಿ) ವಿನೂ ಮಂಕಡ್

297. ಮೇಡಂ ಮೇರಿ ಕ್ಯೂರಿಗೆ 2 ಬಾರಿ ನೊಬೆಲ್ ಪಾರಿತೋಷಕ ದೊರಕಿತು. ಅನುಕ್ರಮವಾಗಿ ಆ ವರ್ಷಗಳು ಯಾವುವು?

ಎ) 1900 ಮತ್ತು 1934

ಬಿ) 1911 ಮತ್ತು 1913

ಸಿ) 1903 ಮತ್ತು 1911

ಡಿ) 1900 ಮತ್ತು 1911

298. ಜರ್ಮನಿ ಪಾರ್ಲಿಮೆಂಟ್‌ನ ಹೆಸರೇನು?

ಎ) ಸೆನೆಟ್

ಬಿ) ಹೌಸ್ ಆಫ್ ಕಾಮನ್ಸ್

ಸಿ) ಹೌಸ್ ಆಫ್ ರೆಪ್ರೆಸೆಂಟೇಟಿವ್ಸ್

ಡಿ) ಬುಂಡೇಸ್ಟಾಗ್

299. ಭಾರತದ ಸಂವಿಧಾನ ರಚನಾ ಸಮಿತಿಯ ಮೊದಲ ಸಭೆ ಈ ದಿನದಂದು ನಡೆಯಿತು.

ಎ) 26 ಜನವರಿ 1950

ಬಿ) 15 ಆಗಸ್ಟ್ 1947

ಸಿ) 26 ನವೆಂಬರ್ 1949

ಡಿ) 9 ಡಿಸೆಂಬರ್ 1946

300. ಸಂವಿಧಾನದ ರಚನೆಯ ಸಮಯದಲ್ಲಿ ಮೂಲಭೂತ ಹಕ್ಕುಗಳ ಸಮಿತಿಯ ಅಧ್ಯಕ್ಷರಾಗಿದ್ದವರು

ಎ) ಸರ್ದಾರ್ ವಲ್ಲಭಭಾಯಿ ಪಟೇಲ್

ಬಿ) ಜೆ.ಬಿ.ಕೃಪಲಾನಿ

ಸಿ) ಪ್ರೊ.ಎಚ್.ಜಿ.ಮುಖರ್ಜಿ

ಡಿ) ಬಿ.ಎನ್.ರಾಯ್

301. ಭಾರತದಲ್ಲಿ ನಿರ್ಮಾಣವಾದ ಮೊಟ್ಟಮೊದಲ ಚಲನಚಿತ್ರ ಯಾವುದು?

ಎ) ಆಲಂ ಆರಾ

ಬಿ) ರಾಜ ಹರಿಶ್ಚಂದ್ರ

ಸಿ) ಸತಿ ಸುಲೋಚನಾ

ಡಿ) ಕಿಸಾನ್ ಕನ್ಯಾ

302. BEFORE:BEERFO::TRIBAL: ?

ಎ) TLRAIB ಬಿ) RTLIAB

ಸಿ) TLARIB ಡಿ) TLRABI

303. '1857ರ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ' ಎಂಬ ಗ್ರಂಥವನ್ನು ಬರೆದವರು ಯಾರು?

ಎ) ಶಾಮ್‌ಜಿ ಕೃಷ್ಣವರ್ಮ

ಬಿ) ವಿ.ಡಿ.ಸಾವರ್ಕರ್

ಸಿ) ಮದನ್ ಲಾಲ್ ಢಿಂಗ್ರಾ

ಡಿ) ಜತೀನ್ ದಾಸ್

304. ಬಟ್ಟೆ ತೊಳೆಯುವ ಯಂತ್ರದಲ್ಲಿ (ವಾಷಿಂಗ್ ಮಷಿನ್) ಬಟ್ಟೆ ಒಣಗಲು ಕಾರಣ

ಎ) ಗುರುತ್ವಾಕರ್ಷಣ ಬಲ

ಬಿ) ಕೇಂದ್ರಾಪಗಾಮಿ ಬಲ

ಸಿ) ಸ್ಥಿರವಿದ್ಯುತ್ ಬಲ

ಡಿ) ಕೇಂದ್ರಾಭಿಗಾಮಿ ಬಲ

(ಪ್ರಶ್ನೋತ್ತರ ಸಂಯೋಜನೆ: ಸ್ಟೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ 21ರ ಉತ್ತರಗಳು: 286. ಎ, 287. ಬಿ, 288. ಎ, 289. ಬಿ, 290.ಡಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಇಡೀ ಜಗತ್ತು ಮೌನವಾಗಿದ್ದಾಗ, ಒಂದೇ ಒಂದು ಧ್ವನಿ ಕೂಡ ಶಕ್ತಿಯುತ ಆಗಬಲ್ಲದು.

-ಮಲಾಲಾ ಯೂಸುಫ್‌ಝೈ

ಕಾರಾಗೃಹಗಳಲ್ಲಿ ಭದ್ರತಾ ಲೋಪ ತಡೆಗೆ ಕಟ್ಟುನಿಟ್ಟಿನ ಕ್ರಮಗಳು ಜಾರಿಗೆ ಬರಲಿ

ಬೆಂಗಳೂರಿನ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಮೇಲೆ ಪೊಲೀಸರು ಶನಿವಾರ ಬೆಳಿಗ್ಗೆ ದಾಳಿ ಮಾಡಿ, ಶೋಧ ನಡೆಸಿದ್ದಾರೆ. ಜೈಲಿನ ಒಳಗಡೆಯೇ ಕೈದಿಗಳು ರೌಡಿ ಚಟುವಟಿಕೆ ನಡೆಸುತ್ತಿರುವುದು, ಮಾರಕಾಸ್ತ್ರ, ಮೊಬೈಲ್, ಮಾದಕವಸ್ತುಗಳನ್ನು ಇರಿಸಿಕೊಂಡಿರುವುದು ಶೋಧದ ವೇಳೆ ಪತ್ತೆಯಾಗಿದೆ. ಕೆಲವು ಕೈದಿಗಳಿಗೆ ಮಲಗಲು ಮಂಚ, ಹಾಸಿಗೆ, ಕುರ್ಚಿ, ಸೊಳ್ಳೆ ಪರದೆಯಂತಹ ಸೌಲಭ್ಯಗಳನ್ನು ಕಲ್ಪಿಸಿರುವುದೂ ಕಂಡುಬಂದಿದೆ. ಕೆಲವು ರೌಡಿಗಳು ಕಾರಾಗೃಹದ ಒಳಗಿದ್ದುಕೊಂಡೇ ಅಪರಾಧ ಕೃತ್ಯಗಳಿಗೆ ಸಂಚು ರೂಪಿಸುತ್ತಿದ್ದರು ಮತ್ತು ತಮ್ಮ ಸಹಚರರ ಮೂಲಕ ಕೊಲೆ, ಸುಲಿಗೆಯಂತಹ ಕೃತ್ಯಗಳನ್ನು ಮಾಡಿಸುತ್ತಿದ್ದರು ಎಂಬುದಕ್ಕೆ ಶೋಧದ ವೇಳೆ ಪುರಾವೆಗಳು ಸಿಕ್ಕಿವೆ. ಕಾರಾಗೃಹದ ಒಳಗೆ ಮಾರಕಾಸ್ತ್ರ, ಮಾದಕವಸ್ತು, ಮೊಬೈಲ್ ಪತ್ತೆಯಾಗಿರುವುದು ಇದು ಮೊದಲೇನೂ ಅಲ್ಲ. ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಸೀಮಿತವಾಗಿಯೂ ಇಲ್ಲ. ರಾಜ್ಯದಲ್ಲಿ ಒಂಬತ್ತು ಕೇಂದ್ರ ಕಾರಾಗೃಹಗಳು, ಒಂದು ಬಯಲು ಬಂದೀಖಾನೆ, 21 ಜಿಲ್ಲಾ ಕಾರಾಗೃಹ, 29 ತಾಲ್ಲೂಕು ಉಪಕಾರಾಗೃಹಗಳು ಮತ್ತು 30 ತಾಲ್ಲೂಕು ಕಾರಾಗೃಹಗಳು ಇವೆ. ಹೆಚ್ಚಿನ ಕೇಂದ್ರ ಕಾರಾಗೃಹಗಳು ಮತ್ತು ಜಿಲ್ಲಾ ಕಾರಾಗೃಹಗಳಲ್ಲಿ ಅಕ್ರಮ ಚಟುವಟಿಕೆಗಳು ನಡೆಯುವುದು ಆಗಾಗ ಪತ್ತೆಯಾಗುತ್ತಲೇ ಇರುತ್ತದೆ. ಬಹುಹಂತಗಳ ಭದ್ರತಾ ವ್ಯವಸ್ಥೆ, ಸಿ.ಸಿ ಟಿ.ವಿ ಕ್ಯಾಮೆರಾ ಕಣ್ಗಾವಲು ಮೀರಿ ಕೈದಿಗಳಿಗೆ ಮಾರಕಾಸ್ತ್ರ, ಮಾದಕವಸ್ತು, ಮೊಬೈಲ್, ಸಿಮ್ ಕಾರ್ಡ್, ನಗದು ತಲುಪುತ್ತಿರುವುದು ವ್ಯವಸ್ಥೆಯ ಅಣಕದಂತಿದೆ. ಕೈದಿಗಳ ಮನಃಪರಿವರ್ತನೆಯ ತಾಣಗಳಾಗಬೇಕಿದ್ದ ಕಾರಾಗೃಹಗಳು ಮತ್ತಷ್ಟು ಅಪರಾಧ ಕೃತ್ಯಗಳ ಸಂಚಿನ ಕೇಂದ್ರವಾಗುತ್ತಿವೆ ಎಂಬ ಆಘಾತಕಾರಿ ವಿಷಯ ಪೊಲೀಸರ ತನಿಖೆಯಿಂದ ಬಯಲಾಗಿದೆ. ರಾಜ್ಯದ ಬಹುತೇಕ ಕಾರಾಗೃಹಗಳ ಸ್ಥಿತಿ ಶೋಚನೀಯವಾಗಿದೆ. ಕರ್ನಾಟಕದ ಕಾರಾಗೃಹಗಳಲ್ಲಿ ಅವುಗಳ ಸಾಮರ್ಥ್ಯಕ್ಕಿಂತಲೂ ಹೆಚ್ಚಿನ ಕೈದಿಗಳನ್ನು ಇರಿಸಲಾಗಿದೆ ಎಂಬುದನ್ನು 2019ರಲ್ಲಿ ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ (ಎನ್‌ಸಿಆರ್‌ಬಿ) ವರದಿ ಹೇಳಿತ್ತು. ಆ ಪರಿಸ್ಥಿತಿ ಈಗಲೂ ಬದಲಾಗಿಲ್ಲ. ರಾಜ್ಯದ ಕೇಂದ್ರ ಕಾರಾಗೃಹಗಳಲ್ಲಿ ಸಾಮರ್ಥ್ಯಕ್ಕಿಂತಲೂ ಅಧಿಕ ಸಂಖ್ಯೆಯ ಕೈದಿಗಳಿದ್ದಾರೆ. ಎಲ್ಲ ಕಾರಾಗೃಹಗಳಲ್ಲಿ ಒಟ್ಟು 13 ಸಾವಿರದಷ್ಟು ಕೈದಿಗಳನ್ನು ಇರಿಸಬಹುದಾದರೂ, ಅಲ್ಲಿರುವ ಕೈದಿಗಳ ಸಂಖ್ಯೆ 16 ಸಾವಿರದ ಆಸುಪಾಸಿನಲ್ಲಿದೆ ಎಂಬುದು ಸಮಸ್ಯೆಯ ತೀವ್ರತೆಯನ್ನು ತೆರೆದಿಡುತ್ತದೆ. ಸಿಬ್ಬಂದಿ ಕೊರತೆ, ಹೊಸ ಕಾರಾಗೃಹಗಳ ನಿರ್ಮಾಣದಲ್ಲಿನ ವಿಳಂಬ, ಕಾರಾಗೃಹಗಳಲ್ಲಿನ ಭದ್ರತಾ ವ್ಯವಸ್ಥೆಯನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವಗಳು ದೀರ್ಘಕಾಲದಿಂದ ಬಾಕಿ ಇರುವುದು, ಪೊಲೀಸ್ ಮತ್ತು ಕಾರಾಗೃಹ ಇಲಾಖೆಗಳ ನಡುವಿನ ಸಮನ್ವಯದ ಕೊರತೆ ಇವೆಲ್ಲವೂ ಈ ಪರಿಸ್ಥಿತಿಗೆ ಕಾರಣ. ಕೆಲವು ಪ್ರಕರಣಗಳಲ್ಲಿ ಕಾರಾಗೃಹ ಸಿಬ್ಬಂದಿ, ಕೈದಿಗಳ ಬೆಂಗಾವಲಿಗೆ ನಿಯೋಜಿತರಾದ ಪೊಲೀಸರಿಂದಲೇ ಜೈಲಿನೊಳಗೆ ನಡೆಯುವ ದುಷ್ಕೃತ್ಯಗಳಿಗೆ ನೆರವು ದೊರೆಯುತ್ತಿರುವುದೂ ಪತ್ತೆಯಾಗಿದೆ. ಮಾರಕಾಸ್ತ್ರ, ಮಾದಕವಸ್ತು, ಮೊಬೈಲ್ ಮತ್ತಿತರ ನಿಷೇಧಿತ ವಸ್ತುಗಳನ್ನು ಕಾರಾಗೃಹದೊಳಕ್ಕೆ ಸಾಗಿಸುವಲ್ಲೂ ಅವರು ನೆರವಾಗುತ್ತಿದ್ದಾರೆ ಎಂಬ ಆರೋಪಗಳಿವೆ.



ಕಾರಾಗೃಹಗಳಲ್ಲಿ ನಿಯಮಿತವಾಗಿ ತಪಾಸಣೆ ನಡೆಸಬೇಕು. ನಿಗಾ ವ್ಯವಸ್ಥೆಯನ್ನು ಬಲಪಡಿಸಬೇಕು

ಕಾರಾಗೃಹಗಳ ಒಳಗೆ ನಡೆಯುತ್ತಿರುವ ಅಕ್ರಮ ಚಟುವಟಿಕೆಗಳು, ನಿಷೇಧಿತ ವಸ್ತುಗಳ ರವಾನೆಗೆ ಕಾರಾಗೃಹ ಇಲಾಖೆಯೊಂದನ್ನೇ ಹೊಣೆ ಮಾಡಲಾಗದು. ಕಾರಾಗೃಹಗಳಲ್ಲಿ ನಡೆಯುವ ಅಕ್ರಮ ಚಟುವಟಿಕೆಗಳನ್ನು ನಿಯಂತ್ರಿಸುವುದಕ್ಕಾಗಿ ಪೊಲೀಸರು ಆಗಾಗ ಶೋಧ ನಡೆಸಬೇಕು ಮತ್ತು ನಿರಂತರವಾಗಿ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗುವ ಕೈದಿಗಳ ಮೇಲೆ ನಿಗಾ ಇರಿಸಬೇಕು ಎಂಬ ಸುತ್ತೋಲೆಯು ಹಲವು ವರ್ಷಗಳಿಂದಲೂ ಜಾರಿಯಲ್ಲಿದೆ. ಆದರೆ, ಪೊಲೀಸರು ಯಾವ ಕಾರಾಗೃಹದಲ್ಲೂ ನಿಯಮಿತವಾಗಿ ತಪಾಸಣೆ ನಡೆಸಿದ ಉದಾಹರಣೆ ಇಲ್ಲ. ಹಲವು ತಿಂಗಳಿಗೊಮ್ಮೆ ತಪಾಸಣೆ ಮಾಡುತ್ತಿದ್ದಾರೆ. ಚುನಾವಣೆ ಮತ್ತಿತರ ವಿಶೇಷ ಸಂದರ್ಭಗಳಲ್ಲಷ್ಟೇ ಕಾರಾಗೃಹಗಳಲ್ಲಿ ಶೋಧ ಕಾರ್ಯಾಚರಣೆಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ಪೊಲೀಸರು ತಮ್ಮ ಹೊಣೆಗಾರಿಕೆಯನ್ನು ನಿಭಾಯಿಸುವುದರಲ್ಲಿ ಆಸಕ್ತಿ ತೋರದಿರುವುದೇ ಕಾರಾಗೃಹಗಳಲ್ಲಿ ಅಕ್ರಮ ಚಟುವಟಿಕೆಗಳು ನಿರಾತಂಕವಾಗಿ ಮುಂದುವರಿಯಲು ಕಾರಣ ಎಂಬ ಟೀಕೆಗಳಿವೆ. ಇವುಗಳನ್ನು ಅಲ್ಲಗಳೆಯಲಾಗದು. ಇನ್ನೊಂದೆಡೆ ಕಾರಾಗೃಹಗಳಲ್ಲಿನ ಕೈದಿಗಳ ಅತಿಯಾದ ದಟ್ಟಣೆ ತಪ್ಪಿಸಲು ಐದು ಹೊಸ ಕೇಂದ್ರ ಕಾರಾಗೃಹಗಳ ನಿರ್ಮಾಣ ಯೋಜನೆ ಕುಂಟುತ್ತಾ ಸಾಗಿದೆ. ಸಾಮರ್ಥ್ಯಕ್ಕಿಂತ ಅಧಿಕ ಸಂಖ್ಯೆಯ ಕೈದಿಗಳನ್ನು ಒಂದೆಡೆ ಇರಿಸಬೇಕಾದ ಪರಿಸ್ಥಿತಿಯೇ ರೌಡಿ ಚಟುವಟಿಕೆಯಲ್ಲಿ ತೊಡಗಿರುವವರು ಕಾರಾಗೃಹಗಳ ಒಳಗೂ ಗುಂಪು ಸೇರಿ ದುಷ್ಕೃತ್ಯಗಳಿಗೆ ಸಂಚು ನಡೆಸಲು ಎಡೆಮಾಡುತ್ತಿದೆ. ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಮೇಲಿನ ಒತ್ತಡ ತಗ್ಗಿಸುವ ದಿಸೆಯಲ್ಲಿ ತ್ವರಿತ ಕ್ರಮಗಳು ಅನಿವಾರ್ಯವಾಗಿವೆ. ರಾಜ್ಯದ ಹೆಚ್ಚಿನ ಕಾರಾಗೃಹಗಳಲ್ಲಿ ಇರುವ ಮೊಬೈಲ್ ಜಾಮರ್‌ಗಳು '3ಜಿ' ನೆಟ್‌ವರ್ಕ್ ಅನ್ನು ನಿಯಂತ್ರಿಸುವ ಸಾಮರ್ಥ್ಯವನ್ನು ಮಾತ್ರ ಹೊಂದಿವೆ. ಈಗ ಹೆಚ್ಚು ಬಳಕೆಯಲ್ಲಿರುವ '4ಜಿ' ನೆಟ್‌ವರ್ಕ್ ನಿಯಂತ್ರಿಸಲಾಗದ ಸ್ಥಿತಿಯಲ್ಲಿ ಕಾರಾಗೃಹಗಳು ಇವೆ. ಭದ್ರತಾ ವ್ಯವಸ್ಥೆಗೆ ಪೂರಕವಾದ ಸ್ಕ್ಯಾನರ್‌ಗಳು, ಲೋಹ ಶೋಧಕಗಳನ್ನು ಮೇಲ್ದರ್ಜೆಗೇರಿಸದೇ ಇರುವುದು ಮಾರಕಾಸ್ತ್ರಗಳನ್ನು ಒಳಕ್ಕೆ ಕೊಂಡೊಯ್ಯಲು ಕಾರಣವಾಗುತ್ತಿದೆ. ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಜೆ. ಜಯಲಲಿತಾ ಅವರ ಗೆಳತಿ ಶಶಿಕಲಾ ನಟರಾಜನ್ ಅವರಿಗೆ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಐಷಾರಾಮಿ ಸೌಲಭ್ಯಗಳನ್ನು ಒದಗಿಸಿರುವುದು ಮತ್ತು ಮುಕ್ತ ಓಡಾಟಕ್ಕೆ ಅವಕಾಶ ಕಲ್ಪಿಸಿದ್ದ ಸಂಗತಿ 2019ರಲ್ಲಿ ಬಯಲಿಗೆ ಬಂದಿತ್ತು. ಆ ಬಳಿಕ ಕಾರಾಗೃಹಗಳಲ್ಲಿನ ಭದ್ರತೆ ಹಾಗೂ ಕಣ್ಗಾವಲು ವ್ಯವಸ್ಥೆಯನ್ನು ಬಿಗಿಗೊಳಿಸುವ ಕುರಿತು ಅಧಿಕಾರಿಗಳು ಹಲವು ಶಿಫಾರಸುಗಳನ್ನು ಸಲ್ಲಿಸಿದ್ದರು. ಆದರೆ, ಈಗಲೂ ಪರಿಸ್ಥಿತಿ ಬದಲಾಗಿಲ್ಲ ಎಂಬುದಕ್ಕೆ ಕೆಲವು ರೌಡಿಗಳಿರುವ ಬ್ಯಾರಕ್‌ಗಳಲ್ಲಿ ಪತ್ತೆಯಾದ ವಸ್ತುಗಳು ಸಾಕ್ಷ್ಯ ಒದಗಿಸಿವೆ. ಕಾರಾಗೃಹಗಳಲ್ಲಿನ ಅಕ್ರಮ ಚಟುವಟಿಕೆಗಳನ್ನು ತಡೆಯುವುದಕ್ಕೆ ಪೂರಕವಾಗಿ ದಟ್ಟಣೆ ತಗ್ಗಿಸಲು ಹೊಸ ಕಾರಾಗೃಹಗಳ ನಿರ್ಮಾಣವನ್ನು ತ್ವರಿತವಾಗಿ ಪೂರ್ಣಗೊಳಿಸಬೇಕಿದೆ. ಅತ್ಯಾಧುನಿಕ ಶೋಧನಾ ಯಂತ್ರಗಳ ಬಳಕೆ, ಮೊಬೈಲ್ ಜಾಮರ್‌ಗಳನ್ನು ಮೇಲ್ದರ್ಜೆಗೇರಿಸುವುದು ಮತ್ತು ಸಿಬ್ಬಂದಿ ಹೆಚ್ಚಳದ ಕ್ರಮಗಳನ್ನು ತುರ್ತಾಗಿ ಕೈಗೊಳ್ಳಬೇಕಿದೆ. ಕಾರಾಗೃಹಗಳ ನಿಯಮಿತ ತಪಾಸಣೆಯ ಆದೇಶವನ್ನು ಪೊಲೀಸರು ಕಡ್ಡಾಯವಾಗಿ ಅನುಷ್ಠಾನಕ್ಕೆ ತರುವುದು ಈ ದಿಸೆಯಲ್ಲಿ ಹೆಚ್ಚು ಪರಿಣಾಮಕಾರಿ ಕ್ರಮ ಆದೀತು.

ದಿನದ ಟ್ವೀಟ್

ಅಂತರ ಕಾಪಾಡಿ

'ನೀಟ್' ಅನ್ನು ಮುಂದೂಡಲು ಸಾಧ್ಯವಾಗುವುದಾದರೆ ಜೆಇಇ ಮುಂದೂಡಿಕೆ ಯಾಕಿಲ್ಲ? ಈ ಪರೀಕ್ಷೆಗೆ ನಿಗದಿ ಮಾಡಿರುವ ದಿನಾಂಕಗಳು ಅನುಕೂಲಕರವಾಗಿಲ್ಲ. ಜೊತೆಗೆ ನಮಗೆ ಈ ಮುನ್ನ ನೀಡಿದ್ದ ಭರವಸೆಯಂತೆ 15 ದಿನಗಳ ಮೊದಲು ಪರೀಕ್ಷಾ ದಿನಾಂಕವನ್ನು ತಿಳಿಸಲಿಲ್ಲ. ಪರೀಕ್ಷೆಗಳ ನಡುವಿನ ಅಂತರವು ಕಡಿಮೆ ಇದೆ ಮತ್ತು ನಾವು ಲಸಿಕೆ ಹಾಕಿಸಿಕೊಂಡಿಲ್ಲ. #JusticeForJEEAspirants

ಮೇಹುಲ್, ವಿದ್ಯಾರ್ಥಿ

ಕಿಡಿನುಡಿ



ಲೋಕಸಭಾ ಚುನಾವಣೆಯಲ್ಲಿ ತನ್ನ ಮಗನನ್ನೇ ಸೋಲಿಸಿದರು ಎಂಬ ಕಾರಣಕ್ಕಾಗಿ ಜೆಡಿಎಸ್ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರು ಮಂಡ್ಯ ಸಂಸದೆ ಸುಮಲತಾ ಅಂಬರೀಷ್ ವಿರುದ್ಧ ರಾಜಕೀಯ ಮಾಡುತ್ತಿದ್ದಾರೆ.

ಸಿದ್ದರಾಮಯ್ಯ, ವಿಧಾನಸಭೆ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಶನಿವಾರ, 13-7-1996

• ಬೀಸುವ ದೊಣ್ಣೆಯಿಂದ ರಾವ್ ಪಾರು

ನವದೆಹಲಿ, ಜುಲೈ 12 (ಪಿಟಿಐ): ಪಕ್ಷದಲ್ಲಿ ನಾಯಕತ್ವ ವಿವಾದವನ್ನು ಬಗೆಹರಿಸಿ, ಮುಂದಿನ ಕಾಂಗ್ರೆಸ್ ಅಧಿವೇಶನದವರೆಗೆ ರಾವ್ ಅವರನ್ನೇ ಪಕ್ಷಾಧ್ಯಕ್ಷರನ್ನಾಗಿ ಮುಂದುವರಿಸುವ ರಾಜಿ ಸೂತ್ರವನ್ನು ಸಿದ್ಧಗೊಳಿಸಲು ಇಂದು ಇಲ್ಲಿ ಸಭೆ ಸೇರಿದ್ದ ಕಾಂಗ್ರೆಸ್ ಕಾರ್ಯಕಾರಿಣಿ ನಿರ್ಧರಿಸಿದೆ.

ರಾಜಿಸೂತ್ರದ ಪ್ರಕಾರ, ರಾವ್ ವಿರುದ್ಧದ ವಂಚನೆ ಹಗರಣಕ್ಕೂ ರಾಜೀನಾಮೆ ಪ್ರಶ್ನೆಗೂ ತಳುಕು ಹಾಕುವಂತಿಲ್ಲ. ಜುಲೈ 16ರ ಸಭೆಯಲ್ಲಿ ರಾವ್ ಅವರಿಗೆ ಪರ್ಯಾಯ ನಾಯಕನನ್ನು ಆಯ್ಕೆ ಮಾಡಿಕೊಳ್ಳುವ ಕೆಲಸವೂ ಆರಂಭವಾಗುತ್ತದೆ. ಮುಂದಿನ ಎಐಸಿಸಿ ಅಧಿವೇಶನ ಮುಂದಿನ ತಿಂಗಳಲ್ಲೇ ನಡೆಯಲಿದ್ದು, ಅಲ್ಲಿ ರಾವ್ ಉತ್ತರಾಧಿಕಾರಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಬಹುಶಃ ಎ.ಕೆ. ಆಂಟನಿ ಅವರು ಎಐಸಿಸಿ ಅಧ್ಯಕ್ಷ ಸ್ಥಾನವನ್ನು ತುಂಬುವ ನಿರೀಕ್ಷೆಯಿದೆ ಎಂದು ಗೊತ್ತಾಗಿದೆ.

50 ವರ್ಷಗಳ ಹಿಂದೆ

ಮಂಗಳವಾರ, 13-7-1971

• ಅವ್ಯವಹಾರಗಳ ಸರಮಾಲೆ

ಬೆಂಗಳೂರು, ಜುಲೈ 12- ದೇಶದಲ್ಲೇ ಅಭಾವವಿದ್ದರೂ, ವಿದೇಶಗಳಿಗೆ ರಫ್ತು ಮಾಡಲು ಸರ್ಕಾರದ ಬಂಡವಾಳವಿರುವ ರಫ್ತು ಸಂಸ್ಥೆಗೆ ಫೆರೊಸಿಲಿಕಾನ್ ಸರಬರಾಜು.

ಜೊತೆಗೆ ಆಗಿದ್ದ ಬೆಲೆಗಿಂತ ಟನ್ನಿಗೆ 125 ರೂಪಾಯಿ ಕಡಿಮೆ ಬೆಲೆಯಲ್ಲಿ ಮಾರಾಟ. ರಫ್ತಿಗಾಗಿ ಪಡೆದ ಸುಮಾರು 4,000 ಮೆಟ್ರಿಕ್ ಟನ್ ಫೆರೊಸಿಲಿಕಾನ್ ಭಾರತದಿಂದ ಹೊರಗೆ ಹೋಯಿತೆ? ಯಾರಿಗೂ ಗೊತ್ತಿಲ್ಲ. ಅಪಾರ ಬೆಲೆಗೆ ದೇಶದಲ್ಲೇ ಮಾರಾಟವಾಯಿತೆಂಬುದು ಸುದ್ದಿ. ಈ ವಸ್ತುವನ್ನು ಪಡೆದವರಿಂದ ಕಾರ್ಖಾನೆಗೆ 20 ಲಕ್ಷಕ್ಕಿಂತ ಹೆಚ್ಚು ರೂಪಾಯಿ ಬಾಕಿ. ಇದು ಭದ್ರಾವತಿ ಕಬ್ಬಿಣ ಕಾರ್ಖಾನೆ ಕರ್ಮಕಾಂಡದಲ್ಲಿ ಮೈನವಿರೇಳಿಸುವ ಪ್ರಕರಣಗಳಲ್ಲಿ ಒಂದು.

ಒಲಿಂಪಿಕ್ಸ್‌ನಲ್ಲಿ ನಮ್ಮ ಕ್ರೀಡಾಪಟುಗಳ ಸಾಧನೆಯು ದೇಶದ ಕ್ರೀಡಾಭವಿಷ್ಯಕ್ಕೆ ದಿಕ್ಸೂಚಿಯಾಗಲಿದೆ

ಒಲಿಂಪಿಕ್ ಪದಕದ ತುಡಿತ–ಮಿಡಿತ



ವಿಶ್ಲೇಷಣೆ

ಗಿರೀಶ ದೊಡ್ಡಮನಿ

ತಮಿಳುನಾಡಿನ ಮದುರೆ ಸಮೀಪದ ಸಕಿಮಂಗಲಂ ಎಂಬ ಗ್ರಾಮದಲ್ಲಿ ಹೆಣ್ಣುಮಕ್ಕಳಿಗೆ ಹದಿನೆಂಟು ತುಂಬುವ ಮುನ್ನವೇ ಮದುವೆ ಮಾಡಿಬಿಡುವ ಸಂಪ್ರದಾಯವಿದೆ. ಹುಡುಗಿಯರಿಗೆ ವಿದ್ಯಾಭ್ಯಾಸ, ಆಟೋಟಗಳು ಏಕೆ ಎಂಬ ಧೋರಣೆ ಆಧುನಿಕ ಯುಗದಲ್ಲಿಯೂ ಇದೆ. ಈ ಎಲ್ಲ ಸಾಮಾಜಿಕ ವೈರುಧ್ಯಗಳನ್ನು ಹಿಮ್ಮೆಟ್ಟಿಸಿ ಓಡಿದ ರೇವತಿ ವೀರಮಣಿ ಈಗ ಟೋಕಿಯೊ ಒಲಿಂಪಿಕ್ಸ್‌ಗೆ ಹೊರಟು ನಿಂತಿದ್ದಾರೆ.

ಬಾಲ್ಯದಲ್ಲಿಯೇ ಅಪ್ಪ, ಅಮ್ಮನನ್ನು ಕಳೆದುಕೊಂಡ ರೇವತಿಗೆ ಓಟಗಾರ್ತಿಯಾಗುವ ಹುಚ್ಚು. ಹೊಟ್ಟೆ ತುಂಬ ಊಟವಿರದಿದ್ದರೂ, ಬೂಟುಗಳೇ ಇಲ್ಲದಿದ್ದರೂ ಬರಿಗಾಲಿನಲ್ಲಿ ಓಡಿದರು. ಅಜ್ಜಿಯ ಪೋಷಣೆಯಲ್ಲಿ ರೇವತಿ ಬೆಳೆದರು. ಅಜ್ಜಿ ತೋರಿದ ದಿಟ್ಟತನದಿಂದಾಗಿ ಅಥ್ಲೀಟ್ ಆಗಿ ಬೆಳೆದರು. 23 ವರ್ಷದ ರೇವತಿ ಒಲಿಂಪಿಕ್ಸ್‌ನಲ್ಲಿ 4X400 ಮೀಟರ್ಸ್ ಮಿಶ್ರ ರಿಲೆಯಲ್ಲಿ ಸ್ಪರ್ಧಿಸುವರು.

'ಟೀಶರ್ಟ್ ಮತ್ತು ಹಾಫ್‌ಪ್ಯಾಂಟ್ ಧರಿಸಿ ಹಳ್ಳಿಯಲ್ಲಿ ಓಡಾಡಲು ನಿನಗೆ ನಾಚಿಕೆಯಾಗಲ್ವಾ' ಎಂದು ಕೆಂಗಣ್ಣು ಬೀರಿ, ಅವಾಚ್ಯ ಪದಗಳನ್ನು ಬಳಸಿದವರೆಲ್ಲರೂ ಈಗ ಮೌನವಾಗಿದ್ದಾರೆ. ಇದು ರೇವತಿಗೆ ಚಿನ್ನದ ಪದಕಕ್ಕಿಂತಲೂ ದೊಡ್ಡ ಪ್ರಶಸ್ತಿಯೇ ಸರಿ. ಅಲ್ಲದೆ ಸಾಮಾಜಿಕ, ಕೌಟುಂಬಿಕ ಕಟ್ಟಲೆಗಳ ನಡುವೆ ಕಮರಿಹೋಗುವ ಬಾಲೆಯರಿಗೂ ಸ್ಫೂರ್ತಿಯ ಕಥೆ.

ಭಾರತ ಮಹಿಳಾ ಹಾಕಿ ತಂಡದಲ್ಲಿರುವ ಸಲೀಮಾ ಟೆಟೆಗೆ ಈಗ 19 ವರ್ಷವಷ್ಟೇ. ತಂಡದಲ್ಲಿರುವ ಅತ್ಯಂತ ಕಿರಿಯ ಆಟಗಾರ್ತಿ. ಜಾರ್ಖಂಡ್‌ನ ಸಿಮ್ಡೇಗಾ ಜಿಲ್ಲೆಯ ಕುಗ್ರಾಮದ ಹುಡುಗಿ. ನಕ್ಸಲ್‌ಪೀಡಿತ ಪ್ರದೇಶದಲ್ಲಿ ಹುಟ್ಟಿ ಬೆಳೆದ ಸಲೀಮಾ ಬಾಲ್ಯದಲ್ಲಿಯೇ ಹಾಕಿ ಸ್ಟಿಕ್ ಹಿಡಿದವರು. ತಮ್ಮ ಮನೆ ಸಮೀಪದ ಮೈದಾನವನ್ನು ತನ್ನ ಓರಗೆಯ ಮಕ್ಕಳೊಂದಿಗೆ ಒಪ್ಪಗೊಳಿಸಿ ಆಡಲು ಆರಂಭಿಸಿದವರು. ಡಿಫೆಂಡರ್ ಆಗಿ ತಾವು ಆಡಿದ ತಂಡಗಳಲ್ಲಿ ಜಿಗುಟುತನ ತೋರಿದ ಸಲೀಮಾ ಭಾರತ ತಂಡದವರೆಗೂ ಬೆಳೆದರು. ಬಡರೈತನ ಮಗಳು ರಾಷ್ಟ್ರೀಯ, ಅಂತರರಾಷ್ಟ್ರೀಯ ಟೂರ್ನಿಗಳಲ್ಲಿ ತೋರಿದ ದಿಟ್ಟ ಆಟದಿಂದ ಇದೇ ಮೊದಲ ಬಾರಿ ಒಲಿಂಪಿಕ್ಸ್‌ನಲ್ಲಿ ಆಡುವ ಅವಕಾಶ ಗಿಟ್ಟಿಸಿದ್ದಾರೆ.

ಇವರಷ್ಟೇ ಅಲ್ಲ, ಒಟ್ಟು 18 ಕ್ರೀಡೆಗಳಲ್ಲಿ ಭಾರತವನ್ನು ಪ್ರತಿನಿಧಿಸುತ್ತಿರುವ 126 ಕ್ರೀಡಾಪಟುಗಳದ್ದೂ ಇಂತಹದ್ದೇ ಒಂದೊಂದು ಕತೆ. ಅವರೆಲ್ಲರಿಗೂ ಪದಕ ಜಯಿಸಿ 'ದಂತಕಥೆ'ಯಾಗುವ ಹಂಬಲವೂ ಇದೆ. ಕ್ರೀಡಾ ಜೀವನಕ್ಕೆ ವಿದಾಯ ಹೇಳುವ ಹಂತದಲ್ಲಿರುವ ಬಾಕ್ಸರ್ ಮೇರಿ ಕೋಮ್‌ಗೆ ಮತ್ತೊಂದು ಒಲಿಂಪಿಕ್ಸ್ ಪದಕ ಗೆಲ್ಲುವಾಸೆ. 40 ವರ್ಷಗಳಿಂದ ಸಾಧ್ಯವಾಗದ ಪದಕ ಗಳಿಕೆಯ ಸಾಧನೆಯನ್ನು ಮಾಡುವತ್ತ ಹಾಕಿ ತಂಡದ ಚಿತ್ತ. ಮಹಿಳಾ ಕುಸ್ತಿಗೆ ಹೊಸ ಭಾಷ್ಯ ಬರೆದ ಪೋಗಟ್ ಕುಟುಂಬದ ಪ್ರಶಸ್ತಿಗಳ ಸಂಗ್ರಹಕ್ಕೆ ಒಲಿಂಪಿಕ್ಸ್ ಪದಕದ ಕಿರೀಟ ತೊಡಿಸುವತ್ತ ವಿನೇಶ ಛಲತೊಟ್ಟು ನಿಂತಿದ್ದಾರೆ.

ಆದರೆ ಇವರೆಲ್ಲರ ಕನಸುಗಳು ಈಡೇರಲು ಸಾಧ್ಯವೇ? ಕೊರೊನಾ ಕಾಲದ ಬಿಕ್ಕಟ್ಟಿನ ಸಂದರ್ಭದಲ್ಲಿ ಆಗಿರುವ ಸಿದ್ಧತೆಗಳು ತೃಪ್ತಿಕರವಾಗಿವೆಯೇ? ಹಾಗಿದ್ದರೆ, ಈ ಬಾರಿ ದೇಶಕ್ಕೆ ಎಷ್ಟು ಪದಕಗಳು ಒಲಿಯಬಹುದು ಎಂಬ ಚರ್ಚೆಗಳು ಈಗ ಮುನ್ನೆಲೆಗೆ ಬರುತ್ತಿವೆ. ಯಾವುದೇ ಕ್ರೀಡೆಯಾಗಲಿ ನಾವು ನಿರೀಕ್ಷೆ ಮಾಡಿದಂತೆ ಫಲಿತಾಂಶ ಬರುವುದು ತೀರಾ ಅಪರೂಪ. ಶ್ರೇಷ್ಠರು ನೆಲಕಚ್ಚುವ, ಕಪ್ಪುಕುದುರೆಗಳು ವಿಜಯವೇದಿಕೆ ಏರಿದ ಉದಾಹರಣೆಗಳು ನಮ್ಮ ಮುಂದಿವೆ.

2008ರ ಬೀಜಿಂಗ್ ಒಲಿಂಪಿಕ್ಸ್‌ನಲ್ಲಿ ಭಾರತವು ಮೂರು ಪದಕ ಜಯಿಸಿತ್ತು. ಅದರ ನಂತರ ಲಂಡನ್‌ನಲ್ಲಿ (2012) ಆರು ಪದಕಗಳನ್ನು ಗೆದ್ದಿತ್ತು. ಅದರಿಂದಾಗಿ ಹೋದ ಬಾರಿ ರಿಯೊ ಒಲಿಂಪಿಕ್ಸ್‌ನಲ್ಲಿ ಹತ್ತಕ್ಕೂ ಹೆಚ್ಚು ಪದಕಗಳನ್ನು ಜಯಿಸುವ ನಿರೀಕ್ಷೆ ಗರಿಗೆದರಿತ್ತು. ಆದರೆ ಶೂಟಿಂಗ್, ಬಾಕ್ಸಿಂಗ್, ಪುರುಷರ ಕುಸ್ತಿ ವಿಭಾಗಗಳ ಕ್ರೀಡಾಪಟುಗಳು ನಿರಾಶೆ ಮೂಡಿಸಿದ್ದರು. ಶೂನ್ಯದತ್ತ ದೃಷ್ಟಿನೆಟ್ಟಿದ್ದಾಗ ಇಬ್ಬರು ಮಹಿಳೆಯರು ಸಂತಸದ ಹೊನಲು ಹರಿಸಿದರು. ಮಹಿಳಾ ಕುಸ್ತಿಯಲ್ಲಿ ಕಂಚಿನ ಪದಕ ಜಯಿಸಿದ ಸಾಕ್ಷಿ ಮಲಿಕ್ ಮತ್ತು ಬ್ಯಾಡ್ಮಿಂಟನ್‌ನಲ್ಲಿ ಬೆಳ್ಳಿ ಜಯಿಸಿದ ಪಿ.ವಿ. ಸಿಂಧು ಇತಿಹಾಸ ನಿರ್ಮಿಸಿದರು.

ಈ ಬಾರಿಯೂ ಅರ್ಧ ಡಜನ್‌ಗಿಂತಲೂ ಹೆಚ್ಚು ಪದಕ ಗಳಿಕೆಯ ನಿರೀಕ್ಷೆಯಲ್ಲಿ ಭಾರತವಿದೆ. ಸಿಂಧು ಚಿನ್ನ ಗೆಲ್ಲುವ ನಿರೀಕ್ಷೆ ವ್ಯಕ್ತವಾಗುತ್ತಿದೆ. ಆದರೆ ಬ್ಯಾಡ್ಮಿಂಟನ್ ತಂಡದಲ್ಲಿ ಈ ಬಾರಿ ಸೈನಾ ನೆಹ್ವಾಲ್, ಕೆ. ಶ್ರೀಕಾಂತ್, ಅಶ್ವಿನಿ ಪೊನ್ನಪ್ಪ-ಸಿಕ್ಕಿ ರೆಡ್ಡಿ ಅವರಿಲ್ಲ. ಪುರುಷರ ವಿಭಾಗದಲ್ಲಿ ಸಾಯಿ ಪ್ರಣೀತ್ ಮತ್ತು ಡಬಲ್ಸ್‌ನಲ್ಲಿ ಚಿರಾಗ್ ಶೆಟ್ಟಿ-ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಇದ್ದಾರೆ. ಸೈನಾ ಮತ್ತು ಸಿಂಧು ಯಶಸ್ಸಿಗೆ ಕಾರಣರಾದ ಕೋಚ್ ಪಿ. ಗೋಪಿಚಂದ್ ಕೂಡ ತಂಡದೊಂದಿಗೆ ಹೋಗುತ್ತಿಲ್ಲ. ಸಾಯಿ ಪ್ರಣೀತ್ ಅವರ ಸಿಂಗಲ್ಸ್ ಬ್ಯಾಡ್ಮಿಂಟನ್ ಟ್ರೇನರ್, ಇಂಡೊನೇಷ್ಯಾದ ಏಗಸ್ ದ್ವಿ ಸಂತೊಸಾಗೆ ತಂಡದೊಂದಿಗೆ ತೆರಳಲು ಅನುವಾಗಿಸಲು ಗೋಪಿ ಈ ನಿರ್ಧಾರ ತೆಗೆದುಕೊಂಡಿದ್ದಾರೆ. ಈ ಬಾರಿ ಬ್ಯಾಡ್ಮಿಂಟನ್ ತಂಡದೊಂದಿಗೆ ತೆರಳಲು ನೆರವು ಸಿಬ್ಬಂದಿಯಲ್ಲಿ ಐದು ಜನರಿಗೆ ಮಾತ್ರ ಅವಕಾಶ ನೀಡಲು ಐಒಎ ನಿರ್ಧರಿಸಿದೆ. ಅದರಿಂದಾಗಿ ತಂಡದಲ್ಲಿ ಮೂವರು ಕೋಚ್ ಮತ್ತು ಇಬ್ಬರು ಫಿಸಿಯೊ ಇದ್ದಾರೆ.

ಕೊರೊನಾ ಸೃಷ್ಟಿಸಿರುವ ಬಿಕ್ಕಟ್ಟಿನಿಂದಾಗಿ ಕಳೆದ ಒಂದೂವರೆ ವರ್ಷದ ಅವಧಿಯಲ್ಲಿ ಕ್ರೀಡಾಪಟುಗಳ ಅಭ್ಯಾಸಕ್ಕೆ ಅಡಚಣೆಯುಂಟಾಗಿದೆ. ಇದರಿಂದಾಗಿ ಕ್ರೀಡಾಪಟುಗಳು ಮಾನಸಿಕ ಕ್ಷೋಭೆಗೂ ಒಳಗಾಗಿದ್ದಾರೆ. ಆದ್ದರಿಂದ ಗೋಪಿಯಂತಹ ಅನುಭವಿ ಕೋಚ್ ತಂಡದೊಂದಿಗೆ ಇದ್ದಿದ್ದರೆ ಆಟಗಾರರ ಮನೋಬಲ ವೃದ್ಧಿಸುತ್ತಿತ್ತು.

ಅಥ್ಲೆಟಿಕ್ಸ್‌ನಲ್ಲಿ ಮೊದಲ ಪದಕ ಜಯಿಸುವ ಭರವಸೆಯನ್ನು ಜಾವೆಲಿನ್ ಥ್ರೋ ಪಟು ನೀರಜ್ ಚೋಪ್ರಾ ಮೂಡಿಸಿದ್ದಾರೆ. ಬಾಕ್ಸಿಂಗ್‌ನಲ್ಲಿ ಮೇರಿ ಕೋಮ್, ಅಮಿತ್ ಪಂಘಾಲ್, ಶೂಟಿಂಗ್‌ನಲ್ಲಿ ಮನು ಭಾಕರ್, ಸೌರಭ್ ಚೌಧರಿ, ಕುಸ್ತಿಯಲ್ಲಿ ಬಜರಂಗ್ ಪೂನಿಯಾ, ಆರ್ಚರಿಯಲ್ಲಿ ದೀಪಿಕಾ ಕುಮಾರಿ ಅವರಿಂದ ವೈಯಕ್ತಿಕ ಪದಕಗಳ ಸಾಧ್ಯತೆಗಳಿವೆ. ದೀಪಿಕಾ ಈಚೆಗೆ ವಿಶ್ವಕಪ್ ಆರ್ಚರಿಯಲ್ಲಿ ಮೂರು ವಿಭಾಗಗಳಲ್ಲಿ ಚಿನ್ನ ಜಯಿಸಿದ್ದಾರೆ. ಮನಪ್ರೀತ್ ಸಿಂಗ್ ನಾಯಕತ್ವದ ಹಾಕಿ ತಂಡವು ಪದಕ ಜಯಿಸುವ ಭರವಸೆ ಚಿಗುರಿಸಿದೆ.

ವೇಟ್‌ಲಿಫ್ಟಿಂಗ್‌ನಲ್ಲಿ ಮೀರಾಬಾಯಿ ಚಾನು, ಟೇಬಲ್ ಟೆನಿಸ್‌ನಲ್ಲಿ ಮಣಿಕಾ ಬಾತ್ರಾ ಅವರಿಂದ ಅಚ್ಚರಿಯ ಫಲಿತಾಂಶವನ್ನು ನಿರೀಕ್ಷಿಸಬಹುದು. ಕೊರೊನಾ ಸಂಕಷ್ಟದ ನಡುವೆಯೂ ಸಿಂಧು, ಚೋಪ್ರಾ, ಮೀರಾಬಾಯಿ ಮತ್ತು ಶೂಟರ್‌ಗಳು ವಿದೇಶಕ್ಕೆ ಹೋಗಿ ತರಬೇತಿ ಪಡೆದು ಬಂದಿರುವುದು ಭರವಸೆ ಗರಿಗೆದರಲು ಕಾರಣವಾಗಿದೆ.

ಇದೆಲ್ಲವನ್ನೂ ಮೀರಿ ಭಾರತದ ಬಳಗದ ಮುಂದೆ ಇನ್ನೊಂದು ದೊಡ್ಡ ಸವಾಲಿದೆ. ಕೊರೊನಾ ತುರ್ತು ಪರಿಸ್ಥಿತಿ ಇರುವ ಜಪಾನ್‌ನಲ್ಲಿ ನಡೆಯುತ್ತಿರುವ ಒಲಿಂಪಿಕ್ಸ್‌ನಲ್ಲಿ ತಂಡದ ಪದಕ ಸಾಧನೆಯಷ್ಟೇ ಮುಖ್ಯವಾದುದು ಸುರಕ್ಷತೆ. ಈ ವಿಷಯದಲ್ಲಿ ತಂಡದೊಂದಿಗೆ ತೆರಳಲಿರುವ ಅಧಿಕಾರಿ ವರ್ಗದ ಸತ್ವಪರೀಕ್ಷೆಯೂ ನಡೆಯಲಿದೆ. ಕ್ರೀಡಾಪಟುಗಳ ಆರೋಗ್ಯ ರಕ್ಷಣೆ, ಒಲಿಂಪಿಕ್ಸ್ ಗ್ರಾಮದ ಕೋವಿಡ್ ಶಿಷ್ಟಾಚಾರ ಪಾಲನೆ, ವಿದೇಶಾಂಗ ನಿಯಮಾವಳಿಗಳ ಪಾಲನೆಯಲ್ಲಿ ಕ್ರೀಡಾಪಟುಗಳನ್ನು ಮುನ್ನಡೆಸುವ ಹೊಣೆ ಅಧಿಕಾರಿ ವರ್ಗಕ್ಕೆ ಇದೆ. ಅದಕ್ಕಾಗಿ ಅರ್ಹ ವೈದ್ಯರು, ಅಧಿಕಾರಿಗಳನ್ನು ತಂಡದೊಂದಿಗೆ ಕಳಿಸಬೇಕಿದೆ. ಈ ಹಿಂದೆ ಆದಂತೆ ಸ್ವಜನಪಕ್ಷಪಾತ, ಶಿಫಾರಸುಗಳ ಆಧಾರದಲ್ಲಿ ಅನರ್ಹ ಅಧಿಕಾರಿಗಳು 'ಪ್ರವಾಸ'ಕ್ಕೆ ಹೊರಟರೆ, ಜಾಗತಿಕ ಮಟ್ಟದಲ್ಲಿ ದೇಶದ ಗೌರವ ಹರಾಜಾಗುವ ಅಪಾಯವಿದೆ.



ಚುರುಮುರಿ



ಮಾನಹಾನಿ

• ಲಿಂಗರಾಜು ಡಿ.ಎಸ್.

'**ಸದಾನಂದ** ಗೌಡ್ರು ತಮ್ಮ ಬಗ್ಗೆ ಮಾನಹಾನಿಕರ ವರದಿ ಪ್ರಕಟಿಸಬಾರದು ಅಂತ ಕೋರ್ಟಿಂದ ತಡೆ ತಂದ್ರೂವೆ ಮೋದಿ ಕಚ್ಚೆ ಕಟ್ಟದೇ ಗೌಡ್ರುಗೆ ನಾಮ ಹಾಕಿದ ಮ್ಯಾಲೆ 'ಸದಾನಂದ ತಲೆದಂಡ' ಅಂತ ಸುದ್ದಿ ಬಂದುತ್ತಲ್ಲ ಅದು ಮಾನಹಾನಿ ಅಲ್ಲುವರಾ?' ಅಂತ ಕೇಳಿದೆ.

'ಬುಡ್ಲಾ, ಪಾಪದ್ದು ನನಗೇನೂ ಬೇಜಾರಿಲ್ಲ ಅಂದದೆ. ಆದ್ರೂ ಈಗ ಮೋದಿ ಮ್ಯಾಲೆ ನ್ಯಾಯಾಂಗ ನಿಂದನೆ ಕೇಸು ಹಾಕಕೆ ಒಳ್ಳೆ ಟೈಮು ಕನೋ' ಯಂಟಪ್ಪಣ್ಣ ಸಜೆಶನ್ ಕೊಟ್ಟಿತು.

'ಅವ್ರೆಲ್ಲಾ ಆಗದಿರಾ ಕೆಲಸ ಸಾ. ಪೇಪರಲ್ಲಿ ನೋಡಿ, ಬರೀ ಮಾನಹಾನಿ ಸುದ್ದಿಗಳೇ ತುಂಬ್ಯವೆ!' ಚಂದ್ರು ನೊಂದುಕಂಡ.

'ಅದಿರ್ಲಿ ಇಲ್ಲಿ ನೋಡು! ಮಂಡ್ಯ, ರಾಮನಗರ, ಮೈಸೂರಲ್ಲಿ ಕೆಆರ್‌ಎಸ್ ಬಿರುಕು, ಅಕ್ರಮ ಗಣಿಗಾರಿಕೆ ಅಂತ ಅವರವರೇ ಮಾನಹಾನಿ ಮಾಡ್ಕತಾವ್ರೆ. ಅಕ್ರಮ ಗಣಿಗಾರಿಕೆ ನಿಂತು 10 ವರ್ಸಾದ್ರೂ ಗಣಿಧಣಿಗಳ ರಾಜಧನ ಬೇಬಿಬೆಟ್ಟಕ್ಕಿಂತಾ ದೊಡ್ಡದಾಗ್ಯದಂತೆ!' ತುರೇಮಣೆ ಅಸಹನೆ ತೋರಿಸಿದರು.

'ಕುಳಿಯಿಂದ ಬಾರೆವಗೂರ್ ಗಮ್ಮನ್ನತಾ ಇರೋ ಗಣಿ ಕಪ್ಪದ ವಾಸನೆ ಇದಕ್ಕೆ ಕಾರಣ ಸಾ! ಡ್ಯಾಮಲ್ಲಿ ಅದುಗಿಕೊಂಡಿರೋ ಹೂಳು, ಬಿರುಕಿನ ಕಾರಣದಿಂದ ಡ್ಯಾಂ ಒಡದೋದ್ರೆ, ಬಡ ರೈತರ ಮಾರಣಹೋಮವಾಗ್ಯದೆ ಇದಕ್ಕೆ ಯಾರು ಕಾರಣ ಅಂತ 10-15 ವರ್ಸ ನ್ಯಾಯಾಂಗ ವಿಚಾರಣೆ ಮಾಡಿದ್ರಾತು!' ಅಂದ ಚಂದ್ರು.

'ಕುರಿತೇಟಾದ ಮಾತು ಏಳಿದೆ ಕನಾ ಮಗಾ! ಈ ದೇಸದೇಲಿ ಬೀದೀಗೆ ಬಿದ್ದ ನ್ಯಾಯ ಬಿದ್ರನೆ ಪೈಸಲಾದದೇ? ಇದೂ ಹಂಗಿಯೆ! ಹಾವು ಸಾಯಕುಲ್ಲ, ಕೋಲು ಮುರಿಯಕುಲ್ಲ' ಯಂಟಪ್ಪಣ್ಣ ಉಸೂರಂತು.

'ಯಂಟಪ್ಪಣ್ಣ, ಉಗೀರಿ ಮಕ್ಕೆ! ನಾವು ಬಾಗುವುದೇ ಬದುಕು ಅಂತ ಬಗ್ಗಿ ನಿಂತಿದೀವಿ. ರಾಜಕೀಯದೋವು ಬ್ರಿಟೀಷ್‌ನೋರು ಕಲಿಸಿದ ಕುಯುಕ್ತಿಯನ್ನ ಸೋಪಿನ ಥರಾ ನಮ್ಮ ಬ್ಯಾಕಿನ ಮ್ಯಾಲೆ ಉಜ್ಜಿ ಕೆಡಗುತಾವೆ!' ಅಂತಂದೆ.

ಸಂಗತ

ರೇಬಿಸ್ ತಡೆ: ದಾರಿಯೇಕೆ ದುರ್ಗಮ?

ಕೋವಿಡ್ ಬಾಧೆಯ ಈ ಅವಧಿಯಲ್ಲಿ ನಾಯಿ ಕಡಿತದ ಪ್ರಕರಣಗಳ ಸಂಖ್ಯೆಯಲ್ಲಿ ಮೂರ್ನಾಲ್ಕು ಪಟ್ಟು ಏರಿಕೆಯಾಗಿದೆ

• ಡಾ. ಮುರಳೀಧರ ಕಿರಣಕೆರೆ

ಆಸ್ಪತ್ರೆಯಲ್ಲಿ ನನ್ನೆದುರು ಕುಳಿತಿದ್ದ ಪರಿಚಯದ ಆ ವ್ಯಕ್ತಿ ಅಕ್ಷರಶಃ ನಡುಗುತ್ತಿದ್ದರು. ಅಂಗಡಿಯಿಂದ ದಿನಸಿ ತರುವಾಗ ನಾಯಿಯೊಂದು ಅವರ ಕಾಲಿಗೆ ಬಾಯಿ ಹಾಕಿತ್ತು. ಹಲ್ಲುಗಳು ಪ್ಯಾಂಟಿಗೆ ನಾಟಿದ್ದರಿಂದ ತೀರಾ ಆಳದ ಗಾಯವಾಗಿರದಿದ್ದರೂ ಸ್ವಲ್ಪ ರಕ್ತವಂತೂ ಹರಿದಿತ್ತು. ಬೀದಿನಾಯಿಯಾದ್ದರಿಂದ ತಕ್ಷಣ ರೇಬಿಸ್ ಲಸಿಕೆ ತೆಗೆದುಕೊಳ್ಳಬೇಕೆಂದು ಸಲಹೆ ನೀಡಿದ್ದೆ. ಆದರೆ ಹಿಂದಿನ ದಿನವಷ್ಟೇ ಕೊರೊನಾ ವ್ಯಾಕ್ಸಿನ್ ತೆಗೆದುಕೊಂಡಿದ್ದ ಅವರು ಈಗ ಮತ್ತೊಂದು ಲಸಿಕೆ ತೆಗೆದುಕೊಳ್ಳುವ ಬಗ್ಗೆ ಗೊಂದಲ, ಭಯದಲ್ಲಿದ್ದರು!

ರೇಬಿಸ್ ನಿಯಂತ್ರಣ ಸಂಸ್ಥೆಯ ಮಾರ್ಗಸೂಚಿಯಂತೆ ಎರಡೂ ಲಸಿಕೆಗಳನ್ನು ಒಟ್ಟಿಗೆ ತೆಗೆದುಕೊಳ್ಳಲು ಏನೂ ಸಮಸ್ಯೆಯಿಲ್ಲವೆಂದು ಮನವರಿಕೆ ಮಾಡಿಕೊಟ್ಟ ನಂತರವೇ ಅವರು ತುಸು ನಿರಾಳರಾದದ್ದು.

ಕೇಂದ್ರ ನರವ್ಯೂಹವನ್ನು ಬಾಧಿಸುವ, ರೋಗಲಕ್ಷಣಗಳು ಕಾಣಿಸಿಕೊಂಡ ನಂತರ ಮರಣ ಸಾಧ್ಯತೆ ಹೆಚ್ಚಿರುವ ರೇಬಿಸ್ (ಹುಚ್ಚುನಾಯಿ ರೋಗ), ಪ್ರಾಣಿಜನ್ಯ ರೋಗಗಳಲ್ಲೇ ಅತಿ ಮಾರಕವಾದದ್ದು. ಮಾನವನನ್ನು ಸಾಮಾನ್ಯವಾಗಿ ಬಾಧಿಸುವ ಸೋಂಕು ರೋಗಗಳಲ್ಲಿ ಮೂರನೇ ಎರಡರಷ್ಟು ಕಾಯಿಲೆಗಳು ಬರುವುದು ಪ್ರಾಣಿ-ಪಕ್ಷಿಗಳಿಂದ!

ಸಾವಿರಾರು ವರ್ಷಗಳಿಂದ ಜನ-ಜಾನುವಾರುಗಳ ಜೀವಕ್ಕೆ ಕಂಟಕಕಾರಿಯಾಗಿರುವ ಈ ರೋಗಕ್ಕೆ ಕಾರಣ ಲಿಸ್ಸಾ ಎಂಬ ವೈರಾಣು. ಇದು ವನ್ಯಮೃಗಗಳಾದ ನರಿ, ತೋಳ ಸೇರಿದಂತೆ ನಾಯಿ, ಇಲಿ, ಹೆಗ್ಗಣಗಳಲ್ಲಿ ಸಾಮಾನ್ಯ. ದನ, ಎಮ್ಮೆ, ಕುರಿ, ಮೇಕೆ, ಬೆಕ್ಕು, ಕುದುರೆ ಒಳಗೊಂಡು ಬಿಸಿರಕ್ತದ ಯಾವುದೇ ಪ್ರಾಣಿಯನ್ನೂ ಕಾಯಿಲೆ ಬಾಧಿಸಬಹುದು. ಕೆಲವು ಜಾತಿಯ ಬಾವಲಿಗಳು ರೋಗ ಪ್ರಸಾರದಲ್ಲಿ ಪಾತ್ರ ವಹಿಸುತ್ತವೆ.

ಪ್ರತಿವರ್ಷ ವಿಶ್ವದಲ್ಲಿ 59 ಸಾವಿರಕ್ಕೂ ಅಧಿಕ ಮಂದಿ ರೇಬಿಸ್‌ಗೆ ಬಲಿಯಾಗುತ್ತಿದ್ದಾರೆ. ಇದರಲ್ಲಿ ಶೇ 99ರಷ್ಟು ಪ್ರಕರಣಗಳು ವರದಿಯಾಗುತ್ತಿರುವುದು ಏಷ್ಯಾ, ಆಫ್ರಿಕಾದ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ. ನಮ್ಮ ದೇಶದಲ್ಲೇ ಸಾವಿನ ಸಂಖ್ಯೆ ವರ್ಷಕ್ಕೆ ಇಪ್ಪತ್ತು ಸಾವಿರಕ್ಕೂ ಹೆಚ್ಚು. ಶೇ 97ರಷ್ಟು ಪ್ರಕರಣಗಳಿಗೆ ಕಾರಣ ನಾಯಿ ಕಡಿತದ ಮೂಲಕ ಶರೀರ ಸೇರುವ ವೈರಾಣುಗಳು.

ಕೋವಿಡ್ ಬಾಧೆಯ ಈ ಅವಧಿಯಲ್ಲಿ ನಾಯಿ ಕಡಿತದ ಪ್ರಕರಣಗಳ ಸಂಖ್ಯೆಯಲ್ಲಿ ಮೂರ್ನಾಲ್ಕು ಪಟ್ಟು ಏರಿಕೆಯಾಗಿದೆ. ಮುಚ್ಚಿರುವ ಶಾಲೆಗಳು, ಸಹಪಾಠಿಗಳೊಂದಿಗೆ ಒಡನಾಟ ಇಲ್ಲದಿರುವುದು, ಹೊರಾಂಗಣ ಆಟಕ್ಕಿಲ್ಲದ ಅವಕಾಶ, ತಿರುಗಾಟದ ಮೇಲಿನ ತಡೆಯಿಂದಾಗಿ ತೀವ್ರ ಒತ್ತಡದಲ್ಲಿರುವ ಮಕ್ಕಳು ದಿನದ ಬಹುಪಾಲು ಸಮಯವನ್ನು ಕಳೆಯುವುದು ಮನೆಯ ಮುದ್ದು ಪ್ರಾಣಿಗಳ ಜೊತೆಗೆ. ನಿರಂತರ ಆಟ, ಕೀಟಲೆ, ಹಿಂಸೆಯಿಂದ ಕೆರಳುವ ಶ್ವಾನಗಳು ಸ್ವರಕ್ಷಣೆಗಾಗಿ ಕಚ್ಚುತ್ತವೆ.

ಕುಟುಂಬದವರೆಲ್ಲಾ ಮನೆಯೊಳಗೆ ಬಂದಿಯಾಗಿರುವುದರಿಂದ ಉದ್ಭವವಾಗಿರುವ ಒತ್ತಡ, ಅಶಾಂತಿ, ಗಲಾಟೆಯಿಂದಾಗಿ ನಾಯಿಗಳ ಮಾನಸಿಕ ಸ್ಥಿತಿಯೂ ಏರುಪೇರಾಗುವುದು ಸಹಜ. ಅದರಲ್ಲೂ ನಾಯಿಗಳು ಮರಿ ಹಾಕಿರುವಾಗ, ಆಹಾರ ತಿನ್ನುವಾಗ, ಗಾಯ, ನೋವು, ಅನಾರೋಗ್ಯದಂತಹ ಸಮಸ್ಯೆಗಳಿಂದ ಬಳಲುವಾಗ ಸಿಟ್ಟಾಗುವುದು ಶೀಘ್ರ. ಇದರ ಅರಿವಿಲ್ಲದ ಮಕ್ಕಳು ಮುಟ್ಟಲು ಹೋದಾಗ ಕೆರಳಿ ಕಚ್ಚುವುದು ಜಾಸ್ತಿ. ಸಾಮಾನ್ಯವಾಗಿ ನಾಯಿ ಕಡಿತಕ್ಕೆ ಒಳಗಾಗುವವರಲ್ಲಿ ಶೇ 40ರಷ್ಟು 15 ವರ್ಷದೊಳಗಿನ ಮಕ್ಕಳೇ. ನಮ್ಮ ದೇಶವೊಂದರಲ್ಲೇ ವರ್ಷಕ್ಕೆ ಇಂತಹ 1.7 ಕೋಟಿ ಘಟನೆಗಳು ವರದಿಯಾಗುತ್ತಿವೆ.

ನಾಯಿಗಳಿಂದ ಬರಬಹುದಾದ ರೇಬಿಸ್ ಕಾಯಿಲೆಯನ್ನು 2030ರೊಳಗೆ ಸಂಪೂರ್ಣ ನಿರ್ಮೂಲನೆ ಮಾಡಲು ವಿಶ್ವ ಆರೋಗ್ಯ ಸಂಸ್ಥೆ ಕರೆಯಿತ್ತಿದೆ. ರೋಗಪತ್ತೆಯಲ್ಲಿನ ತೊಡಕುಗಳು, ಜಾಗೃತಿಯ ಕೊರತೆ, ನಿರ್ಲಕ್ಷ್ಯ, ರೇಬಿಸ್ ಇಮ್ಯುನೊಗ್ಲೋಬುಲಿನ್ ಚುಚ್ಚುಮದ್ದು ಹಾಗೂ ಲಸಿಕೆಗಳ ದುಬಾರಿ ದರ, ಅನಿಯಂತ್ರಿತ ಬೀದಿ ನಾಯಿಗಳ ಸಂಖ್ಯೆ, ಇಚ್ಛಾ ಶಕ್ತಿಯ ಅಭಾವದಿಂದಾಗಿ ಗುರಿಯತ್ತಲಿನ ನಡೆ ಮಾತ್ರ ಕುಂಟುತ್ತಾ ಸಾಗಿದೆ.



ಶ್ವಾನಗಳಿಗೆ ನಿಯಮಿತವಾಗಿ ರೇಬಿಸ್ ಲಸಿಕೆ ಹಾಕಿಸುವುದು ಮಾಲೀಕರ ಗುರುತರ ಜವಾಬ್ದಾರಿ. ಜೊತೆಗೆ ಬೀದಿನಾಯಿಗಳ ನಿಯಂತ್ರಣವೂ ಪ್ರಮುಖ ಹೆಜ್ಜೆ. ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆಯ ಮೂಲಕ ಸಂಖ್ಯೆಯನ್ನು ನಿಯಂತ್ರಿಸುವುದರ ಜೊತೆಗೆ ಸಾಮೂಹಿಕ ಲಸಿಕಾ ಕಾರ್ಯಕ್ರಮಗಳು ನಿರಂತವಾಗಿ ನಡೆದಾಗ ಮಾತ್ರ ಯಶಸ್ಸು ಸಾಧ್ಯ.

ವನ್ಯಮೃಗಗಳಿಂದಲೂ ರೋಗಾಣುಗಳು ಹರಡುವ ಸಂಭವವಿರುವುದರಿಂದ ಅಮೆರಿಕ, ಯುರೋಪಿನ ಕೆಲವು ದೇಶಗಳಲ್ಲಿ ಬಳಕೆಯಲ್ಲಿರುವ ಆಹಾರದ ಜೊತೆಯಲ್ಲಿ ಬಾಯಿ ಮೂಲಕ ಕೊಡಬಹುದಾದ ಲಸಿಕೆಯನ್ನು ಮತ್ತಷ್ಟು ಅಭಿವೃದ್ಧಿಗೊಳಿಸಿ ಹೆಚ್ಚು ಪರಿಣಾಮಕಾರಿಯಾಗಿ ಪ್ರಯೋಗಿಸುವುದು ಇಂದಿನ ತುರ್ತು.

ಜುಲೈ 6ರಂದು 'ವಿಶ್ವ ಪ್ರಾಣಿಜನ್ಯರೋಗ ದಿನ'ವನ್ನು ಬೆರಳೆಣಿಕೆಯ ಜಾಲಗೋಷ್ಠಿಗಳ ಮೂಲಕ ತಣ್ಣಗೆ ಆಚರಿಸಲಾಯಿತು. ಇದು, 1885ರಲ್ಲಿ ಶ್ರೇಷ್ಠ ಸೂಕ್ಷ್ಮಾಣು ಶಾಸ್ತ್ರಜ್ಞ ಲೂಯಿ ಪ್ಯಾಸ್ಚರ್ ಆವಿಷ್ಕರಿಸಿದ ರೇಬಿಸ್ ಲಸಿಕೆಯ ಪ್ರಥಮ ಚುಚ್ಚುಮದ್ದನ್ನು ನೀಡಿದ ದಿವಸ. ಮನುಕುಲದ ಸಂರಕ್ಷಣೆಗೆ ಮಹತ್ತರ ಕೊಡುಗೆ ನೀಡಿದ ಈ ವಿಜ್ಞಾನಿಯ ಮರಣದ ದಿನ ಸೆಪ್ಟೆಂಬರ್ 28 'ವಿಶ್ವ ರೇಬಿಸ್ ದಿನ'ವಾಗಿ ಆಚರಣೆಯಲ್ಲಿದೆ. ಆದರೆ ಈ ಭೀಕರ ರೋಗದ ಬಗ್ಗೆ ತಿಳಿವಳಿಕೆ ಮೂಡಿಸುವ ಕಾರ್ಯ ಮಾತ್ರ ಈ ಎರಡು ದಿನಗಳಿಗೆ ಸೀಮಿತ!

ಲಸಿಕೆಯಿಂದ ಸುಲಭವಾಗಿ ತಡೆಗಟ್ಟಬಹುದಾದ ರೋಗವೊಂದು ಶತಮಾನಗಳಿಂದ ಸಹಸ್ರಾರು ಜನರನ್ನು ಬಲಿ ಪಡೆಯುತ್ತಲೇ ಸಾಗಿರುವುದು ನಿಜಕ್ಕೂ ದುರಂತ.

ಲೇಖಕ: ಮುಖ್ಯ ಪಶುವೈದ್ಯಾಧಿಕಾರಿ, ಬಾಳೆಬೈಲು, ತೀರ್ಥಹಳ್ಳಿ

ವಾಚಕರ ವಾಣಿ

ಗಣಿಗಾರಿಕೆ ಗರ್ಜನೆ: ನಿಷೇಧವೇ ಪರಿಹಾರ

'ಇತಿಹಾಸದಿಂದ ಪಾಠ ಕಲಿಯಲಿಲ್ಲ ಎಂಬುದೇ ಅದರಿಂದ ಕಲಿತ ಪಾಠ' ಎಂಬ ನಾಣ್ಣುಡಿಯು ಕರ್ನಾಟಕದಲ್ಲಿ ನಿಜವಾಗುತ್ತಿರುವಂತೆ ಕಾಣುತ್ತಿದೆ. ರಾಜ್ಯದಲ್ಲಿ 2006ರಿಂದ 2011ರವರೆಗೆ ನಡೆದ ಕಬ್ಬಿಣದ ಅದಿರು ಗಣಿಗಾರಿಕೆ ಅಕ್ರಮಗಳ ಬಗ್ಗೆ, ಅಧಿಕಾರಿಗಳ ಭ್ರಷ್ಟಾಚಾರದ ಬಗ್ಗೆ, ಅದರಿಂದ ಬಳ್ಳಾರಿ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿನ ಪರಿಸರಕ್ಕೆ, ಕೃಷಿಗೆ, ಜನರ ಆರೋಗ್ಯಕ್ಕೆ ಉಂಟಾದ ಅಪಾಯಗಳ ಬಗ್ಗೆ ಕರ್ನಾಟಕ ಲೋಕಾಯುಕ್ತರ ವರದಿಯಿದೆ. ಸುಪ್ರೀಂ ಕೋರ್ಟ್ ನೇಮಿಸಿದ್ದ ಸಿ.ಇ.ಸಿ. ವರದಿಯಿದೆ. ಪ್ರಸ್ತುತ ಮುಖ್ಯಮಂತ್ರಿ ಅಂದು ಅದರ ವಿವಾದದಲ್ಲಿ ಸಿಲುಕಿ ರಾಜೀನಾಮೆ ನೀಡಿದ್ದರು.

ಇದೀಗ ಕೆಆರ್‌ಎಸ್ ಅಣೆಕಟ್ಟೆ ಸುತ್ತಮುತ್ತ ನಡೆಯುತ್ತಿರುವ ಗಣಿಗಾರಿಕೆ ಕುರಿತ ಕಾಯ್ದೆಗಳ ಉಲ್ಲಂಘನೆ, ಅಣೆಕಟ್ಟೆಗೆ ಅಪಾಯ ಸಾಧ್ಯತೆ, ಗುಡ್ಡಗಳನ್ನು ನೆಲಸಮ ಮಾಡಿರುವುದು, ಗಣಿ ಅಕ್ಕಪಕ್ಕದಲ್ಲಿನ ಹಳ್ಳಿಗರ ಆರೋಗ್ಯದ ಸಮಸ್ಯೆ ಮುಂತಾದವುಗಳ ಬಗ್ಗೆ ಚರ್ಚೆ ನಡೆಯುತ್ತಿದೆ. ಅಲ್ಲಿ ನಡೆಯುತ್ತಿರುವ ಗಣಿಗಾರಿಕೆಯು ನಮ್ಮ ಆರ್ಥಿಕತೆಗೆ ಅನಿವಾರ್ಯವೇನಲ್ಲ. ಈ ಬಗ್ಗೆ ಅಲ್ಲಿನ ಗಣಿಗಾರಿಕೆಯನ್ನು ನಿಷೇಧಿಸುವುದೇ ಇದೆಲ್ಲಕ್ಕೂ ಪರಿಹಾರ. ನಮ್ಮ ಸರ್ಕಾರವು ಇತಿಹಾಸದಿಂದ ಪಾಠ ಕಲಿಯುತ್ತದೆ ಎಂದು ಭಾವಿಸಿದ್ದೇನೆ.

ಟಿ.ಆರ್.ಚಂದ್ರಶೇಖರ, ಬೆಂಗಳೂರು

ರಾಜಸ್ಥಾನ ಮಾದರಿ ನಡೆ

ಬಾಲ್ಯವಿವಾಹ ನಿಯಂತ್ರಣಕ್ಕೆ ರಾಜಸ್ಥಾನ ಸರ್ಕಾರವು ವಿವಾಹ ಆಮಂತ್ರಣ ಪತ್ರಿಕೆ ಮುದ್ರಿಸುವ ಮುದ್ರಣಾಲಯಗಳು ಕಡ್ಡಾಯವಾಗಿ ವಧು-ವರರ ಜನನ ಪ್ರಮಾಣಪತ್ರ ಆಧರಿಸಿ ಆಮಂತ್ರಣ ಪತ್ರಿಕೆಯಲ್ಲಿ ಜನ್ಮದಿನವನ್ನು ಮುದ್ರಿಸಲು ಸೂಚಿಸಿದೆ. ಇದು ಒಂದು ಉತ್ತಮ ಕ್ರಮವಾಗಿದ್ದು, ದೇಶದಾದ್ಯಂತ ಜಾರಿಗೊಳಿಸಿದರೆ ಬಾಲ್ಯವಿವಾಹವನ್ನು ಸ್ವಲ್ಪಮಟ್ಟಿಗೆ ನಿಯಂತ್ರಿಸಬಹುದಾಗಿದೆ. ಕೊರೊನಾದ ಈ ಕಾಲಘಟ್ಟದಲ್ಲಿ ನಮ್ಮ ರಾಜ್ಯದಲ್ಲಿ ಬಾಲ್ಯವಿವಾಹ ಪ್ರಕರಣಗಳು ಹೆಚ್ಚಾಗಿದ್ದು, ಇಂತಹ ಕ್ರಮ ಕೈಗೊಳ್ಳುವುದು ಅವಶ್ಯಕ.

ಮೋನಿಕ ಆರ್., ಚಿಕ್ಕಗೊಂಡನಹಳ್ಳಿ, ಚಿತ್ರದುರ್ಗ

ರಾಜ್ಯಭಾಷೆಯ ಕಲಿಕೆ ಕಡ್ಡಾಯವಾಗಲಿ

1956ರಲ್ಲಿ ಕರ್ನಾಟಕ ರಾಜ್ಯ (ವಿಶಾಲ ಮೈಸೂರು ರಾಜ್ಯ) ರಚನೆಯಾದಾಗ ರಾಜ್ಯಪಾಲರಾದವರು ಜಯಚಾಮರಾಜೇಂದ್ರ ಒಡೆಯರು. ಅವರನ್ನು ಹೊರತುಪಡಿಸಿದರೆ ಆನಂತರದ ರಾಜ್ಯಪಾಲರಾಗಿ ಬಂದವರೆಲ್ಲ ಪರಪ್ರಾಂತದವರು. ಕನಿಷ್ಠ ಕನ್ನಡ ಬಲ್ಲವರು ನಮ್ಮ ರಾಜ್ಯಪಾಲರಾಗಲಿಲ್ಲ. ಅವರಲ್ಲಿ ಗಿರಿ, ರಮಾದೇವಿ ಬಿಟ್ಟರೆ ಇನ್ನಾರೂ ಕನ್ನಡ ಕಲಿಯುವ ಪ್ರಯತ್ನವನ್ನೂ ಮಾಡಲಿಲ್ಲ. ಇದು ಪ್ರಜಾಪ್ರಭುತ್ವದ ದೊಡ್ಡ ಅಣಕ.

ಅದೇ ರಾಜ್ಯದವರು ರಾಜ್ಯಪಾಲರಾದರೆ ಅವರು ಪಕ್ಷಪಾತ ಮಾಡಬಹುದು ಎಂಬ ಉದ್ದೇಶದಿಂದ ಬೇರೆ ರಾಜ್ಯದವರನ್ನು ರಾಜ್ಯಪಾಲರನ್ನಾಗಿ ಕಳುಹಿಸಲಾಗುತ್ತಿದೆ, ಜತೆಗೆ ರಾಷ್ಟ್ರದ ಭಾವೈಕ್ಯವನ್ನು ಬೆಸೆಯಲು ಸಹಕಾರಿ ಎಂದು ಹೇಳಲಾಯಿತು. ಅದೇನೇ ಇರಲಿ, ರಾಜ್ಯಪಾಲರು ಸ್ಥಳೀಯ ಜನರ ಭಾವನೆಗೆ ಸ್ಪಂದಿಸುತ್ತಿಲ್ಲ, ಭಾಷೆ- ಸಂಸ್ಕೃತಿಯನ್ನು ಅರಿಯುವ ಗೋಜಿಗೆ ಹೋಗುತ್ತಿಲ್ಲ. ನಿರ್ಗಮಿಸಿದ ವಜುಭಾಯಿ ವಾಲಾ ಅವರು 7 ವರ್ಷಗಳಷ್ಟು ಸುದೀರ್ಘ ಅವಧಿಗೆ ರಾಜ್ಯಪಾಲರಾಗಿದ್ದರೂ ಒಂದಕ್ಷರ ಕನ್ನಡ ಕಲಿಯಲಿಲ್ಲ. ಜಂಟಿ ಅಧಿವೇಶನವನ್ನು ಉದ್ದೇಶಿಸಿ ಹಿಂದಿಯಲ್ಲೇ ಮಾತನಾಡಿ 'ತಮ್ಮತನ'ದಿಂದ ಮೆರೆದರು. ಆಗ ವಿರೋಧ ಪಕ್ಷದವರೂ ವಿರೋಧಿಸಲಿಲ್ಲ. 'ವಾಲ ತಮ್ಮ ವಜನ್' (ತೂಕ) ಉಳಿಸಿಕೊಂಡರು. ಆದರೆ ಕನ್ನಡವನ್ನು ಗಾಳಿಗೆ ತೂರಿದರು. ಈಗ ಗೆಹ್ಲೋತ್ ಬಂದಿದ್ದಾರೆ. ಅವರಿಗೂ ಕನ್ನಡ ಕಲಿಯುವ ಅಗತ್ಯ ಬರುವುದಿಲ್ಲ. ಪುಣ್ಯಕೋಟಿಗಳಾದ ಕನ್ನಡಿಗರು ಇದನ್ನೂ ಸಹಿಸಿಕೊಳ್ಳುತ್ತೇವೆ.

ಭಾಷಾನ್ವಯ ರಾಜ್ಯಗಳ ರಚನೆಯನ್ನು ಸಂವಿಧಾನ ಒಪ್ಪಿದೆ. ಕನ್ನಡವನ್ನು ಆಡಳಿತ ಭಾಷೆ ಎಂದು ಕರ್ನಾಟಕ ಘೋಷಿಸಿದೆ. ಆದರೆ, ರಾಜ್ಯದ ಮೊದಲ ಪ್ರಜೆ ರಾಜ್ಯಪಾಲರಿಗೆ ಕನ್ನಡ ಜ್ಞಾನದ ಅಗತ್ಯವಿಲ್ಲ! ರಾಜ್ಯಪಾಲರಾಗಿ ಬರುವವರು ಕನಿಷ್ಠ ತಾವು ನೇಮಕವಾದ ರಾಜ್ಯದ ಭಾಷೆಯನ್ನು ಕಲಿಯುವ ಸೌಜನ್ಯ ತೋರದಿರುವುದರಿಂದ ರಾಜ್ಯಪಾಲರಿಗೆ ರಾಜ್ಯಭಾಷೆಯ ಕಲಿಕೆಯನ್ನು ಕಡ್ಡಾಯಗೊಳಿಸಿ ಕಲಿಸುವ ವ್ಯವಸ್ಥೆಯಾಗಬೇಕು.

ರಾ.ನಂ.ಚಂದ್ರಶೇಖರ, ಬೆಂಗಳೂರು

ಹತಾಶ ನಾಯಕರ ಬಾಲಿಶ ಹೇಳಿಕೆ

ಹಿರಿಯರು ಚಿಕ್ಕ ಮಕ್ಕಳನ್ನು ಹುರಿದುಂಬಿಸುತ್ತಾ, 'ಮುಂದೆ ಡಾಕ್ಟರ್ ಆಗಬೇಕು', 'ಎಂಜಿನಿಯರ್ ಆಗಬೇಕು', 'ಐಎಎಸ್ ಆಫೀಸರ್ ಆಗಬೇಕು'... ಅದಕ್ಕಾಗಿ ಹೆಚ್ಚಾಗಿ ಓದಿನ ಕಡೆ ಗಮನ ಕೊಡಬೇಕು ಎಂದೆಲ್ಲ ಹೇಳುತ್ತಾರೆ. ಹೀಗಿರುವಾಗ, ಕಾಂಗ್ರೆಸ್‌ನ ಹಿರಿಯ ನಾಯಕ ಧ್ರುವನಾರಾಯಣ್ ಅವರು 'ಕಾಂಗ್ರೆಸ್ ಅಧಿಕಾರಕ್ಕೆ ಆಸೆಪಡುವ ಪಕ್ಷ ಅಲ್ಲ' (ಪ್ರ.ವಾ., ಜುಲೈ 12) ಎಂದು ಹೇಳಿರುವುದು ಬಾಲಿಶ. ಪಕ್ಷದಲ್ಲೂ ಕಾರ್ಯಕರ್ತರನ್ನು ಹುರಿದುಂಬಿಸಿ 'ಜನರ ಅವಶ್ಯಕತೆಗೆ ಸ್ಪಂದಿಸಿದರೆ ನಾಯಕನಾಗಬಹುದು' ಎಂದು ಹೇಳದಿದ್ದರೆ, ಕಾರ್ಯಕರ್ತರೂ ಈ 'ಹತಾಶ' ನಾಯಕರಂತೆ ಆಸಕ್ತಿ ಕಳೆದುಕೊಳ್ಳುತ್ತಾರೆ.

ಈ ತರಹದ ಬಾಲಿಶ ಮಾತುಗಳಿಂದಲೇ, ಜನರಿಗೆ ಕಾಂಗ್ರೆಸ್ ಬದಲು ಟಿಎಂಸಿ, ಎಎಪಿ ಪಕ್ಷಗಳು ಆಶಾದಾಯಕವಾಗಿ ಕಾಣುತ್ತಿವೆ. ಮುಂದಿನ ವರ್ಷಗಳಲ್ಲಿ ನಡೆಯಲಿರುವ ಚುನಾವಣೆಗೆ ಬಿಜೆಪಿ ಎಲ್ಲ ತಯಾರಿ ನಡೆಸುತ್ತಿದೆ. ಆದರೆ, ಕಾಂಗ್ರೆಸ್ ನಾಯಕತ್ವಕ್ಕೆ, ಪಕ್ಷದ ಅಧ್ಯಕ್ಷ ಸ್ಥಾನ 'ಹಿಡಿದಿಟ್ಟುಕೊಳ್ಳುವ' ಬಗ್ಗೆ, ಪಕ್ಷದ ಘಟಾನುಘಟಿ ಪ್ರಬುದ್ಧರನ್ನು ಪಂಜರದ ಗಿಣಿಗಳಂತೆ ಇಟ್ಟು ನೇಪಥ್ಯಕ್ಕೆ ತಳ್ಳುವುದರ ಬಗ್ಗೆಯೇ ಆಸಕ್ತಿ. ಪಕ್ಷವನ್ನು ಬಲಪಡಿಸಬೇಕೆಂಬ ಚರ್ಚೆಯನ್ನು ಉದ್ದೇಶಪೂರ್ವಕವಾಗಿ ಮುಂದೂಡಲಾಗುತ್ತಿದೆ. ದುರಂತವೆಂದರೆ, ಪ್ರಬುದ್ಧರ ಬದಲು, ಕಾಂಗ್ರೆಸ್ ಪಕ್ಷದ 'ಎರಡನೇ ಸಾಲಿನ ವಕ್ತಾರರು' ನಾಯಕರಂತೆ ಮಿಂಚುತ್ತಿದ್ದಾರೆ. ಹಿರಿಯ ವಾಗ್ಮಿಗಳು, ಪ್ರಬುದ್ಧರನ್ನು ನೇಪಥ್ಯಕ್ಕೆ ಸರಿಸಿರುವುದರಿಂದ, ಕಾಂಗ್ರೆಸ್ಸಿಗೆ ಬೆಲೆ ಇಲ್ಲದಾಗಿದೆ ಎಂಬುದು ಅರಿವಾಗಿಲ್ಲ. ಈ ಸ್ಥಿತಿಯಲ್ಲಿ ಪಕ್ಷವು ಮುಂದೆ ಅಧಿಕಾರ ಪಡೆಯುವುದು ಭ್ರಮೆಯೆಂದು ತಿಳಿದು ಪಕ್ಷದವರೇ ಬೇರೆ ಪಕ್ಷಗಳಿಗೆ ಧಾವಿಸುತ್ತಿದ್ದಾರೆ. ಕಾಂಗ್ರೆಸ್‌ನ ಸ್ವಾರ್ಥ ನಾಯಕತ್ವದ ಕಾರಣ, ರಾಜ್ಯಗಳ ನಾಯಕರ ಮೇಲೆ ಹತೋಟಿ ಇಲ್ಲದಾಗಿದೆ.

ಪಿ.ಸಿ.ಕೇಶವ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.



ಪಶ್ಚಿಮ ಬಂಗಾಳ ವಿಧಾನಸಭೆ ಕಟ್ಟಡ

ಮುಖ್ಯಮಂತ್ರಿ ಕುರ್ಚಿ ಉಳಿಸಿಕೊಳ್ಳಲು ಮೇಲ್ಮನೆ ರಚನೆ ಪ್ರಯತ್ನಕ್ಕೆ ಚಾಲನೆಯೇ?

ಮಮತಾ ಬ್ಯಾನರ್ಜಿಗೆ ಪರಿಷತ್ ಮೋಹ

ವಿಧಾನ ಪರಿಷತ್ ರಚನೆಯ ಪ್ರಸ್ತಾವವನ್ನು ಪಶ್ಚಿಮ ಬಂಗಾಳ ವಿಧಾನಸಭೆ ಅಂಗೀಕರಿಸಿದೆ.



ಸುವೇಂದು

ಸದನದಲ್ಲಿದ್ದ 265 ಸದಸ್ಯರ ಪೈಕಿ, 196 ಸದಸ್ಯರ ಬಹುಮತದೊಂದಿಗೆ ನಿರ್ಣಯ ಅಂಗೀಕಾರಗೊಂಡಿದೆ. ವಿಧಾನಸಭಾ ಚುನಾವಣೆಗೆ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪ್ರಕಟಿಸಿದ್ದ ಪ್ರಣಾಳಿಕೆಯಲ್ಲಿಯೇ ಪರಿಷತ್ ರಚನೆಯ ಭರವಸೆ ಇತ್ತು. ಆದರೆ, ಈಗ ಪರಿಷತ್ ರಚನೆಗೆ ಟಿಎಂಸಿ ಮುಂದಾಗಿರುವುದರ ಹಿಂದೆ ಬೇರೆ ಕಾರಣವಿದೆ. ವಿಧಾನಸಭೆಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ನಂದಿಗ್ರಾಮ ಕ್ಷೇತ್ರದಲ್ಲಿ ತಮ್ಮ ಒಂದು ಕಾಲದ ಆಪ್ತ, ಬಿಜೆಪಿ ಅಭ್ಯರ್ಥಿ ಸುವೇಂದು ಅಧಿಕಾರಿ ವಿರುದ್ಧ ಟಿಎಂಸಿ ಮುಖ್ಯಸ್ಥೆ ಮತ್ತು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಸೋತಿದ್ದಾರೆ.

ಮುಖ್ಯಮಂತ್ರಿಯಾಗಿ ಮೇ 5ರಂದು ಪ್ರಮಾಣ ವಚನ ಸ್ವೀಕರಿಸಿರುವ ಮಮತಾ, ಆರು ತಿಂಗಳೊಳಗಾಗಿ ಚುನಾವಣೆಯಲ್ಲಿ ಸ್ಪರ್ಧಿಸಿ, ಗೆಲ್ಲಲೇಬೇಕಿದೆ. ಈಗಾಗಲೇ ಎರಡು ತಿಂಗಳು ಕಳೆದಿದೆ.

ಲೋಕಸಭೆ ಮತ್ತು ವಿಧಾನಸಭೆಯ ತೆರವಾಗಿರುವ ಸ್ಥಾನಗಳಿಗೆ ಉಪಚುನಾವಣೆ ನಡೆಸಲು ಕೋವಿಡ್‌-19ರ ಕಾರಣದಿಂದ ಸಾಧ್ಯವಿಲ್ಲ ಎಂದು ಚುನಾವಣಾ ಆಯೋಗವು ನಿರ್ಧರಿಸಿದೆ. ಹೀಗಾಗಿ, ಪಶ್ಚಿಮ ಬಂಗಾಳದಲ್ಲಿಯೂ ಉಪಚುನಾವಣೆ ಸಾಧ್ಯತೆ ಬಹುತೇಕ ಇಲ್ಲ. ಹೀಗಾದರೆ, ಇನ್ನುಳಿದ ನಾಲ್ಕು ತಿಂಗಳಲ್ಲಿ ಮಮತಾ ಬ್ಯಾನರ್ಜಿ ಅವರು ಶಾಸಕರಾಗಿ ಆಯ್ಕೆಯಾಗುವುದು ಕಷ್ಟ. ಆದ್ದರಿಂದ, ಈ ಅವಧಿಯಲ್ಲಿ ವಿಧಾನ ಪರಿಷತ್ ಅಸ್ತಿತ್ವಕ್ಕೆ ಬಂದಿದ್ದೇ ಆದಲ್ಲಿ, ಪರಿಷತ್ ಸದಸ್ಯೆಯಾಗಿ ಆಯ್ಕೆಯಾಗುವ ಮೂಲಕ ಮಮತಾ ಮುಖ್ಯಮಂತ್ರಿ ಸ್ಥಾನ ಉಳಿಸಿಕೊಳ್ಳಬಹುದು.



ಮಮತಾ



ಎಲ್ಲೆಲ್ಲಿವೆ ಪರಿಷತ್

1.ಕರ್ನಾಟಕ
2.ಆಂಧ್ರಪ್ರದೇಶ
3.ಉತ್ತರ ಪ್ರದೇಶ
4.ಮಹಾರಾಷ್ಟ್ರ
5.ಬಿಹಾರ
6.ತೆಲಂಗಾಣ

ಬಿಜೆಪಿಯ ವಿರೋಧ

ಪಶ್ಚಿಮ ಬಂಗಾಳದಲ್ಲಿ ವಿಧಾನ ಪರಿಷತ್ ರಚಿಸುವ ಪ್ರಸ್ತಾವಕ್ಕೆ ಅಲ್ಲಿನ ವಿರೋಧ ಪಕ್ಷ ಬಿಜೆಪಿಯಿಂದ ತೀವ್ರ ಆಕ್ಷೇಪ ಇದೆ. ವಿಧಾನ ಸಭಾ ಚುನಾವಣೆಯಲ್ಲಿ ಸೋತ ಟಿಎಂಸಿ ನಾಯಕರ ಹುದ್ದೆಗಳನ್ನು (ಮಮತಾ ಅವರ ಮುಖ್ಯಮಂತ್ರಿ ಸ್ಥಾನ) ರಕ್ಷಿಸುವುದನ್ನು ಬಿಟ್ಟರೆ ಇದರಲ್ಲಿ ಜನಹಿತದ ಕಾಳಜಿಯೇನೂ ಇಲ್ಲ ಎಂಬುದು ಬಿಜೆಪಿಯ ಪ್ರತಿಪಾದನೆ.

'ಬಹಳಷ್ಟು ರಾಜ್ಯಗಳು ವಿಧಾನ ಪರಿಷತ್ ಅನ್ನು ರದ್ದುಪಡಿಸಿವೆ. ವಿಧಾನಸಭೆ ಚುನಾವಣೆಯಲ್ಲಿ ಸೋತ ನಾಯಕರಿಗೆ ಹಿಂಬಾಗಿಲ ಪ್ರವೇಶ ದೊರಕಿಸಿಕೊಡುವುದಕ್ಕಾಗಿಯೇ ಟಿಎಂಸಿ, ಪರಿಷತ್ ರಚನೆಯ ಪ್ರಸ್ತಾವ ಮುಂದಿಟ್ಟಿದೆ. ಪರಿಷತ್ ರಚನೆಯಿಂದ ಸರ್ಕಾರದ ಬೊಕ್ಕಸಕ್ಕೆ ಹೊರೆ. ಹಣ ಇಲ್ಲ ಎಂದು ಹೇಳುವ ಸರ್ಕಾರವು ಈಗ ಪರಿಷತ್ ರಚನೆಗೆ ಮುಂದಾಗಿರುವುದು ಏಕೆ? ವರ್ಷಕ್ಕೆ ₹90 ಕೋಟಿಯಿಂದ ₹100 ಕೋಟಿ ಹೊರೆ ಬೀಳಲಿದೆ' ಎಂದು ಪಶ್ಚಿಮ ಬಂಗಾಳ ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿ ಹೇಳಿದ್ದಾರೆ.

1952ರಿಂದ 1969ರ ವರೆಗೆ ಪಶ್ಚಿಮ ಬಂಗಾಳದಲ್ಲಿ ಪರಿಷತ್ ಇತ್ತು. ಈ ಅವಧಿಯಲ್ಲಿ 436 ಮಸೂದೆಗಳಿಗೆ ಅಂಗೀಕಾರ ಸಿಕ್ಕಿದೆ. ಅವುಗಳ ಪೈಕಿ ಎರಡು ಮಾತ್ರ ಪರಿಷತ್ ಕಾರಣಕ್ಕೆ ತಿದ್ದುಪಡಿಗೆ ಒಳಗಾದವು ಎಂದು ಅಧಿಕಾರಿ ವಿವರಿಸಿದ್ದಾರೆ.

ರದ್ದತಿಯ ಹಿಂದೆಯೂ ರಾಜಕಾರಣ

ಸಂಯುಕ್ತ ರಂಗ ಮೈತ್ರಿಕೂಟವು 1967ರಲ್ಲಿ ಕಾಂಗ್ರೆಸ್ ಅನ್ನು ಪಶ್ಚಿಮ ಬಂಗಾಳದಲ್ಲಿ ಅಧಿಕಾರದಿಂದ ಕೆಳಕ್ಕೆ ಇಳಿಸಿತು. ಆದರೆ, ಒಂಬತ್ತೇ ತಿಂಗಳಲ್ಲಿ ಈ ಸರ್ಕಾರವು ಪತನವಾಗಿ, ಕಾಂಗ್ರೆಸ್ ಬೆಂಬಲದ ಮುಖ್ಯಮಂತ್ರಿ ಅಧಿಕಾರಕ್ಕೆ ಬಂದರು. ಸಂಯುಕ್ತ ರಂಗ ನೇತೃತ್ವದ ಸರ್ಕಾರವನ್ನು ರಾಜ್ಯಪಾಲರು ವಜಾ ಮಾಡಿದ್ದು ಅಸಾಂವಿಧಾನಿಕ ಎಂದು ವಿಧಾನಪರಿಷತ್‌ನ ಸ್ಪೀಕರ್ ಹೇಳಿದ್ದರು. ಆದರೆ, ಹೊಸ ಸರ್ಕಾರವು ಸಂವಿಧಾನಬದ್ಧ ಎಂದು ವಿಧಾನ ಪರಿಷತ್ ನಿರ್ಣಯ ಅಂಗೀಕರಿಸಿತ್ತು. ಪರಿಷತ್‌ನಲ್ಲಿ ಕಾಂಗ್ರೆಸ್‌ಗೆ ಬಹುಮತವಿತ್ತು.

1969ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಸಂಯುಕ್ತ ರಂಗ ಮೈತ್ರಿಕೂಟ ಮತ್ತೆ ಅಧಿಕಾರಕ್ಕೆ ಬಂತು. ಮೈತ್ರಿಕೂಟಕ್ಕೆ ಮೂರನೇ ಎರಡಕ್ಕೂ ಹೆಚ್ಚು ಬಹುಮತ ಇತ್ತು. ವಿಧಾನಪರಿಷತ್ ಅನ್ನು ರದ್ದುಪಡಿಸುವ ನಿರ್ಣಯವನ್ನು ಈ ಸರ್ಕಾರವು ವಿಧಾನಸಭೆಯಲ್ಲಿ ಮಂಡಿಸಿ ಅಂಗೀಕರಿಸಿತು. ಸಂಸತ್ತಿನ ಅನುಮೋದನೆಯೊಂದಿಗೆ ಪರಿಷತ್ ರದ್ದಾಯಿತು.

2011ರಲ್ಲಿ ಅಧಿಕಾರಕ್ಕೆ ಬಂದಾಗಲೇ ಪರಿಷತ್ ರಚನೆಯ ಪ್ರಸ್ತಾವವನ್ನು ಟಿಎಂಸಿ ವಿಧಾನಸಭೆಯಲ್ಲಿ ಮಂಡಿಸಿತ್ತು. ಪ್ರಸ್ತಾವಕ್ಕೆ ಅನುಮೋದನೆಯೂ ಸಿಕ್ಕಿತ್ತು. ಪರಿಷತ್ ರಚನೆಯ ಸಂಬಂಧ ವರದಿ ಸಲ್ಲಿಸಲು ಸಮಿತಿಯೊಂದನ್ನು ರಚಿಸಲಾಗಿತ್ತು. ಆದರೆ, ಮುಂದಿನ ದಿನಗಳಲ್ಲಿ ಅದು ನನೆಗುದಿಗೆ ಬಿತ್ತು. ಕಾರಣ ಏನು ಎಂಬುದೂ ತಿಳಿಯಲಿಲ್ಲ.

ತೀರಥ್ ಸಿಂಗ್ ಬಲಿಪಶುವೇ?

ಉತ್ತರಾಖಂಡ ಮುಖ್ಯಮಂತ್ರಿ ತೀರಥ್ ಸಿಂಗ್ ರಾವತ್ ಅವರು ಅಧಿಕಾರಕ್ಕೆ ಏರಿ ನಾಲ್ಕು ತಿಂಗಳ ಒಳಗೇ ಸ್ಥಾನಕ್ಕೆ ಇದೇ 3ರಂದು ರಾಜೀನಾಮೆ ನೀಡಿದ್ದಾರೆ. ಕೋವಿಡ್‌-19 ತಡೆ ಮಾರ್ಗಸೂಚಿಯ ಕಾರಣದಿಂದಾಗಿ ಉಪಚುನಾವಣೆ ನಡೆಸಲು ಸಾಧ್ಯವಾಗದು. ಹಾಗಾಗಿ, ರಾಜೀನಾಮೆ ನೀಡುವುದಾಗಿ ತೀರಥ್ ಸಿಂಗ್ ಹೇಳಿದ್ದರು.

ಆದರೆ, ಇದು ಮಮತಾ ಅವರನ್ನು ಗುರಿಯಾಗಿಸಿ ಬಿಜೆಪಿ ಹೆಣೆದ ಕಾರ್ಯತಂತ್ರ ಎಂದು ಕಾಂಗ್ರೆಸ್ ಮತ್ತು ಇತರ ಪಕ್ಷಗಳ ಮುಖಂಡರು ಹೇಳಿದ್ದಾರೆ. ನವೆಂಬರ್ 5ರೊಳಗೆ ವಿಧಾನ ಸಭೆಗೆ ಮಮತಾ ಆಯ್ಕೆಯಾಗುವುದು ಸಾಧ್ಯವಿಲ್ಲ. ಹಾಗಾಗಿ, ಅವರು ರಾಜೀನಾಮೆ ನೀಡಬೇಕು ಎಂದು ತೀರಥ್ ಸಿಂಗ್ ಅವರನ್ನು ಬಲಿಪಶುವಾಗಿಸುವ ಮೂಲಕ ಬಿಜೆಪಿ ಹೇಳಿದೆ ಎಂದು ವಿಶ್ಲೇಷಕರು ಹೇಳಿದ್ದಾರೆ.

ಸಂಸತ್ತಿನ ಅಂಗೀಕಾರ ಬೇಕು

ಸಂಸತ್ತಿನಲ್ಲಿ ಎರಡು ಸದನಗಳಿರುವಂತೆಯೇ, ರಾಜ್ಯಗಳು ಸಂವಿಧಾನದ 169ನೇ ವಿಧಿ ಮೂಲಕ ವಿಧಾನಸಭೆಯ ಜೊತೆಗೆ ವಿಧಾನ ಪರಿಷತ್ ಅನ್ನು ಹೊಂದಲು ಅವಕಾಶವಿದೆ.

ಈಗಾಗಲೇ ಅಸ್ತಿತ್ವದಲ್ಲಿರುವ ವಿಧಾನ ಪರಿಷತ್ತನ್ನು ಸಂಸತ್ತು ರದ್ದುಗೊಳಿಸಬಹುದು ಅಥವಾ ಸರಳ ಬಹುಮತದ ಮೂಲಕ ಹೊಸದಾಗಿ ರಚಿಸಬಹುದು. ರಾಜ್ಯದ ವಿಧಾನಸಭೆಯಲ್ಲಿ ಬಹುಮತದ ಮೂಲಕ ಈ ಪ್ರಸ್ತಾವವನ್ನು ಮೊದಲಿಗೆ ಅಂಗೀಕರಿಸಬೇಕು. ಈ ನಿರ್ಣಯಕ್ಕೆ ರಾಜ್ಯಪಾಲರಿಂದ ಅನುಮೋದನೆ ಬೇಕಾಗುತ್ತದೆ. ಇದನ್ನು ಕೇಂದ್ರಕ್ಕೆ ರವಾನಿಸಿ, ಸಂಸತ್ತಿನಲ್ಲಿ ಮಸೂದೆ ಅಂಗೀಕಾರ ಪಡೆಯಬೇಕಿದೆ. ಇದಕ್ಕೆ ಒಂದಿಷ್ಟು ಕಾಲಾವಕಾಶ ಹಿಡಿಯುತ್ತದೆ.

ಸಂವಿಧಾನದ 171ನೇ ವಿಧಿ ಪ್ರಕಾರ, ರಾಜ್ಯದ ವಿಧಾನ ಪರಿಷತ್ತಿನ ಸಾಮರ್ಥ್ಯವು ರಾಜ್ಯ ವಿಧಾನಸಭೆಯ ಒಟ್ಟು ಬಲದ ಮೂರನೇ ಒಂದು ಭಾಗಕ್ಕಿಂತ ಹೆಚ್ಚು ಇರುವಂತಿಲ್ಲ. ಕೇಂದ್ರದಲ್ಲಿ ರಾಜ್ಯಸಭೆ ಇರುವಂತೆ ರಾಜ್ಯದಲ್ಲಿ ಪರಿಷತ್ ಇರುತ್ತದೆ. ಇದು ಶಾಶ್ವತವಾಗಿದ್ದು, ಎಂದಿಗೂ ವಿಸರ್ಜನೆಯಾಗುವುದಿಲ್ಲ. ವಿಧಾನ ಪರಿಷತ್ತಿನ (ಎಂಎಲ್‌ಸಿ) ಸದಸ್ಯರ ಅಧಿಕಾರಾವಧಿ ಆರು ವರ್ಷಗಳಾಗಿದ್ದು, ಮೂರನೇ ಎರಡರಷ್ಟು ಸದಸ್ಯರು ಪ್ರತಿ ಎರಡು ವರ್ಷಗಳಿಗೊಮ್ಮೆ ನಿವೃತ್ತರಾಗುತ್ತಾರೆ.

ತಕ್ಷಣಕ್ಕೆ ರಚನೆ ಸಾಧ್ಯವೇ?

ವಿಧಾನ ಪರಿಷತ್‌ಗಳನ್ನು ಹೊಸದಾಗಿ ಸ್ಥಾಪಿಸುವ ಅಥವಾ ರದ್ದುಗೊಳಿಸುವ ಪ್ರಕ್ರಿಯೆ ನಡೆಯುತ್ತಲೇ ಇದೆ. 2020ರಲ್ಲಿ ವಿಧಾನ ಪರಿಷತ್ತನ್ನು ರದ್ದು ಗೊಳಿಸುವ ನಿರ್ಣಯವನ್ನು ಆಂಧ್ರಪ್ರದೇಶದ ವಿಧಾನಸಭೆ ಅಂಗೀಕರಿಸಿತು. ಪರಿಷತ್ ರದ್ದುಗೊಳಿಸುವ ನಿರ್ಣಯವನ್ನು ಸಂಸತ್ತು ಇನ್ನಷ್ಟೇ ಅನುಮೋದಿಸಬೇಕಿದೆ.

ಜಮ್ಮು ಮತ್ತು ಕಾಶ್ಮೀರ ವಿಧಾನ ಪರಿಷತ್ತನ್ನು 2019ರಲ್ಲಿ ರದ್ದುಪಡಿಸಲಾಯಿತು. ಜಮ್ಮು ಕಾಶ್ಮೀರ ಮರುರಚನೆ ಮಸೂದೆಯ ಮೂಲಕ ಇದನ್ನು ರದ್ದು ಮಾಡಲಾಯಿತು. ಈ ಕಾಯ್ದೆ ಮೂಲಕ ಜಮ್ಮು ಕಾಶ್ಮೀರದ ರಾಜ್ಯದ ಸ್ಥಾನಮಾನವು ಹೋಗಿ, ಕೇಂದ್ರಾಡಳಿತ ಪ್ರದೇಶವಾಗಿ ಬದಲಾಯಿತು.

ಪರಿಷತ್ ಸ್ಥಾಪನೆ ವಿಚಾರವು ತಮಿಳುನಾಡಿನಲ್ಲಿ ಮೂರು ದಶಕಗಳಿಂದ ವಿವಾದದ ಕೇಂದ್ರವಾಗಿದೆ. 2010ರಲ್ಲಿ ಅಸ್ಸಾಂ ವಿಧಾನಸಭೆ ಮತ್ತು 2012ರಲ್ಲಿ ರಾಜಸ್ಥಾನ ವಿಧಾನಸಭೆಗಳು ತಮ್ಮ ರಾಜ್ಯಗಳಲ್ಲಿ ವಿಧಾನ ಪರಿಷತ್ ರಚಿಸುವ ನಿರ್ಣಯಗಳನ್ನು ಅಂಗೀಕರಿಸಿವೆ. ಈ ಮಸೂದೆಗಳು ರಾಜ್ಯಸಭೆಯಲ್ಲಿ ಇನ್ನೂ ಬಾಕಿ ಉಳಿದಿವೆ. ಹಾಗಾಗಿ, ಪರಿಷತ್ ಅನ್ನು ತುರ್ತಾಗಿ ರಚಿಸುವ ಟಿಎಂಸಿ ಪ್ರಯತ್ನ ಕೈಗೂಡುವುದು ಸುಲಭವಲ್ಲ.

'ಭಟ್ಟಂಗಿಗಳ ಬಗ್ಗೆ ಎಚ್ಚರ ಇರಲಿ'



• ಸಾಗರ್ ಕುಲಕರ್ಣಿ

ಪ್ರಜಾವಾಣಿ ಸಂದರ್ಶನ

ರಣದೀಪ್ ಸುರ್ಜೇವಾಲಾ

ಮುಖ್ಯಮಂತ್ರಿ ಆಗಬೇಕು ಎಂಬ ಆಕಾಂಕ್ಷೆ ಒಳ್ಳೆಯದೇ. ಆದರೆ, ಅದು ಪಕ್ಷದ ಶಿಸ್ತನ್ನು ಉಲ್ಲಂಘಿಸುವಂತಿರಬಾರದು ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸುರ್ಜೇವಾಲಾ ಅವರು ಕರ್ನಾಟಕ ಕಾಂಗ್ರೆಸ್‌ನ ಬಣ ರಾಜಕಾರಣದ ಕುರಿತು ಹೇಳಿದ್ದಾರೆ. ಕೆಲವು ಹಿಂಬಾಲಕರು ಭಟ್ಟಂಗಿತನದ ಮೂಲಕ ನಾಯಕರ ಮೆಚ್ಚುಗೆ ಗಳಿಸಲು ಯತ್ನಿಸುತ್ತಾರೆ ಎಂಬ ಎಚ್ಚರಿಕೆಯನ್ನೂ ನೀಡಿದ್ದಾರೆ.

• ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ನಡುವೆಯೇ ತಿಕ್ಕಾಟ ಇರುವಾಗ ಜನರು ಕಾಂಗ್ರೆಸ್‌ನ ಮೇಲೆ ನಂಬಿಕೆ ಇರಿಸಬಹುದೇ?

ಬಿಜೆಪಿ ಮತ್ತು ಇತರ ಪಕ್ಷಗಳು ರಾಜಕೀಯ ದಿವಾಳಿತನ, ಅವಕಾಶವಾದ, ಸಿದ್ಧಾಂತರಾಹಿತ್ಯ ಮತ್ತು ರಾಜ್ಯದ ಹಿತಕ್ಕೆ ಸಂಬಂಧಿಸಿ ಅಲ್ಪದೃಷ್ಟಿ ಹೊಂದಿವೆ. ಹಾಗಾಗಿ, ನಂಬಿಕೆಗೆ ಅರ್ಹವಾಗಿರುವ ಪಕ್ಷ ಕಾಂಗ್ರೆಸ್ ಮಾತ್ರ. ಕೆಲವು ನಾಯಕರು ಮುಖ್ಯಮಂತ್ರಿ ಅಭ್ಯರ್ಥಿ ಎಂಬ ಅರ್ಥದಲ್ಲಿ ಆ ನಾಯಕರ ಹಿಂಬಾಲಕರು ಹೇಳಿಕೆಗಳನ್ನು ನೀಡುತ್ತಿದ್ದಾರೆ. ಮಹತ್ವಾಕಾಂಕ್ಷೆ ಒಳ್ಳೆಯದೇ. ಆದರೆ, ಅದು ಪಕ್ಷದ ಶಿಸ್ತನ್ನು, ಜನರ ಸೇವೆ ಮಾಡಬೇಕು ಎಂಬ ಬದ್ಧತೆಯನ್ನು ಉಲ್ಲಂಘಿಸಬಾರದು. ಸಿದ್ದರಾಮಯ್ಯ ಮತ್ತು ಶಿವಕುಮಾರ್ ಒಳಗೊಂಡಂತೆ ಎಲ್ಲ ನಾಯಕರಿಗೂ ಇದು ಗೊತ್ತು ಮತ್ತು ಅವರು ಇದನ್ನು ಬಹಿರಂಗವಾಗಿಯೇ ಒಪ್ಪಿಕೊಂಡಿದ್ದಾರೆ. ಅಶಿಸ್ತನ್ನು ಪಕ್ಷವು ಸಹಿಸುವುದಿಲ್ಲ. ಕೆಲವರು ತಮ್ಮ ನಾಯಕರ ಮೆಚ್ಚುಗೆಗಾಗಿ ಭಟ್ಟಂಗಿತನ ಮಾಡುತ್ತಾರೆ ಎಂಬುದನ್ನೂ ನಾಯಕರು ಅರ್ಥ ಮಾಡಿಕೊಳ್ಳಬೇಕು. ಅಪಾರ ಪ್ರತಿಭೆ ಮತ್ತು ವಿವೇಕ ಹೊಂದಿರುವ ನಾಯಕರಿರುವ ಏಕೈಕ ಪಕ್ಷ ಕರ್ನಾಟಕದಲ್ಲಿ ಕಾಂಗ್ರೆಸ್ ಮಾತ್ರ. ರಾಜ್ಯವನ್ನು ಮುಂದಕ್ಕೆ ಒಯ್ಯಲು ಈ ಎಲ್ಲವನ್ನೂ ಬಳಸಲಾಗುವುದು. ನಾವು ಒಗ್ಗಟ್ಟಾಗಿಯೇ ಚುನಾವಣೆ ಎದುರಿಸಲಿದ್ದೇವೆ ಮತ್ತು ಕಾಂಗ್ರೆಸ್ ಶಾಸಕರು ಮತ್ತು ಪಕ್ಷದ ನಾಯಕರು ರಾಜ್ಯದ ನಾಯಕತ್ವವನ್ನು ಯಾರಿಗೆ ನೀಡಬೇಕು ಎಂಬುದನ್ನು ನಿರ್ಧರಿಸಲಿದ್ದಾರೆ.

• ಕರ್ನಾಟಕ ಕಾಂಗ್ರೆಸ್ ಪುನರ್‌ರಚನೆಯ ಉದ್ದೇಶ ಇದೆಯೇ? ಈಗ ಇರುವ ಪದಾಧಿಕಾರಿಗಳನ್ನು ಬದಲಾಯಿಸಬೇಕು ಎಂದು ಶಿವಕುಮಾರ್ ಬಯಸುತ್ತಿದ್ದಾರೆ...

ಪಕ್ಷ ಕಟ್ಟುವುದು ನಿರಂತರ ಪ್ರಕ್ರಿಯೆ. ಅಧ್ಯಕ್ಷ ಮತ್ತು ಕಾರ್ಯಾಧ್ಯಕ್ಷರನ್ನು ಬಿಟ್ಟು ರಾಜ್ಯ ಕಾಂಗ್ರೆಸ್ ಸಮಿತಿಯನ್ನು ಬರ್ಖಾಸ್ತು ಮಾಡಲಾಗಿದೆ. ಪ್ರದೇಶ ಕಾಂಗ್ರೆಸ್ ಸಮಿತಿಯ ಹೊಸ ಪದಾಧಿಕಾರಿಗಳ ಬಗ್ಗೆ ವ್ಯಾಪಕ ಸಮಾಲೋಚನೆ ನಡೆಸಲಾಗಿದೆ. ಪ್ರದೇಶ ಕಾಂಗ್ರೆಸ್ ಸಮಿತಿಯನ್ನು ಸದ್ಯದಲ್ಲೇ ಪುನರ್ ರಚಿಸಲಾಗುವುದು. ರಾಜ್ಯ ಘಟಕದ ಪದಾಧಿಕಾರಿಗಳು ಮಾತ್ರವಲ್ಲ, ಜಿಲ್ಲೆ ಮತ್ತು ತಾಲ್ಲೂಕು ಮಟ್ಟದ ಅಧ್ಯಕ್ಷರು ಎಷ್ಟು ಪರಿಣಾಮಕಾರಿ ಆಗಿದ್ದಾರೆ ಎಂಬ ಬಗ್ಗೆಯೂ ಪರಿಶೀಲನೆ ನಡೆಯಲಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡ, ಹಿಂದುಳಿದ ವರ್ಗಗಳು, ಯುವ ಜನರು ಮತ್ತು ಕೃಷಿ ಸಮುದಾಯಕ್ಕೆ ಹೊಸ ನಾಯಕತ್ವ ನೀಡುವುದು ಇದರ ಉದ್ದೇಶ. ಗ್ರಾಮ ಮತ್ತು ವಾರ್ಡ್ ಮಟ್ಟದ ಸಮಿತಿ ರಚನೆಯ ಬಗ್ಗೆಯೂ ರಾಜ್ಯ ಘಟಕದ ಅಧ್ಯಕ್ಷ ಹಾಗೂ ಶಾಸಕಾಂಗ ಪಕ್ಷದ ನಾಯಕರ ಜತೆಗೆ ಚರ್ಚೆ ನಡೆಸಿದ್ದೇನೆ.

• ಕರ್ನಾಟಕದಲ್ಲಿ ಬಿಜೆಪಿಯ ಸ್ಥಿತಿ ಚೆನ್ನಾಗಿಲ್ಲ. ಭಿನ್ನಮತೀಯರು ಮುಖ್ಯಮಂತ್ರಿ ಯಡಿಯೂರಪ್ಪ ಅವರ ವಿರುದ್ಧ ನಿಂತಿದ್ದಾರೆ...

ಕರ್ನಾಟಕದಲ್ಲಿ ಬಿಜೆಪಿ ಅಕ್ರಮ ಸರ್ಕಾರವನ್ನು ನಡೆಸುತ್ತಿದೆ. ಸಹಜವಾಗಿಯೇ, ಜನಾದೇಶವನ್ನು ಅಪಹರಿಸಿದ್ದರ ವಿರೋಧಾಭಾಸಗಳು ಪಕ್ಷಾಂತರಿಗಳ ಮೂಲಕ ಕಾಣಿಸಿಕೊಳ್ಳುತ್ತದೆ. ಯಡಿಯೂರಪ್ಪ ನೇತೃತ್ವದ ಸರ್ಕಾರ ದಿನದಿಂದ ದಿನಕ್ಕೆ ಕುಸಿಯುತ್ತಿದೆ ಎಂಬುದು ನಿಜ. ಭ್ರಷ್ಟಾಚಾರ ಮತ್ತು ಕುಸಿದು ಬಿದ್ದ ಆಡಳಿತದಿಂದಾಗಿ ಜನರು ಬೆಲೆ ತೆರುತ್ತಿದ್ದಾರೆ.

• ಮುಖ್ಯಮಂತ್ರಿಯ 'ನಿರಂಕುಶಾಧಿಕಾರ'ವನ್ನು ಪ್ರಶ್ನಿಸಿ ಸಚಿವ ಕೆ.ಎಸ್. ಈಶ್ವರಪ್ಪ ಅವರು ರಾಜ್ಯಪಾಲರಿಗೆ ಪತ್ರ ಬರೆದಿದ್ದಾರೆ. ಹಾಲಿ ಸಚಿವರೊಬ್ಬರು ಮುಖ್ಯಮಂತ್ರಿಯ ವಿರುದ್ಧವೇ ರಾಜ್ಯಪಾಲರಿಗೆ ದೂರು ನೀಡಿರುವುದು ಭಾರತದ ಇತಿಹಾಸದಲ್ಲಿಯೇ ಮೊದಲನೇ ಘಟನೆ. ಈಶ್ವರಪ್ಪ ಸರಿ ಎಂದಾದರೆ ಮುಖ್ಯಮಂತ್ರಿಯನ್ನು, ಇಲ್ಲ ಎಂದಾದರೆ ಈಶ್ವರಪ್ಪ ಅವರನ್ನು ವಜಾ ಮಾಡಬೇಕಲ್ಲವೇ?

ಭ್ರಷ್ಟಾಚಾರ, ಆಡಳಿತದ ವೈಫಲ್ಯ, ದುರಾಡಳಿತ, ಅದಕ್ಷತೆ, ಮುಖ್ಯಮಂತ್ರಿ ಮಗ ಮತ್ತು ಕುಟುಂಬದ ಸದಸ್ಯರು ಆಳ್ವಿಕೆಯ ಮೇಲೆ ಹೊಂದಿರುವ ಅಕ್ರಮ ಹಿಡಿತದ ಬಗ್ಗೆ ಬಸನಗೌಡ ಪಾಟೀಲ ಯತ್ನಾಳ, ವಿಶ್ವನಾಥ್, ಯೋಗೇಶ್ವರ್, ಅರವಿಂದ ಬೆಲ್ಲದ, ರೇಣುಕಾಚಾರ್ಯ ಅವರಂತಹ ಬಿಜೆಪಿಯ ಹಿರಿಯ ಮುಖಂಡರೇ ಧ್ವನಿ ಎತ್ತಿದ್ದಾರೆ. ಸಿಕ್ಕಿದ್ದನ್ನು ಎಲ್ಲರೂ ಹಂಚಿಕೊಳ್ಳುತ್ತಿರುವುದರ ನಡುವೆಯೇ ಆರೋಪವೂ ಕೇಳಿ ಬರುತ್ತಿದೆ. ಹೀಗೆಲ್ಲ ಆಗುತ್ತಿರುವಾಗಲೂ ಪ್ರಧಾನಿ ನರೇಂದ್ರ ಮೋದಿ ಅವರು ಮೌನ ವಹಿಸಲು ಕಾರಣವಾದರೂ ಏನು ಎಂಬುದೇ ಅರ್ಥ ಆಗುತ್ತಿಲ್ಲ.


• ಯಡಿಯೂರಪ್ಪ ನೇತೃತ್ವದ ಸರ್ಕಾರವನ್ನು ಕಾಡುತ್ತಿರುವ ಸಮಸ್ಯೆಗಳಿಗೆ ಪರಿಹಾರ ಏನು?

ಪರಿಹಾರ ಸರಳ. ಬಿಜೆಪಿಯ ಅಕ್ರಮ ಸರ್ಕಾರವನ್ನು ವಜಾ ಮಾಡಿ ಹೊಸದಾಗಿ ಚುನಾವಣೆ ನಡೆಸಿ. ಭ್ರಷ್ಟಾಚಾರದಲ್ಲಿ ತನಿಖೆ ಎದುರಿಸುತ್ತಿರುವ ವ್ಯಕ್ತಿ ಮುಖ್ಯಮಂತ್ರಿಯಾಗಿ ಇರುವುದು ಹೇಗೆ ಸಾಧ್ಯ?

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಬಾಲಿವುಡ್‌ನ ಖ್ಯಾತ ನಟ, ಇತ್ತೀಚೆಗೆ ನಿಧನರಾದ ದಿಲೀಪ್ ಕುಮಾರ್ ಅವರು ತಮ್ಮ ಆಸ್ತಿಯನ್ನು ವಕ್ಫ್ ಮಂಡಳಿಗೆ ನೀಡಿದ್ದಾರೆ ಎಂಬ ಸುದ್ದಿ ಪ್ರಚಲಿತದಲ್ಲಿದೆ. ಟ್ವಿಟರ್ ಬಳಕೆದಾರರು ಈ ಮಾಹಿತಿಯನ್ನು ಹಂಚಿಕೊಂಡಿದ್ದು, ದಿಲೀಪ್ ಕುಮಾರ್ ಅವರ ಇಸ್ಲಾಂ ಮೂಲವೇ ಇದಕ್ಕೆ ಕಾರಣ ಎಂಬ ಅರ್ಥದಲ್ಲಿ ಟ್ವೀಟ್ ಮಾಡಿದ್ದಾರೆ. ₹98 ಕೋಟಿ ದಾನ ನೀಡಿದ್ದಾರೆ ಎಂದು ಕೆಲವರು ಉಲ್ಲೇಖಿಸಿದ್ದಾರೆ. ದಿಲೀಪ್ ಕುಮಾರ್ ಅವರು ಪಾಕಿಸ್ತಾನದ ಪೇಶಾವರದ ಮುಸ್ಲಿಂ ಕುಟುಂಬದಲ್ಲಿ ಜನಿಸಿದ್ದರು. ಅವರು ಮುಂಬೈನ ಹಿಂದುಜಾ ಆಸ್ಪತ್ರೆಯಲ್ಲಿ ತಮ್ಮ 98ನೇ ವಯಸ್ಸಿನಲ್ಲಿ ನಿಧನರಾದರು.



ವಕ್ಫ್ ಮಂಡಳಿಗೆ ದಿಲೀಪ್ ಕುಮಾರ್ ದೇಣಿಗೆ ನೀಡಿದ ವಿಚಾರವನ್ನು ಅವರ ಮ್ಯಾನೇಜರ್ ಫೈಸಲ್ ಫಾರೂಕಿ ಅಲ್ಲಗಳೆದಿದ್ದಾರೆ ಎಂದು ಲಾಜಿಕಲ್ ಇಂಡಿಯನ್ ಫ್ಯಾಕ್ಟ್ ಚೆಕ್ ವೇದಿಕೆ ತಿಳಿಸಿದೆ. ಅವರ ಆಸ್ತಿ ಏನಿದ್ದರೂ ಅವರ ಪತ್ನಿ ಸಾಯಿರಾ ಬಾನು ಅವರಿಗೆ ಸೇರಿದ್ದು ಎಂದು ತಿಳಿಸಿದ್ದಾರೆ. ಮಹಾರಾಷ್ಟ್ರ ವಕ್ಫ್ ಮಂಡಳಿ ಸಿಇಒ ಅನೀಸ್ ಶೇಖ್ ಅವರನ್ನು ಸಂಪರ್ಕಿಸಿದಾಗ, ದಿಲೀಪ್ ಕುಮಾರ್ ಅವರಿಂದ ಯಾವುದೇ ದೇಣಿಗೆ ಬಂದಿಲ್ಲ ಎಂದು ತಿಳಿಸಿದ್ದಾರೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ವೆಸ್ಸಂತರನಿಗಾಗಿ ಹುಡುಕಾಟ

ಹೆಂಡತಿಯ ಬಿರುಮಾತಿಗೆ ಮುದುಕ ಬ್ರಾಹ್ಮಣ ತತ್ತರಿಸಿ ಹೋದ. ತರುಣ ಹೆಂಡತಿಯಲ್ಲಿ ತಾನಿಟ್ಟಿದ್ದ ಕಾಮುಕತೆಗೆ ಪೀಡಿತನಾದ ಬ್ರಾಹ್ಮಣ ಹೇಳಿದ, 'ಆಯ್ತು, ದೇವಿ. ದಯವಿಟ್ಟು ನನಗಾಗಿ ಪ್ರಯಾಣಕ್ಕಾಗಿ ಬೆಲ್ಲ ಹಾಕಿದ ಪೂರಿಗಳನ್ನು ಮಾಡು. ಒಂದಷ್ಟು ರೊಟ್ಟಿಗಳನ್ನು ಮಾಡು. ರುಚಿ ರುಚಿಯಾದ ಉಂಡೆಗಳನ್ನು ಮಾಡಿ ಕಟ್ಟು. ಅವನ್ನೆಲ್ಲ ತೆಗೆದುಕೊಂಡು ದೂರದ ಪ್ರವಾಸಕ್ಕೆ ಹೊರಡುತ್ತೇನೆ. ಹೇಗಾದರೂ ಮಾಡಿ ವೆಸ್ಸಂತರನನ್ನು ಬೆಟ್ಟಿಯಾಗಿ, ನಿನ್ನ ಸೇವೆಗೆ ದಾಸ, ದಾಸಿಯರನ್ನು ಕರೆದುಕೊಂಡೇ ಬರುತ್ತೇನೆ'. ಆಕೆ ಇಡೀ ದಿನ ಕಷ್ಟಪಟ್ಟು ಎಲ್ಲ ಅಡುಗೆಯನ್ನು ಮಾಡಿ ಚೆನ್ನಾಗಿ ಬುತ್ತಿ ಕಟ್ಟಿಕೊಟ್ಟಳು. ಆತ ಹೊರಡುವ ಮುನ್ನ ಮನೆಗೆ ಬೇಕಾದ ದುರಸ್ತಿಗಳನ್ನು ಮಾಡಿಸಿ, ಬಾಗಿಲನ್ನು ಭದ್ರಪಡಿಸಿದ. ಸಾಕಷ್ಟು ದಿನ ಆಗುವಂತೆ ಕಾಡಿನಿಂದ ಸೌದೆಯನ್ನು ತಂದು ತುಂಬಿದ. ಮನೆಯಲ್ಲಿ ಇದ್ದ ಎಲ್ಲ ಪಾತ್ರೆಗಳಲ್ಲಿ ನೀರು ತುಂಬಿದ. ನಂತರ ಮನೆಯಿಂದ ಹೊರಡುವಾಗ ಗೃಹಸ್ಥನ ಬಟ್ಟೆ ಕಳಚಿ, ಸನ್ಯಾಸಿಯ ವೇಷ ಧರಿಸಿದ. ಹೆಂಡತಿಗೆ ಎಚ್ಚರ ನೀಡಿದ, 'ದೇವಿ, ಇಂದಿನಿಂದ ಅಸಮಯದಲ್ಲಿ ಮನೆಯಿಂದ ಹೊರಗೆ ಹೋಗಬೇಡ. ನಾನು ಬರುವವರೆಗೆ ಮನಸ್ಸನ್ನು ಚಂಚಲ ಮಾಡಿಕೊಳ್ಳದೆ ಅಪ್ರಮಾದಿಯಾಗಿರು'. ಆಮೇಲೆ ಹೆಗಲಿಗೆ ಬುತ್ತಿಯ ಚೀಲವನ್ನೂ, ಜೋಳಿಗೆಯನ್ನೂ ಏರಿಸಿದ. ಕಣ್ಣಲ್ಲಿ ನೀರು ತುಂಬಿಕೊಂಡು ಅಮಿತ್ರತಾಪನಳ ಸುತ್ತ ಪ್ರದಕ್ಷಿಣೆ ಹಾಕಿ ಮನೆಯಿಂದ ಹೊರಟ.

ಆತ ವೆಸ್ಸಂತರನನ್ನು ಹುಡುಕಿಕೊಂಡು ಮೊದಲು ಸಿವಿಗಳ ಸಮೃದ್ಧ ರಾಷ್ಟ್ರಕ್ಕೆ ಬಂದ. ನಗರದಲ್ಲಿ ಜನರಿಗೆ, 'ವೆಸ್ಸಂತರ ಈಗ ಎಲ್ಲಿದ್ದಾನೆ?' ಎಂದು ಕೇಳಿದ. ಅವರು ದುಃಖದಿಂದ, 'ನಿಮ್ಮಂತಹ ಬೇಡುವವರಿಂದ ಪೀಡಿತನಾಗಿ, ಅತಿದಾನದಿಂದ ಈಗ ದೇಶಭ್ರಷ್ಟನಾಗಿದ್ದಾನೆ. ಹೆಂಡತಿ ಮಕ್ಕಳ ಸಹಿತವಾಗಿ ಸನ್ಯಾಸಿಯಂತೆ ವಂಕಪರ್ವತದಲ್ಲಿ ವಾಸವಾಗಿದ್ದಾನೆ' ಎಂದರು. ಆತ ನಿರುಪಾಯನಾಗಿ ವಂಕಪರ್ವತದ ದಾರಿ ಹಿಡಿದ. ಅದು ಅವನಿಗೆ, ಅವನ ವಯಸ್ಸಿಗೆ, ತುಂಬ ಪರಿಶ್ರಮದ ದಾರಿ. ತರುಣಿ ಪತ್ನಿಯಿಂದ ಪೀಡಿತನಾದ ಕಾಮುಕ ಬ್ರಾಹ್ಮಣ ನಿಧಾನವಾಗಿ ಬಂದು ದಟ್ಟವಾದ ಕಾಡನ್ನು ಸೇರಿದ. ಅವನು ಕಾಡಿನಲ್ಲಿ ಬರುತ್ತಿದ್ದಂತೆ ಕಾಡಿನ ನಾಯಿಗಳು ಅವನನ್ನು ಮುತ್ತಿಕೊಂಡವು. ಆತ ದಿಕ್ಕುತಪ್ಪಿ ಓಡುತ್ತ ಮಾರ್ಗಭ್ರಷ್ಟನಾದ. ತಾನು ಯೋಜಿಸಿದ ಮಾರ್ಗವನ್ನು ಕಳೆದುಕೊಂಡು ಬೇರೊಂದು ದಿಕ್ಕಿಗೆ ಬಂದ. ದಿಕ್ಕು ತೋರದೆ ಒಂದು ಮರವನ್ನೇರಿ ಕುಳಿತು ಪ್ರಲಾಪ ಮಾಡತೊಡಗಿದ. 'ಸದಾ ವಿಜಯಿಯಾಗಿದ್ದ, ಎಲ್ಲರಿಗೂ ಅಭಯವನ್ನು ನೀಡುವ, ದಾನಶೂರ ರಾಜಕುಮಾರ ವೆಸ್ಸಂತರನ ವಿಳಾಸವನ್ನು ನನಗೆ ತಿಳಿಸುವವರು ಯಾರಾದರೂ ಇದ್ದೀರಾ? ಭೂಮಿಯ ಸರ್ವಪ್ರಾಣಿಗಳಲ್ಲೂ ಕರುಣೆಯನ್ನು ತೋರಿಸುವ, ಯಾಚಕರಿಗೆ ಬೇಡಿದ್ದನ್ನು ಕೊಡುವ ಕಾಮಧೇನುವಿನಂತೆ ಇರುವ ವೆಸ್ಸಂತರನ ಸುಳಿವನ್ನು ಯಾರಾದರೂ ಕೊಡಬಹುದೇ? ಈ ಭಯಂಕರವಾದ ಕಾಡಿನಲ್ಲಿ ಗಾಬರಿಯಿಂದ ರೋಧಿಸುತ್ತಿರುವ ನನಗೆ ಯಾರಾದರೂ ಆ ಮಹಾತ್ಮನ ಇರುವಿಕೆಯನ್ನು ತಿಳಿಸಿದರೆ ಅವರಿಗೆ ಸಕಲ ಪುಣ್ಯ ಲಭಿಸಲೆಂದು ಪ್ರಾರ್ಥಿಸುತ್ತೇನೆ' ಇವನ ಪ್ರಲಾಪವನ್ನು ಕೇಳಿದ, ಕಾವಲುಗಾರನಾಗಿ ನೇಮಿಸಲ್ಪಟ್ಟ ಜೆತಿರಾಷ್ಟ್ರದ ಮನುಷ್ಯ, ಈತನ ಸನ್ಯಾಸಿ ವೇಷವನ್ನು ಕಂಡು ಬಳಿಗೆ ಬಂದು ಸಮಾಧಾನ ಮಾಡಿದ.

❖

ಗುಂಡಣ್ಣ



ದಿನ ಭವಿಷ್ಯ

ಮಂಗಳವಾರ ಜುಲೈ 13, 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ಆಷಾಢ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಪುನರ್ವಸು ತೃತೀಯ ಗಂ. 1-55 (ಬೆ. 6-55) ಮಂಗಳವಾರ ನಿತ್ಯ ನಕ್ಷತ್ರ ಮಖೆ ಗಂ. 51-45 (ರಾ 2-51) ಸಿದ್ಧಿ ನಾಮ ಯೋಗ ಗಂ. 21-55 ಗರಜ ಕರಣ ಗಂ. 1-55 ವಿಷ ಗಂ. 21-9 ಅಮೃತ ಗಂ. 45-14 ರಾಹುಕಾಲ: ಮ. ಗಂ. 3-00 ರಿಂದ 4-30 ಗುಳಿಕ ಕಾಲ ಮ. ಗಂ 12-00 ರಿಂದ 1-30 ಯಮಗಂಡ ಕಾಲ ಬೆ. ಗಂ 9-00 ರಿಂದ 10-30 ಸೂರ್ಯೋದಯ: 6-04 ಸೂರ್ಯಾಸ್ತ: 6-46 ಅದೃಷ್ಟ ಸಂಖ್ಯೆ 2 8

ಮೇಷ: ಗುಪ್ತ ಶತ್ರುಗಳಿಂದ ವ್ಯವಹಾರಗಳಲ್ಲಿ ತೊಡಕು ಸಾಧ್ಯತೆ. ಶೇರು ವ್ಯವಹಾರ ಹಾಗೂ ಹಣಕಾಸು ವ್ಯವಹಾರಗಳಲ್ಲಿ ಯಶಸ್ಸಿನೊಂದಿಗೆ ಹಣಕಾಸಿನ ಅನುಕೂಲ. ಕುಟುಂಬದೊಂದಿಗೆ ತಾಳ್ಮೆಯಿಂದಿರುವುದು ಉತ್ತಮ.

ವೃಷಭ: ವ್ಯವಹಾರದಲ್ಲಿ ವಿಶೇಷ ಧನಲಾಭ. ಗೌರವ– ಆದರಗಳು ಲಭಿಸುವ ಲಕ್ಷಣಗಳು ಕಂಡುಬರುತ್ತಿದೆ. ಅಧಿಕಾರಿಗಳ ನೆರವು ನಿಮ್ಮ ಪಾಲಿಗೆ ದೊರಕುವುದರಿಂದ ಸರಕಾರಿ ವ್ಯವಹಾರದಲ್ಲಿ ಯಶಸ್ಸು.

ಮಿಥುನ: ಕೈಗೊಂಡ ಕಾರ್ಯ ಸಾಧನೆಯಾಗುವುದು. ವಿಲಾಸ ಹಾಗೂ ಜೂಜಾಟಗಳಿಂದ ದೂರವಿರುವುದು ಅತ್ಯಂತ ಶ್ರೇಯಸ್ಕರ. ವಿವಾದಗಳಲ್ಲಿ, ಸ್ಪರ್ಧೆಗಳಲ್ಲಿ ಸೋಲುಂಟಾಗುವ ಸಾಧ್ಯತೆ. ವಸ್ತ್ರಾಭರಣಗಳ ಖರೀದಿ ಸಾಧ್ಯತೆ ಇದೆ.

ಕರ್ಕಾಟಕ: ಧನ ಧಾನ್ಯ ವ್ಯಾಪಾರಿಗಳಿಗೆ ಅಷ್ಟೊಂದು ಶುಭ ನೀಡದಿದ್ದರೂ, ದಿನದ ವಹಿವಾಟು ನಡೆಸಲು ತೊಂದರೆಯಾಗದು. ಕಣ್ಣಿಗೆ ಸಂಬಂಧಿಸಿದ ವ್ಯಾಧಿಗಳು ಉಂಟಾಗುವ ಸಾಧ್ಯತೆ.

ಸಿಂಹ: ದಿನದ ಮಟ್ಟಿಗೆ ದೂರದ ಪ್ರಯಾಣ ಮಾಡದಿರುವುದೇ ಒಳ್ಳೆಯದು. ವಾಹನಗಳಿಂದ ಕಿರಿಕಿರಿ ಉಂಟಾಗುವ ಸಾಧ್ಯತೆ. ಶುಭ ಸಮಾರಂಭವನ್ನು ಏರ್ಪಡಿಸುವ ಸಾಧ್ಯತೆ.

ಕನ್ಯಾ: ಮಿತ್ರರಿಂದ ಸಹಾಯ ಸಹಕಾರಗಳು ದೊರೆತು ಉತ್ತಮ ವ್ಯವಹಾರ ನಡೆಸಲಿದ್ದೀರಿ. ಆರ್ಥಿಕ ಅಭಿವೃದ್ಧಿಯನ್ನು ಕಾಣುವಿರಿ. ಆರೋಗ್ಯದಲ್ಲಿ ಸುಧಾರಣೆ. ಕೋರ್ಟು ಕಚೇರಿ ಕೆಲಸಗಳಲ್ಲಿ ಯಶಸ್ಸು.

ತುಲಾ: ಯೋಧರು, ಆರಕ್ಷಕ ಇಲಾಖೆಯಲ್ಲಿರುವವರಿಗೆ ಬಡ್ತಿ ಅಥವಾ ಪದೋನ್ನತಿ ನಿರೀಕ್ಷಿಸಬಹುದು. ಕ್ರೀಡಾಪಟುಗಳಿಗೆ ಯಶಸ್ಸಿನ ಗುರಿಯೊಂದಿಗೆ ಗೌರವಾದರಗಳು ಲಭಿಸಲಿವೆ. ಆರೋಗ್ಯದ ಬಗ್ಗೆ ನಿಗಾ ವಹಿಸುವುದು ಉತ್ತಮ.

ವೃಶ್ಚಿಕ: ರಸಗೊಬ್ಬರ, ಕೃಷಿ ಉಪಕರಣಗಳ ವ್ಯವಹಾರಸ್ಥರಿಗೆ ಉತ್ತಮ ವ್ಯವಹಾರಗಳು ಕುದುರುವ ಸಾಧ್ಯತೆ. ರೈತಾಪಿ ವರ್ಗದವರಿಗೆ ಸಂತಸವನ್ನು ನೀಡುವ ದಿನವಾಗುವುದು. ಸರ್ಕಾರಿ ನೌಕರರಿಗೆ ಬಿಡುವಿಲ್ಲದ ಕೆಲಸದ ಒತ್ತಡ.

ಧನು: ವಿಪರೀತ ಕಾರ್ಯಬಾಹುಳ್ಯದಿಂದಾಗಿ ದೇಹಾಲಾಸ್ಯದೊಂದಿಗೆ ಬೇಸರವುಂಟಾಗುವ ಸಾಧ್ಯತೆ. ಹಿರಿಯರ ಆರೋಗ್ಯದ ಬಗ್ಗೆ ಕಾಳಜಿ ಅಗತ್ಯ. ಕೋರ್ಟು ಕಚೇರಿ ವಿವಾದಗಳಲ್ಲಿ ಸ್ವಲ್ಪ ಮಟ್ಟಿನ ಹಿನ್ನಡೆ ಉಂಟಾಗುವ ಸಾಧ್ಯತೆ.

ಮಕರ: ಮೇಲಾಧಿಕಾರಿಗಳಿಂದ ಕಿರಿಕಿರಿ ಅನುಭವಿಸಬೇಕಾದೀತು. ಸಹೋದ್ಯೋಗಿಗಳ ನೆರವಿನಿಂದ ಕೆಲಸ ಕಾರ್ಯಗಳು ಸುಗುಮವಾಗಿ ನೆಮ್ಮದಿ ತರಲಿದೆ. ಹೊಸ ಉದ್ಯಮ ಸ್ಥಾಪನೆಯ ಕುರಿತು ಚಿಂತನೆ ನಡೆಸಲಿದ್ದೀರಿ.

ಕುಂಭ: ಗೃಹ ನಿರ್ಮಾಣ ಅಥವಾ ಬಾವಿ ನಿರ್ಮಾಣ ಮುಂತಾದ ಬಹುಕಾಲಿಕ ಕೆಲಸಗಳನ್ನು ಕೈಗೆತ್ತಿಕೊಳ್ಳುವ ಸಾಧ್ಯತೆ. ಕೈಗೊಂಡ ಕಾರ್ಯಗಳು ನಿರ್ವಿಘ್ನವಾಗಿ ಸಾಗುವವು. ಸ್ತ್ರೀಯರಿಗೆ ಮನೆಯಲ್ಲಿ ಸ್ವಲ್ಪ ಮಟ್ಟಿನ ಕಿರಿಕಿರಿ.

ಮೀನ: ಉದ್ಯೋಗ ವ್ಯವಹಾರಗಳಲ್ಲಿ ಪ್ರಗತಿ ಕಾಣುವಿರಿ. ಧನ ಲಾಭವಾಗುವ ಸಾಧ್ಯತೆ. ತಪ್ಪು ತೀರ್ಮಾನಗಳಿಂದ ವೈಮನಸ್ಸು ಉಂಟಾದೀತು. ದೂರದ ಪ್ರಯಾಣದ ಸುಖಾನುಭವವನ್ನು ಸವಿಯಲಿದ್ದೀರಿ.

ನಿಮ್ಮ ಜನ್ಮದಿನ 13-ಜುಲೈ ಇಂದು ಅತ್ಯಂತ ಶುಭದಾಯಕವಾಗಿದ್ದು, ವ್ಯವಹಾರದಲ್ಲಿ ಪ್ರಗತಿಯನ್ನು ಕಾಣುವಿರಿ. ಸ್ವಯಂ ಉದ್ಯೋಗಿಗಳಿಗೆ ವಿದೇಶದೊಂದಿಗೆ ವ್ಯವಹರಿಸುವ ಅವಕಾಶಗಳು ಕೂಡಿಬರಲಿವೆ. ಕ್ರೀಡಾಪಟುಗಳಿಗೆ, ವಿಜ್ಞಾನಿಗಳು, ಸಂಶೋಧಕರುಗಳಿಗೆ ಹೆಮ್ಮೆಯ ಸಾಧನೆಯ ವರ್ಷವಾಗಲಿದೆ. ಅಕಾಂಕ್ಷಿಗಳಿಗೆ ಸಂತಾನ ಭಾಗ್ಯವು ಕಂಡುಬರುತ್ತಿದೆ.

ಪದಬಂಧ 4656


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ದಾಹ ವಿದ್ದಾಗ ನೀಡಿರುವ ದೃಷ್ಟಾಂತ (5)
3.ಬೆಲೆ ಕಟ್ಟಲಾಗದ್ದು (3)
5.ಕೈ ಮುಂದಿರಿಸಿ ತಟ್ಟುವ ಚಪ್ಪಾಳೆ (5)
7.ತಿರುಗಿದಾಗ ಕಾಣಿಸಿದ ಕೆಸರು (2)
9.ನೆನಪು ಮಾಡುತ್ತಾ ತೋರಿದ ಒಯ್ಯಾರ (3)
11.ತೂಕಡಿಸುವವನ ಘನತೆ! (2)
13.ನೆತ್ತರಿಂದಿರಿಸಿದ ಬೊಟ್ಟು (5)
14.ಕೊಲೆಗಾರ ಇಲ್ಲಿದ್ದಾನಲ್ಲಾ? (3)
16.ಅಡುಗೆಯಲ್ಲಿ ನುರಿತವ (5)

ಮೇಲಿಂದ ಕೆಳಕ್ಕೆ

1.ಹಬೆಯಿಂದ ಓಡುವ ಗಾಡಿ (4)
2.ಸಾರಜನಕ ತೋರಿಸುತ್ತಿರುವ ಮಡಿವಾಳ (3)
4.ನಯವಾಗಿರುವ ಅಕ್ಷಿ (3)
6.ಪ್ರಶಂಸೆಗೊಂದು ಪರ್ಯಾಯ ಪದ (3)
8.ನೀರೆತ್ತಲು ಬಾವಿಗೆ ಅಳವಡಿಸುವ ಚಕ್ರ (2)
9.ಒಡನೆಯೇ ಬಂದಿರುವ ಯಜಮಾನಿ (3)
10.ರಂಧ್ರವಿಲ್ಲಿ ತಿರುವು ಮುರುವಾಗಿದೆ (3)
12.ವಾಡಿಕೆಯಂತೆ ಹಾಕಿದ ಲಗಾಮು! (4)
13.ರಥದಲ್ಲಿ ಕುಳಿತು ಯುದ್ಧ ಮಾಡುವವನು (3)
14.ಪ್ರಾಣಿಗಳನ್ನು ಕತ್ತರಿಸುವವನು (3)



4655ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ವಿವೇಕಿ 2.ವಿಶಾರದ 4.ಡಬ್ಬುಗಾತಿ 6.ಸಂತೋಷ 7.ದಿನ 9.ರಸಿಕ 11.ವರ 13.ಭೂಶಿರ 14.ನಳಪಾಕ 16.ಅಂತರ್ವಾಣಿ 17.ಹೊರಳೆ

ಮೇಲಿಂದ ಕೆಳಕ್ಕೆ: 1.ವಿತಂಡವಾದಿ 2.ವಿಮೆ 3.ರಜತೋತ್ಸವ 5.ತಿಮಿರ 8.ನಖಶಿಖಾಂತ 10.ಕಪ್ತಾನ 12.ರಣಕಹಳೆ 15.ಗುಣಿ

ಸುಡೊಕು 5042

	6				8			
1		3				8	9	4
			5		9			3
	9			7			5	
		5	9		3	4	7	
7				1				9
	7		8		1		4	
4		9				5		7
	3		4		7		1	2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5041 ಸುಡೊಕು

5	2	6	9	4	1	8	3	7
4	7	8	3	2	6	5	9	1
3	9	1	5	7	8	6	2	4
9	5	4	7	1	2	3	6	8
1	6	7	8	9	3	4	5	2
2	8	3	6	5	4	1	7	9
7	3	9	4	8	5	2	1	6
8	1	5	2	6	9	7	4	3
6	4	2	1	3	7	9	8	5

ತಮಿಳುನಾಡು ಸರ್ವಪಕ್ಷಗಳ ಸಭೆ ನಿರ್ಣಯ: ಎಲ್ಲ ರೀತಿಯ ಕಾನೂನು ಕ್ರಮಕ್ಕೆ ತೀರ್ಮಾನ

ಮೇಕೆದಾಟು ಯೋಜನೆಗೆ ಅನುಮತಿ ಬೇಡ

ಪ್ರಜಾವಾಣಿ ವಾರ್ತೆ

ಚೆನ್ನೈ: 'ಕರ್ನಾಟಕ ನಿರ್ಮಿಸಲು ಉದ್ದೇಶಿಸಿರುವ ಮೇಕೆದಾಟು ಅಣೆಕಟ್ಟು ಯೋಜನೆಗೆ ಅನುಮತಿ ನೀಡಬಾರದು' ಎಂದು ತಮಿಳುನಾಡಿನ ಸರ್ವಪಕ್ಷಗಳ ಸಭೆ ಕೇಂದ್ರ ಸರ್ಕಾರವನ್ನು ಆಗ್ರಹಪಡಿಸಿದ್ದು, ಸರ್ವಾನುಮತದಿಂದ ನಿರ್ಣಯ ಅಂಗೀಕರಿಸಿದೆ.



ಸ್ಟಾಲಿನ್

ಯೋಜನೆ ಕುರಿತ ಚರ್ಚೆಗೆ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಸೋಮವಾರ ಕರೆದಿದ್ದ ಸಭೆಯಲ್ಲಿ 13 ಪಕ್ಷಗಳ ಮುಖಂಡರು ಒಮ್ಮತದ ನಿಲುವು ವ್ಯಕ್ತಪಡಿಸಿದ್ದು, 'ಯೋಜನೆಯನ್ನು ತಡೆಯಲು ಸರ್ಕಾರಕ್ಕೆ ಸಹಕಾರ, ಬೆಂಬಲ ನೀಡಲಿದ್ದೇವೆ' ಎಂದರು.

ಕರ್ನಾಟಕ ಸರ್ಕಾರ ಯೋಜನೆಯನ್ನು ಜಾರಿಗೊಳಿಸದಂತೆ ತಡೆಯಲು ಸುಪ್ರೀಂ ಕೋರ್ಟ್‌ನ ಮೆಟ್ಟಿಲೇರುವುದು ಒಳಗೊಂಡಂತೆ ಎಲ್ಲ ರೀತಿಯ ಅಗತ್ಯ ಕಾನೂನು ಕ್ರಮಗಳನ್ನು ಕೈಗೊಳ್ಳಲೂ ಸಭೆಯು ತೀರ್ಮಾನಿಸಿತು.

ತಮಿಳುನಾಡು ಸರ್ಕಾರದ ನಿಲುವನ್ನು ಸ್ಪಷ್ಟಪಡಿಸಲು ನವದೆಹಲಿಗೆ ಸರ್ವಪಕ್ಷಗಳ ನಿಯೋಗವು ತೆರಳಿ ನಿರ್ಣಯದ ಪ್ರತಿಯನ್ನು ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೆಖಾವತ್ ಅವರಿಗೆ ನೀಡಲು ನಿರ್ಧರಿಸಿತು.

ಸಭೆಯು ಸುಮಾರು ಎರಡು ಗಂಟೆ ನಡೆದಿದ್ದು, ಪ್ರಾಸ್ತಾವಿಕವಾಗಿ ಮಾತನಾಡಿದ ಸ್ಟಾಲಿನ್ ಅವರು, 'ಕರ್ನಾಟಕ ಸರ್ಕಾರ ಉದ್ದೇಶಿಸಿದಂತೆ ಅಣೆಕಟ್ಟು ನಿರ್ಮಾಣ ಮಾಡಿದರೆ ತಮಿಳುನಾಡು ಸಾಕಷ್ಟು ಕಳೆದುಕೊಳ್ಳಬೇಕಾದಿತು' ಎಂದು ಹೇಳಿದರು.

'ಕಾವೇರಿ ನದಿಪಾತ್ರದಲ್ಲಿ ನಿರ್ಮಾಣ ಚಟುವಟಿಕೆ ಕೈಗೊಳ್ಳಬಾರದು ಎಂಬುದು ಸುಪ್ರೀಂ ಕೋರ್ಟ್ ತೀರ್ಪಿನಲ್ಲಿ ಸ್ಪಷ್ಟವಾಗಿದೆ. ಆದರೂ, ಅಣೆಕಟ್ಟು ನಿರ್ಮಿಸಲು ಕರ್ನಾಟಕ ಮುಂದಾಗಿದೆ. ಇದರಿಂದ ರಾಜ್ಯದ ರೈತರಿಗೆ ಧಕ್ಕೆಯಾಗಲಿದೆ' ಎಂದರು.

'ಕರ್ನಾಟಕದ ಈ ಕ್ರಮ ಸಾಂವಿಧಾನಿಕ ಕಾಯ್ದೆಗಳಿಗೆ ಸವಾಲು ಹಾಕುವಂತದ್ದಾಗಿದೆ. ಈ ಕಾರಣದಿಂದ ಕೇಂದ್ರದ ಸಂಬಂಧಿಸಿದ ಸಚಿವಾಲಯಗಳು ಯೋಜನೆಗೆ ಯಾವುದೇ ರೀತಿ ಅನುಮೋದನೆ ನೀಡಬಾರದು' ಎಂಬ ನಿರ್ಣಯವನ್ನು ಓದಲಾಯಿತು.

ತಮಿಳುನಾಡು ಸರ್ಕಾರದ ವಿರೋಧದ ನಡುವೆಯೂ ಮೇಕೆದಾಟು ಯೋಜನೆ ನಿರ್ಮಾಣ ಜಾರಿಗೊಳಿಸಿಯೇ ಸಿದ್ಧ ಎಂದು ಕರ್ನಾಟಕ ಇತ್ತೀಚೆಗೆ ಪ್ರತಿಪಾದಿಸಿತ್ತು. ಯೋಜನೆಯಿಂದ ತಮಿಳುನಾಡು ರೈತರ ಹಿತಾಸಕ್ತಿಗೆ ಧಕ್ಕೆಯಾಗದು ಎಂಬ ಕರ್ನಾಟಕದ ವಾದವನ್ನು ಸ್ಟಾಲಿನ್ ತಳ್ಳಿಹಾಕಿದರು. ಅಣೆಕಟ್ಟು ನಿರ್ಮಿಸಲು ನಮ್ಮ ಸರ್ಕಾರ ಅವಕಾಶ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿದರು.

'ಕಾವೇರಿ ನದಿ ಕೇವಲ ಕರ್ನಾಟಕಕ್ಕೆ ಸೇರಿದ್ದಲ್ಲ. ತಮಿಳುನಾಡು ಕೂಡಾ ಸಮಾನ ಹಕ್ಕು ಹೊಂದಿದೆ. ವಾಸ್ತವವಾಗಿ ಕಾವೇರಿ ನದಿಯು ತಮಿಳುನಾಡಿನಲ್ಲಿಯೇ ಹೆಚ್ಚು ದೂರ ಹರಿಯುತ್ತದೆ' ಎಂದು ಸ್ಟಾಲಿನ್ ಹೇಳಿದರು.

ಸರ್ವಪಕ್ಷ ಸಭೆಯ ಮೂಲಕ ಕರ್ನಾಟಕ ಸರ್ಕಾರಕ್ಕೆ ಮಾತ್ರವಲ್ಲ, ಕೇಂದ್ರ ಸರ್ಕಾರಕ್ಕೂ ತಮಿಳುನಾಡಿನ ರಾಜಕೀಯ ಪಕ್ಷಗಳು ತಮ್ಮ ಒಗ್ಗಟ್ಟನ್ನು ಪ್ರದರ್ಶಿಸಿವೆ ಎಂದು ಪ್ರತಿಪಾದಿಸಿದರು.

ಯೋಜನೆ ತಕ್ಷಣ ಆರಂಭಿಸಲಿ: ಡಿಕೆಶಿ



ಬೆಂಗಳೂರು: 'ರಾಜ್ಯ ಸರ್ಕಾರ ಮೇಕೆದಾಟು ಯೋಜನೆಯನ್ನು ತಕ್ಷಣ ಆರಂಭಿಸಲಿ. ರಾಜಕೀಯ ಭಿನ್ನಾಭಿಪ್ರಾಯ ಮರೆತು ನಾವೆಲ್ಲರೂ ಸರ್ಕಾರದ ಜತೆಗೆ ನಿಲ್ಲುತ್ತೇವೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.


ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, 'ಇನ್ನು ನೂರು ವರ್ಷ ಕಳೆದರೂ ತಮಿಳುನಾಡು ಈ ಯೋಜನೆಗೆ ತಗಾದೆ ಎತ್ತುತ್ತಲೇ ಇರುತ್ತದೆ. ಅಲ್ಲಿನ ಎಲ್ಲ ಪಕ್ಷಗಳ ರಾಜಕೀಯ ಕಾರ್ಯಸೂಚಿಯಿದು. ನಮ್ಮದು ಡಬಲ್ ಇಂಜಿನ್ ಸರ್ಕಾರ ಎನ್ನುವ ಬಿಜೆಪಿ ನಾಯಕರು, ಕೇಂದ್ರದಲ್ಲಿರುವ ಅಧಿಕಾರ ಬಳಸಿ ಅಗತ್ಯ ಅನುಮತಿಗಳನ್ನು ಪಡೆಯಲಿ' ಎಂದರು.

'ನಾವು ಯೋಜನೆ ಮಾಡುತ್ತಿರುವವರು. ಹೀಗಾಗಿ, ಕೇಂದ್ರಕ್ಕೆ ಸರ್ವಪಕ್ಷ ನಿಯೋಗ ಕೊಂಡೊಯ್ಯುವ ಅಗತ್ಯ ಇಲ್ಲ. ತಮಿಳುನಾಡಿನವರು ಏನಾದರೂ ಮಾಡಿಕೊಳ್ಳಲಿ. ಯೋಜನೆ ಅನುಷ್ಠಾನಗೊಳಿಸಲು ಯಡಿಯೂರಪ್ಪನವರಿಗೆ ರಾಜಕೀಯ ಇಚ್ಛಾಶಕ್ತಿ ಬೇಕು. ಯೋಜನೆಗೆ ಕೇಂದ್ರ ಪರಿಸರ ಮಂಡಳಿಯಿಂದ ಅನುಮತಿ ಸಿಕ್ಕಿದೆ ಎಂಬ ಮಾಹಿತಿಯೂ ಇದೆ' ಎಂದರು.

'ನಮ್ಮ ದುಡ್ಡು, ನಮ್ಮ ಜಾಗ, ನಮ್ಮ ನೀರು. ತಮಿಳುನಾಡು ಪಾಲಿನ ನೀರಿಗೆ ನಮ್ಮ ತಕರಾರು ಇಲ್ಲ. ಅವರ ಪಾಲು ಅವರಿಗೆ ಸಿಗಲಿದೆ. ಇದು ಬೆಂಗಳೂರಿನ ಜನರಿಗೆ ಕುಡಿಯುವ ನೀರು ಪೂರೈಕೆ ಮತ್ತು ವಿದ್ಯುತ್ ಉತ್ಪಾದನೆಗೆ ಮಾತ್ರ ಬಳಕೆ ಆಗುತ್ತದೆ. ಅತ್ಯಂತ ಅಗ್ಗದ ಹಾಗೂ ಉಪಯುಕ್ತ ಯೋಜನೆ' ಎಂದರು.

'ರಾಜ್ಯ ಸರ್ಕಾರ ಯಾವ ವಿಚಾರದಲ್ಲೂ ವಿರೋಧ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ. ಯಡಿಯೂರಪ್ಪ ತಮಿಳುನಾಡು ಸರ್ಕಾರಕ್ಕೆ ಪತ್ರ ಬರೆದಿದ್ದೇ ತಪ್ಪು. ಅದರ ಅಗತ್ಯ ಏನಿತ್ತು' ಎಂದು ಪ್ರಶ್ನಿಸಿದರು.

ಯೋಜನೆ ನಮ್ಮ ಹಕ್ಕು: ಬೊಮ್ಮಾಯಿ



ಬೆಂಗಳೂರು: 'ಕುಡಿಯುವ ನೀರಿನ ಉದ್ದೇಶದ ಮೇಕೆದಾಟು ಯೋಜನೆ ನಿರ್ಮಿಸುವುದು ನಮ್ಮ ರಾಜ್ಯದ ಹಕ್ಕು' ಎಂದು ಗೃಹ ಮತ್ತು ಕಾನೂನು ಸಚಿವ ಬಸವರಾಜ ಬೊಮ್ಮಾಯಿ ಪ್ರತಿಪಾದಿಸಿದ್ದಾರೆ.

ತಮಿಳುನಾಡು ಸರ್ಕಾರ ಮೇಕೆದಾಟು ಯೋಜನೆ ವಿರೋಧಿಸಿ ಕೈಗೊಂಡ ನಿರ್ಣಯಕ್ಕೆ ಬೊಮ್ಮಾಯಿ ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದ್ದರು.

'ಈ ಯೋಜನೆಗೆ ಸಂಬಂಧಿಸಿದಂತೆ ಸಿದ್ಧಪಡಿಸಿರುವ ಸಮಗ್ರ ಯೋಜನಾ ವರದಿಯನ್ನು ಕೇಂದ್ರ ಜಲ ಆಯೋಗಕ್ಕೆ ಸಲ್ಲಿಸಲಾಗಿದೆ. ಕಾವೇರಿ ಐ–ತೀರ್ಪಿನ ಪ್ರಕಾರ ನಮ್ಮ ಪಾಲಿನ ಹೆಚ್ಚುವರಿ ನೀರನ್ನು ಕುಡಿಯುವ ಉದ್ದೇಶಕ್ಕೆ ಬಳಕೆ ಮಾಡುವ ಯೋಜನೆಯಾಗಿದೆ. ಇದನ್ನು ಜಾರಿಗೊಳಿಸುವ ಎಲ್ಲಾ ಹಕ್ಕು ಕರ್ನಾಟಕಕ್ಕಿದೆ. ರಾಜ್ಯದ ಜನರ ಹಿತವನ್ನು ರಕ್ಷಿಸಲು ಪೂರ್ಣಗೊಳಿಸಿಯೇ ತೀರುತ್ತೇವೆ. ರಾಜ್ಯ ಸರ್ಕಾರ ಈ ಸಂಬಂಧ ಸಲ್ಲಿಸಿರುವ ಮನವಿಯನ್ನು ಕೇಂದ್ರ ಸರ್ಕಾರ ಪರಿಗಣಿಸಬೇಕು' ಎಂದು ಬೊಮ್ಮಾಯಿ ತಿಳಿಸಿದರು.

ಕಾವೇರಿ ನದಿ ನೀರು ಹಂಚಿಕೆಗೆ ಸಂಬಂಧಿಸಿದಂತೆ ಸ್ಪಷ್ಟವಾದ ತೀರ್ಪು ಇದೆ. ಅದರ ಪ್ರಕಾರ, ತಮಿಳುನಾಡಿಗೆ ಯಾವ ಸಮಯಕ್ಕೆ ಎಷ್ಟು ನೀರು ಬಿಡಬೇಕು ಎಂಬುದರ ಕುರಿತು ಕಾವೇರಿ ಮಂಡಳಿ ಗಮನಿಸುತ್ತದೆ. ಸಂಕಷ್ಟದ ಸಂದರ್ಭದಲ್ಲಿ ಹೆಚ್ಚುವರಿ ನೀರನ್ನು ಹಂಚಿಕೆ ಮಾಡಿಕೊಳ್ಳುವುದರಿಂದ ಎರಡು ರಾಜ್ಯಗಳಿಗೆ ಅನುಕೂಲವಾಗುತ್ತದೆ ಎಂಬುದನ್ನು ತಮಿಳುನಾಡು ಸರ್ಕಾರ ಅರಿತುಕೊಳ್ಳಬೇಕು ಎಂದರು.



ಅಂತರ ಮರೆತ ಜನ ಆಗ್ರಾದಲ್ಲಿ ಲಾಕ್‌ಡೌನ್ ನಿರ್ಬಂಧಗಳನ್ನು ಸಡಿಲಿಕೆ ಮಾಡಲಾಗಿದ್ದು, ಸೋಮವಾರ ನಡೆದ ವಾರ್ಷಿಕ ಉತ್ಸವದಲ್ಲಿ ಜನರು ಅಂತರ ಮರೆತು ಸೇರಿದ್ದರು –ಪಿಟಿಐ ಚಿತ್ರ

'ಉನ್ನತ ಶಿಕ್ಷಣದತ್ತ ವಿದ್ಯಾರ್ಥಿಗಳ ಸಂಖ್ಯೆ ಶೇ 50 ಹೆಚ್ಚಿಸುವ ಗುರಿ'

ಪ್ರಜಾವಾಣಿ ವಾರ್ತೆ

ಧಾರವಾಡ: 'ಉನ್ನತ ಶಿಕ್ಷಣದತ್ತ ವಿದ್ಯಾರ್ಥಿಗಳ ಪ್ರವೇಶವನ್ನು ಶೇ 50ಕ್ಕೆ ಹೆಚ್ಚಿಸುವ ಗುರಿಯನ್ನು ನೂತನ ಶಿಕ್ಷಣ ನೀತಿಯಲ್ಲಿ ಹೊಂದಲಾಗಿದೆ' ಎಂದು ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್.ಅಶ್ವತ್ಥನಾರಾಯಣ ಹೇಳಿದರು.

ನೂತನ ಶಿಕ್ಷಣ ನೀತಿ ಕುರಿತಂತೆ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸೋಮವಾರ ನಡೆದ ಸಮಾಲೋಚನಾ ಸಭೆಯ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

'ಪದವಿಯಿಂದ ಉನ್ನತ ಶಿಕ್ಷಣಕ್ಕೆ ಪ್ರವೇಶಿಸುವವರ ಸಂಖ್ಯೆ ಶೇ 38 ಇತ್ತು. 2030ರ ಹೊತ್ತಿಗೆ ಈ ಪ್ರಮಾಣವನ್ನು ಹೆಚ್ಚಿಸಲಾಗುವುದು. ಜತೆಗೆ ಹೊಸ ಶಿಕ್ಷಣ ನೀತಿಯಿಂದಾಗಿ ಉದ್ಯೋಗ ಅಥವಾ ಉದ್ಯಮಕ್ಕೆ ಅಗತ್ಯವಿರುವ ಕೌಶಲವನ್ನು ಪಡೆಯುವ ಸಾಮರ್ಥ್ಯವಿರುವ ಅಭ್ಯರ್ಥಿಗಳನ್ನು ಸಜ್ಜುಗೊಳಿಸಲಾಗುವುದು. ಹೀಗಾಗಿ ಈ ಶೈಕ್ಷಣಿಕ ವರ್ಷದಿಂದಲೇ ಸರ್ಕಾರಿ ಕಾಲೇಜುಗಳಲ್ಲಿ ನೂತನ ಶಿಕ್ಷಣ ನೀತಿ ಜಾರಿಗೆ ಬರಲಿದೆ' ಎಂದು ಅವರು ಹೇಳಿದರು.

'ನೂತನ ಶಿಕ್ಷಣ ನೀತಿಯಲ್ಲಿ ಮಾತೃಭಾಷೆಗೆ ಒತ್ತು ನೀಡುವುದೇ ನಮ್ಮ ಉದ್ದೇಶವಾಗಿದೆ. ಇದನ್ನು ಪ್ರಾಥಮಿಕ ಅಥವಾ ಪ್ರೌಢಶಾಲೆಗೆ ಮಾತ್ರವಲ್ಲ, ವೃತ್ತಿಪರ ಕೋರ್ಸ್‌ಗಳನ್ನೂ ಮಾತೃಭಾಷೆಯಲ್ಲಿ ಕಲಿಯುವಂತ ಯೋಜನೆ ರೂಪಿಸಲಾಗುತ್ತಿದೆ' ಎಂದರು.

'ಆನ್‌ಲೈನ್ ಶಿಕ್ಷಣಕ್ಕೆ ಗ್ರಾ.ಪಂ. ಗ್ರಂಥಾಲಯಗಳಲ್ಲಿ ವ್ಯವಸ್ಥೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೂರದರ್ಶನ ಅಥವಾ ಮೊಬೈಲ್ ಇಲ್ಲದ ವಿದ್ಯಾರ್ಥಿಗಳಿಗೆ ಆನ್‌ಲೈನ್ ಶಿಕ್ಷಣ ಒದಗಿಸಲು ರಾಜ್ಯದಲ್ಲಿರುವ 5,766 ಗ್ರಾಮ ಪಂಚಾಯಿತಿಯ ಗ್ರಂಥಾಲಯಗಳಲ್ಲಿ ಉಪಕರಣ ಅಳವಡಿಸುವ ಪ್ರಕ್ರಿಯೆ ನಡೆಯುತ್ತಿದೆ' ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ತಿಳಿಸಿದರು.

ಮುಖ್ಯಮಂತ್ರಿಯ ಸಲಹೆಗಾರರಾದ ಪ್ರಶಾಂತ್ ಪ್ರಕಾಶ್ ಮತ್ತು ಸರ್ಕಾರದ ಶೈಕ್ಷಣಿಕ ಸಲಹೆಗಾರರಾದ ಪ್ರೊ. ಎಂ.ಆರ್. ದೊರೆಸ್ವಾಮಿ ಜತೆ ಚರ್ಚಿಸಿದ ಬಳಿಕ ಮಾತನಾಡಿದ ಅವರು, 'ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ (ಆರ್‌ಡಿಪಿಆರ್) ಅಧಿಕಾರಿಗಳೊಂದಿಗೆ ಸಮಾಲೋಚಿಸಿ, ಗ್ರಾಮೀಣ ಮಕ್ಕಳ ಶಿಕ್ಷಣ ಮುಂದುವರಿಕೆ ಮತ್ತು ಕಲಿಕಾ ನಿರಂತರತೆಗೆ ಅನುಕೂಲವಾಗುವ ಕ್ರಮಗಳನ್ನು ಕೈಗೊಳ್ಳಲಾಗುವುದು' ಎಂದರು.

'ಕೋವಿಡ್ ಕಾರಣದಿಂದ ಶಾಲೆಗಳು ಆರಂಭ ಆಗದೇ ಇರುವುದರಿಂದ ಡಿಜಿಟಲ್ ಶಿಕ್ಷಣ ಇಲ್ಲವೇ ಆನ್‌ಲೈನ್‌ನಂಥ ಪರ್ಯಾಯ ವ್ಯವಸ್ಥೆಯ ಮೂಲಕ ಮಕ್ಕಳನ್ನು ತಲುಪಬೇಕಾಗಿದೆ' ಎಂದರು.

'ಶಾಲೆಗಳಲ್ಲಿನ ಶೌಚಾಲಯ ವ್ಯವಸ್ಥೆ, ಕುಡಿಯುವ ನೀರಿನ ಸೌಲಭ್ಯ ಉತ್ತಮಗೊಳಿಸುವುದು ಸೇರಿದಂತೆ ಪರಿಣಾಮಕಾರಿ ಶಿಕ್ಷಣ ವ್ಯವಸ್ಥೆ ರೂಪಿಸುವ ಕುರಿತಂತೆ ಎಸ್ಸೆಸ್ಸೆಲ್ಸಿ ಪರೀಕ್ಷಾವಧಿ ಮುಗಿದ ಕೂಡಲೇ ಆರ್‌ಡಿಪಿಆರ್ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಲಾಗುವುದು. ಶಿಕ್ಷಣ ಇಲಾಖೆಯ ಕಾರ್ಯಪಡೆ ಈ ಎಲ್ಲ ಅಂಶಗಳನ್ನು ಅವಲೋಕಿಸಿ ಕ್ರಿಯಾಯೋಜನೆ ರೂಪಿಸಲಿದೆ' ಎಂದರು.

'ಮೊಬೈಲ್ ನೆಟ್‌ವರ್ಕ್– ಸಕಾರಾತ್ಮಕ ಸ್ಪಂದನೆ'

'ಗ್ರಾಮೀಣ ಪ್ರದೇಶದ ಮಕ್ಕಳ ಕಲಿಕಾ ನಿರಂತರತೆಗೆ ಅನುಕೂಲವಾಗುವಂತೆ ಅಂತರ್ಜಾಲ ನೆಟ್‌ವರ್ಕ್ ಸಮಸ್ಯೆ ಪರಿಹರಿಸುವ ವಿಚಾರದಲ್ಲಿ ಮೊಬೈಲ್ ನೆಟ್-ವರ್ಕ್ ಪೂರೈಕೆದಾರ ಕಂಪನಿಗಳು ಸಕಾರಾತ್ಮಕವಾಗಿ ಸ್ಪಂದಿಸಿವೆ. ಈ ಬಗ್ಗೆ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಜೊತೆಗೂ ಚರ್ಚಿಸಿದ್ದೇನೆ' ಎಂದು ಸುರೇಶ್‌ಕುಮಾರ್ ತಿಳಿಸಿದ್ದಾರೆ.

'ಗ್ರಾಮೀಣ ಪ್ರದೇಶಗಳು ಮತ್ತು ಮಳೆಗಾಲ ಆಗಿರುವುದರಿಂದ ಮಲೆನಾಡು ಭಾಗದಲ್ಲಿ ಮೊಬೈಲ್ ನೆಟ್‌ವರ್ಕ್ ಸಮಸ್ಯೆಯಿಂದ ಮಕ್ಕಳಿಗೆ ಆನ್‌ಲೈನ್ ಬೋಧನೆಗೆ, ಇಲ್ಲವೇ ದೂರದರ್ಶನ ಚಂದನಾ ಪಾಠಗಳಿಗೆ ತೊಂದರೆ ಆಗಿದೆ. ಈ ಕುರಿತು ತ್ವರಿತವಾಗಿ ಗಮನಹರಿಸುವ ಅಗತ್ಯವಿದ್ದು, ಮಕ್ಕಳ ಬೋಧನಾ ವಿಧಾನದ ಗುಣಮಟ್ಟ ಕಾಪಾಡಬೇಕಾಗಿದೆ. ಮುಖ್ಯಮಂತ್ರಿ ಕೂಡಾ ಮುಖ್ಯ ಕಾರ್ಯದರ್ಶಿಗೆ ಸೂಚನೆ ನೀಡಿದ್ದು, ಯುದ್ಧೋಪಾದಿಯಲ್ಲಿ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಿದ್ದಾರೆ' ಎಂದು ಅವರು ಹೇಳಿದ್ದಾರೆ.

ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಸಮ್ಮತಿ

ಒಂದನೇ ಪುಟದಿಂದ...

'ಪರಿಷ್ಕೃತ ವೇಳಾಪಟ್ಟಿ ಪ್ರಕಾರ ಎರಡು ದಿನಗಳಲ್ಲಿ ಆರು ವಿಷಯಗಳನ್ನು ಬರೆಯಬೇಕಾಗಿರುವುದರಿಂದ ವಿದ್ಯಾರ್ಥಿಗಳಿಗೆ ಕಷ್ಟವಾಗಲಿದೆ' ಎಂದು ಅರ್ಜಿದಾರರ ಪರ ವಕೀಲ ಆರ್.ಪಿ. ಸೋಮಶೇಖರಯ್ಯ ವಾದಿಸಿದರು.

ವಿದ್ಯಾರ್ಥಿಗಳು ಮತ್ತು ಪೋಷಕರ ಅಭಿಪ್ರಾಯಗಳನ್ನೂ ಒಳಗೊಂಡು ಸಾಮೂಹಿಕ ನಿರ್ಧಾರವನ್ನು ಸರ್ಕಾರ ಕೈಗೊಂಡಿದೆ. ವಿದ್ಯಾರ್ಥಿ ಸ್ನೇಹಿ ಮತ್ತು ವಸ್ತುನಿಷ್ಠ ಪ್ರಶ್ನೆ ಪತ್ರಿಕೆಗಳನ್ನು ಪರೀಕ್ಷೆ ಒಳಗೊಂಡಿರುತ್ತವೆ. ತಜ್ಞರ ಜತೆ ಸಮಾಲೋಚನೆ ನಡೆಸಿದ ಬಳಿಕವೇ ನಿರ್ಧಾರ ಕೈಗೊಳ್ಳಲಾಗಿದೆ. ಒಬ್ಬ ವಿದ್ಯಾರ್ಥಿಗೆ ಒಂದು ಮೇಜು ನಿಗದಿ ಮಾಡಿ ಅಂತರ ಕಾಪಾಡಿಕೊಂಡು ಪರೀಕ್ಷೆ ಬರೆಸಲಾಗುವುದು. ಆರೋಗ್ಯ ತಪಾಸಣೆಗೆ ವೈದ್ಯಕೀಯ ಸಿಬ್ಬಂದಿ ನಿಯೋಜನೆ ಮಾಡಿಕೊಳ್ಳಲಾಗುವುದು. ಕಳೆದ ವರ್ಷವೂ ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಸಲಾಯಿತು ಮತ್ತು ಇದೇ ರೀತಿಯ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ ಎಂದು ಅಡ್ವೊಕೇಟ್ ಜನರಲ್ ಮಾಹಿತಿ ನೀಡಿದರು.

'ಪರೀಕ್ಷೆ ಬರೆಯದೆ 'ಪಾಸ್' ಎಂದು ಬಡ್ತಿ ಪಡೆಯುವ ಬದಲು ಪರೀಕ್ಷೆಗೆ ಹಾಜರಾಗುವುದು ವಿದ್ಯಾರ್ಥಿಗಳ ದೃಷ್ಟಿಯಿಂದ ಒಳ್ಳೆಯದು' ಎಂದು ಪೀಠ ಅಭಿಪ್ರಾಯಪಟ್ಟಿತು.

'ದೇಶದ್ರೋಹ' ಸೆಕ್ಷನ್ ಪ್ರಶ್ನಿಸಿದ್ದ ಅರ್ಜಿ: ಪ್ರತಿಕ್ರಿಯೆಗೆ ಕಾಲಾವಕಾಶ

ಪ್ರಜಾವಾಣಿ ವಾರ್ತೆ



ನವದೆಹಲಿ: 'ದೇಶದ್ರೋಹ'ಕ್ಕೆ ಶಿಕ್ಷೆ ವಿಧಿಸಲು ಅವಕಾಶ ಕಲ್ಪಿಸುವ ಭಾರತೀಯ ದಂಡ ಸಂಹಿತೆಯ ಸೆಕ್ಷನ್‌ನ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗೆ ಪ್ರತಿಕ್ರಿಯೆ ಸಲ್ಲಿಸಲು ಕೇಂದ್ರಕ್ಕೆ ಎರಡು ವಾರಗಳ ಕಾಲಾವಕಾಶವನ್ನು ಸುಪ್ರೀ ಕೋರ್ಟ್ ನೀಡಿದೆ.

ಪತ್ರಕರ್ತ ಕಿಶೋರ್‌ಚಂದ್ರ ವಾಂಗ್ಕೆಂಚಾ ಮತ್ತು ವ್ಯಂಗ್ಯಚಿತ್ರಕಾರರೊಬ್ಬರು ಈ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಗೆ ಉತ್ತರಿಸಲು ಹೆಚ್ಚಿನ ಸಮಯಾವಕಾಶ ನೀಡಬೇಕು ಎಂದು ಅಟಾರ್ನಿ ಜನರಲ್ ಕೆ.ಕೆ. ವೇಣುಗೋಪಾಲ್ ಮತ್ತು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಕೋರ್ಟ್‌ಅನ್ನು ಕೋರಿದ್ದರು. ಅದರಂತೆ ನ್ಯಾಯಮೂರ್ತಿಯರಾದ ಯು.ಯು. ಲಲಿತ್ ಮತ್ತು ಅಜಯ್ ರಸ್ತೋಗಿ ನೇತೃತ್ವದ ಪೀಠ ಈ ಅರ್ಜಿ ವಿಚಾರಣೆಯನ್ನು ಇದೇ 27ಕ್ಕೆ ನಿಗದಿಪಡಿಸಿದೆ.

ಏ.30ರಂದೇ ಈ ಅರ್ಜಿಗೆ ಸಂಬಂಧಿಸಿ ಕೇಂದ್ರ ಸರ್ಕಾರಕ್ಕೆ ಕೋರ್ಟ್ ನೋಟಿಸ್ ನೀಡಿತ್ತು.

ಈ ಸೆಕ್ಷನ್‌ನ ಸಾಂವಿಧಾನಿಕ ಸಿಂಧುತ್ವವನ್ನು ಕೇದಾರನಾಥ ಪ್ರಕರಣದಲ್ಲಿ (1962) ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿತ್ತು ಎಂಬುದನ್ನು ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ. ಅದನ್ನು ಮರುಪರಿಶೀಲಿಸಬೇಕು ಎಂದು ಕೋರಲಾಗಿದೆ.

ಮಣಿಪುರ ಮೂಲದ ಪತ್ರಕರ್ತ ವಾಂಗ್ಕೆಂಚ ವಿರುದ್ಧ 2018ರಲ್ಲಿ ಹಲವಾರು ಮೊಕದ್ದಮೆಗಳಲ್ಲಿ ಎಫ್‌ಐಆರ್ ದಾಖಲಿಸಲಾಗಿತ್ತು. 210 ದಿನಗಳ ಕಾಲ ಜೈಲಿನಲ್ಲಿ ಕಳೆದಿದ್ದರಿಂದ ಅವರು ಉದ್ಯೋಗ ಕಳೆದುಕೊಂಡಿದ್ದರು. ಚಂಡೀಗಡದ ವ್ಯಂಗ್ಯಚಿತ್ರಕಾರ ಕನ್ಹಯ್ಯ ಲಾಲ್ ಶುಕ್ಲ ಅವರ ವಿರುದ್ಧವೂ ಎಫ್‌ಐಆರ್ ದಾಖಲಿಸಲಾಗಿತ್ತು.

'ವರ್ಚುವಲ್' ಏಕವ್ಯಕ್ತಿ ತಾಳಮದ್ದಲೆ 16ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಗ್ಗೋಡಿನ ನೀನಾಸಂ ಸಂಸ್ಥೆಯ ಸಂಸ್ಥಾಪಕ ಕೆ.ವಿ.ಸುಬ್ಬಣ್ಣ ಸ್ಮರಣೆ ಕಾರ್ಯಕ್ರಮದ ಅಂಗವಾಗಿ ಯೂಟ್ಯೂಬ್‌ನ 'ಆರ್ಟಿಕಲ್ಚರ್' ಪೇಜ್‌ನಲ್ಲಿ ಇದೇ 16ರಂದು ರಾತ್ರಿ 8 ಗಂಟೆಗೆ ಏಕವ್ಯಕ್ತಿ ತಾಳಮದ್ದಲೆ ಬಿತ್ತರಗೊಳ್ಳಲಿದೆ.

ಕೃಷ್ಣ ಸಂಧಾನ ಪ್ರಸಂಗ ಕೃತಿ ಆಧರಿಸಿ 'ಸಂಧಾನ ಪೀಠಿಕೆ' ತಾಳಮದ್ದಲೆಯನ್ನು 'ಆರ್ಟಿಕಲ್ಚರ್ ಉತ್ಸಾಹಿಗಳು' ತಂಡ ಅರ್ಪಿಸುತ್ತಿದೆ. ಭಾಗವತಿಕೆ, ಮದ್ದಳೆ ವಾದನ ಹಾಗೂ ದ್ರೌಪದಿ, ಶ್ರೀಕೃಷ್ಣ ಮತ್ತು ಭೀಮ ಪಾತ್ರವನ್ನು ಕಲಾವಿದ ಭಾರ್ಗವ ಹೆಗ್ಗೋಡು ಒಬ್ಬರೇ ಪ್ರದರ್ಶಿಸಲಿದ್ದಾರೆ.

ಭಾರ್ಗವ ಅವರು ಹಿರಿಯ ಯಕ್ಷಗಾನ ಕಲಾವಿದ ಕೆ.ಎನ್. ನಾಗರಾಜ ಮತ್ತು ವಿನೋದಾ ದಂಪತಿಯ ಪುತ್ರ. ನೀನಾಸಂ ಪ್ರದರ್ಶನಗಳಲ್ಲಿ ಸಂಗೀತಗಾರರಾಗಿ, ವಿವಿಧ ಯಕ್ಷಗಾನದ ಮೇಳಗಳಲ್ಲಿ ಹಿಮ್ಮೇಳ ಕಲಾವಿದರಾಗಿ ಅವರು ಕಾರ್ಯನಿರ್ವಹಿಸಿದ್ದಾರೆ.

ಈಶಾನ್ಯ ಶರ್ಮಾ ತಾಳಮದ್ದಲೆಯನ್ನು ಚಿತ್ರೀಕರಿಸಿದ್ದು, ಕೌಂಡಿನ್ಯ ಶರ್ಮಾ ಶೀರ್ಷಿಕೆ ವಿನ್ಯಾಸ ಮಾಡಿದ್ದಾರೆ. ಎಚ್.ಎಸ್. ದರ್ಶನ್ ಅವರು ಧ್ವನಿಗ್ರಹಣ, ಸಂಕಲನ, ತಾಂತ್ರಿಕ ನಿರ್ದೇಶನ ಮಾಡಿದ್ದಾರೆ.

ಟಿ.ವಿ. ಚರ್ಚೆ ಬಹಿಷ್ಕರಿಸಿದ ಎಐಎಡಿಎಂಕೆ

ಪ್ರಜಾವಾಣಿ ವಾರ್ತೆ

ಚೆನ್ನೈ: ಟಿ.ವಿ. ಚಾನಲ್‌ಗಳ ಚರ್ಚೆಗಳಿಗೆ ಇನ್ನು ಮುಂದೆ ಪಕ್ಷದ ಪ್ರತಿನಿಧಿಗಳನ್ನು ಕಳುಹಿಸುವುದಿಲ್ಲ ಎಂದು ಎಐಎಡಿಎಂಕೆ ತಿಳಿಸಿದೆ.

ಟಿ.ವಿ. ಚಾನಲ್‌ಗಳು ಪಕ್ಷದ ಗೌರವ, ಘನತೆಗೆ ಧಕ್ಕೆ ತರುವ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳುತ್ತಿವೆ ಎಂದು ಅದು ದೂರಿದೆ.

ಜನರ ಸಮಸ್ಯೆಗಳ ಬಗ್ಗೆ ಚಾನಲ್‌ಗಳು ಗಂಭೀರವಾಗಿ ಚರ್ಚೆ ನಡೆಸುತ್ತಿಲ್ಲ. ನೀತಿ ಸಂಹಿತೆಯನ್ನು ಮಾಧ್ಯಮಗಳು ಪಾಲಿಸುತ್ತಿಲ್ಲ ಎಂದು ಎಐಎಡಿಎಂಕೆ ಸಂಚಾಲಕ ಒ. ಪನ್ನೀರಸೆಲ್ವಂ ಮತ್ತು ಜಂಟಿ ಸಂಚಾಲಕ ಇ.ಕೆ. ಪಳನಿಸ್ವಾಮಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕರ್ಫ್ಯೂ ಮಧ್ಯೆ ಪುರಿ ರಥ ಯಾತ್ರೆ


ಭಕ್ತಾದಿಗಳು ಇಲ್ಲದೆಯೇ ಪುರಿಯಲ್ಲಿ ಸೋಮವಾರ ಜಗನ್ನಾಥ ರಥ ಯಾತ್ರೆ ನಡೆಯಿತು —ಪಿಟಿಐ ಚಿತ್ರ

ಪುರಿ(ಒಡಿಶಾ): ಕರ್ಫ್ಯೂ ಮಧ್ಯೆ ಇಲ್ಲಿನ ವಾರ್ಷಿಕ ಜಗನ್ನಾಥ ರಥ ಯಾತ್ರೆಯು ಭಕ್ತರಿಲ್ಲದೆ ಸೋಮವಾರ ಸರಳವಾಗಿ ನಡೆಯಿತು.

ಕೋವಿಡ್–19 ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಾಯಿತು. ಸತತ ಎರಡನೇ ವರ್ಷ ಮತ್ತು ರಥ ಯಾತ್ರೆಯ ಇತಿಹಾಸದಲ್ಲೇ ಎರಡನೇ ಬಾರಿ ಭಕ್ತರಿಲ್ಲದೆ ನಡೆಯಿತು. ದೇವಸ್ಥಾನದ ಮುಂದಿನ ಮೂರು ಕಿಲೋ ಮೀಟರ್ ರಸ್ತೆಯು ಬಿಕೋ ಎನ್ನುತ್ತಿತ್ತು. ಕೆಲವು ಆಯ್ದ ಪೂಜಾರಿಗಳು ಮತ್ತು ಪೊಲೀಸ್ ಸಿಬ್ಬಂದಿಗೆ ಮಾತ್ರ ಉತ್ಸವದಲ್ಲಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸಲಾಗಿತ್ತು.

ಜಗನ್ನಾಥ ಸ್ವಾಮಿ, ತಮ್ಮ ಬಲಭದ್ರ, ತಂಗಿ ಸುಭದ್ರಾ ಅವರ ಮೂರ್ತಿಗಳನ್ನು ಮೆರವಣಿಗೆ ಮೂಲಕ ಕೊಂಡೊಯ್ಯಲಾಯಿತು. ಬಳಿಕ, ರಥಗಳ ಯಾತ್ರೆ ನಡೆಯಿತು. ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಸಹ ಪುರಿಗೆ ಭೇಟಿ ನೀಡಲಿಲ್ಲ. ಭಕ್ತಾದಿಗಳು ಯಾತ್ರೆಯನ್ನು ವೀಕ್ಷಿಸಲು ಅನುಕೂಲವಾಗುವಂತೆ ನೇರ ಪ್ರಸಾರದ ವ್ಯವಸ್ಥೆ ಮಾಡಲಾಗಿತ್ತು.

ನೇಪಾಳ ಪ್ರಧಾನಿಯಾಗಿ ಶೇರ್ ಬಹದ್ದೂರ್ ದೇವುಬಾ ನೇಮಕಕ್ಕೆ ಸುಪ್ರೀಂ ಆದೇಶ

ಕಠ್ಮಂಡು (ಪಿಟಿಐ): ನೇಪಾಳದ ಸುಪ್ರೀಂ ಕೋರ್ಟ್ ಐದು ತಿಂಗಳಲ್ಲಿ ಎರಡನೇ ಬಾರಿಗೆ ವಿಸರ್ಜಿತ ಸಂಸತ್ತನ್ನು ಮರುಸ್ಥಾಪಿಸಿದ್ದು, ನೇಪಾಳಿ ಕಾಂಗ್ರೆಸ್ ಅಧ್ಯಕ್ಷ ಶೇರ್ ಬಹದ್ದೂರ್ ದೇವುಬಾ ಅವರನ್ನು ಎರಡು ದಿನದೊಳಗೆ ಪ್ರಧಾನಿಯನ್ನಾಗಿ ನೇಮಕ ಮಾಡಬೇಕೆಂದು ಆದೇಶ ನೀಡಿದೆ.

ಸುಪ್ರೀಂ ಕೋರ್ಟ್‌ನ 5 ಸದಸ್ಯರ ಸಂವಿಧಾನ ಪೀಠ ಸೋಮವಾರ ನೀಡಿರುವ ಈ ತೀರ್ಪು ಹಾಲಿ ಅಲ್ಪಸಂಖ್ಯಾತ ಸರ್ಕಾರದ ನೇತೃತ್ವ ವಹಿಸಿರುವ ಕೆ.ಪಿ. ಶರ್ಮಾ ಒಲಿ ಅವರಿಗೆ ಆಗಿರುವ ಭಾರಿ ಹಿನ್ನಡೆ ಎಂದು ವಿಶ್ಲೇಷಿಸಲಾಗಿದೆ.

ಮುಖ್ಯ ನ್ಯಾಯಮೂರ್ತಿ ಚೋಳೇಂದ್ರ ಶುಮ್ಶೇರ್ ರಾಣಾ ನೇತೃತ್ವದ ನ್ಯಾಯಪೀಠ ಕಳೆದ ವಾರವೇ ವಿಚಾರಣೆಯನ್ನು ಪೂರ್ಣಗೊಳಿಸಿತ್ತು.

ಅಧ್ಯಕ್ಷೆ ವಿದ್ಯಾದೇವಿ ಭಂಡಾರಿ ಅವರು ಐದು ತಿಂಗಳಲ್ಲಿ ಎರಡನೇ ಬಾರಿಗೆ ಮೇ 22ರಂದು 275 ಸದಸ್ಯ ಬಲದ ಸಂಸತ್ತನ್ನು ವಿಸರ್ಜಿಸಿದ್ದರು ಹಾಗೂ ಪ್ರಧಾನಿ ಒಲಿ ಅವರ ಸಲಹೆಯಂತೆ ನವೆಂಬರ್ 12 ಮತ್ತು 19ರಂದು ಚುನಾವಣೆ ನಡೆಯಲಿದೆ ಎಂದು ಪ್ರಕಟಿಸಿದ್ದರು. ಕಳೆದ ವಾರ ಚುನಾವಣಾ ಆಯೋಗವೂ ಮಧ್ಯಂತರ ಚುನಾವಣಾ ದಿನಾಂಕ ಪ್ರಕಟಿಸಿತ್ತು.

ಅಧ್ಯಕ್ಷರು ಸಂಸತ್ತನ್ನು ವಿಸರ್ಜಿಸಿದ್ದನ್ನು ಪ್ರಶ್ನಿಸಿ ನೇಪಾಳಿ ಕಾಂಗ್ರೆಸ್ ನೇತೃತ್ವದ ವಿರೋಧ ಪಕ್ಷಗಳ ಒಕ್ಕೂಟ ಸಹಿತ 30 ಅರ್ಜಿಗಳು ಸುಪ್ರೀಂ ಕೋರ್ಟ್‌ಗೆ ಸಲ್ಲಿಕೆಯಾಗಿದ್ದವು. ಕಳೆದ ವರ್ಷ ಡಿಸೆಂಬರ್ 20ರಂದು ಅಧ್ಯಕ್ಷೆ ಭಂಡಾರಿ ಅವರು ಸಂಸತ್ತನ್ನು ವಿಸರ್ಜಿಸುವ ಮೂಲಕ ದೇಶದಲ್ಲಿ ರಾಜಕೀಯ ಬಿಕ್ಕಟ್ಟು ಆರಂಭವಾಗಿತ್ತು. ಫೆಬ್ರುವರಿ 23ರಂದು ಸುಪ್ರೀಂ ಕೋರ್ಟ್ ವಿಸರ್ಜಿತ ಸಂಸತ್ತನ್ನು ಮರುಸ್ಥಾಪಿಸಿತ್ತು.

‘ತಾರತಮ್ಯದ ವಿರುದ್ಧ ಹೋರಾಡುವ ಸವಾಲು’

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರ ಸಂಪುಟ ಪುನರ್‌ರಚನೆ ವೇಳೆ ರಾಜ್ಯದ ನಾಲ್ವರಿಗೆ ಸಚಿವ ಸ್ಥಾನಗಳನ್ನು ನೀಡಲಾಗಿದೆ. ಕೇಂದ್ರದ ರಾಸಾಯನಿಕ ಖಾತೆ ಸಚಿವರಾಗಿದ್ದ ಡಿ.ವಿ. ಸದಾನಂದ ಗೌಡ ಅವರನ್ನು ಇದೇ ವೇಳೆ ಸಂಪುಟದಿಂದ ಕೈಬಿಡಲಾಗಿದೆ.

ಸಂಪುಟ ದರ್ಜೆಯ ಒಬ್ಬರನ್ನು ಕೈಬಿಟ್ಟು, ಎ. ನಾರಾಯಣಸ್ವಾಮಿ, ಶೋಭಾ ಕರಂದ್ಲಾಜೆ, ರಾಜೀವ್ ಚಂದ್ರಶೇಖರ್ ಮತ್ತು ಭಗವಂತ ಖೂಬಾ ಅವರಿಗೆ ರಾಜ್ಯ ಸಚಿವ ಸ್ಥಾನ ನೀಡಲಾಗಿದೆ. ಸಂಪುಟ ಪುನರ್‌ರಚನೆಯಿಂದ ರಾಜ್ಯಕ್ಕೆ ಲಾಭವೇ? ನಷ್ಟವೇ? ಎನ್ನುವ ಕುರಿತು ‘ಪ್ರಜಾವಾಣಿ’ ಸೋಮವಾರ ನಡೆಸಿದ ಸಂವಾದ ಕಾರ್ಯಕ್ರಮದಲ್ಲಿ ಜೆಡಿಎಸ್ ಶಾಸಕ ಕೆ.ಎಂ. ಶಿವಲಿಂಗೇಗೌಡ ಮತ್ತು ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಅಶ್ವತ್ಥನಾರಾಯಣ ಗೌಡ ಅವರು ಹಂಚಿಕೊಂಡ ಅಭಿಪ್ರಾಯಗಳ ಸಂಕ್ಷಿಪ್ತ ವಿವರ ಇಲ್ಲಿದೆ.

ಕರ್ನಾಟಕಕ್ಕೆ ತಾರತಮ್ಯ ಮಾಡುವುದು ನಿಲ್ಲಲಿ



ಈಗ ಕೇಂದ್ರ ಸಚಿವರಾಗಿರುವವರ ಬಗ್ಗೆ ತಕರಾರುಗಳಿಲ್ಲ. ಕೇಂದ್ರದಿಂದ ರಾಜ್ಯಕ್ಕೆ ದೊರೆಯುತ್ತಿರುವ ಸೌಲಭ್ಯಗಳೇನು ಎಂಬುದನ್ನು ನೋಡಬೇಕಿದೆ. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರೇ ರಾಜ್ಯವನ್ನು ಪ್ರತಿನಿಧಿಸುತ್ತಾರೆ. ಆದರೂ, ಕಳೆದ ವರ್ಷ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಪಾಲಿನಲ್ಲಿ ₹ 8,000 ಕೋಟಿಗೆ ಕತ್ತರಿ ಹಾಕಿದರು. ಹಿಂದಿ ಭಾಷಿಕ ರಾಜ್ಯಗಳಿಗೆ ಕೇಂದ್ರ ಆದ್ಯತೆ ನೀಡುತ್ತಿದೆ.

ಯಾವ ಇಲಾಖೆಯಿಂದ ಏನು ದೊರೆಯಿತು ಎಂಬುದು ಮುಖ್ಯ. ರೈಲ್ವೆ ಇಲಾಖೆಯಿಂದ ರಾಜ್ಯಕ್ಕೆ ಏನಾಗುತ್ತಿದೆ? ಕ್ರೀಡಾಂಗಣಗಳ ಅಭಿವೃದ್ಧಿಗೆ ರಾಜ್ಯಕ್ಕೆ ಎಷ್ಟು ಹಣ ಬರುತ್ತಿದೆ? ಗುಜರಾತ್‌ಗೆ ಎಷ್ಟು ಹೋಗುತ್ತಿದೆ? ನೀರಾವರಿ ಯೋಜನೆಗಳಿಗೆ ಕೇಂದ್ರದ ಅನುದಾನವೇ ಸಿಗುತ್ತಿಲ್ಲ. ಎತ್ತಿನಹೊಳೆ ಸೇರಿದಂತೆ ಹಲವು ಯೋಜನೆಗಳಿಗೆ ರಾಷ್ಟ್ರೀಯ ಸ್ಥಾನಮಾನ ನೀಡಿಲ್ಲ. ಕೋವಿಡ್ ಲಸಿಕೆ ಹಂಚಿಕೆಯಲ್ಲೂ ತಾರತಮ್ಯ ಆಗುತ್ತಿದೆ. ಮಂತ್ರಿಗಳ ಸಂಖ್ಯೆ ಇದ್ದರೆ ಎಲ್ಲವೂ ಆಗುವುದಿಲ್ಲ. ರಾಜ್ಯಕ್ಕೆ ಯಾವುದೇ ರೀತಿಯಲ್ಲೂ ತಾರತಮ್ಯ ಆಗಕೂಡದು.

ದಕ್ಷತೆ ಆಧಾರದಲ್ಲಿ ಮಂತ್ರಿ ಮಂಡಲದಲ್ಲಿ ಅವಕಾಶ ನೀಡಲಾಗುತ್ತದೆ ಎಂಬುದು ಸುಳ್ಳು. ಯಾವ ಪಕ್ಷವೂ ಅದನ್ನು ಮಾಡುವುದಿಲ್ಲ. ಜಾತಿ, ಪ್ರಾದೇಶಿಕತೆ ಸೇರಿದಂತೆ ಹಲವು ವಿಚಾರಗಳನ್ನು ಆಧರಿಸಿ ಮಂತ್ರಿ ಮಂಡಲದಲ್ಲಿ ಸ್ಥಾನ ನೀಡಲಾಗುತ್ತದೆ. ಸಂದರ್ಭಕ್ಕೆ ಅನುಗುಣವಾಗಿ, ರಾಜಕೀಯ ಪಕ್ಷದ ಉಳಿವಿಗಾಗಿ ಸಚಿವರನ್ನು ಆಯ್ಕೆ ಮಾಡಲಾಗುತ್ತದೆ. ಉಳಿದುದ್ದೆಲ್ಲವೂ ಸುಳ್ಳು. ಪಕ್ಷಾಂತರ ಮಾಡಿ ಹೋದವರನ್ನು ಬಿಜೆಪಿ ಸಚಿವರನ್ನಾಗಿ ಮಾಡಿಲ್ಲವೆ?

ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಎಲ್ಲ ಪ್ರಾದೇಶಿಕ ಭಾಷೆಗಳಿಗೂ ಸಮಾನ ಅವಕಾಶ ಬೇಕು. ಹಿಂದಿ ಹೇರಿಕೆ ಒಪ್ಪುವುದಿಲ್ಲ. ಹಿಂದಿಯಲ್ಲೇ ನೇಮಕಾತಿ ಪರೀಕ್ಷೆ ನಡೆಸುವುದನ್ನು ಒಪ್ಪಲಾಗದು. ಸ್ಥಳೀಯ ಪ್ರಾದೇಶಿಕ ಭಾಷೆಗಳಲ್ಲೇ ಬ್ಯಾಂಕಿಂಗ್ ಪರೀಕ್ಷೆ ಬರೆಯಲು ಅವಕಾಶ ನೀಡಲೇಬೇಕು. ಈಗ ರಾಜ್ಯವನ್ನು ಪ್ರತಿನಿಧಿಸುವ ಆರು ಜನ ಸಚಿವರಿಗೂ ಹೆಚ್ಚು ಅಧಿಕಾರ ಸ್ವಾತಂತ್ರ್ಯ ದೊರಕಲಿ. ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಆಗುತ್ತಿರುವ ತಾರತಮ್ಯವನ್ನು ಅವರೆಲ್ಲರೂ ಒಗ್ಗೂಡಿ ತಪ್ಪಿಸಲಿ.

– **ಕೆ.ಎಂ. ಶಿವಲಿಂಗೇಗೌಡ,** ಜೆಡಿಎಸ್ ಶಾಸಕ

ಪ್ರಜಾವಾಣಿ ಸಂವಾದ

ದೊರಕಿದ ಸೌಲಭ್ಯಗಳ ಬಗ್ಗೆಯೂ ಚರ್ಚೆಯಾಗಬೇಕಲ್ಲವೆ?



ಕನ್ನಡದಲ್ಲೂ ಬ್ಯಾಂಕಿಂಗ್ ಪರೀಕ್ಷೆಗೆ ಕೇಂದ್ರ ಸರ್ಕಾರ ಅವಕಾಶ ಕಲ್ಪಿಸಿದೆ. ಕನ್ನಡಿಗರಿಗೆ ಯಾವುದೇ ರೀತಿಯಲ್ಲಿ ಅನ್ಯಾಯ ಆದರೂ ತಡೆಯಲು ಕೇಂದ್ರ ಬದ್ಧವಾಗಿದೆ. ಬ್ಯಾಂಕಿಂಗ್ ಪರೀಕ್ಷೆಯಲ್ಲಿ ಕನ್ನಡಕ್ಕೆ ಅವಕಾಶ ಇಲ್ಲದಿರುವ ಕುರಿತು ಕೇಂದ್ರ ಸಚಿವರ ಗಮನ ಸೆಳೆಯಲಾಗುವುದು. ಆರು ಸಚಿವರಿಂದ ಕರ್ನಾಟಕ ಮತ್ತು ಕನ್ನಡಕ್ಕೆ ಹೆಚ್ಚು ಅನುಕೂಲ ಆಗಲಿದೆ.

ಸದಾನಂದ ಗೌಡರನ್ನು ದುರುದ್ದೇಶದ ಕಾರಣಕ್ಕೆ ಸಂಪುಟದಿಂದ ಕೈಬಿಟ್ಟಿಲ್ಲ. ಸಂಘಟನೆಯ ಕೆಲಸಕ್ಕಾಗಿ ಅವರನ್ನು ಸಂಪುಟದಿಂದ ಹೊರಗಿಡಲಾಗಿದೆ. ಸದಾನಂದ ಗೌಡರೂ ಇದನ್ನು ಸ್ಪಷ್ಟಪಡಿಸಿದ್ದಾರೆ. ಪಕ್ಷ ಮತ್ತು ಪ್ರಧಾನಿಯವರ ಹಂತದಲ್ಲಿ ಚರ್ಚಿಸಿ ಈ ಕ್ರಮ ಕೈಗೊಳ್ಳಲಾಗಿದೆ. ವಿವಿಧ ರಾಜ್ಯಗಳಲ್ಲಿ ವಿಧಾನಸಭಾ ಚುನಾವಣೆಗಳಿವೆ. ಅದು ಕೂಡ ಸಂಪುಟ ಪುನರ್‌ರಚನೆಗೆ ಕಾರಣವಾಗಿದೆ.

ಪ್ರಲ್ಹಾದ ಜೋಷಿ, ನಿರ್ಮಲಾ ಸೀತಾರಾಮನ್ ಹಿರಿಯರು. ಪಕ್ಷಕ್ಕಾಗಿ ದುಡಿದವರು. ಅವರನ್ನು ಜಾತಿ ಆಧಾರದ ಮೇಲೆ ಗುರುತಿಸುವುದು ಸರಿಯಲ್ಲ. ಸಾಮಾಜಿಕ ನ್ಯಾಯದ ವಿಚಾರದಲ್ಲಿ ಮೋದಿ ಅವರ ಸಂಪುಟವನ್ನು ಸಿದ್ದರಾಮಯ್ಯ ಅವರ ಸಂಪುಟಕ್ಕೆ ಹೋಲಿಸಲಾಗದು. ಹಿಂದಿನ ಡಾ. ಮನಮೋಹನ್ ಸಿಂಗ್ ಸರ್ಕಾರಕ್ಕೂ ಹೋಲಿಕೆ ಮಾಡಲು ಸಾಧ್ಯವಿಲ್ಲ. ಈ ವಿಚಾರದಲ್ಲಿ ಮೋದಿ ಒಂದು ಹೆಜ್ಜೆ ಮುಂದಿದ್ದಾರೆ. ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ರಾಜ್ಯಕ್ಕೆ ಹಲವು ಕೆಲಸಗಳಾಗಿವೆ. ರೈಲ್ವೆ ಯೋಜನೆಗಳು ಚುರುಕಾಗಿವೆ.

ಬೀದರ್ ಸಂಸದರು ಕ್ರಿಯಾಶೀಲವಾಗಿ ಕೆಲಸ ಮಾಡುತ್ತಿದ್ದಾರೆ. ಕಲ್ಯಾಣ ಕರ್ನಾಟಕದ ಅಭಿವೃದ್ಧಿ ಬಗ್ಗೆ ಅವರಿಗೆ ಸ್ಪಷ್ಟ ಕಲ್ಪನೆ ಇದೆ. ಅದರಲ್ಲಿ ಖೂಬಾ ಯಶಸ್ವಿಯಾಗುತ್ತಾರೆ. ₹ 8000 ಕೋಟಿ ಬಂದಿಲ್ಲ ಎಂಬುದು ನಿಜ. ಯೋಜನೇತರ ವಿಭಾಗದಲ್ಲಿ ₹ 34,000 ಕೋಟಿ ಬಂದಿದೆ. ಕೇಂದ್ರದಿಂದ ಆಗಿರುವ ಅನುಕೂಲಗಳ ಬಗ್ಗೆಯೂ ಚರ್ಚೆ ಆಗಬೇಕಲ್ಲವೆ?

– **ಅಶ್ವತ್ಥನಾರಾಯಣ ಗೌಡ,** ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ

ಪೂರ್ಣ ಸಂವಾದಕ್ಕೆ https://bit.ly/3hz9FfZಕ್ಕೆ ಭೇಟಿ ಮಾಡಿ

ಸಂಕ್ಷಿಪ್ತ ಸುದ್ದಿ

‘19ರಿಂದ ಸಂಸತ್ತಿನ ಮುಂಗಾರು ಅಧಿವೇಶನ’

ನವದೆಹಲಿ: ಸಂಸತ್ತಿನ ಮುಂಗಾರು ಅಧಿವೇಶನವು ಜುಲೈ 19ರಿಂದ ಆರಂಭವಾಗಲಿದೆ ಎಂದು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಸೋಮವಾರ ಮಾಹಿತಿ ನೀಡಿದ್ದಾರೆ.

19 ದಿನಗಳ ಕಾಲ ನಡೆಯಲಿರುವ ಸಂಸತ್ತಿನ ಮುಂಗಾರು ಅಧಿವೇಶನವು ಆಗಸ್ಟ್ 13ಕ್ಕೆ ಅಂತ್ಯಗೊಳ್ಳಲಿದೆ ಎಂದು ಬಿರ್ಲಾ ತಿಳಿಸಿದ್ದಾರೆ.

ಸಾಮಾನ್ಯವಾಗಿ ಮುಂಗಾರು ಅಧಿವೇಶನವು ಜುಲೈ ಮೂರನೇ ವಾರದಲ್ಲಿ ಆರಂಭವಾಗಿ, ಸ್ವಾತಂತ್ರ್ಯ ದಿನಾಚರಣೆಗೆ ಮುನ್ನ ಕೊನೆಗೊಳ್ಳುವುದು ವಾಡಿಕೆ. ಆದರೆ, ಈ ಬಾರಿ ಸಂಸದೀಯ ವ್ಯವಹಾರಗಳ ಸಂಪುಟ ಸಮಿತಿಯ ಶಿಫಾರಸಿನ ಮೇಲೆ ಅಧಿವೇಶನದ ಅವಧಿಯನ್ನು ನಿಗದಿಪಡಿಸಲಾಗಿದೆ.

ಅಧಿವೇಶನದ ಅವಧಿಯಲ್ಲಿ ಕೋವಿಡ್ ಸಂಬಂಧಿತ ಎಲ್ಲ ಮಾರ್ಗಸೂಚಿಗಳನ್ನು ಪಾಲಿಸಲು ಸಂಸತ್ತಿನ ಆವರಣವನ್ನು ಸಿದ್ಧಗೊಳಿಸಲಾಗಿದೆ. ಸಂಸತ್ ಭವನದ ಆವರಣ ಪ್ರವೇಶಿಸುವವರು ಕನಿಷ್ಠ ಒಂದು ಡೋಸ್ ಕೋವಿಡ್ ಲಸಿಕೆ ತೆಗೆದುಕೊಂಡಿರಬೇಕು ಎಂದ ಹೇಳಲಾಗಿದೆ.

ಅಸ್ಸಾಂ: ಗೋಹತ್ಯೆ, ಗೋಮಾಂಸ ಸೇವನೆಗೆ ಕಡಿವಾಣ

ಗುವಾಹಟಿ: ರಾಜ್ಯದಲ್ಲಿ ಹಿಂದೂ, ಜೈನರು, ಸಿಖ್ಖರು ಮತ್ತು ಗೋಮಾಂಸ ಸೇವಿಸದ ಇತರೆ ಸಮುದಾಯದವರು ಪ್ರಾಬಲ್ಯ ಹೊಂದಿರುವ ಪ್ರದೇಶಗಳಲ್ಲಿ ಗೋಮಾಂಸ ಮಾರಾಟ ನಿಷೇಧಿಸಲು ಅಸ್ಸಾಂನ ಬಿಜೆಪಿ ಸರ್ಕಾರ ಉದ್ದೇಶಿಸಿದೆ.

ಈ ಸಂಬಂಧ ‘ಅಸ್ಸಾಂ ಜಾನುವಾರು ಸಂರಕ್ಷಣಾ ಕಾಯ್ದೆ 2021’ಯ ಮಸೂದೆಯನ್ನು ಸರ್ಕಾರ ಮಂಡಿಸಿದೆ. ಅದರ ಪ್ರಕಾರ ದೇಗುಲ ಸೇರಿ ಹಿಂದೂ ಧಾರ್ಮಿಕ ಸಂಸ್ಥೆಗಳ 5 ಕಿ.ಮೀ. ವ್ಯಾಪ್ತಿಯಲ್ಲಿ ಗೋಮಾಂಸ ಮಾರಾಟವನ್ನು ನಿರ್ಬಂಧಿಸಲಾಗುತ್ತದೆ.

ಅಸ್ಸಾಂ ಸರ್ಕಾರದ ಅನುಮತಿಯಿಲ್ಲದೇ ನೆರೆಯ ರಾಜ್ಯಗಳಿಂದ ರಾಜ್ಯಕ್ಕೆ ಗೋಮಾಂಸ ಸಾಗಣೆಯನ್ನೂ ನಿರ್ಬಂಧಿಸಲು ಮಸೂದೆ ಅವಕಾಶ ನೀಡಲಿದೆ. ಇದು ನೆರೆಯ ಮಿಜೋರಾಂ, ನಾಗಾಲ್ಯಾಂಡ್, ಮೇಘಾಲಯಗಳಿಗೆ ಇರಿಸುಮುರಿಸು ತಂದಿದೆ. ಹಾಲಿ ಕಾಯ್ದೆಯಡಿ, 14 ವರ್ಷ ಮೀರಿದ ಜಾನುವಾರುಗಳ ಹತ್ಯೆಗೆ ಅವಕಾಶವಿತ್ತು. ಉದ್ದೇಶಿತ ಮಸೂದೆಯು ಲೈಸೆನ್ಸ್ ಹೊಂದಿರುವ ಕಸಾಯಿಖಾನೆಗಳಲ್ಲಿಯಷ್ಟೇ ಗೋಹತ್ಯೆಗೆ ಅವಕಾಶ ನೀಡಿದೆ. ನಿಯಮಗಳ ಉಲ್ಲಂಘನೆ ಸಾಬೀತಾದಲ್ಲಿ 3 ರಿಂದ 5 ವರ್ಷ ಸಜೆ ಮತ್ತು ₹ 3ಲಕ್ಷದಿಂದ ₹ 5 ಲಕ್ಷವರೆಗೆ ದಂಡ ಅಥವಾ ಎರಡನ್ನೂ ವಿಧಿಸಲು ಅವಕಾಶವಿದೆ.

ಉಗ್ರ ಸಂಘಟನೆ ಪರ ಪ್ರಚಾರ: ಮೂವರ ಬಂಧನ

ಶ್ರೀನಗರ (ಪಿಟಿಐ): ಹಿಂಸಾಕೃತ್ಯಗಳನ್ನು ನಡೆಸುವುದಕ್ಕೆ ಪೂರಕವಾಗಿ ನಿಷೇಧಿತ ಐಎಸ್ ಉಗ್ರವಾಗಿ ಸಂಘಟನೆಗೆ ಸೇರುವಂತೆ ಯುವಕರನ್ನು ಪ್ರಚೋದಿಸುತ್ತಿದ್ದ ಆರೋಪದ ಮೇಲೆ ಮೂವರನ್ನು ಎನ್‌ಐಎ ಅಧಿಕಾರಿಗಳು ಬಂಧಿಸಿದ್ದಾರೆ. ಅನಂತನಾಗ್ ಜಿಲ್ಲೆಯಲ್ಲಿ ಉಮರ್ ನಿಸಾರ್, ತನ್ವೀರ್, ಅಹ್ಮದ್ ಭಟ್ ಮತ್ತು ರಮೀಜ್ ಅಹ್ಮದ್ ಲೋನೆ ಎಂಬವರನ್ನು ಬಂಧಿಸಲಾಗಿದ್ದು, ವಿವಿಧ ಏಳು ಕಡೆ ದಾಳಿ ನಡೆಸಲಾಗಿದೆ ಎಂದು ಎನ್‌ಐಎ ವಕ್ತಾರರು ತಿಳಿಸಿದ್ದಾರೆ.

ಹಿಮಾಚಲ ಪ್ರದೇಶದಲ್ಲಿ ಭಾರಿ ಮಳೆ • ಮಂಡಿಪಠಾಣ್‌ಕೋಟ್ ಹೆದ್ದಾರಿಯಲ್ಲಿ ಸೇತುವೆಯೊಂದಕ್ಕೆ ಹಾನಿ

ಧರ್ಮಶಾಲಾ: ಪ್ರವಾಹದಲ್ಲಿ ಮುಳುಗಿದ ಕಟ್ಟಡಗಳು

ಧರ್ಮಶಾಲಾ (ಪಿಟಿಐ): ಭಾರಿ ಮಳೆಯಿಂದ ಉಂಟಾಗಿರುವ ಪ್ರವಾಹದಲ್ಲಿ ಇಲ್ಲಿನ ಧರ್ಮಶಾಲಾದ ಪ್ರವಾಸಿ ತಾಣಗಳಲ್ಲಿರುವ ಹಲವು ಕಟ್ಟಡಗಳು ಮುಳುಗಿದ್ದು, ಕಾರುಗಳು ತೇಲಿಕೊಂಡು ಹೋಗಿವೆ. ಪ್ರತಿಕೂಲ ಹವಾಮಾನದ ಕಾರಣಕ್ಕಾಗಿ ಇಲ್ಲಿನ ವಿಮಾನ ನಿಲ್ದಾಣವನ್ನೂ ಮುಚ್ಚಲಾಗಿದೆ.

ಮೆಕ್ಲೊಡ್‌ಗಂಜ್ ಪ್ರದೇಶದ ಧರ್ಮಶಾಲಾದ ಮೇಲ್ಭಾಗದಲ್ಲಿರುವ ಭಗ್ಸುನಾಗ್ ಬಳಿ ಇರುವ ಚರಂಡಿಯು ಪ್ರವಾಹದಿಂದ ತನ್ನ ಹಾದಿಯನ್ನು ಬದಲಿಸಿದೆ. ಪ್ರವಾಹದಲ್ಲಿ ನಾಲ್ಕು ಕಾರುಗಳು ಸೇರಿದಂತೆ ಹಲವು ದ್ವಿಚಕ್ರ ವಾಹನಗಳು ತೇಲಿಕೊಂಡು ಹೋಗುತ್ತಿರುವ ವಿಡಿಯೊವೊಂದು ವೈರಲ್ ಆಗಿದೆ.

ಭಗ್ಸುನಾಗ್‌ನಲ್ಲಿರುವ ಸರ್ಕಾರಿ ಶಾಲೆಯ ಕಟ್ಟಡವೂ ಹಾನಿಗೀಡಾಗಿದ್ದು, ಅದರ ಅಕ್ಕಪಕ್ಕದ ಹೋಟೆಲ್‌ಗಳು ಪ್ರವಾಹದಲ್ಲಿ ಮುಳುಗಿವೆ. ಧರ್ಮಶಾಲಾ ಪಕ್ಕದ ಮಾಂಜ್ಹಿ ಖಾದ್ ಪ್ರದೇಶದಲ್ಲಿ ಪ್ರವಾಹದಿಂದಾಗಿ, ಎರಡು ಕಟ್ಟಡಗಳು ಕೊಚ್ಚಿ ಹೋಗಿದ್ದು, ಇನ್ನೂ ಹಲವು ಕಟ್ಟಡಗಳು ಹಾನಿಗೀಡಾಗಿವೆ ಎಂದು ವರದಿಯಾಗಿದೆ.

> **ಪ್ರವಾಹಪೀಡಿತ ಹಿಮಾಚಲ ಪ್ರದೇಶಕ್ಕೆ ಕೇಂದ್ರದಿಂದ ಸಾಧ್ಯವಿರುವ ಎಲ್ಲ ಬೆಂಬಲ ನೀಡಲಾಗುವುದು. ಅಲ್ಲಿನ ಜನರ ಸುರಕ್ಷತೆಗಾಗಿ ನಾನು ಪ್ರಾರ್ಥಿಸುತ್ತೇನೆ**
> **ನರೇಂದ್ರ ಮೋದಿ,** ಪ್ರಧಾನಿ

ವಿಮಾನ ರದ್ದು: ‘ಪ್ರತಿಕೂಲ ಹವಾಮಾನ ಮತ್ತು ಭಾರಿ ಮಳೆಯ ಕಾರಣಕ್ಕಾಗಿ ಧರ್ಮಶಾಲಾದ ವಿಮಾನ ನಿಲ್ದಾಣಕ್ಕೆ ಬರಬೇಕಿದ್ದ ಎಲ್ಲ ವಿಮಾನಗಳ ಸಂಚಾರವನ್ನು ರದ್ದುಪಡಿಸಲಾಗಿದೆ’ ಎಂದು ವಿಮಾನ ನಿಲ್ದಾಣದ ಸಂಚಾರ ಉಸ್ತುವಾರಿ ಅಧಿಕಾರಿ ಗೌರವ ಕುಮಾರ್ ತಿಳಿಸಿದ್ದಾರೆ.

ಸೇತುವೆಗೆ ಹಾನಿ: ಪ್ರವಾಹದಿಂದಾಗಿ ಮಂಡಿ-ಪಠಾಣ್‌ಕೋಟ್ ಹೆದ್ದಾರಿಯಲ್ಲಿ ಸೇತುವೆಯೊಂದು ಹಾನಿಗೊಳಗಾಗಿದ್ದು, ಸೇತುವೆಯ ಎರಡೂ ಬದಿಯಲ್ಲಿ ಸಂಚಾರ ಸ್ಥಗಿತಗೊಂಡಿದೆ.

‘ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ತಡೆಯಲು ಸ್ಥಳೀಯರು ಮತ್ತು ಪ್ರವಾಸಿಗರು ನದಿ ತೀರಗಳ ಬಳಿ ತೆರಳಬಾರದು’ ಎಂದು ಹಿಮಾಚಲ ಪ್ರದೇಶದ ಮುಖ್ಯಮಂತ್ರಿ ಜೈರಾಮ್ ಠಾಕೂರ್ ಮನವಿ ಮಾಡಿದ್ದಾರೆ.

‘ಭೂಕುಸಿತಕ್ಕೆ ಒಳಗಾಗುವ ಸೂಕ್ಷ್ಮ ಸ್ಥಳಗಳಿಗೆ ಹೋಗದಂತೆ ಜನರಿಗೆ ಸೂಚನೆ ನೀಡಲಾಗಿದೆ. ಜಿಲ್ಲೆಯ ಕೆಲವು ಪ್ರದೇಶಗಳಲ್ಲಿ ಪ್ರವಾಹ ಪರಿಸ್ಥಿತಿಯಲ್ಲಿ ಸಿಲುಕಿದ್ದ ಕೆಲವು ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ’ ಎಂದು ಜಿಲ್ಲಾಧಿಕಾರಿ ಡಾ. ನಿಪುನ್ ಜಿಂದಾಲ್ ತಿಳಿಸಿದ್ದಾರೆ.

ಭಾರಿ ಮಳೆ ಸಾಧ್ಯತೆ: ‘ಜುಲೈ 13 ಹಾಗೂ ಜುಲೈ 14ರಿಂದ 16ರವರೆಗೆ ಹಿಮಾಚಲ ಪ್ರದೇಶದಲ್ಲಿ ಭಾರಿ ಮಳೆಯಾಗುವ ಸೂಚನೆ ಇದೆ ಎಂದು ಹವಾಮಾನ ಇಲಾಖೆಯ ವರದಿಯು ಮುನ್ಸೂಚನೆ ನೀಡಿದೆ’ ಎಂದೂ ಜಿಂದಾಲ್ ಮಾಹಿತಿ ನೀಡಿದ್ದಾರೆ.


ಹಿಮಾಚಲ ಪ್ರದೇಶದ ಕುಲ್ಲು ಜಿಲ್ಲೆಯಲ್ಲಿ ಸೋಮವಾರ ಭಾರಿ ಮಳೆ ಸುರಿದ ಪರಿಣಾಮ ಬಿಯಾಸ್ ನದಿ ಉಕ್ಕಿ ಹರಿಯಿತು —ಪಿಟಿಐ ಚಿತ್ರ

ಅಮಿತ್ ಶಾ ನೆರವಿನ ಭರವಸೆ

ನವದೆಹಲಿ: ‘ಭಾರಿ ಮಳೆಯ ಕಾರಣಕ್ಕಾಗಿ ಪ್ರವಾಹ ಪರಿಸ್ಥಿತಿಯಲ್ಲಿ ಸಿಲುಕಿರುವ ಹಿಮಾಚಲ ಪ್ರದೇಶಕ್ಕೆ ಕೇಂದ್ರದಿಂದ ಎಲ್ಲ ರೀತಿಯ ನೆರವು ನೀಡಲಾಗುವುದು’ ಎಂದು ಕೇಂದ್ರ ಗೃಹಸಚಿವ ಅಮಿತ್ ಶಾ ಸೋಮವಾರ ಹೇಳಿದ್ದಾರೆ.

ಹಿಮಾಚಲ ಪ್ರದೇಶದ ಮುಖ್ಯಮಂತ್ರಿ ಜೈ ರಾಮ್ ಠಾಕೂರ್ ಅವರಿಂದ ಪ್ರವಾಹ ಪರಿಸ್ಥಿತಿ ಕುರಿತು ಮಾಹಿತಿ ಪಡೆದ ಷಾ ಅವರು, ‘ರಾಷ್ಟ್ರೀಯ ವಿಪತ್ತು ನಿರ್ವಹಣೆ ಪಡೆಯ ತಂಡಗಳು (ಎನ್‌ಡಿಆರ್‌ಎಫ್) ರಕ್ಷಣಾ ಮತ್ತು ಪರಿಹಾರ ಕಾರ್ಯಗಳಿಗಾಗಿ ಪ್ರವಾಹ ಪೀಡಿತ ಪ್ರದೇಶಗಳನ್ನು ತಲುಪುತ್ತಿವೆ’ ಎಂದು ಟ್ವೀಟ್‌ನಲ್ಲಿ ತಿಳಿಸಿದ್ದಾರೆ. ‘ಪ್ರವಾಹ ಪರಿಸ್ಥಿತಿಯ ಕುರಿತು ಗೃಹ ಸಚಿವಾಲಯವು ನಿರಂತರ ಗಮನಿಸುತ್ತಿದೆ. ಹಿಮಾಚಲ ಪ್ರದೇಶಕ್ಕೆ, ಕೇಂದ್ರದಿಂದ ಸಾಧ್ಯವಿರುವ ಎಲ್ಲ ರೀತಿಯ ನೆರವು ನೀಡಲಾಗುವುದು’ ಎಂದೂ ಟ್ವೀಟ್‌ನಲ್ಲಿ ಹೇಳಿದ್ದಾರೆ.

ಹಿಮಾಚಲ ಪ್ರದೇಶದಲ್ಲಿ ಭಾರಿ ಮಳೆಯ ಕಾರಣ ಸಾಮಾನ್ಯ ಜನಜೀವನ ಅಸ್ತವ್ಯಸ್ತಗೊಂಡಿದ್ದು, ಹಲವು ಜಿಲ್ಲೆಗಳಲ್ಲಿ ಪ್ರವಾಹ ಪರಿಸ್ಥಿತಿ ಉಂಟಾಗಿದೆ.


ತುಸು ತಗ್ಗಿದ ಹಣದುಬ್ಬರ

ಪ್ರಜಾವಾಣಿ ವಾರ್ತೆ

ನವದೆಹಲಿ: ಜೂನ್ ತಿಂಗಳಲ್ಲಿ ದೇಶದಲ್ಲಿನ ಚಿಲ್ಲರೆ ಹಣದುಬ್ಬರ ಪ್ರಮಾಣವು ಅತ್ಯಲ್ಪ ಪ್ರಮಾಣದಲ್ಲಿ ಇಳಿಕೆ ಕಂಡಿದೆ. ಹೀಗಿದ್ದರೂ, ಇದು ಆರ್‌ಬಿಐ ನಿಗದಿ ಮಾಡಿಕೊಂಡಿರುವ ಮಿತಿಗಿಂತಲೂ ಹೆಚ್ಚು.

ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಚಿಲ್ಲರೆ ಹಣದುಬ್ಬರ ಪ್ರಮಾಣವು ಜೂನ್‌ನಲ್ಲಿ ಶೇಕಡ 6.26ಕ್ಕೆ ಇಳಿಕೆ ಆಗಿದೆ. ಇದು ಮೇ ತಿಂಗಳಲ್ಲಿ ಶೇ 6.30ರಷ್ಟು ಇತ್ತು. ಚಿಲ್ಲರೆ ಹಣದುಬ್ಬರ ಪ್ರಮಾಣವು ಒಟ್ಟಾರೆಯಾಗಿ ಕಡಿಮೆ ಆಗಿದ್ದರೂ, ಆಹಾರ ವಸ್ತುಗಳ ಹಣದುಬ್ಬರ ಏರಿಕೆ ಆಗಿದೆ. ಮೇ ತಿಂಗಳಲ್ಲಿ ಶೇ 5ರಷ್ಟು ಇದ್ದ ಆಹಾರ ವಸ್ತುಗಳ ಹಣದುಬ್ಬರವು ಜೂನ್‌ನಲ್ಲಿ ಶೇ 5.15ಕ್ಕೆ ಹೆಚ್ಚಳವಾಗಿದೆ. ಖಾದ್ಯ ತೈಲ, ಮೊಟ್ಟೆ, ಹಣ್ಣು, ಧಾನ್ಯಗಳ ಬೆಲೆಯಲ್ಲಿ ಏರಿಕೆ ಆಗಿದೆ. ಮೇ ತಿಂಗಳಿನಲ್ಲಿ ಕೈಗಾರಿಕಾ ಉತ್ಪಾದನೆಯು ಶೇಕಡ 29.3ರಷ್ಟು ಹೆಚ್ಚಳವಾಗಿದೆ. 2020ರ ಮೇ ತಿಂಗಳಿನಲ್ಲಿ ಕೈಗಾರಿಕಾ ಉತ್ಪಾದನೆಯು ಶೇ (–)33ಕ್ಕೆ ಕುಸಿದಿತ್ತು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,690
ಇಂದಿನ ಅಂತ್ಯ	15,692
▲	2
ದಿನದ ಗರಿಷ್ಠ	15,789

ವಿನಿಮಯ ದರ

$ ಡಾಲರ್	74.58
£ ಪೌಂಡ್	103.37
€ ಯುರೊ	88.41
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹490
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹490

ಹೈಬ್ರಿಡ್ ಎಂಎಫ್: ಹೆಚ್ಚಿದ ಹೂಡಿಕೆ

ನವದೆಹಲಿ (ಪಿಟಿಐ): ಹೈಬ್ರಿಡ್ ಮ್ಯೂಚುವಲ್ ಫಂಡ್‌ಗಳು ಹೂಡಿಕೆದಾರರನ್ನು ಹೆಚ್ಚು ಆಕರ್ಷಿಸುತ್ತಿದ್ದು, ಜೂನ್ ತ್ರೈಮಾಸಿಕದಲ್ಲಿ ಈ ಫಂಡ್‌ಗಳಲ್ಲಿ ₹ 27,220 ಕೋಟಿ ಹೂಡಿಕೆ ಆಗಿದೆ. ಮಾರ್ಚ್ ತ್ರೈಮಾಸಿಕದಲ್ಲಿ ಹೂಡಿಕೆ ಆಗಿದ್ದ ₹ 13,055 ಕೋಟಿಗೆ ಹೋಲಿಸಿದರೆ ಎರಡು ಪಟ್ಟು ಹೆಚ್ಚಳ ಆಗಿದೆ.

ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್‌ಐ) ಈ ಮಾಹಿತಿ ನೀಡಿದೆ. ಹೈಬ್ರಿಡ್ ಫಂಡ್‌ಗಳು ಹೂಡಿಕೆದಾರರ ಹಣವನ್ನು ಕಂಪನಿಗಳ ಷೇರುಗಳಲ್ಲಿ ಹಾಗೂ ಸಾಲಪತ್ರಗಳಲ್ಲಿ ಹೂಡಿಕೆ ಮಾಡುತ್ತವೆ. ಕೆಲವೊಮ್ಮೆ, ಚಿನ್ನದ ಮೇಲೆಯೂ ಹೂಡಿಕೆ ಮಾಡುವುದಿದೆ.

ಮಾರುಕಟ್ಟೆ ಸೂಚ್ಯಂಕಗಳು ಗರಿಷ್ಠ ಮಟ್ಟದಲ್ಲಿ ಇರುವುದರಿಂದ ಹೂಡಿಕೆದಾರರು ಹೈಬ್ರಿಡ್ ಫಂಡ್‌ಗಳಲ್ಲಿ ಯಾವುದು ಉತ್ತಮ ಎನ್ನುವುದನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ. ಕೆಲವು ಹೂಡಿಕೆದಾರರು ಮಾರುಕಟ್ಟೆ ಏರಿಳಿತಗಳ ಅಪಾಯದಿಂದ ದೂರವುಳಿಯಲು ಬಯಸುತ್ತಲೇ, ಮಾರುಕಟ್ಟೆಯಲ್ಲಿ ಪಾಲ್ಗೊಳ್ಳಲು ಕೂಡ ಬಯಸುತ್ತಾರೆ ಎಂದು ಮೈವೆಲ್ತ್‌ಗ್ರೋತ್.ಕಾಂ ಸಹ ಸ್ಥಾಪಕ ಹರ್ಷದ್ ಚೇತನ್ವಾಲಾ ತಿಳಿಸಿದ್ದಾರೆ.



ಹೈಬ್ರಿಡ್ ಫಂಡ್‌ಗಳು ಸಾಲಪತ್ರಗಳಲ್ಲಿಯೂ ಹೂಡಿಕೆ ಮಾಡುವುದರಿಂದ, ಈಕ್ವಿಟಿ ಮಾರುಕಟ್ಟೆಯ ಏರಿಳಿತಗಳಿಂದ ತುಸು ಮಟ್ಟಿಗೆ ಅವರಿಗೆ ರಕ್ಷಣೆ ಇರುತ್ತದೆ.

ಹೂಡಿಕೆದಾರರಿಗೆ, ಹೈಬ್ರಿಡ್ ಫಂಡ್‌ಗಳು ಈಕ್ವಿಟಿ ಮಾರುಕಟ್ಟೆಯ ಹೂಡಿಕೆ ಅವಕಾಶಗಳ ಮೂಲಕ ಹೆಚ್ಚು ಲಾಭ ಗಳಿಸಲು ಸಹಾಯ ಮಾಡುತ್ತವೆ. ಹಾಗೆಯೇ, ಸಾಲಪತ್ರ ಮಾರುಕಟ್ಟೆಗಳ ಸ್ಥಿರತೆಯ ಪ್ರಯೋಜನವನ್ನು ಮತ್ತು ಹಲವು ರೂಪಗಳಲ್ಲಿ ಚಿನ್ನವನ್ನು ಖರೀದಿಸುವ ಆಯ್ಕೆಯನ್ನು ಒದಗಿಸುತ್ತವೆ. ಈಕ್ವಿಟಿ ಮತ್ತು ಸಾಲಪತ್ರಗಳಲ್ಲಿನ ಹೂಡಿಕೆಗಳು ಒಳ್ಳೆಯ ಗಳಿಕೆ ತಂದುಕೊಡದಿದ್ದರೆ, ಚಿನ್ನದ ಮೇಲಿನ ಹೂಡಿಕೆಯಿಂದಾಗಿ ಹೈಬ್ರಿಡ್ ಫಂಡ್‌ಗಳು ಬಂಡವಾಳವನ್ನು ಉಳಿಸಿಕೊಡುತ್ತವೆ ಎಂದು ಮಾರ್ನಿಂಗ್‌ಸ್ಟಾರ್ ಇಂಡಿಯಾದ ಸಹಾಯಕ ನಿರ್ದೇಶಕ ಹಿಮಾಂಶು ಶ್ರೀವಾಸ್ತವ ಹೇಳಿದ್ದಾರೆ.

ಹೊಸದಾಗಿ ಅಥವಾ ಮೊದಲ ಬಾರಿಗೆ ಹೂಡಿಕೆ ಮಾಡುವವರಿಗೆ ಹೈಬ್ರಿಡ್ ಫಂಡ್‌ಗಳು ವಿವೇಕಯುತ ಹೂಡಿಕೆ ಆಯ್ಕೆ ಎಂದೂ ಅವರು ತಿಳಿಸಿದ್ದಾರೆ.

‘ಹೈಬ್ರಿಡ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವುದರಿಂದ ಹೂಡಿಕೆದಾರರಿಗೆ ಈಕ್ವಿಟಿ, ಸಾಲಪತ್ರ ಹಾಗೂ ಇತರ ಆಯ್ಕೆಗಳು ಒಂದೇ ಕಡೆ ಲಭ್ಯವಾಗುತ್ತವೆ’ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಮುಂದಿನ ದಿನಗಳಲ್ಲಿ ಕೂಡ ಹೈಬ್ರಿಡ್ ಫಂಡ್‌ಗಳಲ್ಲಿ ಹೆಚ್ಚಿನ ಹಣ ಹೂಡಿಕೆ ಆಗಬಹುದು ಎಂದು ಚೇತನ್ವಾಲಾ ಅಂದಾಜಿಸಿದ್ದಾರೆ.

‘ಈಕ್ವಿಟಿ ಮಾರುಕಟ್ಟೆಗಳು ತೀರಾ ಮೇಲ್ಮಟ್ಟದಲ್ಲಿ ಇವೆ. ಸಾಲಪತ್ರ ಆಧಾರಿತ ಫಂಡ್‌ಗಳು ಮಾಮೂಲಿ ಹೂಡಿಕೆ ಉತ್ಪನ್ನಗಳಿಗಿಂತ ಹೆಚ್ಚಿನ ಲಾಭ ತಂದುಕೊಡಲು ಹೆಣಗಾಟ ನಡೆಸಿವೆ. ಹಾಗಾಗಿ ಹೂಡಿಕೆದಾರರು ಹೈಬ್ರಿಡ್ ಫಂಡ್‌ಗಳತ್ತ ಹೆಚ್ಚು ಆಕರ್ಷಿತರಾಗಬಹುದು’ ಎಂದು ಎಲ್‌ಎಕ್ಸ್‌ಎಂಇ ಸಂಸ್ಥಾಪಕಿ ಪ್ರೀತಿ ರತಿ ಗುಪ್ತ ಹೇಳಿದ್ದಾರೆ.

ಇನ್ವೆಸ್ಟಿಂಗ್ ಅಥವಾ ಟ್ರೇಡಿಂಗ್: ಯಾವುದು ಸೂಕ್ತ?

ಷೇರು ಮಾತು
ಶರತ್ ಎಂ.ಎಸ್.



ಷೇರು ಮಾರುಕಟ್ಟೆಯಲ್ಲಿ ಹಣ ಗಳಿಸಲು ಎರಡು ಮಾರ್ಗಗಳಿವೆ. ಒಂದನೆಯದ್ದು ದೀರ್ಘಾವಧಿ ಹೂಡಿಕೆ (ಇನ್ವೆಸ್ಟಿಂಗ್), ಮತ್ತೊಂದು ಅಲ್ಪಾವಧಿ ಹೂಡಿಕೆ (ಟ್ರೇಡಿಂಗ್). ಇನ್ವೆಸ್ಟಿಂಗ್‌ನಲ್ಲಿ ಹೂಡಿಕೆದಾರರು ದೀರ್ಘಾವಧಿಗೆ ಷೇರುಗಳನ್ನು ಖರೀದಿಸಿಟ್ಟುಕೊಂಡು ನಿರ್ದಿಷ್ಟ ಕಂಪನಿ ಬೆಳವಣಿಗೆ ಸಾಧಿಸಿದಂತೆ ತಾವೂ ಲಾಭ ಗಳಿಸುತ್ತಾರೆ.

ಟ್ರೇಡಿಂಗ್‌ನಲ್ಲಿ ಹೂಡಿಕೆದಾರರು ಮಾರುಕಟ್ಟೆಯ ಏರಿಳಿತಗಳ ಅನುಕೂಲ ಪಡೆದು ಅಲ್ಪಾವಧಿಯಲ್ಲಿ ಲಾಭಗಳಿಸಲು ಪ್ರಯತ್ನಿಸುತ್ತಾರೆ. ಈ ಎರಡು ಮಾರ್ಗಗಳಲ್ಲಿ ನಿಮಗೆ ಸರಿಹೊಂದುವ ಹಾದಿ ಯಾವುದು, ತಿಳಿಯೋಣ ಬನ್ನಿ.

ದೀರ್ಘಾವಧಿ ಹೂಡಿಕೆ: ಆರ್ಥಿಕವಾಗಿ ಉತ್ತಮವಾಗಿರುವ ಮತ್ತು ಭವಿಷ್ಯದ ಬೆಳವಣಿಗೆಯ ಬಗ್ಗೆ ಸ್ಪಷ್ಟ ಯೋಜನೆ ಇರುವ ಕಂಪನಿಗಳ ಷೇರನ್ನು ಅಧ್ಯಯನದ ಮೂಲಕ ಆಯ್ಕೆ ಮಾಡಿ ಆ ಕಂಪನಿಗಳಲ್ಲಿ ಹಣ ತೊಡಗಿಸಿ, ಕೆಲವು ಕಾಲ ಮಾರುಕಟ್ಟೆ ಏರಿಳಿತಗಳಿಗೆ ಹೆಚ್ಚು ತಲೆಕೆಡಿಸಿಕೊಳ್ಳದೆ ಸುಮ್ಮನಿರುವುದು ಇನ್ವೆಸ್ಟಿಂಗ್. ಇಲ್ಲಿ ಹೂಡಿಕೆದಾರ ದೀರ್ಘಾವಧಿಯಲ್ಲಿ ಉತ್ತಮ ಲಾಭಗಳಿಸುವ ಉದ್ದೇಶ ಹೊಂದಿರುತ್ತಾನೆ. ಇನ್ವೆಸ್ಟಿಂಗ್‌ಗೆ ನಾವು ನಮ್ಮ ಹೆಚ್ಚಿನ ಸಮಯ ಮೀಸಲಿಡಬೇಕಿಲ್ಲ.

ಟ್ರೇಡಿಂಗ್‌ನಲ್ಲಿ ಇರುವಷ್ಟು ರಿಸ್ಕ್ ಇಲ್ಲಿ ಇರುವುದಿಲ್ಲ. ಉದಾಹರಣೆಗೆ, ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿರುವ ಐ.ಟಿ. ಕಂಪನಿಯೊಂದರ ಷೇರನ್ನು ನೀವು ಇಂದು ₹ 600ಕ್ಕೆ ಖರೀದಿಸಿರುತ್ತೀರಿ ಎಂದುಕೊಳ್ಳೋಣ. ಕೆಲವು ಸಮಯದ ಬಳಿಕ ಅದೇ ಷೇರಿನ ಬೆಲೆ ₹ 2,000 ಆಗಬಹುದು. ಈ ಏರಿಕೆಯಿಂದ ಹೂಡಿಕೆದಾರನಿಗೆ ಲಾಭವಾಗುತ್ತದೆ. ಆಗ ಷೇರನ್ನು ಮಾರಾಟ ಮಾಡಿ, ಲಾಭವನ್ನು ನಗದಾಗಿ ಪರಿವರ್ತಿಸಿಕೊಳ್ಳಬಹುದು.

ಅಲ್ಪಾವಧಿ ಹೂಡಿಕೆ (ಟ್ರೇಡಿಂಗ್): ಮಾರುಕಟ್ಟೆ ಏಳಲಿ ಅಥವಾ ಬೀಳಲಿ, ಟ್ರೇಡಿಂಗ್‌ನ ಮುಖ್ಯ ಉದ್ದೇಶ ಥಟ್ ಅಂತ ಲಾಭ ಗಳಿಸುವುದು. ಟ್ರೇಡಿಂಗ್ ಅನ್ನೋದು ಸೆಕೆಂಡು, ನಿಮಿಷ ಮತ್ತು ದಿನಗಳ ಲೆಕ್ಕದಲ್ಲಿ ನಡೆಯುತ್ತದೆ. ಇಲ್ಲಿ ರಿಸ್ಕ್ ಹೆಚ್ಚು. ಆದರೆ, ಹೂಡಿಕೆ ನಿರ್ಧಾರ ಸರಿಯಾದರೆ ಲಾಭದ ಸಾಧ್ಯತೆ ಜಾಸ್ತಿ.

ಉದಾಹರಣೆಗೆ ಇಂದು ಬೆಳಗ್ಗೆ 10 ಗಂಟೆಗೆ ವ್ಯಕ್ತಿಯೊಬ್ಬ ಪ್ರತಿ ಷೇರಿಗೆ ₹ 200ರಂತೆ ಕಂಪನಿಯೊಂದರ ನೂರು ಷೇರುಗಳನ್ನು ಖರೀದಿಸುತ್ತಾನೆ ಎಂದಿಟ್ಟುಕೊಳ್ಳಿ. ಮಧ್ಯಾಹ್ನ 12 ಗಂಟೆಗೆ ಆ ಷೇರಿನ ಬೆಲೆ ₹ 220 ಆಗುತ್ತದೆ. ಆಗ ಟ್ರೇಡರ್ ಷೇರುಗಳನ್ನು ಮಾರಾಟ ಮಾಡಿ ಲಾಭ ಗಳಿಸಲು ಮುಂದಾಗುತ್ತಾನೆ. ನೆನಪಿರಲಿ, ₹ 200 ಕೊಟ್ಟು ಬೆಳಿಗ್ಗೆ ಖರೀದಿಸಿದ್ದ ಷೇರಿನ ಬೆಲೆ ಸಂಜೆ ವೇಳೆಗೆ ₹ 170 ಕೂಡ ಆಗಬಹುದು. ಹೀಗಾಗಿ ಟ್ರೇಡಿಂಗ್‌ನಲ್ಲಿ ಲಾಭ-ನಷ್ಟಗಳೆರಡರ ಸಾಧ್ಯತೆ ಹೆಚ್ಚು. ಟ್ರೇಡಿಂಗ್ ಅನ್ನುವುದು ಪೂರ್ಣಾವಧಿ ಉದ್ಯೋಗವಿದ್ದಂತೆ, ಇದರಲ್ಲಿ ಬಹಳ ಗಂಭೀರವಾಗಿ ತೊಡಗಿಸಿಕೊಳ್ಳಬೇಕು.

ಮಾರುಕಟ್ಟೆಯ ಆಳ-ಅಗಲ ಸರಿಯಾಗಿ ತಿಳಿದಿದ್ದರೆ ಮಾತ್ರ ಟ್ರೇಡರ್ ಆಗಬಹುದು. ಪರಿಣತಿ ಇಲ್ಲದೆ ಟ್ರೇಡಿಂಗ್ ಮಾಡಿದರೆ ನಿಮ್ಮ ದುಡ್ಡು ಬೆಣ್ಣೆಯಂತೆ ಕರಗಬಹುದು. ಹೂಡಿಕೆ ಅನ್ನುವುದು ನಿಧಾನಗತಿಯ ಓಟ. ಅರಿತು ಹೂಡಿಕೆ ಮಾಡಿದರೆ ಲಾಭದ ಸಿಹಿ ಉಣ್ಣಬಹುದು. •

ಸುಂಕ ಇಳಿಸಿದರೂ ತಾಳೆ ಎಣ್ಣೆ ಬೆಲೆ ಹೆಚ್ಚಳ

ಮುಂಬೈ (ರಾಯಿಟರ್ಸ್): ಕೇಂದ್ರ ಸರ್ಕಾರವು ತಾಳೆ ಎಣ್ಣೆ ಮೇಲಿನ ಆಮದು ಸುಂಕವನ್ನು ಕಡಿತ ಮಾಡಿದ್ದರೂ, ದೇಶಿ ಮಾರುಕಟ್ಟೆಯಲ್ಲಿ ತಾಳೆ ಎಣ್ಣೆಯ ಬೆಲೆಯು ಶೇಕಡ 6ಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಏರಿಕೆ ಕಂಡಿದೆ.

ಭಾರತದಲ್ಲಿ ತಾಳೆ ಎಣ್ಣೆಯ ಬೇಡಿಕೆ ಜಾಸ್ತಿ ಆಗಬಹುದು ಎಂಬ ನಿರೀಕ್ಷೆಯಿಂದ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೆಲೆ ಹೆಚ್ಚಳವಾದ ಪರಿಣಾಮವಾಗಿ, ದೇಶಿ ಮಾರುಕಟ್ಟೆಯಲ್ಲಿಯೂ ಬೆಲೆ ಏರಿಕೆ ಆಗಿದೆ ಎಂದು ಉದ್ಯಮದ ಮೂಲಗಳು ತಿಳಿಸಿವೆ.

ಬೆಲೆ ಏರಿಕೆ ಆಗಿರುವುದರ ಪರಿಣಾಮವಾಗಿ ದೇಶದಲ್ಲಿ ತಾಳೆ ಎಣ್ಣೆ ಬೇಡಿಕೆ ತುಸು ತಗ್ಗಬಹುದು ಎನ್ನಲಾಗಿದೆ. ಅಲ್ಲದೆ, ಮುಂದಿನ ದಿನಗಳಲ್ಲಿ ಕೇಂದ್ರವು ಆಮದು ಸುಂಕವನ್ನು ಇನ್ನಷ್ಟು ತಗ್ಗಿಸುವ ಸಾಧ್ಯತೆ ಕಡಿಮೆ ಎನ್ನಲಾಗಿದೆ.

‘ಭಾರತದಲ್ಲಿ ಆಮದು ಸುಂಕ ಕಡಿಮೆ ಮಾಡಿದ ತಕ್ಷಣ ಅಂತರರಾಷ್ಟ್ರೀಯ ಮಟ್ಟದಲ್ಲಿ ಪೂರೈಕೆದಾರರು ಬೆಲೆ ಜಾಸ್ತಿ ಮಾಡಿದರು’ ಎಂದು ಭಾರತದ ಖಾದ್ಯ ತೈಲ ಸಂಸ್ಕರಣೆ ಮಾಡುವವರು ಹಾಗೂ ಮಾರಾಟ ಮಾಡುವವರ ಸಂಘಟನೆ ಎಸ್‌ಇಎ ಪ್ರತಿನಿಧಿ ಬಿ.ವಿ. ಮೆಹ್ತಾ ತಿಳಿಸಿದರು.

‘ಭಾರತವು ಆಮದು ಸುಂಕವನ್ನು ಕಡಿಮೆ ಮಾಡಿದಾಗಲೆಲ್ಲ, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೆಲೆ ಏರಿಕೆ ಆಗುತ್ತದೆ. ಹಾಗಾಗಿ, ಸುಂಕ ಇಳಿಕೆಯ ಒಂದು ಭಾಗವನ್ನು ಪೂರೈಕೆದಾರರು ತಮ್ಮ ಪ್ರಯೋಜನಕ್ಕೆ ಬಳಸಿಕೊಳ್ಳುತ್ತಾರೆ. ಈ ಬಾರಿ ಭಾರತದ ಗ್ರಾಹಕರಿಗೆ ಸುಂಕ ಇಳಿಕೆಯ ಯಾವ ಪ್ರಯೋಜನವೂ ದೊರೆತಿಲ್ಲ’ ಎಂದು ಅವರು ಹೇಳಿದರು.

ಕ್ಯಾಂಪ್ಕೊದಿಂದ ಹಲಸಿನ ಹಣ್ಣಿನ ಚಾಕೊಲೇಟ್

ಪ್ರಜಾವಾಣಿ ವಾರ್ತೆ

ಮಂಗಳೂರು: ಕ್ಯಾಂಪ್ಕೊ ಸಂಸ್ಥೆಯು ಹಲಸಿನ ಹಣ್ಣಿನ ಎಕ್ಲೇರ್ ಚಾಕೊಲೇಟ್ ಮತ್ತು ಹೇಸೆಲ್ ನಟ್ ಚೊಕೊ ಸ್ಪ್ರೆಡ್‌ಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

ಒಂದು ಟನ್ ಎಕ್ಲೇರ್ ಉತ್ಪಾದನೆಗೆ 500 ಕೆ.ಜಿ. ಹಲಸಿನ ಹಣ್ಣು ಬಳಕೆ ಮಾಡಲಾಗುತ್ತಿದೆ. ಇದಕ್ಕಾಗಿ ಕೇರಳ ಮತ್ತು ಕರ್ನಾಟಕದಲ್ಲಿ ಬೆಳೆದ ಹಲಸಿನ ಹಣ್ಣುಗಳನ್ನು ಉಪಯೋಗಿಸಲಾಗುತ್ತಿದೆ. ಒಂದು ಚಾಕೊಲೇಟ್‌ನ ದರ ₹ 2 ಇದ್ದು, 80 ಚಾಕೊಲೇಟ್‌ಗಳ ಒಂದು ಜಾರ್‌ಗೆ ₹ 160 ದರ ನಿಗದಿಪಡಿಸಲಾಗಿದೆ.

ಸದ್ಯ ಇದನ್ನು ಕರ್ನಾಟಕದ ಮಾರುಕಟ್ಟೆಗೆ ಬಿಡುಗಡೆ ಮಾಡಿದ್ದು, ಮುಂದಿನ ದಿನಗಳಲ್ಲಿ ಕೇರಳ ಹಾಗೂ ದೇಶದ ವಿವಿಧ ಮಾರುಕಟ್ಟೆಗಳಿಗೆ ಪೂರೈಸಲಾಗುವುದು ಎಂದು ಕ್ಯಾಂಪ್ಕೊ ಅಧ್ಯಕ್ಷ ಎ. ಕಿಶೋರ್‌ಕುಮಾರ್ ಕೊಡ್ಗಿ ತಿಳಿಸಿದ್ದಾರೆ.



ಕ್ಯಾಂಪ್ಕೊದ ಹಲಸಿನ ಹಣ್ಣಿನ ಎಕ್ಲೇರ್ ಚಾಕೊಲೇಟ್

ಮುಂಬೈ ಧಾರಣೆ

ಶೇಂಗಾ
12-7-2021

ಜಾವಾ 70/80(ಹೊಸ)	9650-9700
ಜಾವಾ 80/90(ಹೊಸ)	9100-9150
ದಪ್ಪ ಮಧ್ಯಪ್ರದೇಶ(ಹೊಸ)	9700-9800
ದಪ್ಪ ಗುಜರಾತ್(ಹೊಸ)	9200-9300

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1410 (1400)
ಒಂದು ವಾರದ ಡೆಲಿವರಿ	1405 (1395)
ಸೋಯಾ ಕಚ್ಚಾ	1290 (1270)
ಪಾಮ್ ವಾರದ ಡೆಲಿವರಿ	1168 (1163)
ಸೂರ್ಯಕಾಂತಿ ಎಣ್ಣೆ ಕಚ್ಚಾ	1290 (1270)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
47,750 (47,800)
ಬೆಳ್ಳಿ ಕೆ.ಜಿ 68,650 (69,200)

ಆವರಣದಲ್ಲಿ ಶನಿವಾರದ ಧಾರಣೆ

ಸ್ವಿಫ್ಟ್ ಬೆಲೆ ಹೆಚ್ಚಿಸಿದ ಮಾರುತಿ

ನವದೆಹಲಿ (ಪಿಟಿಐ): ಮಾರುತಿ ಸುಜುಕಿ ಇಂಡಿಯಾ ಕಂಪನಿಯು ಸೋಮವಾರದಿಂದ ಜಾರಿಗೆ ಬರುವಂತೆ ಸ್ವಿಫ್ಟ್ ಮತ್ತು ಇತರ ಮಾದರಿಗಳ ಸಿಎನ್‌ಜಿ ಆವೃತ್ತಿಗಳ ಬೆಲೆಯನ್ನು ₹ 15 ಸಾವಿರದವರೆಗೂ ಏರಿಕೆ ಮಾಡಿದೆ.

ತಯಾರಿಕಾ ವೆಚ್ಚ ಹೆಚ್ಚಾಗುತ್ತಿರುವುದರಿಂದ ಬೆಲೆ ಏರಿಕೆ ಮಾಡುತ್ತಿರುವುದಾಗಿ ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ. ಆಲ್ಟೊ, ಸೆಲೆರಿಯೊ, ಎಸ್-ಪ್ರೆಸೊ, ವ್ಯಾಗನ್‌ಆರ್, ಇಕೊ ಮತ್ತು ಎರ್ಟಿಗಾ ಮಾದರಿಗಳ ಸಿಎನ್‌ಜಿ ಆವೃತ್ತಿಯನ್ನು ಕಂಪನಿ ಮಾರಾಟ ಮಾಡುತ್ತಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-43000
ಹಳತು	42500-52000
ಕುಮಟ	
ಚಿಪ್ಪು	30569-33099
ಕೋಕ	20169-30599
ಫ್ಯಾಕ್ಟರಿ	15099-18469
ಹಳೆಚಾಲಿ	41089-43369
ಹೊಸಚಾಲಿ	36899-39099
ಸಿದ್ದಾಪುರ	
ಬಿಳಿಗೋಟು	24899-32989
ಕೋಕ	21699-31889
ಚಾಲಿ	34096-38099

ಕೆಂಪುಗೋಟು	27099-40509
ರಾಶಿ	38099-37799
ತಟ್ಟಿಬೆಟ್ಟೆ	35699-35699
ಶಿವಮೊಗ್ಗ ಎಪಿಎಂಸಿ	
ಬೆಟ್ಟೆ	42559-45209
ರಾಶಿ	38169-42319
ಸರಕು	49690-72910
ಸಾಗರ	
ಬಿಳಿಗೋಟು	18009-31490
ಕೋಕ	14899-33499
ಚಾಲಿ	32899-36629
ಕೆಂಪುಗೋಟು	27319-35869
ರಾಶಿ	32509-42489
ಸಿಪ್ಪೆಗೋಟು	11400-20599

ಚನ್ನಗಿರಿ ತುಮ್ಕೋಸ್	
ಬೆಟ್ಟೆ	36099-36099
ರಾಶಿ	41599-42799
ರಾಮನಗರ ರೇಷ್ಮೆ ಧಾರಣೆ	
ಮಿಶ್ರತಳಿ (ಸಿ.ಬಿ)	241-398
ದ್ವಿತಳಿ (ಬಿ.ವಿ)	333-496

ಮೂಡಿಗೆರೆ ಕಾಫಿ

	ಮುದ್ರೆಮನೆ
ಎಪಿ	11600
ಎಸಿ	4620
ಆರ್‌ಪಿ	5550
ಆರ್‌ಸಿ	3300

ಇಂಗ್ಲೆಂಡ್‌ನ ಪೆನಾಲ್ಟಿ ಶೂಟೌಟ್ ವೈಫಲ್ಯಕ್ಕೆ ಬೇಸರ; ಸಾಮಾಜಿಕ ತಾಣಗಳಲ್ಲಿ ಜನಾಂಗೀಯ ನಿಂದನೆಗೆ ಆಕ್ಷೇಪ

ತಪ್ಪಿದ ಗೋಲು; ಕಪ್ಪು ವರ್ಣೀಯರು ‘ಗುರಿ’

ಲಂಡನ್ (ಎಎಫ್‌ಪಿ): ಯೂರೊ ಕಪ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಫೈನಲ್ ಪಂದ್ಯದ ಪೆನಾಲ್ಟಿ ಶೂಟೌಟ್‌ನಲ್ಲಿ ಇಂಗ್ಲೆಂಡ್ ಸೋಲಿಗೆ ಕಪ್ಪು ವರ್ಣೀಯ ಆಟಗಾರರು ಕಾರಣ ಎಂಬ ಆರೋಪ ವಿವಾದದ ಸ್ವರೂಪ ಪಡೆದುಕೊಂಡಿದೆ.

ಟ್ವಿಟರ್ ಮತ್ತು ಇನ್‌ಸ್ಟಾಗ್ರಾಮ್‌ನ‌ಲ್ಲಿ ಬಂದಿರುವ ಪೋಸ್ಟ್‌ಗಳಿಗೆ ಬ್ರಿಟನ್ ಪ್ರಧಾನಿ, ರಾಜಕೀಯ-ಸಾಮಾಜಿಕ-ಕ್ರೀಡಾ ವಲಯದಿಂದ ತೀವ್ರ ಆಕ್ಷೇಪ ವ್ಯಕ್ತವಾಗಿದೆ.

ಇಟಲಿ ಎದುರಿನ ಪಂದ್ಯದಲ್ಲಿ ಇಂಗ್ಲೆಂಡ್ ಪರ ಪೆನಾಲ್ಟಿ ಕಿಕ್ ತೆಗೆದುಕೊಂಡ ಕಪ್ಪು ವರ್ಣೀಯರಾದ ಮಾರ್ಕಸ್ ರಶ್‌ಫೋರ್ಡ್, ಜೇಡನ್ ಸಾಂಚೊ ಮತ್ತು ಬುಕಾಯೊ ಸಾಕ ಚೆಂಡನ್ನು ಗುರಿಮುಟ್ಟಿಸುವಲ್ಲಿ ವಿಫಲರಾಗಿದ್ದರು. ಇದನ್ನೇ ಪ್ರಮುಖ ವಿಷಯವಾಗಿರಿಸಿಕೊಂಡು ಫುಟ್‌ಬಾಲ್ ಪ್ರಿಯರು ತಂಡದ ವಿರುದ್ಧ ಟೀಕೆಗಳ



ಸಾಕಗೆ ಸಲಹೆ ನೀಡಿದ ಗೋಲ್‌ಕೀಪರ್ ಜೋರ್ಡನ್ ಪಿಕ್‌ಫೋರ್ಡ್ –ರಾಯಿಟರ್ಸ್ ಚಿತ್ರ

ಮಳೆ ಸುರಿಸಿದ್ದರು. ಕೆಲವರು ಕಪ್ಪು ವರ್ಣೀಯರನ್ನೇ ಗುರಿ ಇಟ್ಟು ಆಕ್ಷೇಪ ವ್ಯಕ್ತಪಡಿಸಿದ್ದರು.

ಇಂಗ್ಲೆಂಡ್ ಆಟಗಾರ ರಹೀಂ ಸ್ಟರ್ಲಿಂಗ್ ಮೇಲೆಯೂ ಕೆಲವರು ಆರೋಪ ಮಾಡಿದ್ದು ಡೆನ್ಮಾರ್ಕ್ ಎದುರಿನ ಸೆಮಿಫೈನಲ್ ಪಂದ್ಯದಲ್ಲಿ ಮೋಸದ ಮೂಲಕ ಪೆನಾಲ್ಟಿ ಅವಕಾಶವನ್ನು ಪಡೆದುಕೊಂಡು ತಂಡದ ಘನತೆಗೆ ಕುಂದು ತಂದಿದ್ದಾರೆ ಎಂದು ಹೇಳಿದ್ದಾರೆ.

ವರ್ಣಭೇದ ನೀತಿ ಮತ್ತು ಜನಾಂಗೀಯ ನಿಂದನೆ ವಿರುದ್ಧ ಟೂರ್ನಿಯುದ್ದಕ್ಕೂ ಇಂಗ್ಲೆಂಡ್ ಕಾಳಜಿಯನ್ನು ತೋರಿತ್ತು. ಭಾನುವಾರದ ಫೈನಲ್ ಸೇರಿದಂತೆ ಎಲ್ಲ ಪಂದ್ಯಗಳ ಆರಂಭಕ್ಕೂ ಮೊದಲು ಮೊಣಕಾಲೂರಿ ಕಪ್ಪುವರ್ಣೀಯರಿಗೆ ಬೆಂಬಲ ಸೂಚಿಸುವ ಸಂದೇಶ ಸಾರಿತ್ತು. ಆದರೂ ಜನಾಂಗೀಯ ನಿಂದನೆಯ ಮಾತುಗಳು ಕೇಳಿಬಂದಿದ್ದು ನೋವಿನ ಸಂಗತಿ ಎಂದು ಇಂಗ್ಲೆಂಡ್ ತಂಡದ ಕೋಚ್ ಗರೆತ್ ಸೌತ್‌ಗೇಟ್ ಪ್ರತಿಕ್ರಿಯಿಸಿದ್ದರು.

ಪತ್ನಿ ಮತ್ತು ಪುತ್ರನೊಂದಿಗೆ ಫೈನಲ್ ಪಂದ್ಯ ವೀಕ್ಷಿಸಿದ ರಾಜಕುಮಾರ ವಿಲಿಯಂ 'ಕಪ್ಪು ವರ್ಣೀಯರ ನಿಂದನೆ ವೈಯಕ್ತಿಕವಾಗಿ ನೋವು ತಂದಿದೆ' ಎಂದು ಹೇಳಿದ್ದಾರೆ. ನಿಂದನೆಯನ್ನು ಖಂಡಿಸಿ ಇಂಗ್ಲೆಂಡ್ ಫುಟ್‌ಬಾಲ್ ಸಂಸ್ಥೆ (ಎಫ್‌ಎ) ಸೋಮವಾರ ಬೆಳಿಗ್ಗೆಯೇ ಹೇಳಿಕೆ ಬಿಡುಗಡೆ ಮಾಡಿದೆ.

ಪೋಸ್ಟ್ ಅಳಿಸಿ ಹಾಕಿದ ಫೇಸ್‌ಬುಕ್ :ವಿವಾದಕ್ಕೆ ಸಂಬಂಧಿಸಿ ಹೇಳಿಕೆ ನೀಡಿರುವ ಫೇಸ್‌ಬುಕ್ ಆಡಳಿತ ‘ಇಂಗ್ಲೆಂಡ್ ಆಟಗಾರರನ್ನು ನಿಂದಿಸಿದ ಪೋಸ್ಟ್‌ಗಳನ್ನು ತಕ್ಷಣವೇ ಅಳಿಸಿ ಹಾಕಿದ್ದು ಅಂಥವರ ಖಾತೆಗಳನ್ನು ರದ್ದುಪಡಿಸಲಾಗಿದೆ. ನಿಯಮಗಳನ್ನು ಉಲ್ಲಂಘಿಸಿದವರ ಮೇಲೆ ಸಂಸ್ಥೆ ಕಠಿಣ ಕ್ರಮ ಕೈಗೊಳ್ಳಲಿದೆ’ ಎಂದು ತಿಳಿಸಿದೆ.

ನಿಂದನೆಯ ಬಗ್ಗೆ ಮಾಹಿತಿ ಲಭಿಸಿದೆ. ಇಂಥ ಪ್ರವೃತ್ತಿಯನ್ನು ಸಹಿಸಿಕೊಳ್ಳಲು ಸಾಧ್ಯವಿಲ್ಲ. ಆ ಪೋಸ್ಟ್‌ಗಳ ಬಗ್ಗೆ ತನಿಖೆ ನಡೆಸಲಾಗುವುದು ಎಂದು ಪೊಲೀಸರು ಭರವಸೆ ನೀಡಿದ್ದಾರೆ.

ಬುಕಾಯೊ ಸಾಕಗೆ ಅವಕಾಶ: ಖಂಡನೆ

ಇಂಗ್ಲೆಂಡ್‌ನ ನಿರ್ಣಾಯಕ ಐದನೇ ಪೆನಾಲ್ಟಿ ಕಿಕ್ ತೆಗೆಯಲು ಯುವ ಆಟಗಾರ ಬುಕಾಯೊ ಸಾಕ ಅವರಿಗೆ ಅವಕಾಶ ನೀಡಿದ್ದು ಸರಿಯಲ್ಲ ಎಂದು ಮಾಜಿ ಫುಟ್‌ಬಾಲ್ ಆಟಗಾರ, ಮ್ಯಾಂಚೆಸ್ಟರ್ ಯುನೈಟೆಡ್ ತಂಡದ ನಾಯಕನಾಗಿದ್ದ ರಾಯ್ ಕೀನ್ ಅಭಿಪ್ರಾಯಪಟ್ಟಿದ್ದಾರೆ.

19 ವರ್ಷದ ಸಾಕ ಅವರ ಕಿಕ್‌ಅನ್ನು ಎದುರಾಳಿ ತಂಡದ ಗೋಲ್‌ಕೀಪರ್ ಗ್ಯಾನ್‌ಲೂಗಿ ಡೊನರುಮಾ ಸುಲಭವಾಗಿ ತಡೆದಿದ್ದರು. ಅನುಭವಿ ಆಟಗಾರನಿಗೆ ಈ ಅವಕಾಶ ನೀಡಬೇಕಾಗಿತ್ತು ಎಂದು ರಾಯ್ ಕೀನ್ ಹೇಳಿದ್ದಾರೆ. ಈ ಮಾತಿಗೆ ದನಿಗೂಡಿಸಿರುವ ರೋಮಾ ಕ್ಲಬ್ ಮ್ಯಾನೇಜರ್ ಜೋಸ್ ಮೌರಿನ್ಹೊ ‘ದೇಶದ ನಿರೀಕ್ಷೆಯನ್ನು ಯುವ ಆಟಗಾರನ ಹೆಗಲಿಗೆ ಹಾಕಿದ್ದು ಸರಿಯಲ್ಲ. ಅನುಭವ ಇಲ್ಲದ ಆಟಗಾರರು ಅಂಥ ಒತ್ತಡವನ್ನು ಮೀರಿ ನಿಲ್ಲಲು ಸಾಧ್ಯವಿಲ್ಲ’ ಎಂದಿದ್ದಾರೆ.

ಗೊಂದಲದಲ್ಲಿ ಜೊಕೊವಿಚ್

ವಿಂಬಲ್ಡನ್ (ಎಪಿ): ‘ಗೋಲ್ಡನ್ ಸ್ಲ್ಯಾಮ್’ ಸಾಧನೆ ಮಾಡಲು ಉತ್ತಮ ಅವಕಾಶವಿದ್ದರೂ ವಿಶ್ವದ ಅಗ್ರಮಾನ್ಯ ಟೆನಿಸ್ ಆಟಗಾರ ನೊವಾಕ್ ಜೊಕೊವಿಚ್ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾಗವಹಿಸುವ ಬಗ್ಗೆ ಇನ್ನೂ ಸ್ಪಷ್ಟ ನಿರ್ಧಾರ ಕೈಗೊಂಡಿಲ್ಲ.

‘ಪ್ರೇಕ್ಷಕರಿಗೆ ನಿರ್ಬಂಧ, ಕೋವಿಡ್ ಆತಂಕದಿಂದಾಗಿ ಜಾರಿಯಲ್ಲಿರುವ ಬಿಗಿ ನಿಯಮ’ಗಳಿಂದಾಗಿ ಟೋಕಿಯೊಗೆ ಹೋಗಬೇಕೇ ಬೇಡವೇ ಎಂಬುದರ ಬಗ್ಗೆ ಸರ್ಬಿಯಾದ ಈ ಆಟಗಾರ ಇನ್ನೂ ಗೊಂದಲದಲ್ಲಿದ್ದಾರೆ.

‘ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳುವ ಬಗ್ಗೆ ಇನ್ನೂ ಸ್ಪಷ್ಟ ನಿರ್ಧಾರ ಕೈಗೊಂಡಿಲ್ಲ. ಆ ಕುರಿತು ಮತ್ತೊಮ್ಮೆ ಯೋಚನೆ ಮಾಡಬೇಕಾಗಿದೆ’ ಎಂದು ಭಾನುವಾರ ರಾತ್ರಿ ವಿಂಬಲ್ಡನ್ ಪುರುಷರ ಸಿಂಗಲ್ಸ್ ಪ್ರಶಸ್ತಿ ಗೆದ್ದ ನಂತರ ಅವರು ಪ್ರತಿಕ್ರಿಯಿಸಿದರು.

‘ಒಲಿಂಪಿಕ್ಸ್‌ಗೆ ಹೋಗಬೇಕೆಂಬುದೇ ನನ್ನ ಬಯಕೆ ಆಗಿತ್ತು. ಆದರೆ ಈಗ ಗೊಂದಲದಲ್ಲಿದ್ದೇನೆ. ಕಳೆದ ಕೆಲವು ದಿನಗಳಿಂದ ಬರುತ್ತಿರುವ ಮಾಹಿತಿಗಳಿಂದಾಗಿ ನನ್ನ ಮುಂದೆ ಒಲಿಂಪಿಕ್ಸ್ ಕುರಿತು 50–50 ಸನ್ನಿವೇಶ ಎದುರಾಗಿದೆ’ ಎಂದಿದ್ದಾರೆ 34 ವರ್ಷದ ಆಟಗಾರ.



ವಿಂಬಲ್ಡನ್ ಪ್ರಶಸ್ತಿಯೊಂದಿಗೆ ನೊವಾಕ್ ಜೊಕೊವಿಚ್ ಅವರು ಕ್ಲಬ್ ಹೌಸ್‌ನಲ್ಲಿ ಛಾಯಾಚಿತ್ರಕ್ಕೆ ಪೋಸ್ ನೀಡಿದರು –ಎಎಫ್‌ಪಿ ಚಿತ್ರ

ಈಗಾಗಲೇ ಆಸ್ಟ್ರೇಲಿಯಾ ಓಪನ್, ಫ್ರೆಂಚ್ ಓಪನ್ ಮತ್ತು ವಿಂಬಲ್ಡನ್‌ಗಳಲ್ಲಿ ಪ್ರಶಸ್ತಿ ಗೆದ್ದುಕೊಂಡಿರುವ ಜೊಕೊವಿಚ್ ಅವರು ಟೋಕಿಯೊದಲ್ಲಿ ಮತ್ತು ವರ್ಷದ ಕೊನೆಗೆ ಅಮೆರಿಕ ಓಪನ್‌ನಲ್ಲಿ ಪ್ರಶಸ್ತಿ ಗೆದ್ದರೆ ‘ಚಿನ್ನದ ಸ್ಲ್ಯಾಮ್’ ಸಾಧನೆ ಮಾಡಿದಂತಾಗುತ್ತದೆ. ಈವರೆಗೆ ಜರ್ಮನಿಯ ಆಟಗಾರ್ತಿ ಸ್ಟೆಫಿ ಗ್ರಾಫ್ (1988ರಲ್ಲಿ) ಮಾತ್ರ ಈ ಅಪೂರ್ವ ಸಾಧನೆಗೆ ಪಾತ್ರರಾಗಿದ್ದಾರೆ.

ಯೂರೊ ಕಪ್ ಫುಟ್‌ಬಾಲ್: ವೇಗದ ಗೋಲು ಗಳಿಸಿದ ಲ್ಯೂಕ್; ತಿರುವು ನೀಡಿದ ಬೊನುಚಿ

ಚಾಂಪಿಯನ್ ಇಟಲಿಗೆ ತವರಲ್ಲಿ ರೋಮಾಂಚನ

ರೋಮ್: ರಾಜಧಾನಿಯಲ್ಲಿ ಕಾಲೂರಿದ ಕೂಡಲೇ ಇಟಲಿ ನಾಯಕ ಜಾರ್ಜೊ ಚೆಲ್ಲಿನಿ ಆಕಾಶದೆಡೆಗೆ ಪ್ರಶಸ್ತಿಯನ್ನು ಎತ್ತಿ ಹಿಡಿದು ಭಾವುಕರಾದರು. ಸಹ ಆಟಗಾರರು ಮತ್ತು ಸುತ್ತ ಸೇರಿದ್ದವರು ಸಂಭ್ರಮದಿಂದ ನಲಿದಾಡಿದರು. ಎಲ್ಲೆಲ್ಲೂ ತ್ರಿವರ್ಣ ಧ್ವಜಗಳು ಹಾರಾಡಿದವು.

ಲಂಡನ್‌ನ ವೆಂಬ್ಲಿ ಕ್ರೀಡಾಂಗಣದಲ್ಲಿ ಭಾನುವಾರ ರಾತ್ರಿ ನಡೆದ ಯೂರೊ ಕಪ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಆತಿಥೇಯ ಇಂಗ್ಲೆಂಡ್ ವಿರುದ್ಧ ಜಯ ಗಳಿಸಿದ ಇಟಲಿ ತಂಡ ಸೋಮವಾರ ತವರಿಗೆ ಬಂದಿಳಿಯಿತು. ರೋಮ್ ಸೇರಿದಂತೆ ಇಟಲಿಯಾದ್ಯಂತ ಭಾನುವಾರ ರಾತ್ರಿ ಆರಂಭವಾದ ಖುಷಿಯ ಆಚರಣೆ ಸೋಮವಾರವೂ ಮುಂದುವರಿಯಿತು.


ಫೈನಲ್ ಪಂದ್ಯದಲ್ಲಿ ಹ್ಯಾರಿ ಕೇನ್ ನಾಯಕತ್ವದ ಇಂಗ್ಲೆಂಡ್ ವಿರುದ್ಧ ಇಟಲಿ ಪೆನಾಲ್ಟಿ ಶೂಟೌಟ್‌ನಲ್ಲಿ 3–2ರ ಜಯ ಸಾಧಿಸಿತು. ಎರಡನೇ ನಿಮಿಷದಲ್ಲಿ ಲ್ಯೂಕ್ ಶಾ ಗಳಿಸಿದ ಗೋಲಿನ ಬಲದಿಂದ ಮುನ್ನಡೆ ಸಾಧಿಸಿದ್ದ ಇಂಗ್ಲೆಂಡ್ ಮುಂದಿನ ಒಂದು ತಾಸಿನ ವರೆಗೂ ಎದುರಾಳಿಗಳನ್ನು ಕಟ್ಟಿಹಾಕಿ ಜಯದತ್ತ ಹೆಜ್ಜೆ ಹಾಕಿತ್ತು. ಆದರೆ 67ನೇ ನಿಮಿಷದಲ್ಲಿ ಲಿಯೊನಾರ್ಡೊ ಬೊನುಚಿ ಚೆಂಡನ್ನು ಗುರಿ ಮುಟ್ಟಿಸಿ ಇಟಲಿಗೆ ಸಮಬಲ ಸಾಧಿಸಿಕೊಟ್ಟರು.

ನಿಗದಿತ ಅವಧಿಯಲ್ಲಿ ಪಂದ್ಯ 1–1ರಲ್ಲಿ ಸಮ ಆಗಿತ್ತು. ಹೆಚ್ಚುವರಿ ಅವಧಿಯಲ್ಲಿ ಯಾವ ತಂಡಕ್ಕೂ ಗೋಲು ಗಳಿಸಲು ಆಗಲಿಲ್ಲ. ಆದಕಾರಣ ಫಲಿತಾಂಶಕ್ಕಾಗಿ ಪೆನಾಲ್ಟಿ ಶೂಟೌಟ್ ಮೊರೆ ಹೋಗಲಾಗಿತ್ತು. ಇಟಲಿ ಮೂರು ಬಾರಿ ಚೆಂಡನ್ನು ಗುರಿ ಸೇರಿಸುವಲ್ಲಿ ಯಶಸ್ವಿಯಾದರೆ ಇಂಗ್ಲೆಂಡ್ ಎರಡು ಗೋಲು ಮಾತ್ರ ಗಳಿಸಿತು. ಈ ಮೂಲಕ 55 ವರ್ಷಗಳ ನಂತರ ಪ್ರಮುಖ ಟೂರ್ನಿಯೊಂದರ ಪ್ರಶಸ್ತಿ ಗಳಿಸುವ ಇಂಗ್ಲೆಂಡ್ ಆಸೆ ಕಮರಿತು. ಇಟಲಿಗೆ ಯುರೋಪಿಯನ್ ಚಾಂಪಿಯನ್‌ಷಿಪ್‌ನಲ್ಲಿ ಇದು ಎರಡನೇ ಪ್ರಶಸ್ತಿ.

ಎರಡನೇ ನಿಮಿಷದಲ್ಲಿ ಕೀರನ್ ಟ್ರಿಪಿಯಾರ್ ದೂರದಿಂದ ನೀಡಿದ ಪಾಸ್‌ಗೆ ಕಾಲೊಡ್ಡಿ ಶಾ ಮಿಂಚಿನ ವೇಗದ ಗೋಲು ಗಳಿಸಿದರು. ಟೂರ್ನಿಯ ಫೈನಲ್ ಪಂದ್ಯವೊಂದರ ಅತ್ಯಂತ ವೇಗದ ಗೋಲಾಗಿತ್ತು. ಅರ್ಧ ಜಿದ್ದಾಜಿದ್ದಿಯ ಹೋರಾಟದ ನಂತರ ಇಟಲಿ ಹೆಚ್ಚು ಆಕ್ರಮಣಕ್ಕೆ ಮುಂದಾಯಿತು. ಆದರೆ ಇಂಗ್ಲೆಂಡ್ ಗೋಲ್‌ಕೀಪರ್ ಫೆಡರಿಕೊ ಚೀಜಾ ಅವರ ಅತ್ಯುತ್ತಮ ‘ಸೇವ್’ಗಳು ಪ್ರವಾಸಿ ತಂಡದ ಪ್ರಯತ್ನಗಳನ್ನು ವಿಫಲಗೊಳಿಸಿದವು. ಆದರೆ ದ್ವಿತೀಯಾರ್ಧದಲ್ಲಿ ತಂಡ ಯಶಸ್ಸು ಕಂಡಿತು. ಹೆಡರ್ ಮೂಲಕ ಬೊನುಚಿ ಗಳಿಸಿದ ಗೋಲು ಪಂದ್ಯಕ್ಕೆ ತಿರುವು ನೀಡಿತು.



ಪ್ರಶಸ್ತಿ ಗೆದ್ದ ಇಟಲಿ ತಂಡದ ಆಟಗಾರರ ಸಂಭ್ರಮ –ರಾಯಿಟರ್ಸ್ ಚಿತ್ರ



ಹೆಚ್ಚು ಗೋಲು ಗಳಿಸಿದ ತಂಡಗಳು

ತಂಡ	ಗೋಲು	ಪಂದ್ಯ
ಇಟಲಿ	13	7
ಸ್ಪೇನ್	13	6
ಡೆನ್ಮಾರ್ಕ್	12	6
ಇಂಗ್ಲೆಂಡ್	11	7

ಟೂರ್ನಿಯಲ್ಲಿ ಹೆಚ್ಚು ಗೋಲು ಗಳಿಸಿದವರು

ಆಟಗಾರ	ದೇಶ	ಪಂದ್ಯ	ಗೋಲು
ಕ್ರಿಸ್ಟಿಯಾನೊ ರೊನಾಲ್ಡೊ	ಪೋರ್ಚುಗಲ್	4	5
ಪ್ಯಾಟ್ರಿಕ್ ಶೀಕ್	ಜೆಕ್ ಗಣರಾಜ್ಯ	5	5
ರೊಮೆಲು ಲುಕಾಕು	ಬೆಲ್ಜಿಯಂ	5	4
ಎಮಿಲ್ ಫೋರ್ಸ್‌ಬರ್ಗ್	ಸ್ವೀಡನ್	4	4
ಕರೀಂ ಬೆನ್ಜೆಮ	ಫ್ರಾನ್ಸ್	4	4

ಇಂಗ್ಲೆಂಡ್‌ಗೆ ಶೂಟೌಟ್ ‘ಕಾಟ’: ತವರಿನ ಅಭಿಮಾನಿಗಳ ಸಮ್ಮುಖದಲ್ಲಿ ಅರಂಭದಲ್ಲೇ ಗೋಲು ಗಳಿಸಿ ಮುನ್ನಡೆ ಸಾಧಿಸಿದ್ದರೂ ಪೆನಾಲ್ಟಿ ಶೂಟೌಟ್ ಇಂಗ್ಲೆಂಡ್ ಕನಸನ್ನು ಭಗ್ನಗೊಳಿಸಿತು. ಈ ಹಿಂದೆಯೂ ಪ್ರಮುಖ ಟೂರ್ನಿಗಳಲ್ಲಿ ಇಂಗ್ಲೆಂಡ್ ಪೆನಾಲ್ಟಿ ಶೂಟೌಟ್‌ನಲ್ಲಿ ಸೋಲಿನ ಸುಳಿಯಲ್ಲಿ ಸಿಲುಕಿದೆ.

- 1990ರ ವಿಶ್ವಕಪ್ ಸೆಮಿಫೈನಲ್‌ನಲ್ಲಿ ತಂಡ 4–3ರಲ್ಲಿ ಜರ್ಮನಿಗೆ ಮಣಿದಿತ್ತು. ನಿಗದಿತ ಅವಧಿಯಲ್ಲಿ ಪಂದ್ಯ 1–1ರಲ್ಲಿ ಡ್ರಾ ಆಗಿತ್ತು.
- 1996ರ ಯೂರೊ ಕಪ್ ಸೆಮಿಫೈನಲ್‌ನಲ್ಲಿ ಜರ್ಮನಿ ವಿರುದ್ಧ 1–1ರ ಸಮಬಲ ಸಾಧಿಸಿದ್ದ ಪಂದ್ಯದಲ್ಲಿ ಇಂಗ್ಲೆಂಡ್ 5–6ರ ಸೋಲು ಕಂಡಿತ್ತು.
- 1998ರ ವಿಶ್ವಕಪ್ ಪ್ರೀ ಕ್ವಾರ್ಟರ್ ಫೈನಲ್ ಪಂದ್ಯ ನಿಗದಿ ಅವಧಿಯಲ್ಲಿ 2–2ರಲ್ಲಿ ಸಮ ಆಗಿತ್ತು. ಶೂಟೌಟ್‌ನಲ್ಲಿ 3–4ರಲ್ಲಿ ಇಂಗ್ಲೆಂಡ್ ಸೋತಿತ್ತು. ಅರ್ಜೆಂಟೀನಾ ಕ್ವಾರ್ಟರ್ ಫೈನಲ್‌ಗೇರಿತ್ತು.
- 2004ರ ಯೂರೊ ಕಪ್ ಕ್ವಾರ್ಟರ್ ಫೈನಲ್‌ನಲ್ಲಿ ಪೋರ್ಚುಗಲ್ ಎದುರಿನ ಕ್ವಾರ್ಟರ್ ಫೈನಲ್ ಪಂದ್ಯ 2–2ರಲ್ಲಿ ಸಮ ಆಗಿತ್ತು. ಶೂಟೌಟ್‌ನಲ್ಲಿ 5–6ರಲ್ಲಿ ಇಂಗ್ಲೆಂಡ್ ಪರಾಭವಗೊಂಡಿತ್ತು.
- 2006ರ ವಿಶ್ವಕಪ್ ಟೂರ್ನಿಯ ಕ್ವಾರ್ಟರ್ ಫೈನಲ್‌ನಲ್ಲಿ ಪೋರ್ಚುಗಲ್ ವಿರುದ್ಧ ಗೋಲು ರಹಿತ ಸಮಬಲ ಸಾಧಿಸಿದ್ದ ತಂಡ ನಂತರ 1–3ರಲ್ಲಿ ಸೋಲಿಗೆ ಶರಣಾಗಿತ್ತು.
- 2012ರ ಯೂರೊ ಕಪ್‌ನಲ್ಲಿ ಇಟಲಿ ಎದುರಿನ ಕ್ವಾರ್ಟರ್ ಫೈನಲ್‌ನ ನಿಗದಿ ಅವಧಿ ಗೋಲು ರಹಿತ ಸಮಬಲದಲ್ಲಿ ಮುಕ್ತಾಯಗೊಂಡಿತ್ತು. ಪೆನಾಲ್ಟಿಯಲ್ಲಿ ಇಂಗ್ಲೆಂಡ್ 2–4ರಲ್ಲಿ ಸೋತಿತ್ತು.

ಟೋಕಿಯೊ ಒಲಿಂಪಿಕ್ಸ್ 2020 ಭಾರತದ ಕನಸಿನ ಪಯಣ

ಆರ್ಚರಿ: ಇನ್ನಷ್ಟು ಸಾಧನೆಯತ್ತ ಬಿಲ್ಲುಗಾರರ ಚಿತ್ತ...

ಪ್ರತಿ ಒಲಿಂಪಿಕ್ಸ್‌ನಿಂದಲೂ ಹಂತಹಂತವಾಗಿ ಪಾಲ್ಗೊಳ್ಳುವಿಕೆ ಮತ್ತು ಸಾಮರ್ಥ್ಯ ತೋರಿಸುವಲ್ಲಿ ಉತ್ತಮಗೊಳ್ಳುತ್ತಿರುವ ಭಾರತದ ಆರ್ಚರಿ ಪಟುಗಳಿಗೆ ಬೆಲ್ಜಿಯಂ, ದಕ್ಷಿಣ ಕೊರಿಯಾ, ಅಮೆರಿಕ ಹಾಗೂ ಫ್ರಾನ್ಸ್ ದೇಶಗಳ ಸ್ಪರ್ಧಿಗಳು ಕಠಿಣ ಪೈಪೋಟಿ ಒಡ್ಡುತ್ತಿದ್ದಾರೆ.

ಆರ್ಚರಿ ಕ್ರೀಡೆ 1900ರ ಒಲಿಂಪಿಕ್ಸ್‌ನಲ್ಲಿ ಸೇರ್ಪಡೆಯಾಯಿತು. 1904, 1908 ಮತ್ತು 1920ರ ಕ್ರೀಡಾಕೂಟಗಳಲ್ಲಿ ಮುಂದುವರಿಯಿತು. ಬಳಿಕ ಈ ಕ್ರೀಡೆಯನ್ನು ಕೈಬಿಡಲಾಯಿತು. 1972ರಲ್ಲಿ ಪುನಃ ಸೇರ್ಪಡೆ ಮಾಡಲಾಯಿತಾದರೂ 1988ರ ಸೋಲ್ ಒಲಿಂಪಿಕ್ಸ್‌ನಿಂದ ಭಾರತ ಪಾಲ್ಗೊಳ್ಳಲು ಆರಂಭಿಸಿತು. ಲಿಂಬಾ ರಾಮ್, ಶ್ಯಾಮ್ ಲಾಲ್ ಮತ್ತು ಸಂಜೀವ್ ಸಿಂಗ್ ಬಿಲ್ಲುಗಾರಿಕೆಯಲ್ಲಿ ಒಲಿಂಪಿಕ್ಸ್‌ನಲ್ಲಿ ಮೊದಲ ಬಾರಿಗೆ ದೇಶವನ್ನು ಪ್ರತಿನಿಧಿಸಿದ್ದರು.

2008ರ ಬೀಜಿಂಗ್ ಒಲಿಂಪಿಕ್ಸ್‌ನಲ್ಲಿ ಭಾರತದಿಂದ ಎಂಟು ಮತ್ತು 2012ರ ಲಂಡನ್ ಒಲಿಂಪಿಕ್ಸ್‌ನಲ್ಲಿ 10 ಜನ ಸ್ಪರ್ಧಿಗಳು ಪಾಲ್ಗೊಂಡಿದ್ದರು. ಆದರೆ, ನಾಕೌಟ್ ಹಂತಗಳಲ್ಲಿ ಸ್ಪರ್ಧಿಗಳು ಬಲಿಷ್ಠ ದೇಶಗಳ ಸವಾಲು ಎದುರಿಸಲು ವಿಫಲರಾಗುತ್ತಿದ್ದಾರೆ.

ಟೋಕಿಯೊ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿರುವ ಅತನು ದಾಸ್ ಹಾಗೂ ದೀಪಿಕಾ ಕುಮಾರಿ ಹಿಂದಿನ ಕ್ರೀಡಾಕೂಟದಲ್ಲಿ ಆಡಿದ್ದರು. ಆಗ ಇವರಿಬ್ಬರೂ ಒಂಬತ್ತನೇ ಸ್ಥಾನ ಪಡೆದಿದ್ದರು. ಈ ಸಲದ ಕ್ರೀಡಾಕೂಟದಲ್ಲಿ ದೀಪಿಕಾ ಮೇಲೆ ಹೆಚ್ಚು ಭರವಸೆಯಿದೆ. ದೀಪಿಕಾ 2019ರಲ್ಲಿ ಬ್ಯಾಂಕಾಕ್‌ನಲ್ಲಿ ನಡೆದ ಏಷ್ಯನ್ ಆರ್ಚರಿ ಚಾಂಪಿಯನ್‌ಷಿಪ್‌ನ ತಂಡ ಹಾಗೂ ಮಿಶ್ರ ತಂಡ ವಿಭಾಗದಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದರು. ಇದೇ ವರ್ಷ ನಡೆದ ವಿಶ್ವಕಪ್‌ನ ವೈಯಕ್ತಿಕ ಸ್ಪರ್ಧೆಯಲ್ಲಿ ಚಿನ್ನದ ಪದಕ ಜಯಿಸಿದ್ದು ಅವರ ವಿಶ್ವಾಸ ಹೆಚ್ಚಿಸಿದೆ.

ಅತನು ದಾಸ್ ಎರಡು ವರ್ಷಗಳ ಅವಧಿಯಲ್ಲಿ ಆರು ಪದಕಗಳನ್ನು ಗೆದ್ದಿದ್ದು, ಒಲಿಂಪಿಕ್ಸ್‌ನಲ್ಲಿ ಉತ್ತಮ ಸಾಮರ್ಥ್ಯ ತೋರಲು ನೆರವಾಗಲಿದೆ. ವಿಶ್ವಕಪ್‌ನ ವೈಯಕ್ತಿಕ ಸ್ಪರ್ಧೆ ಹಾಗೂ ಮಿಶ್ರ ತಂಡ ವಿಭಾಗದಲ್ಲಿ ಚಿನ್ನ ಜಯಿಸಿದ್ದರು. ಹೋದ ವರ್ಷ ವೈಯಕ್ತಿಕ, ರಿಕರ್ವ್ ತಂಡ ಮತ್ತು ಮಿಶ್ರ ತಂಡ ವಿಭಾಗದಲ್ಲಿ ಕಂಚಿನ ಸಾಧನೆ ಮಾಡಿದ್ದರು. ಇವರನ್ನು ಹೊರತುಪಡಿಸಿ ತರುಣದೀಪ್ ರಾಯ್ ಕೂಡ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡ ಅನುಭವ ಹೊಂದಿದ್ದಾರೆ. ಎಲ್ಲ ಸ್ಪರ್ಧಿಗಳು ರಿಕರ್ವ್ ವಿಭಾಗದಲ್ಲಿ ಕಣಕ್ಕಿಳಿಯಲಿದ್ದಾರೆ.



ಅತನು ದಾಸ್

TOKYO 2020
ಇನ್ನು 10 ದಿನ



ದೀಪಿಕಾ ಕುಮಾರಿ

ಭಾರತ ತಂಡ: ಅತನು ದಾಸ್, ಪ್ರವೀಣ್ ಜಾಧವ್, ತರುಣದೀಪ್ ರಾಯ್ (ಪುರುಷರ ವೈಯಕ್ತಿಕ ವಿಭಾಗ), ದೀಪಿಕಾ ಕುಮಾರಿ (ಮಹಿಳೆಯರ ವೈಯಕ್ತಿಕ ವಿಭಾಗ).

ಸಂಭ್ರಮಾಚರಣೆಯಲ್ಲಿ ವ್ಯಕ್ತಿ ಸಾವು

ರೋಮ್ (ರಾಯಿಟರ್ಸ್): ಇಟಲಿಯಲ್ಲಿ ನಡೆದ ಸಂಭ್ರಮಾಚರಣೆಗೆ ಸಂಬಂಧಿಸಿ ಒಬ್ಬ ವ್ಯಕ್ತಿ ಸಾವಿಗೀಡಾಗಿದ್ದು ಅನೇಕರು ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಿಸಿಲಿಯ ಕಾಲ್ಟಗಿರೋನ್‌ನಲ್ಲಿ ನಡೆಯುತ್ತಿದ್ದ ಆಚರಣೆಯಲ್ಲಿ ಪಾಲ್ಗೊಳ್ಳಲು ಕಾರಿನಲ್ಲಿ ಅತಿವೇಗವಾಗಿ ಸಂಚರಿಸುತ್ತಿದ್ದಾಗ ಅಪಘಾತವಾಗಿ 22 ವರ್ಷದ ಯುವಕ ಪ್ರಾಣ ಕಳೆದುಕೊಂಡಿದ್ದಾನೆ. ಮಿಲನ್‌ನಲ್ಲಿ ಪಾರ್ಟಿಯಲ್ಲಿ ಪಾಲ್ಗೊಂಡಿದ್ದ 15 ಮಂದಿಗೆ ಗಾಯಗಳಾಗಿದ್ದು ಇವರ ಪೈಕಿ ಮೂವರ ಸ್ಥಿತಿ ಗಂಭೀರವಾಗಿದೆ. ಕೈಯಲ್ಲೇ ಪಟಾಕಿ ಸಿಡಿದ ಕಾರಣ ವ್ಯಕ್ತಿಯೊಬ್ಬರು ಮೂರು ಬೆರಳುಗಳನ್ನು ಕಳೆದುಕೊಂಡಿದ್ದಾರೆ.

ಇದೇ ವೇಳೆ ತಂಡದ ಸೋಲಿನಿಂದ ಬೇಸರಗೊಂಡ ಇಂಗ್ಲೆಂಡ್ ಅಭಿಮಾನಿಗಳು ಗಲಾಟೆ ಮಾಡಿದ್ದು ವೆಂಬ್ಲಿ ಕ್ರೀಡಾಂಗಣದ ಬ್ಯಾರಿಕೇಡ್‌ಗಳಿಗೆ ಭಾನುವಾರ ರಾತ್ರಿ ಹಾನಿ ಮಾಡಿದ್ದಾರೆ.



ಇಂಗ್ಲೆಂಡ್ ಅಭಿಮಾನಿಗಳು ಕ್ರೀಡಾಂಗಣದ ಬ್ಯಾರಿಕೇಡ್‌ಗಳಿಗೆ ಹಾನಿ ಮಾಡಿದರು –ಪಿಟಿಐ ಚಿತ್ರ

ಬಿಎಫ್‌ಸಿಗೆ ಸಾರ್ಥಕ್

ಬೆಂಗಳೂರು (ಪಿಟಿಐ): ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಆಡುವ ಬೆಂಗಳೂರು ಫುಟ್ಬಾಲ್ ಕ್ಲಬ್ (ಬಿಎಫ್‌ಸಿ), ಯುವ ಆಟಗಾರ ಸಾರ್ಥಕ್ ಗೋಲುಯಿ ಅವರೊಂದಿಗೆ ಎರಡು ವರ್ಷಗಳ ಒಪ್ಪಂದ ಮಾಡಿಕೊಂಡಿದೆ.

ಈ ಋತುವಿನಲ್ಲಿ ಬೆಂಗಳೂರು ಎಫ್‌ಸಿಯೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದ ನಾಲ್ಕನೇ ಆಟಗಾರ ಸಾರ್ಥಕ್. ರೊಂಡು ಮುಸಾವು ಕಿಂಗ್, ಅಲನ್ ಕೋಸ್ಟಾ ಹಾಗೂ ರೋಹಿತ್ ಕುಮಾರ್ ಈಗಾಗಲೇ ತಂಡದ ಸೇರಿದವರು.

ಈಗಲ್ಸ್ ಎಫ್‌ಸಿ ಎದುರು ನಡೆಯಲಿರುವ ಎಎಫ್‌ಸಿ ಕಪ್ ಪ್ಲೇ ಆಫ್ ವೇಳೆ ಸಾರ್ಥಕ್ ತಂಡದ ಶಿಬಿರವನ್ನು ಸೇರಿಕೊಳ್ಳಲಿದ್ದಾರೆ.

ಕೋಲ್ಕತ್ತ ಮೂಲದ 23 ವರ್ಷದ ಸಾರ್ಥಕ್, ಐ-ಲೀಗ್ ಮತ್ತು ಐಎಸ್‌ಎಲ್ ಟೂರ್ನಿಗಳಲ್ಲಿ ಆಡಿದ ಅನುಭವ ಹೊಂದಿದ್ದಾರೆ.

2018ರಲ್ಲಿ ಬಾಂಗ್ಲಾದೇಶದಲ್ಲಿ ನಡೆದ ದಕ್ಷಿಣ ಏಷ್ಯಾ ಚಾಂಪಿಯನ್‌ಷಿಪ್‌ನಲ್ಲಿ ಶ್ರೀಲಂಕಾ ಎದುರು ಕಣಕ್ಕಿಳಿಯುವ ಮೂಲಕ ಭಾರತ ತಂಡಕ್ಕೆ ಪದಾರ್ಪಣೆ ಮಾಡಿದ್ದರು.



ಸಾರ್ಥಕ್ ಗೋಲುಯಿ– ಐಎಸ್‌ಎಲ್ ಮೀಡಿಯಾ ಚಿತ್ರ

ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳುವವರಿಗೆ ‘ಧ್ಯಾನ’

ನವದೆಹಲಿ (ಪಿಟಿಐ): ಒಲಿಂಪಿಕ್ಸ್‌ಗೆ ತೆರಳುವ ಭಾರತದ ಕ್ರೀಡಾಪಟುಗಳ ಮಾನಸಿಕ ಆರೋಗ್ಯದ ಬಗ್ಗೆ ಕಾಳಜಿ ವಹಿಸಲು ಮುಂದಾಗಿರುವ ಭಾರತ ಒಲಿಂಪಿಕ್ ಸಮಿತಿ (ಐಒಎ) ನಿರ್ಧರಿಸಿದ್ದು ಇದಕ್ಕಾಗಿ ‘ಧ್ಯಾನ್’ ಎಂಬ ಸ್ಟಾರ್ಟ್ ಅಪ್ ಜೊತೆ ಒಪ್ಪಂದ ಮಾಡಿಕೊಂಡಿದೆ.

‘ಒಪ್ಪಂದದ ಅಂಗವಾಗಿ ಧ್ಯಾನ್ ರಿಂಗ್ ಎಂಬ ಸಾಧನ ಬಳಸಲಾಗುವುದು. ಇದು ಆಟಗಾರರು, ಕೋಚ್ ಮತ್ತು ನೆರವು ಸಿಬ್ಬಂದಿಯ ಮಾನಸಿಕ ನೆಮ್ಮದಿಗೆ ನೆರವಾಗಲಿದೆ. ಪಂದ್ಯಗಳ ಸಂದರ್ಭದಲ್ಲಿ ಒತ್ತಡ ನಿಭಾಯಿಸುವುದಕ್ಕೂ ಸಹಕಾರಿಯಾಗಲಿದೆ. ಒಲಿಂಪಿಕ್ಸ್‌ಗೆ ಸಂಬಂಧಿಸಿ ಧ್ಯಾನಕ್ಕಾಗಿ ಸಂಸ್ಥೆಯೊಂದರ ಜೊತೆ ದೇಶವೊಂದು ಒಪ್ಪಂದ ಮಾಡಿಕೊಳ್ಳುವುದು ಇದೇ ಮೊದಲು’ ಎಂದು ಐಒಎ ತಿಳಿಸಿದೆ.

ಪ್ಯೂಮಾ ಒಪ್ಪಂದ: ಕ್ರೀಡಾ ಪೋಷಾಕಿಗೆ ಸಂಬ ಧಿಸಿದ ದೈತ್ಯ ಪ್ಯೂಮಾ ಕಂಪನಿ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳಲಿರುವ ಭಾರತದ 15 ಕ್ರೀಡಾಪಟುಗಳು ಮತ್ತು ಪ್ಯಾರಾಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳುವ ಮೂವರ ಜೊತೆ ಒಪ್ಪಂದ ಮಾಡಿಕೊಳ್ಳಲು ನಿರ್ಧರಿಸಿದೆ.

ಬಾಕ್ಸರ್ ಮೇರಿ ಕೋಮ್, ಸ್ಪ್ರಿಂಟರ್ ದ್ಯುತಿ ಚಾಂದ್, ಬಾಕ್ಸರ್ ಪೂಜಾ ರಾಣಿ, ಶಾಟ್ ಪಟ್ ಎಸೆತಗಾರ ತಜಿಂದರ್ ಸಿಂಗ್, ಶೂಟರ್ ಮನು ಭಾಕರ್, ಈಜುಪಟು ಶ್ರೀಹರಿ ನಟರಾಜ್, ಹಾಕಿ ಆಟಗಾರರಾದ ರೂಪಿಂದರ್ ಪಾಲ್ ಸಿಂಗ್, ಹರ್ಮನ್‌ಪ್ರೀತ್ ಸಿಂಗ್, ಮನದೀಪ್ ಸಿಂಗ್, ಗುರ್ಜಂತ್ ಸಿಂಗ್, ಸವಿತಾ ಪೂನಿಯಾ, ಸುಶೀಲಾ ಚಾನು, ನವನೀತ್ ಕೌರ್, ನವಜ್ಯೋತ್ ಕೌರ್, ವಂದನಾ ಕಟಾರಿಯಾ, ಗುರುಜೀತ್ ಕೌರ್, ಉದಿತಾ ದುಹಾನ್ ಜೊತೆ ಒಪ್ಪಂದ ಮಾಡಿಕೊಳ್ಳಲಾಗಿದೆ.

ಪ್ಯಾರಾ ಅಥ್ಲೀಟ್‌ಗಳಾದ ಶೂಟರ್ ಅವನಿ ಲೇಖರ, ಟೇಬಲ್ ಟೆನಿಸ್ ಪಟು ಭವಿನಾ ಪಟೇಲ್ ಮತ್ತು ಡಿಸ್ಕಸ್ ಥ್ರೋ ಪಟು ಏಕ್ತಾ ಭಯಾನ್ ಅವರೊಂದಿಗೂ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ಕಂಪನಿಯ ಭಾರತದ ವ್ಯವಹಾರಗಳ ವ್ಯವಸ್ಥಾಪಕ ನಿರ್ದೇಶಕ ಅಭಿಷೇಕ್ ಗಂಗೂಲಿ ತಿಳಿಸಿದ್ದಾರೆ.

ಭಾರತ ಮಹಿಳಾ ಕ್ರಿಕೆಟ್ ತಂಡಕ್ಕೆ ದಂಡ

ಹೋವ್ (ಪಿಟಿಐ): ಇಂಗ್ಲೆಂಡ್ ಎದುರಿನ ಎರಡನೇ ಟ್ವೆಂಟಿ–20 ಪಂದ್ಯದಲ್ಲಿ ನಿಗದಿತ ಅವಧಿಯಲ್ಲಿ ಓವರ್‌ಗಳನ್ನು ಪೂರ್ಣಗೊಳಿಸದ ಭಾರತ ಮಹಿಳಾ ಕ್ರಿಕೆಟ್ ತಂಡಕ್ಕೆ ದಂಡ ವಿಧಿಸಲಾಗಿದೆ.

ಪಂದ್ಯದ ನಿಗದಿತ ಸಮಯ ಕೊನೆಗೊಂಡಾಗ ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ತಂಡವು ಇನ್ನೂ ಒಂದು ಓವರ್ ಬೌಲ್ ಮಾಡಬೇಕಿತ್ತು. ಹೀಗಾಗಿ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್‌ನ (ಐಸಿಸಿ) ರೆಫರಿ ಫಿಲ್ ವಿಟ್ಟಿಕೇಸ್ ಪಂದ್ಯ ಶುಲ್ಕದ ಶೇಕಡಾ 20ರಷ್ಟು ದಂಡವನ್ನು ವಿಧಿಸಿದ್ದಾರೆ.

ಪಂದ್ಯವನ್ನು ಭಾರತ ಎಂಟು ರನ್‌ಗಳಿಂದ ಗೆದ್ದುಕೊಂಡಿತ್ತು. ಸರಣಿ 1–1ರಿಂದ ಸಮಬಲವಾಗಿದೆ.

ಹೈಕೋರ್ಟ್ ಮೊರೆಹೋದ ಗಂಗೂಲಿ

ಮುಂಬೈ (ಪಿಟಿಐ): ತಮ್ಮ ವ್ಯವಸ್ಥಾಪನಾ ಕಂಪನಿಗಳು ನೀಡಬೇಕಾಗಿರುವ ಪರಿಹಾರ ಮೊತ್ತವನ್ನು ತಕ್ಷಣ ಬಿಡುಗಡೆ ಮಾಡಲು ಸೂಚಿಸುವಂತೆ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಅಧ್ಯಕ್ಷ ಸೌರವ್ ಗಂಗೂಲಿ ಬಾಂಬೆ ಹೈಕೋರ್ಟ್‌ಗೆ ಮೊರೆಹೋಗಿದ್ದಾರೆ. ಪರ್ಸೆಪ್ಟ್ ಟ್ಯಾಲೆಂಟ್ ಮ್ಯಾನೇಜ್‌ಮೆಂಟ್ ಲಿಮಿಟೆಡ್ ಮತ್ತು ಪರ್ಸೆಪ್ಟ್ ಡಿ ಮಾರ್ಕ್ ಇಂಡಿಯಾ ಲಿಮಿಟೆಡ್ ಕಂಪನಿ ಪರಿಹಾರ ನೀಡುವಂತೆ 2018ರಲ್ಲಿ ಮಧ್ಯಂತರ ನ್ಯಾಯಮಂಡಳಿ ಸೂಚಿಸಿತ್ತು. ಈ ಆದೇಶವನ್ನು ಪಾಲಿಸುವಂತೆ ಸೂಚಿಸಲು ಅವರು ಕೋರಿದ್ದಾರೆ.

ಎರಡೂ ಕಂಪನಿಗಳಿಂದ ಬಡ್ಡಿ ಸಮೇತವಾಗಿ ಒಟ್ಟು ₹ 36 ಕೋಟಿ ಪರಿಹಾರ ಮೊತ್ತದ ರೂಪದಲ್ಲಿ ಗಂಗೂಲಿ ಅವರಿಗೆ ಸಿಗಬೇಕಾಗಿದೆ. ಕಂಪನಿಗಳಿಗಾಗಿ ಹಾಜರಾದ ವಕೀಲ ಶಾರ್ದೂಲ್ ಸಿಂಗ್ ಇದೇ 20ರ ಒಳಗಾಗಿ ಎರಡೂ ಕಂಪನಿಗಳು ತಮ್ಮ ಆಸ್ತಿ ವಿವರ ಬಹಿರಂಗಪಡಿಸಲಿವೆ ಎಂದು ತಿಳಿಸಿದ್ದಾರೆ.



ಸೌರವ್ ಗಂಗೂಲಿ

ಫುಟ್‌ಬಾಲ್: ಸೆಮಿಗೆ ಎಚ್‌ಎಎಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್‌ಎಎಲ್ ಎಫ್‌ಸಿ ತಂಡವು ಬಿಡಿಎಫ್‌ಎ ‘ಬಿ’ ಡಿವಿಷನ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಸೆಮಿಫೈನಲ್ ತಲುಪಿತು.

ಇಲ್ಲಿನ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಎಚ್‌ಎಎಲ್ ಎದುರು ಸೋಮವಾರ ಸೆಣಸಬೇಕಿದ್ದ ಗೋವನ್ಸ್ ಎಫ್‌ಸಿ ಹಿಂದೆ ಸರಿಯಿತು. ಈ ಹಿನ್ನೆಲೆಯಲ್ಲಿ ‘ಬಿ’ ಗುಂಪಿನಲ್ಲಿ 18 ಪಾಯಿಂಟ್ಸ್‌ನೊಂದಿಗೆ ಎಚ್‌ಎಎಲ್ ಅಗ್ರಸ್ಥಾನ ಗಳಿಸಿತು. 15 ಪಾಯಿಂಟ್ಸ್ ಕಲೆಹಾಕಿರುವ ಬ್ಲಿಟ್ಜ್ ಎಫ್‌ಸಿಯೂ ಸೆಮಿಫೈನಲ್ ತಲುಪಿತು.

‘ಗೋವನ್ಸ್ ತಂಡ ಭಾನುವಾರ ಕಣಕ್ಕಿಳಿದಿತ್ತು. ಆದರೆ ಇಂದು (ಸೋಮವಾರ) ಯಾವುದೇ ಮಾಹಿತಿ ನೀಡದೆ ಹಿಂದೆ ಸರಿದಿದೆ. ರೆಫರಿಗಳು ಸೇರಿದಂತೆ ಪಂದ್ಯಕ್ಕೆ ಎಲ್ಲ ವ್ಯವಸ್ಥೆಯನ್ನೂ ನಾವು ಮಾಡಿದ್ದೆವು. ಟೂರ್ನಿ ಆರಂಭವಾಗುವ ಮುನ್ನವೇ ಅವರಿಗೆ ಹಿಂದೆ ಸರಿಯುವ ಅವಕಾಶವಿತ್ತು. ಆದರೆ ಟೂರ್ನಿಯ ಮಧ್ಯದಲ್ಲಿ ಆಡಲು ನಿರಾಕರಿಸಿದ ಕಾರಣ ಆ ತಂಡದ ವಿರುದ್ಧ ಬಿಡಿಎಫ್‌ಎ ಕ್ರಮ ತೆಗೆದುಕೊಳ್ಳಲಿದೆ’ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

‘ಎ’ ಡಿವಿಷನ್ ಪಂದ್ಯದಲ್ಲಿ ಆರ್‌ಡಬ್ಲ್ಯುಎಫ್ ಎಫ್‌ಸಿ 2–2ರಿಂದ ಪರಿಕ್ರಮ ಎಫ್‌ಸಿಯೊಂದಿಗೆ ಡ್ರಾ ಸಾಧಿಸಿತು.

ಆರ್‌ಡಬ್ಲ್ಯುಎಫ್ ತಂಡದ ಪರ ನಂದಕುಮಾರ್ 58ನೇ ನಿಮಿಷ ಮತ್ತು ರಾಜೇಶ್ 70 + 1ನೇ ನಿಮಿಷದಲ್ಲಿ ಗೋಲು ದಾಖಲಿಸಿದರು.

ಪರಿಕ್ರಮ ತಂಡದ ಎರಡೂ ಗೋಲುಗಳನ್ನು ಪ್ರವೀಣ್ ಕುಮಾರ್ (16ನೇ ಮತ್ತು 64ನೇ ನಿಮಿಷ) ಹೊಡೆದರು.

‘ಎ’ ಡಿವಿಷನ್‌ನ ಇನ್ನೊಂದು ಹಣಾಹಣಿಯಲ್ಲಿ ಬಿಯುಎಫ್‌ಸಿ 2–0ಯಿಂದ ಪೋಸ್ಟಲ್ ಡಿಪಾರ್ಟ್‌ಮೆಂಟ್ ತಂಡದ ಎದುರು ಜಯಿಸಿತು. ವಿಜೇತ ತಂಡದ ಪರ ಇಶಾನ್ ಸಾಹಿ 45 ಮತ್ತು 62ನೇ ನಿಮಿಷಗಳಲ್ಲಿ ಕಾಲ್ಚಳಕ ತೋರಿದರು.